ಶ್ರೀ ಡಿ. ಬಿ.ಚಂದ್ರೇಗೌಡ:– ಎಲ್ಲಿ ನ್ಯಾಯವಾಗಿ ಕೊಡಬೇಕಾಗಿದ್ದಂಥ ಹಣವೇನಿದೆ ಅಲ್ಲಿ ಏನೂ ತೊಂದರೆ ಇಲ್ಲ, ತೊಂದರೆ ಎಲ್ಲಿ ಬಂದಿದೆಯೆಂದರೆ, ಅರ್ಹತೆ ಇಲ್ಲದೆಯೇ ಕೇಳಿರತಕ್ಕಂಥ ಕ್ಲೈಮ್ಸ್‌ನ್ನು ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಜಗದೀಶ್‌ಶೆಟ್ಟರ್:– ತಾವು 40 ಪರ್‌ಸೆಂಟ್ ಅರ್ಹತೆ ಇಲ್ಲವೆಂದು ಹೇಳುತ್ತಿದ್ದೀರಿ,..

ಶ್ರೀ ಡಿ. ಬಿ.ಚಂದ್ರೇಗೌಡ:– ನಾನು ಹೇಳಲಿಲ್ಲ. ಇನ್‌ಶ್ಯೂರೆನ್ಸ್ ಕಂಪನಿಯವರು ಹೇಳುತ್ತಾರೆ.

ಶ್ರೀ ಜಗದೀಶ್‌ಶೆಟ್ಟರ್:– ಅರ್ಹತೆ ಇರುವವರಿಗೆ ತಕ್ಷಣವೇ ಬಿಡುಗಡೆ ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ:– ನಾನು ಹೇಳುವುಕ್ಕೆ ಹೋಗಿಲ್ಲ, ಸರ್ಕಾರದ ನಿಲವೂ ಅಲ್ಲ, ಇನ್‌ಶ್ಯೂರೆನ್ಸ್ ಕಂಪನಿಯವರು ಈ ರೀತಿ ಮಾಹಿತಿಯನ್ನು ನಮಗೆ ಒದಗಿಸಿಕೊಡಿ ಎಂದು ಹೇಳಿದ್ದಾರೆ, ಬಂದ ತಕ್ಷಣ ಒದಗಿಸಿಕೊಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:– ತಾವು ನನ್ನನ್ನು ಗೌರವಯುತವಾಗಿ ಸಹಕಾರ ಇಲಾಖೆಯ ವಿಷಯ ಸಮಿತಿಗೆ ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಅದರ ವರದಿಯನ್ನೂ ಕೊಟ್ಟಿದ್ದೇನೆ. ಅವರು ಯಾವುದೇ ತಕರಾರನ್ನು ತೆಗೆದಿಲ್ಲ. ಇವರು ಅರ್ಧ ಹಣವನ್ನು ತುಂಬಿದರೆ ಒಂದು ವಾರದಲ್ಲಿ ನಾವು ನೂರಕ್ಕೆ ನೂರು ತುಂಬುತ್ತೇವೆಂದು ಹೇಳಿದ್ದಾರೆ. ಇವರ ಹತ್ತಿರ ಹಣವಿಲ್ಲದಕ್ಕೆ ಇಲ್ಲವೆಂದು ಹೇಳುತ್ತಾರೆ. ತಾವು ಯಾವಾಗ 165 ಕೋಟಿರೂಪಾಯನ್ನು ತುಂಬುತ್ತೀರಿ ಹೇಳಿ? ಅವರು ನಮಗೆ ಇಲ್ಲಿ ಬರೆದುಕೊಟ್ಟಿದ್ದಾರೆ. ಅದರ ಬಗ್ಗೆ ನಿಖರವಾಗಿ ಹೇಳಿಬಿಡಿ. ಅವರು ಹಾರಿಕೆಯ ಉತ್ತರವನ್ನು ಹೇಳಿಬಿಟ್ಟರೆ ಹೇಗೆ?

ಅಧ್ಯಕ್ಷರು:– ಮಾನ್ಯ ಪಾಟೀಲರೇ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಂಜೆಯೊಳಗೆ ಉತ್ತರವನ್ನು ಕೊಡುತ್ತಾರಲ್ಲಾ ಅದರಲ್ಲಿ ಹೇಳುತ್ತಾರೆ ಬಿಡಿ. ಅವರ ಉತ್ತರದಲ್ಲಿ ಹೇಳಿಸೋಣ ಬಿಡಿ.

ಶ್ರೀ ಎಸ್.ಎಸ್.ಪಾಟೀಲ್:– ಮೊನ್ನೆ ಬರಗಾಲದ ಬಗ್ಗೆ ಮಾತನಾಡುವಾಗ ಎಂದು ತುಂಬುತ್ತೀರೆಂದು ಕೇಳಿದ್ದಕ್ಕೆ ಉತ್ತರವನ್ನೇ ಹೇಳಲಿಲ್ಲ, ಏನನ್ನೂ ಹೇಳಲಿಲ್ಲ, ಈಗಲೂ ಹೇಳುವುದಿಲ್ಲ, ಸುಮ್ಮನೆ ಕಾನೂನನ್ನು ಹೇಳುತ್ತಾರೆ.

ಅಧ್ಯಕ್ಷರು:– ಇಂದು ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರಲ್ಲಾ ಆಗ ಹೇಳುತ್ತಾರೆ ಬಿಡಿ.

ಶ್ರೀ ಡಿ.ಬಿ.ಚಂದ್ರೇಗೌಡ:– ನಾಳೆ ಮುಖ್ಯಮಂತ್ರಿಯವರು ಉತ್ತರವನ್ನು ಹೇಳುವವರಿದ್ದಾರೆ, ಆಗ ಇದಕ್ಕೂ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು:– ಆಗ ಹೇಳುತ್ತಾರೆ ಬಿಡಿ. ಮಾನ್ಯ ಸಭಾಪತಿಯವರೆ ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

2) ವಿತ್ತೀಯ ಕಾರ್ಯಕಲಾಪಗಳು

2003-2004ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಯು.ಆರ್.ಸಭಾಪತಿ (ಉಡುಪಿ):– ಮಾನ್ಯ ಅಧ್ಯಕ್ಷರೆ, 2003-2004ರ ಮುಂಗಡ ಪತ್ರಗಳ ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭಿಸುತ್ತಿದ್ದೇವೆ. ನನ್ನದೊಂದು ಸಣ್ಣ ಸಲಹೆ ಇದೆ, ನಮ್ಮ ಎಲ್ಲಾ ವಿಷಯ ಸಮಿತಿಗಳ ವರದಿಯಲ್ಲಿ ಪ್ರತಿಯೊಬ್ಬರೂ, ಈ ವರದಿಗಳ ಅನುಷ್ಠಾನ ಪರಿಣಾಮಕಾರಿಯಾಗಿ ಆಗಬೇಕು, ಈ ವರದಿಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ, ಎನ್ನುವಂಥ ಮಾತನ್ನು ಕಂಡು ಕೊಂಡಿದ್ದೇವೆ. ಆದರೆ ಈ ವರದಿಗಳ ಬಗ್ಗೆ

ಚರ್ಚೆ ಆಗುತ್ತಿಲ್ಲ. ಇದು ಬಹಳ ದುರಂತ. ವಿಷಯ ಸಮಿತಿಗಳ ವರದಿಗಳನ್ನು ಮಂಡಿಸಿ ಬೇಡಿಕೆಗಳ ಮೇಲಿನ ಚರ್ಚೆ ಇಷ್ಟು ದಿವಸ ನಡೆಯಬೇಕಾಗಿತ್ತೋ, ಆ ಬೇಡಿಕೆಗಳ ಮೇಲಿನ ಚರ್ಚೆಯ ಅವಧಿ ಕುಂಟುತ್ತಾ ಕುರುಡಾಗುತ್ತಾ ಹೋಗುತ್ತಿದೆ. ಮುಂದಿನ ದಿನಗಳಲ್ಲಾದರೂ ತಾವು ದಯವಿಟ್ಟು ಈ ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡುವಾಗ, ಯಾವ ದಿವಸ ಅಜೆಂಡಾದಲ್ಲಿ ಅದು ಬರುತ್ತದೋ, ಆ ದಿವಸವೇ ಚರ್ಚೆ ಪ್ರಾರಂಭ ಮಾಡಿಸಿ ಎಲ್ಲಾ ಇಪ್ಪತ್ತೆಂಟು ಇಲಾಖೆಗಳ ಮೇಲೆ ಚರ್ಚೆ ಮಾಡುವುದಕ್ಕಿಂತಾ ಪ್ರತಿಯೊಂದೂ ದಿನವೂ ಒಂದೊಂದು ವರದಿಗಳ ಮೇಲೆ ಚರ್ಚೆ ಮಾಡುವುದು ಸೂಕ್ತವೆಂದು ನನ್ನ ಅನಿಸಿಕೆ. ಇವತ್ತು ರಾಜ್ಯದ ಜನತೆಗೆ ನಾವು ಕೊಟ್ಟಂಥ ಆಶ್ವಾಸನೆಯ ಪ್ರಕಾರ ಉತ್ತಮವಾದಂಥ ಕಾನೂನು ಸುವ್ಯವಸ್ಥೆ, ಉತ್ತಮವಾದಂಥ ಶಿಕ್ಷಣ ವ್ಯವಸ್ಥೆ, ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ನೀಡುವಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಮಹಿಳೆಯರನ್ನು ಸಂಘಟಿಸಿ ಆ ಮೂಲಕ ಅವರಿಗೆ ಆರ್ಥಿಕ ಚೈತನ್ಯವನ್ನು ಕೊಡಬೇಕೆನ್ನುವಂಥ ಉದ್ದೇಶವನ್ನು ಇಟ್ಟುಕೊಂಡು, ಈ ರಾಜ್ಯದ ಜನ ನಮ್ಮ ಮೇಲೆ ನಂಬಿಕೆಯನ್ನಿಟ್ಟುಕೊಂಡು ನಮ್ಮನ್ನು ಕಳುಹಿಸಿದ್ದಾರೆಯೋ ಆ ನಂಬಿಕೆಗೆ ಪೂರಕವಾಗಿ, ಇವತ್ತು ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ, ಶಿಕ್ಷಣ ಇಲಾಖೆಯ ಬೇಡಿಕೆಯನ್ನು ನೋಡಿದಾಗ, ಬಹುಶ: ಅತ್ಯಂತ ಹೆಚ್ಚಿನ ಹಣದ ವ್ಯವಸ್ಥೆ ಸುಮಾರು ನಾಲ್ಕು ಸಾವಿರ ಕೋ೯ಿ ರೂ. ಮೊತ್ತದ ಹಣ ಪ್ರಾಥಮಿಕ, ಪ್ರೌಢ ಹಾಗೂ ಪದವೀಪೂರ್ವ ಇಲಾಖೆಗಳ ಶಿಕ್ಷಣ ವ್ಯವಸ್ಥೆಗೆ ನಾವು ಹಮ್ಮಿಕೊಂಡಿದ್ದೇವೆ. ಶಿಕ್ಷಣ ಇಲಾಖೆಯಲ್ಲಿ ದೊಡ್ಡ ಒಂದು ಕ್ರಾಂತಿಯನ್ನೇ ನಾವು ಮಾಡಿದ್ದೇವೆಂದರೆ ತಪ್ಪಾಗಲಾರದು. ಇವತ್ತು ನಮ್ಮಲ್ಲಿರತಕ್ಕಂಥ 43 ಸಾವಿರ ಸರ್ಕಾರಿ ಪ್ರಾಥಮಿಕ ಶಾಲೆಗಳು. ಅದರಲ್ಲಿರತಕ್ಕಂಥ ಸುಮಾರು ಒಂದು ಲಕ್ಷದ ತೊಂಭತ್ತಾರು ಸಾವಿರ ಮಂದಿ ಶಿಕ್ಷಕರು, 86 ಲಕ್ಷ ವಿದ್ಯಾರ್ಥಿಗಳು, ಇದರಲ್ಲಿ ಖಾಸಗಿ ರಂಗದ್ದೂ ಸೇರಿದೆ. ಸುಮಾರು 70 ಲಕ್ಷದವರೆಗೆ ಒಂದರಿಂದ ಏಳನೇ ತರಗತಿಯವರೆಗೆ ಇರತಕ್ಕಂಥ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯನ್ನು ಕೊಡುವುದಕ್ಕೋಸ್ಕರ ನಾವು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಒಂದು ಮಗು ಆರರಿಂದ ಹದಿನಾಲ್ಕನೇ ವರ್ಷಕ್ಕೆ ಬೆಳೆಯುವಾಗ ಆ ಮಗುವಿಗೆ ವಿದ್ಯಾಭ್ಯಾಸವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಒಂದು ಸಣ್ಣ ಅಂಕಿ ಅಂಶಗಳನ್ನು ತಮ್ಮ ಮುಂದಿಡಬಯಸುತ್ತೇನೆ. ಪ್ರತಿ ವರ್ಷ ರಾಜ್ಯದಲ್ಲಿ ಒಂದನೇ ತರಗತಿಗೆ ಸುಮಾರು ಹದಿನಾಲ್ಕು ಲಕ್ಷ ಮಕ್ಕಳು ಸೇರುತ್ತಾರೆ. ಏಳನೇ ತರಗತಿಯವರೆಗೆ ತಲುಪುವುದು ಕೇವಲ ಎಂಟು ಲಕ್ಷ. ಹತ್ತನೇ ತರಗತಿಗೆ ತಲುಪುವಾಗ ಅದು 5.5 ಲಕ್ಷಕ್ಕೆ ಇಳಿಯುತ್ತದೆ. ಇದರಲ್ಲಿ ಶೇಕಡ ಐವತ್ತು ಮಾತ್ರ ಹತ್ತನೇ ತರಗತಿಯಲ್ಲಿ ಪಾಸ್ ಆಗುತ್ತಾರೆ. ಅಂದರೆ, 2.75 ಲಕ್ಷ ಮಾತ್ರ ಹತ್ತನೇ ತರಗತಿಯಲ್ಲಿ ಪಾಸಾಗುತ್ತಾರೆ. ಇದಕ್ಕೆ ಕಾರಣವೇನು? ಇದನ್ನು ವಿಮರ್ಶೆ ಮಾಡಿಕೊಂಡು ಮಾಡಿದ ಎಲ್ಲಾ ಅಯುನದಲ್ಲೂ ಕಂಡುಬರುವುದು ಒಂದು ವಿಚಾರ, ಅದೇನೆಂದರೆ,... ಮಗುವಿಗೆ ಸಾಮರ್ಥ್ಯವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಸಾಮರ್ಥ್ಯವಿದೆ, ಆದರೆ ಅದರ ಹೊಟ್ಟೆಯಲ್ಲಿ ಅನ್ನ ಇಲ್ಲದೆ ಉಪವಾಸವಿದ್ದುಕೊಂಡು ಶಾಲೆಗೆ ಬಂದಾಗ ಶಿಕ್ಷಣ ಪಡೆಯಲು ಯಾವುದೇ ಆಸಕ್ತಿ ಇಲ್ಲದೆ ಹಸಿವಿನಿಂದ ನಿರಾಸಕ್ತಿಹೊಂದುತ್ತದೆ. ಶೇಕಡ 87 ವಿದ್ಯಾರ್ಥಿಗಳು ಇವತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಜನೆ ಮಾಡುವಾಗ, ಅದರಲ್ಲಿ 6 ರಿಂದ 14 ವರ್ಷದ ಶೇಕಡ 60 ರಷ್ಟು ಮಕ್ಕಳಿಗೆ ಮಧ್ಯಾಹ್ನದ ಹೊತ್ತಿಗೆ ಊಟ ಇರುವುದಿಲ್ಲ, ಊಟ ಇಲ್ಲದಿದ್ದಾಗ ಅವುಗಳ ವ್ಯಥೆ ಬೇರೆಯಾಗುತ್ತದೆ, ನಮ್ಮ

ಅನುಕೂಲಸ್ಥರ ಮಕ್ಕಳಿಗೆ 6 ರಿಂದ 14 ವರ್ಷದವರಿಗೆ ಶಾಲೆಗೆ ಹೋಗುವಾಗ, ಅವರಿಗೆ ಚಾಕೋಲೇಟ್, ಐಸ್‌ಕ್ರೀಮ್ ಮತ್ತೇನೇನ್ನೊ ತಿನ್ನಿಸುತ್ತೇವೆ, ಶಾಲೆಗೆ ಕಳಿಸುವಾಗ ಪೆಟ್ಟಿಗೆಯಲ್ಲಿ ಅಹಾರವನ್ನೂ ಕೂಡ ಕೊಟ್ಟು ಕಳಿಸುತ್ತೇವೆ. ಆದರೆ, ಮಕ್ಕಳಿಗೆ ನಾವು ಬಿಸಿ ಊಟವನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ, ಇದು ಅತ್ಯಂತ ಪ್ರಾಮಾಣಿಕವಾದಂಥ ದೊಡ್ಡ ಪ್ರಯತ್ನ ಒಂದು ಕ್ರಾಂತಿದಾಯಕವಾದ ವ್ಯವಸ್ಥೆ. ಶಿಕ್ಷಣ ರಂಗದಲ್ಲಿ ಆಗಿರತಕ್ಕಂಥ ಬೃಹತ್ ಕ್ರಾಂತಿಯೆಂದು ಹೇಳಬಯಸುತ್ತೇನೆ. ನಾವು ನಮ್ಮ ಜಿಲ್ಲೆಯಲ್ಲಿ ಸುಮಾರು ಎರಡು ವರ್ಷಗಳ ಹಿಂದೆಯೇ ಗಂಜಿ ಊಟದ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಉಡುಪಿಯಲ್ಲಂತೂ ಶ್ರೀ ಕೃಷ್ಣ ಮಠದ ಪರ್ಯಾಯ ಮಠಾಧೀಶರೇ 'ಕೃಷ್ಣ ಪ್ರಸಾದ' ಎಂದು ಹೇಳಿಕೊಂಡು, ಖಾಸಗಿ ಮತ್ತು ಸರ್ಕಾರಿ ಶಾಲೆಗಳಿಗೆ ವಿದ್ಯಾಮಂತ್ರಿಗಳನ್ನು ಕರೆಸಿ ಮಧ್ಯಾಹ್ನದ ಗಂಜಿ ಊಟದ ಕಾರ್ಯಕ್ರಮವನ್ನು ಒಂದುವರೆ ವರ್ಷದ ಹಿಂದೆಯೇ ಪ್ರಾರಂಭಿಸಿದ್ದಾರೆ. ಎಲ್ಲೆಲ್ಲಿ ಪೋಷಕರ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ, ಆ ಪೋಷಕರ ಸಮಿತಿ ಶಾಲಾಭಿವೃದ್ಧಿ ಸಮಿತಿಯೊಂದಿಗೆ ಸೇರಿಕೊಂಡು ಸುಮಾರು ಒಂದೂವರೆ ವರ್ಷದ ಹಿಂದೆಯೇ ಮಧ್ಯಾಹ್ನದ ಊಟದ ಕಾರ್ಯಕ್ರಮವನ್ನು ಅನೇಕ ಕಡೆಗಳಲ್ಲಿ ಪ್ರಾರಂಭ ಮಾಡಿದ್ದೇವೆ, ನನ್ನ ಕ್ಷೇತ್ರದಲ್ಲೂ ಉದ್ಘಾಟನೆ ಮಾಡಿದ್ದೇವೆ. ಮೊದಲನೆಯದಾಗಿ ಪೋಷಕರ ಬಡತನ, ಅಜ್ಞಾನ ಮತ್ತು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಇರತಕ್ಕಂಥ ಅಸಡ್ಡೆಯನ್ನು ಗಂಭೀರವಾಗಿ ಪರಿಗಣಿಸಿ, ಪ್ರತಿಯೊಂದು ಮಕ್ಕಳಿಗೆ ಊಟದ ವ್ಯವಸ್ಥೆಯನ್ನು ಮಾಡಬೇಕೆಂಬ ನಿರ್ಧಾರವನ್ನು ತಾಳಿ, ಈಗಾಗಲೇ ನಾವು ಈ 'ಬಿಸಿಯೂಟ' ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ. ಇದೇ ಕಾರಣದಿಂದಾಗಿ ಮಾಜಿ ಪ್ರಧಾನಮಂತ್ರಿಗಳಾದ ಮಾನ್ಯ ಶ್ರೀ ನರಸಿಂಹರಾಯವರ ನೇತೃತ್ವದ ಕಾಂಗ್ರೆಸ್ ಸರ್ಕಾರ 'Nutritional support to Primary Education' ಎನ್ನುವ ಹೆಸರಿನಲ್ಲಿ ಮಧ್ಯಾಹ್ನದ ಉಪಹಾರ ಯೋಜನೆ ಅಡಿಯಲ್ಲಿ 3 ಕಿ.ಗ್ರಾಂ. ಅಕ್ಕಿಯನ್ನು ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ ನೀಡುವ ಕಾರ್ಯಕ್ರಮವನ್ನು 1995ರಿಂದಲೇ ಜಾರಿಗೆ ತಂದಿತ್ತು. ಆದರೆ ಈ 3 ಕಿ.ಗ್ರಾಂ. ಅಕ್ಕಿ ಮಕ್ಕಳಿಗೆ ಹೋಗುವುದರ ಬದಲಿಗೆ, ಅದು ಇಡೀ ಕುಟುಂಬಕ್ಕೆ ಹಂಚಿ ಹೋಗುತ್ತಿತ್ತು. ಆ ಮಗು ಮತ್ತೆ ಶಾಲೆಗೆ ಬರುವಾಗ ಒಂದೋ ಉಪವಾಸದಲ್ಲಿ ಬರುತ್ತಿತ್ತು. ಕೆಲ ಪೋಷಕರು ಅದನ್ನು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಬೇರೆ ವ್ಯವಸ್ಥೆಗಳಿಗೆ ವರ್ಗಾಯಿಸಿದಂತಹ ಪರಿಸ್ಥಿತಿಯಲ್ಲಿ ಆ ಮಗು ಶಾಲೆಯಲ್ಲಿ ಉಪವಾಸ ಇರತಕ್ಕಂಥ ಪರಿಸ್ಥಿತಿ ಬಂತು. 2002–03ನೇ ಸಾಲಿನಲ್ಲಿ ಅತ್ಯಂತ ಹಿಂದುಳಿದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ ನಾವು ಬಿಸಿಯೂಟದ ಕಾರ್ಯಕ್ರಮವನ್ನು ನಾವು ಪ್ರಾರಂಭಿಸಿದ್ದೇವೆ. ಇವತ್ತು 50 ಲಕ್ಷ ವಿದ್ಯಾರ್ಥಿಗಳಿಗೆ ಊಟವನ್ನು ಕೊಡತಕ್ಕಂಥ ವಿಚಾರ ಏನಿದೆ, ಇದೊಂದು ಬಹಳ ದೊಡ್ಡ ಕ್ರಾಂತಿ. ಆದರೆ ನಮ್ಮ ದುರಂತ ಏನಾಗಿದೆ ಎಂದರೆ, ನಮ್ಮ ಪತ್ರಿಕಾ ಮಾಧ್ಯಮ, ನಮ್ಮ ವಿರೋಧ ಪಕ್ಷದವರು, ಅದರ ಪರಿಣಾಮಕಾರಿ ಅನುಷ್ಠಾನದಲ್ಲಿ ಸಹಭಾಗಿತ್ವವನ್ನು ಮಾಡುವುದರ ಬದಲಿಗೆ ಅದರ ವಿರೋಧಾಭಾಸಗಳನ್ನು ಎತ್ತಿ ಹಿಡಿಯುವಂತಹ ಕ್ಷುಲ್ಲಕ ಕೆಲಸವನ್ನು ಮಾಡಿದ್ದು ಬಹಳ ದೊಡ್ಡ ದುರಂತ ಎಂದು ನಾನು ಹೇಳಬಯಸುತ್ತೇನೆ. ಇವತ್ತು 50 ಲಕ್ಷ ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥೆಯನ್ನು ಪ್ರಾಂಭಿಸುವಾಗ ಒಂದೋ ಎರಡೋ ಮೂರೋ......

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಮಾನ್ಯ ಅಧ್ಯಕ್ಷರೇ..........

ಶ್ರೀ ಯು.ಆರ್.ಸಭಾಪತಿ:– ದಯವಿಟ್ಟು ತಾವು ಕುಳಿತುಕೊಳ್ಳಿ. I am not yielding. ನಿಮಗೆ ಮಾತನಾಡಲು ಅವಕಾಶ ಸಿಕ್ಕಾಗ ನೀವು ಮಾತನಾಡಿ. ಮಾನ್ಯ ಸಭಾಧ್ಯಕ್ಷರೇ, ನಾನು ಮಾತನಾಡುವಾಗ ದಯವಿಟ್ಟು ಬೇರೆಯವರು ಮಾತನಾಡಲು ಅವಕಾಶ ಮಾಡಿಕೊಡಬೇಡಿ.

ಅಧ್ಯಕ್ಷರು:– ಮಾನ್ಯ ಸಂಗಣ್ಣನವರೇ, you please take your seat.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಭಾಪತಿಯವರೇ, ನೀವು ಯಾರಿಗೂ ಯಿಲ್ಡ್ ಆಗಬೇಡಿ.

(ಗೊಂದಲ)

ಅಧ್ಯಕ್ಷರು:– ಪ್ರತಿ ದಿನ ಇದೇ ರೀತಿ interruptions ಆಗಿ ಒಂದೆರಡು ಗಂಟೆಗಳ ಕಲಾಪ ವೇಳೆ ವ್ಯರ್ಥವಾಗುತ್ತಿದೆ. ದಯವಿಟ್ಟು ಮಧ್ಯೆ ಯಾರೂ ಮಾತನಾಡಿ. ಎಲ್ಲಾ ಪಾರ್ಟಿಗಳಿಂದಲೂ ವಿತ್ತೀಯ ಕಲಾಪಗಳ ಮೇಲೆ ಮಾತನಾಡುವವರು ಇನ್ನೂ ಬೇಕಾದಷ್ಟು ಜನರು ಇದ್ದಾರೆ.

ಶ್ರೀ ಯು.ಆರ್. ಸಭಾಪತಿ:– ಮಾನ್ಯ ಅಧ್ಯಕ್ಷರೇ, ಈ ವಿರೋಧ ಪಕ್ಷದವರ [xx]

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಯಾವುದೇ ಕಾಮೆಂಟ್ಸ್ ಮಾಡಬೇಡಿ. ನೀವು ಕಾಮೆಂಟ್ಸ್ ಮಾಡಿದರೆ ಅವರೂ ಕೂಡ ಮಾಡುತ್ತಾರೆ. ನಿಮಗೆ ಇರುವ ಶಕ್ತಿ ಅವರಿಗೂ ಇದೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಭಾಪತಿಯವರೇ, Please, do not comment upon other members. ನೀವು ಏನು ಮಾತನಾಡಬೇಕೋ ಅದನ್ನು ಮಾತನಾಡಿಕೊಂಡು ಮುಂದುವರೆಯಿರಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಭಾಪತಿಯವರು ಮಾತನಾಡುವಾಗ ಮಾನ್ಯ ಸಂಗಣ್ಣನವರು ಏಕೆ ನಿಂತರು? ಇದರಿಂದಾಗಿ ಮಾನ್ಯ ಸಭಾಪತಿಯವರಿಗೆ ಮಾತನಾಡುವ ಧಾಟಿ ಮತ್ತು ಹುರುಪು ಹೊರಟು ಹೋಯಿತು. ಅವರು ಮಧ್ಯೆದಲ್ಲೇ ಎದ್ದು ಮಾತನಾಡುವಂತಹ ಅವಸರ ಏನಿತ್ತು? No, I am very sorry. ಮಾನ್ಯ ಸಭಾಪತಿಯವರು ಆ ರೀತಿ ಹೇಳಬಾರದಾಗಿತ್ತು. That, I will agree. ಅದೇ ರೀತಿಯಲ್ಲಿ ಮಾನ್ಯ ಸಂಗಣ್ಣನವರಿಗೂ there is no need to stand unnecessarily.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಸದಸ್ಯರು ವಿರೋಧ ಪಕ್ಷದವರ ಬಗ್ಗೆ ಹೇಳಿದುರು ಸಾರ್, ವಿರೋಧ ಪಕ್ಷದವರು ಇದೊಂದು ಪದ್ಧತಿ ಮಾಡಿಕೊಂಡಿದ್ದಾರೆಂದು.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಭಾಪತಿಯವರೇ, ತಾವು ಸ್ವಲ್ಪ correct ಮಾಡಿಕೊಳ್ಳಿ. ದಯವಿಟ್ಟು ಮುಂದೆ ಆ ರೀತಿ ಮಾತನಾಡಬೇಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. No interruptions Please.

XX. ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಸಭಾಪತಿಯವರು ಅಧ್ಯಕ್ಷರ ಪೀಠದಲ್ಲಿ ಕುಳಿತುಕೊಳ್ಳುವಂತಹವರಾಗಿದ್ದಾರೆ. ಅವರು ಈ ಸದನದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಮಾತನಾಡುತ್ತಾರೆಂದು ನಾನು ಭಾವಿಸುತ್ತೇನೆ,

ಅಧ್ಯಕ್ಷರು:– ಮಾನ್ಯ ಜ್ಞಾನೇಂದ್ರರವರೇ, I have already told him not to talk like that. ದಯವಿಟ್ಟು ಮಧ್ಯೆ ಯಾರೂ ಎದ್ದು ನಿಂತು ಮಾತನಾಡಬೇಡಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು:– ಬೇಡಿ. I do not want any comments. ನನಗೆ ಯಾವ ಕಾಮೆಂಟ್ಸ್ ಕೂಡ ಬೇಕಾಗಿಲ್ಲ. ಮಾನ್ಯ ಸದಸ್ಯರು ಯಾವುದೋ ಒಂದು ಹುರುಪಿನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರೆ, ಮಧ್ಯೆ ಎದ್ದು ನಿಂತು ಅಡ್ಡಿಪಡಿಸಿದರೆ ಹೀಗೇ ಆಗುತ್ತದೆ. ಪಾಪ, ಇದರಿಂದಾಗಿ ಅವರ ಸ್ಪಿರಿಟೆಲ್ಲಾ ಹೊರಟು ಹೋಗುತ್ತದೆ.

ಶ್ರೀ ಯು.ಆರ್.ಸಭಾಪತಿ:– ಮಾನ್ಯ ಅಧ್ಯಕ್ಷರೇ, ನಾನು 'ಹಣೆಬರಹ' ಎಂದು ಏನು ಹೇಳಿದ್ದೇನೋ ಅದನ್ನು ಹಿಂದಕ್ಕೆ ಪಡೆಯುತ್ತೇನೆ. ನನ್ನ ಮಾತಿನಿಂದ ಏನಾದರೂ ವಿರೋಧ ಪಕ್ಷದವರಿಗೆ ನೋವಾಗಿದ್ದರೆ ಅದಕ್ಕೆ ನಾನು ವಿಷಾಧಿಸುತ್ತೇನೆ.

ಅಧ್ಯಕ್ಷರು:– ತಾವು ದಯವಿಟ್ಟು ಬೇರೆ ವಿಷಯಗಳ ಬಗ್ಗೆ ಕಾಮೆಂಟ್ಸ್ ಮಾಡಬೇಡಿ. ಸುಮ್ಮನೆ ನೀವು ಮಾತನಾಡಿಕೊಂಡು ಹೋಗುತ್ತಿರಿ.

ಶ್ರೀ ಸಿ. ಗುರುಸ್ವಾಮಿ:– ಮಾನ್ಯ ಅಧ್ಯಕ್ಷರೇ ....

ಅಧ್ಯಕ್ಷರು:– ಮಾನ್ಯ ಗುರುಸ್ವಾಮಿಯವರೇ, No, Please take your seat. ಮಧ್ಯೆ ಎದ್ದು ನಿಂತರೆ ಚೆನ್ನಾಗಿರುವುದಿಲ್ಲ. I can't allow you to like that. ಮಾನ್ಯ ಸಭಾಪತಿಯವರೇ, ತಾವು ಮಾತನಾಡುವುದನ್ನು ಮುಂದುವರೆಸಿ. ಸುಮ್ಮನೆ ಮಧ್ಯೆ ಎದ್ದು ನಿಂತು ತೊಂದರೆ ಉಂಟು ಮಾಡುತ್ತಾರೆ. ಇದರಿಂದಶಗಿ 5–10 ನಿಮಿಷಗಳು ಕಲಾಪದ ಸಮಯ ವ್ಯರ್ಥವಾಯಿತು.

ಶ್ರೀ ಯು.ಆರ್. ಸಭಾಪತಿ:– ಮಾನ್ಯ ಅಧ್ಯಕ್ಷರೇ, ನನ್ನ ಉದ್ದೇಶ ಯಾರಿಗೂ ನೋವನ್ನುಂಟು ಮಾಡುವಂತಾದ್ದೇನೂ ಆಗಿರಲಿಲ್ಲ. ಕೆಲವು ನೋವಿನ ವಿಚಾರಗಳನ್ನು ನಾನು ಈ ಸದನದಲ್ಲಿ ಇಟ್ಟಿದ್ದೆ ಅಷ್ಟೇ. 3–4 ಜನ ಇರತಕ್ಕಂಥ ಕುಟುಂಬದಲ್ಲಿ ಆಹಾರವನ್ನು ಬೇಯಿಸುವಾಗಲೇ ಏನೇನೋ ಆಗಿ ಹೋಗುತ್ತದೆ. ಹಾಗಿರುವಾಗ, 50 ಲಕ್ಷ ಜನರಿಗೆ ಊಟವನ್ನು ದಿನನಿತ್ಯ ಹಾಕುವಂತಹ ಕೆಲಸದಲ್ಲಿ ಅಲ್ಲೋ ಇಲ್ಲೋ ಒಂದೆರಡು ಲೋಪದೋಷಗಳು ನಡೆಯುವುದು ಅನಿವಾರ್ಯ. ಅದನ್ನು ನಾವು ಶಾಸಕರು ಪೋಷಕರ ಸಮಿತಿಯ ಮೂಲಕ ತಡೆಗಟ್ಟಲಿಕ್ಕೆ ಸಾಧ್ಯವಿದೆ. ಇವತ್ತು ಈ ಒಂದು ವಿಚಾರದಲ್ಲಿ ನಮ್ಮ ಉಡುಪಿ ಜಿಲ್ಲೆಯ ಉದಾಹರಣೆಯೊಂದನ್ನು ನಾನು ನಿಮಗೆ ಹೇಳುತ್ತಿದ್ದೇನೆ. 602 ಶಾಲೆಗಳಲ್ಲಿ ನಾವು ಕಳೆದ ಒಂದು ತಿಂಗಳಿನ ಅವಧಿಯಲ್ಲಿ ಸುಮಾರು 57 ಸಾವಿರ ವಿದ್ಯಾರ್ಥಿಗಳಿಗೆ 'ಬಿಸಿಯೂಟ' ಕಾರ್ಯಕ್ರಮವನ್ನು 'ಗಂಜಿಯೂಟ' ಕಾರ್ಯಕ್ರಮ, 'ಬಿಸಿಯೂಟ' ಕಾರ್ಯಕ್ರಮ, 'ಕೃಷ್ಣ ಪ್ರಸಾದ' ಹೀಗೆ ಬೇರೆ ಬೇರೆ ಹೆಸರಿನಿಂದ ಅನುದಾನಿತ ಶಾಲೆಗಳಲ್ಲೂ ಕೂಡ ಅದನ್ನು ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. 602 ಸರ್ಕಾರಿ ಶಾಲೆಗಳ ಒಂದು ವೈಶಿಷ್ಟಪೂರ್ಣವಾದಂತಹ ಅಂಕಿ ಅಂಶವನ್ನು ಪಡೆದಾಗ, ಇಂದು

ವಿದ್ಯಾರ್ಥಿಗಳ ಸಂಖ್ಯೆ 57 ರಿಂದ 59 ಸಾವಿರಕ್ಕೆ ಏರಿದ್ದನ್ನು ನೋಡಿದಾಗ, ಒಂದು ತಿಂಗಳಿನ ಅವಧಿಯಲ್ಲಿ 2 ಸಾವಿರ ಮಕ್ಕಳು ಶಾಲೆಗೆ ಹೆಚ್ಚುವರಿಯಾಗಿ ಸೇರ್ಪಡೆಯಾಗಿದ್ದಾರೆ ಎನ್ನುವುದು ಒಂದು ದಾಖಲೆಯೇ ಸರಿ ಎಂದು ನಾನು ಹೇಳಬಯಸುತ್ತೇನೆ. ಇಷ್ಟೊಂದು ಉತ್ತಮವಾದಂತಹ ಕಾರ್ಯಕ್ರಮವನ್ನು ನಾವು ಅನುಷ್ಠಾನಗೊಳಿಸುತ್ತಿರುವಾಗ, ಶಿಕ್ಷಕರನ್ನು ತರಕಾರಿ ಹಚ್ಚಲಿಕ್ಕೆ ಹಾಕಿದ್ದಾರೆ ಎನ್ನುವಂತಹ ಆರೋಪಗಳನ್ನೂ ಸಹ ನಾವು ಕೇಳಿದ್ದೇವೆ. ನಾವು ಯಾವ ಶಿಕ್ಷಕರನ್ನೂ ತರಕಾರಿ ಹಚ್ಚಲಿಕ್ಕೆ ಹಾಕಿಲ್ಲ. ಇವತ್ತು ಪೋಷಕರ ಸಮಿತಿ ಏನಿದೆ, ಅದನ್ನು ನೇಮಕ ಮಾಡುವಂತಹ ಆಯಾ ಕ್ಷೇತ್ರದ ಶಾಸಕರುಗಳಿಗೇ ನಾವು ಬಿಟ್ಟು ಕೊಟ್ಟಿದ್ದೇವೆ. ಆಯಾ ಕ್ಷೇತ್ರದ ಶಾಸಕರೇ, ಪೋಷಕರ ಪಟ್ಟಿಯನ್ನು ಹಿಡಿದುಕೊಂಡು, ಅದರಲ್ಲಿ ಯಾರು ಉತ್ತಮವಾದಂತಹ ಪೋಷಕರು ಇದ್ದಾರೆಯೋ, ಶಾಲೆಯ ಹಿತಾಸಕ್ತಿಯನ್ನು ಬಳಸಿಕೊಳ್ಳಲಿಕ್ಕೆ ಒಳ್ಳೆಯ ದಾನಿಗಳನ್ನು ಸೇರ್ಪಡೆಗೊಳಿಸಿ ಕೆಲಸ ಮಾಡುತ್ತಾರೋ ಅಂತಹವರುಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ನಾವು ಶಾಸಕರುಗಳಿಗೇ ಬಿಟ್ಟು ಕೊಟ್ಟಿದ್ದೇವೆ. ಹೀಗಿರುವಾಗ ಇದರಲ್ಲಿ ಶಾಸಕರ ಜವಾಬ್ದಾರಿ ಏನೂ ಇಲ್ಲವೇ? ಪೋಷಕರ ಸಮಿತಿಯನ್ನು ಜನರ ಸಹಭಾಗಿತ್ವದೊಂದಿಗೆ ಉತ್ತಮವಾಂತಹ ಶಿಕ್ಷಣ ವ್ಯವಸ್ಥೆಯನ್ನು ನೀಡಲು ನಾವು ಎಲ್ಲಾ ಚುನಾಯಿತು ಪ್ರತಿನಿಧಿಗಳಿಗೂ ಕೂಡ ಒಂದು ಅವಕಾಶವನ್ನು ಕೊಟ್ಟಿದ್ದೇವೆ. ಆದರಿಂದಾಗಿ ಇದರಲ್ಲಿ ತುಂಬಾ ಪರಿಣಾಮಗಳನ್ನು ನಾವು ಕಂಡಿದ್ದೇವೆ. ಯಾವಾಗ ಪೋಷಕರ ಸಮಿತಿ ನೇಮಕ ಆಗಿದೆಯೋ, ಅಲ್ಲಿಂದ ಇಲ್ಲಿಗೆ ಆ ಶಾಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ಗಣನೀಯ ಪ್ರಮಾಣವಾದಂತಹ ಅಭಿವೃದ್ಧಿಯನ್ನು ನಾವು ಕಾಣಬಹುದು. ಇದನ್ನು ಪ್ರತಿಯೊಬ್ಬರೂ ಗಮನಿಸಬೇಕಾಗಿದೆ. ನಾವು ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಮಟ್ಟ ಕಡಿಮೆ ಇದೆ ಎನ್ನುವಂತಹ ದೃಷ್ಟಿಯಿಂದ 2000–01 ಮತ್ತು 2001–02ನೇ ಸಾಲುಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿ ಇರತಕ್ಕಂಥ 12 ಸಾವಿರ ಹುದ್ದೆಗಳನ್ನೇ ಉತ್ತರ ಕರ್ನಾಟಕಕ್ಕೆ ವರ್ಗಾಯಿಸಿದ್ದೇವೆ. ಇವತ್ತು ಅಲ್ಲಿನ ಶಿಕ್ಷಣ ಮಟ್ಟ ಏರಬೇಕೆನ್ನುವ ದೃಷ್ಟಿಯಿಂದ ಈಶಾನ್ಯ ವಲಯದ ಏಳು ಜಿಲ್ಲೆಗಳಿಗಾಗಿಯೇ ಗುಲ್ಬರ್ಗಾದಲ್ಲಿ ಒಂದು ಶೈಕ್ಷಣಿಕ ನಿರ್ದೇಶನಾಲಯುವನ್ನು ಸ್ಥಾಪಿಸಿದ್ದು ಮಾತ್ರವಲ್ಲದೆ, ಅಲ್ಲೊಂದು ಆಯುಕ್ತರ ಕಛೇರಿಯೊಂದನ್ನು ಸಹ ತೆರೆದಿದ್ದೇವೆ.

'ಚಿಣ್ಣರ ಅಂಗಳ' ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ಬಹಳಷ್ಟು ಜನ ಇದರ ಬಗ್ಗೆ ಬಹಳಷ್ಟು ರೀತಿಯ ಮಾತುಗಳನ್ನು ಹೇಳಿದರೂ ಕೂಡ, ಈ ರಾಜ್ಯದಲ್ಲಿ ಆ 'ಚಿಣ್ಣದ ಅಂಗಳ' ಕಾರ್ಯಕ್ರಮದಿಂದಾಗಿ ಸುಮಾರು 3.10 ಲಕ್ಷ ವಿದ್ಯಾರ್ಥಿಗಳನ್ನು ಮತ್ತೆ ಶಾಲೆಗೆ ತರಲಿಕ್ಕೆ ಸಾಧ್ಯವಾಗಿದೆ. 'ಬಾ ಮರಳಿ ಶಾಲೆಗೆ' ಕಾರ್ಯಕ್ರಮ ಉದ್ಘಾಟನೆಯಾದ ಒಂದು ತಿಂಗಳಿನಲ್ಲಿಯೇ ಸುಮಾರು 2.23 ಲಕ್ಷ ಮಕ್ಕಳನ್ನು ಶಾಲೆಗೆ ನೋಂದಾಯಿಸಲಾಗಿದೆ. ಇದರಿಂದ ಶಿಕ್ಷಕರುಗಳಿಗೆ ಸ್ವಲ್ಪ ಕಷ್ಟವಾಗಿರಬಹುದು. ಆದರೆ ಶಿಕ್ಷಕರು ಅದಕ್ಕೆ ಬದ್ಧರಾಗಿರಬೇಕು. ಸರ್ಕಾರದ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಾಗ ಶಿಕ್ಷಕರು ನಮ್ಮೊಂದಿಗೆ ಸೇರಬೇಕು. ಇದು ಕೇವಲ ಶಿಕ್ಷಕರದೇ ಜವಾಬ್ದಾರಿ ಎಂದು ಬಿಡಲಿಕ್ಕಾಗುವುದಿಲ್ಲ. ಎಲ್ಲಾ ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿಯೂ ಕೂಡ ಇದರಲ್ಲಿದೆ. ನನ್ನ ಜಿಲ್ಲೆಯ ಉದಾಹರಣೆಯೊಂದನ್ನು ಇಲ್ಲಿ ಕೊಡುತ್ತಿದ್ದೇನೆ. ಈ ರಾಜ್ಯ ಸರ್ಕಾರದ ಧೋರಣೆಯಿಂದಾಗಿ, ಶಾಸಕರಾದ ನಾವು ಪದವಿ–ಪೂರ್ವ ಕಾಲೇಜು, ಪ್ರೌಢ ಶಾಲೆಗಳು ಮತ್ತು ಕಾಲೇಜ್‌ಗಳ ಅಧ್ಯಕ್ಷರಾದ ಮೇಲೆ ಇವತ್ತು 30–35% ಇರತಕ್ಕಂಥ ಸರ್ಕಾರಿ ಶಾಲೆಗಳು, ಶೇಕಡ 100, ಶೇಕಡ 98, ಶೇಕಡ 95, ಫಲಿತಾಂಶ ಬರುವಂತಾಗಿದೆ. ಖಾಸಗಿ ಶಾಲೆಗಳು

ಸರ್ಕಾರಿ ಶಾಲೆಯೊಂದಿಗೆ ಪೈಪೋಟಿ ನಡೆಸುವಂತಹ ಹಂತದವರೆಗೆ ಅದನ್ನು ತಂದು ಮುಟ್ಟಿಸಿದ್ದೇವೆ. ಇದು ಕ್ರಾಂತಿಯಲ್ಲವೇ? ಯಾವ ಬಡತನದಲ್ಲಿ ಇರತಕ್ಕಂಥ ಮಕ್ಕಳಿಗೆ ನಾವು ಬಿಸಿಯೂಟದ ಕಾರ್ಯಕ್ರಮವನ್ನು ಈ ಬರಗಾಲದ ಪರಿಸ್ಥಿತಿಯಲ್ಲೂ ತಂದಾಗ, ಬರಗಾಲದಲ್ಲಿ ಪೀಡಿತರಾಗಿ ಗುಳೆ ಹೋಗತಕ್ಕಂಥ ಜನಗಳೂ ಕೂಡ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಒಂದು ಹೊತ್ತು ಊಟ ಸಿಗುತ್ತದೆ ಎನ್ನುವಂತಹ ಒಂದೇ ಕಾರಣಕ್ಕಾಗಿ ಶಾಲೆಗೆ ಕಳುಹಿಸುವಂತಹ ಪರಿಪಾಠವನ್ನು ಕಲ್ಪಿಸಿಕೊಂಡದ್ದು ಬಹಳ ಮಹತ್ವಪೂರ್ಣವಾಗಿದೆ. ಅಷ್ಟೇ ಅಲ್ಲದೆ, ಬಿಸಿಯೂಟದ ಅಡುಗೆ ಮಾಡಲಿಕ್ಕೆ ಮುಖ್ಯವಾಗಿ ನಾವು ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಂದ ಆಯ್ಕೆಯಾಗಿರತಕ್ಕಂಥ ಮೂವರು ಅಭ್ಯರ್ಥಿಗಳನ್ನು ಅಡುಗೆ ಮಾಡಲಿಕ್ಕಾಗಿಯೇ ನೇಮಕ ಮಾಡಿದ್ದೇವೆ. ಇವತ್ತು ಅಲ್ಲಿಯೂ ಕೂಡ ಜಾತಿ ಭೇದ ಇರಬಾರದು ಎನ್ನುವ ದೃಷ್ಟಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೂಡ ಒಂದು ಸ್ಥಾನ ಕಾದಿರಿಸಿದ್ದೇವೆ. ಎಲ್ಲರೂ ಸಹ ಭೋಜನದಲ್ಲಿರಬೇಕೆಂಬ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಾಗ ಕೆಲವೊಂದು ಹಳ್ಳಿಗಳಲ್ಲಿ ಸ್ವಾತಂತ್ರ್ಯ ಬಂದ 56 ವರ್ಷಗಳ ನಂತರ ಜಾತೀಯತೆ ಆಧರಿಸಿ ಪರಿಶಿಷ್ಟ ವರ್ಗದವರು ಮಾಡಿದ ಅಡುಗೆಯನ್ನು ಊಟ ಮಾಡುವುದಿಲ್ಲ ಎಂದು ಹೇಳುತ್ತಾರೆಂದರೆ ಅವರಿಗೆ ಯಾವ ರೀತಿ ಶಿಕ್ಷೆ ಕೊಡಬೇಕೆಂದು ಈ ಸದನ ತೀರ್ಮಾನಿಸಬೇಕು. ಸಾಮಾಜಿಕ ನ್ಯಾಯದ ಬಗ್ಗೆ ಕೂಡ ಈ ಸರ್ಕಾರ ಶಿಕ್ಷಣದೊಂದಿಗೆ ಜನರಿಗೆ ತಿಳುವಳಿಕೆ ನೀಡಿದೆ ಎಂದು ನಾನು ಹೇಳಬಯಸುತ್ತೇನೆ. ಪ್ರಾಥಮಿಕ ಶಾಲೆಗಳ ನಂತರ ಪ್ರೌಢ ಶಾಲೆಗಳಿಗೆ ಬಂದಾಗ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿರತಕ್ಕಂತಹ ಎಸ್‌ಎಸ್‌ಎಲ್‌ಸಿಯ ಫಲಿತಾಂಶಗಳನ್ನು ನಾವು ನೋಡೋಣ. 1998ರಲ್ಲಿ 33.56 ಪರ್ಸೆಂಟ್ ಎಸ್‌ಎಸ್‌ಎಲ್‌ಸಿ ಫಲಿತಾಂಶ ಇದೆ. ಆದರೆ ಈಗ ಸರ್ಕಾರೀ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 51.47 ಪರ್ಸೆಂಟ್ ಫಲಿತಾಂಶವನ್ನು ನಾವು ಪಡೆಯಲಿಕ್ಕೆ ಸಾಧ್ಯವಾಗಿದೆ. ಶಿಕ್ಷಣಕ್ಕೆ ಇಷ್ಟೊಂದು ಹಣವನ್ನು ವೆಚ್ಚ ಮಾಡಿದ್ದರ ಹಿನ್ನೆಲೆಯಲ್ಲಿ 51.47 ಪರ್ಸೆಂಟ್ ನಾವು ಫಲಿತಾಂಶ ಪಡೆದಿದ್ದೆವು 1998ರಲ್ಲಿ ನಗರ ಪ್ರದೇಶಗಳಲ್ಲಿ 50.36 ಪರ್ಸೆಂಟ್ ಫಲಿತಾಂಶವಾದರೆ, ಗ್ರಾಮೀಣ ಪ್ರದೇಶಗಳಲ್ಲಿ 39.54 ಪರ್ಸೆಂಟ್ ಫಲಿತಾಂಶ ಬಂದಿತ್ತು. ಆದರೆ ಅದೇ 2003ಕ್ಕೆ ಬರುವಾಗ ಗ್ರಾಮೀಣ ಪ್ರದೇಶದ ಫಲಿತಾಂಶ ನಾವು ಶೇಕಡವಾರು ನೋಡುವಾಗ 39. ರಿಂದ 53.34 ಪರ್ಸೆಂಟ್‌ವರೆಗೆ ಏರಿಸುವಲ್ಲಿ ನಾವು ಶಕ್ತರಾಗಿದ್ದೇವೆ. ಇವತ್ತು ಎಸ್.ಎಸ್.ಎಲ್.ಸಿ.ಯ ಪರೀಕ್ಷೆಯ ಫಲಿತಾಂಶವನ್ನು ನೋಡುವಾಗ 78 ರಿಂದ 76 ಪರ್ಸೆಂಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಗಳಲ್ಲಿ ನಾವು ಮುಖ್ಯ ಸ್ಥಾನವನ್ನು ಪಡೆದುಕೊಂಡಿದ್ದೇವೆ. ಇದು ಏಕೆ ಬೇರೆ ಜಿಲ್ಲೆಗಳಲ್ಲೂ ಆಗಬಾರದು ಎಂದು ನನ್ನ ವಿನಂತಿ. ಚುನಾಯಿತು ಪ್ರತಿನಿಧಿಗಳು ಏಕೆ ಇದರಲ್ಲಿ ಹೆಚ್ಚು ಹೆಚ್ಚು ಆಸಕ್ತಿ ವಹಿಸಬಾರದು? ಇದುವರೆಗೆ ನಮ್ಮ ದಕ್ಷಿಣ ಕನ್ನಡದ ಜಿಲ್ಲೆಗಳಿಗೆ ಎಷ್ಟು ಹಣ ಬರುತ್ತಿತ್ತೊ, ಅಷ್ಟೇ ಹಣ ಉತ್ತರ ಕರ್ನಾಟಕದ ಭಾಗಗಳಿಗೂ ಹೋಗುತ್ತಿದೆ. ಉತ್ತರ ಕರ್ನಾಟಕ ಜಿಲ್ಲೆಗೆ ಬಂದಿರತಕ್ಕಂತಹ ಹಣ ಜನರಿಗೆ ಮುಟ್ಟಿಸುವಲ್ಲಿ ಚುನಾಯಿತ ಪ್ರತಿನಿಧಿಗಳು ವಿಫಲವಾಗಿದ್ದಾರೆ ಎನ್ನುವಂತಹ ಸಂಶಯ ನನಗೆ ಬರುತ್ತಿದೆ. ನಮ್ಮನ್ನೇನೋ ಮೀನು ತಿನ್ನುವವರು ಬುದ್ಧಿವಂತರು ಎಂದು ಹೇಳುತ್ತಾರೆ, ಆದರೆ ನಮ್ಮಲ್ಲಿ ಮೀನು ತಿಂದ ಬುದ್ಧಿವಂತಿಕೆಗಿಂತಲೂಕೂಡ ಈ ಹಣವನ್ನು ಜನರಿಗೆ ಮುಟ್ಟಿಸುವಲ್ಲಿ ನಾವು ಸಫಲರಾಗಿದ್ದೇವೆನ್ನುವುದನ್ನು ಈ ಫಲಿತಾಂಶದಲ್ಲಿ ನಾವು ತೋರಿಸಿದ್ದೇವೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿರಲಿ, ಶಿಕ್ಷಣ ಕೇಂದ್ರಗಳಿರಲಿ, ಅವುಗಳ ಅಭಿವೃದ್ಧಿಗಾಗಿ ಚುನಾಯಿತ ಪ್ರತಿನಿಧಿಗಳು ಸಾಕಷ್ಟು ರೀತಿಯಲ್ಲಿ ಸರ್ಕಾರದ ನೆರವಿನೊಂದಿಗೆ ಜನರ ಸಹಭಾಗಿತ್ವದೊಂದಿಗೆ ಪರಿಣಾಮಕಾರಿಯಾಗಿ ಕಾರ್ಯ ಮಾಡಿದ್ದೇವೆ. ಮುಂಗಡ ಪತ್ರದಲ್ಲಿ ನಾವು ವ್ಯಯ ಮಾಡುವಂತಹ ವಿವಿಧ ಇಲಾಖೆಗಳ ಹಣವನ್ನು ನೇರವಾಗಿ ಜನರಿಗೇ ಮುಟ್ಟಿಸಲಿಕ್ಕೆ ಸಾಧ್ಯತೆ ಆಗಿದೆ ಎನ್ನುವುದನ್ನು ನಮ್ಮ ದಕ್ಷಿಣ ವಲಯದ ಜಿಲ್ಲೆಗಳು ಸಾಬೀತುಪಡಿಸಿಕೊಂಡಿವೆ. ನಾನು ನನ್ನ ಕ್ಷೇತ್ರದಲ್ಲಿ ನಡೆಸಿದ ಒಂದು ಪ್ರಯೋಗವನ್ನು ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲೂ 22 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ. ಸರ್ಕಾರೀ ಶಾಲೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ. 11 ಪ್ರೌಢ ಶಾಲೆಗಳಿವೆ, ನಾಲ್ಕು ಸರ್ಕಾರಿ ಪದವಿ ಪೂರ್ವ ಸರ್ಕಾರಿ ಕಾಲೇಜುಗಳಿವೆ. ಒಂದು ಸರ್ಕಾರಿ ಕಾಲೇಜು ಇದೆ. ಈ ಸರ್ಕಾರಿ ಕಾಲೇಜಿನಲ್ಲಿ ಈ ಸಾರಿ ಒಂದು ಸಾವಿರ ವಿದ್ಯಾರ್ಥಿಗಳು ಪ್ರವೇಶಾವಕಾಶ ಪಡೆದಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಶಾಸಕನಾಗಿ ಪದವಿಪೂರ್ವ ಕಾಲೇಜುಗಳಲ್ಲಿ ನಾನು ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದೆ. ನನ್ನ ಕ್ಷೇತ್ರದಲ್ಲಿ ಯಾವ ಶಾಲೆ ಹೆಚ್ಚು ಫಲಿತಾಂಶ ಪಡೆಯುತ್ತಾರೊ ಅವರಿಗೆ ಬಂಗಾರದ ಪದಕವನ್ನು ನೀಡುತ್ತೇನೆಂದು ಘೋಷಣೆ ಮಾಡಿದ್ದೆ. ಯಾವಶಾಲೆಗಳು ಫಲಿತಾಂಶದಲ್ಲಿ ದ್ವಿತೀಯ ಬರುತ್ತವೆ ಅವರಿಗೆ ಬೆಳ್ಳಿಯ ಪದಕ. ಇದನ್ನು ನಾನು ಆ ಶಾಲೆಗೆ ಹೋಗಿ ಎಲ್ಲ ಪೋಷಕರನ್ನು ಕರೆಸಿ ವಿದ್ಯಾರ್ಥಿಗಳ ಎದುರು ಆ ಶಾಲೆಯ ಮುಖ್ಯೋಪಾಧ್ಯಾಯರಿಗೆ ಶಾಲು ಹೊದಿಸಿ ಸನ್ಮಾನ ಮಾಡಿ, ಆ ಎಲ್ಲಾ ಅಧ್ಯಾಪಕರುಗಳಿಗೆ ಹಾರ ಹಾಕಿ ಸನ್ಮಾನ ಮಾಡುವಂತಹ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಶಾಲೆ ಶಾಲೆಗಳಿಗೆ ಸ್ಪರ್ಧೆಗಳು ಪ್ರಾರಂಭವಾದವು. ಒಂದು ಶಾಲೆ 75 ಪರ್ಸೆಂಟ್ ಫಲಿತಾಂಶ ಬಂದಿದ್ದು, ಮತ್ತೊಂದು ವರ್ಷ ಶೇಕಡ 100 ಪರ್ಸೆಂಟ್ ಸಾಧನೆ ಮಾಡಿದೆ. ಒಂದು ವರ್ಷದಲ್ಲಿ ಒಂದು ನಿರ್ದಿಷ್ಟವಾದ ಶಾಲೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡ 29 ಪರ್ಸೆಂಟ್ ಫಲಿತಾಂಶ ಪಡೆದಿತ್ತು. ನಾನು ಮಾರನೇ ದಿವಸ ನೇರವಾಗಿ ಆ ಶಾಲೆಗೆ ಹೋದೆ. ಎಲ್ಲಾ ಅಧ್ಯಾಪಕರುಗಳನ್ನು ಕೂರಿಸಿ, ನಮ್ಮ ಸರ್ಕಾರದಿಂದ ನಿಮಗೆ ಏನಾದರೂ ತೊಂದರೆಯಾಗಿದೆಯಾ, ಅಥವಾ ಪೋಷಕರಿಂದ ಏನಾದರೂ ತೊಂದರೆಯಾಗಿದೆಯಾ? ಅಥವಾ ಚುನಾಯಿತ ಪ್ರತಿನಿಧಿಯಾಗಿ ನನ್ನಿಂದ ಏನಾದರೂ ನಿಮಗೆ ತೊಂದರೆಯಾಗಿದೆಯಾ ನಿಮ್ಮ ವಿಷಯದಲ್ಲಿ ನಾನು ಪೋಸ್ಟ್ ಮಾರ್ಟಂ ಮಾಡಲಿಕ್ಕೆ ಬರುವುದಿಲ್ಲ, ಆದರೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ನೀವು ಎಷ್ಟು ಫಲಿತಾಂಶ ಕೊಡುತ್ತೀರಿ ಎಂದು ನನಗೆ ಹೇಳಿ ಬಿಟ್ಟರೆ ಸಾಕು. ನಾನು ಈ ಶಾಲೆಯಿಂದ ಹೋದವನು ಮುಂದಿನ ವರ್ಷದ ಫಲಿತಾಂಶ ನೋಡಲಿಕ್ಕೆ ಬರುತ್ತೇನೆ. ಎಂದು ಹೇಳಿದೆ. ಯಾರೂ ನಂಬಲಿಕ್ಕಿಲ್ಲ. ಮುಂದಿನ ವರ್ಷದ ಶೇಕಡ 88 ಫಲಿತಾಂಶ ಬಂದಿತು. ಅದೇ ಶಾಲೆಯಲ್ಲಿ ಅದೇ ಅಧ್ಯಾಪಕರಿಂದ ಅತ್ಯಂತ ಪರಿಣಾಮಕಾರಿಯಾದ ಫಲಿತಾಂಶ ತರಲಿಕ್ಕೆ ಯಶಸ್ವಿಯಾಯಿತು. ಈ ಪ್ರಯತ್ನವನ್ನು ನಾವು ಎಲ್ಲ ಚುನಾಯಿತ ಪ್ರತಿನಿಧಿಗಳು ಕುಳಿತುಕೊಂಡು ಇದನ್ನು ಏಕೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮಾಡ ಬಾರದು? ಖಾಸಗಿ ಶಾಲೆಗಳು ಸರ್ಕಾರಿ ಶಾಲೆಗಳೊಂದಿಗೆ ಸ್ಪರ್ಧೆ ಮಾಡುವ ಪ್ರಯತ್ನದಲ್ಲಿ ಕೆಲವು ಖಾಸಗಿ ಶಾಲೆಗಳು ಮುಚ್ಚಲ್ಪಟ್ಟವು. ಅವುಗಳನ್ನು ನಾವು ಜಿಲ್ಲಾ ಪಂಚಾಯಿತಿಯಿಂದ ತೆಗೆದುಕೊಂಡಿದ್ದೇವೆ. ಅದರಿಂದಾಗಿ ಈ ಕ್ರಾಂತಿಕಾರಿ ಶಿಕ್ಷಣ ಇಲಾಖೆಗೆ ಇನ್ನುಷ್ಟು ಹೆಚ್ಚು ಹೆಚ್ಚು ಅವಕಾಶಗಳನ್ನು ಕೊಟ್ಟು ಅದಕ್ಕೆ ಕೊಡುವಂತಹ ಹಣವನ್ನು ವ್ಯಯ ಮಾಡುವುದರಲ್ಲಿ ನಾವೆಲ್ಲಾ ಸಹಭಾಗಿತ್ವದಲ್ಲಿ ಕೆಲಸ ಮಾಡಿದರೆ ಈ ರಾಜ್ಯದ ಬಡ ಜನರ ಮಕ್ಕಳಿಗೆ ಉತ್ತಮವಾದ ಶೈಕ್ಷಣಿಕ ವ್ಯವಸ್ಥೆಯನ್ನು ಮಾಡಬಹುದು ಎಂದು ಹೇಳ ಬಯಸುತ್ತೇನೆ.

ಇನ್ನು ಆರೋಗ್ಯ ಇಲಾಖೆ ಬಗ್ಗೆ, ಹೇಳುವುದಾದರೆ, "ಆರೋಗ್ಯವೇ ಭಾಗ್ಯ". ಚಿಕ್ಕಂದಿನಿಂದಲೂ ಕೂಡ ನಮಗೆ ಅಧ್ಯಾಪಕರು ಹೇಳಿದಂತಹ ಗಾದೆ ಮಾತು 'ಆರೋಗ್ಯವೇ ಭಾಗ್ಯ' ಎಂದು, ಎಷ್ಟು ಹಣ ಇದ್ದರೂ ಕೂಡ ಭಾಗ್ಯ ಬರುವುದಿಲ್ಲ. ಹಣ ಇರನಬಹುದು, ಎಷ್ಟು ಅಧಿಕಾರ ಇದ್ದರೂ ಅದು ಭಾಗ್ಯ ಆಗುವುದಿಲ್ಲ. ಆರೋಗ್ಯ ಒಂದು ಇಲ್ಲದಿದ್ದರೆ ಯಾವ ಭಾಗ್ಯ ಇದ್ದರೂ ಪ್ರಯೋಜನ ಇಲ್ಲ. ಅದಕ್ಕೆ ಒಂದೇ ಒಂದು ಉದಾಹರಣೆ ಎಂಆರ್‌ಪಿಎಲ್‌ನ ಆದಿತ್ಯ ಬಿರ್ಲಾ ಕೋಟ್ಯಾಧೀಶ. ನ್ಯುಮೋನಿಯಾದಿಂದ ಅವರು ಸತ್ತು ಹೋದರು. ಆದರೆ ಬಡ ಜನರಲ್ಲಿ ಇರುವಂತಹ ಆರೋಗ್ಯಗಳನ್ನು ಗುರುತಿಸಿ ಅವರಿಗೆ ಉತ್ತಮವಾದ ಆರೋಗ್ಯ ವ್ಯವಸ್ಥೆ ಮಾಡುವಲ್ಲಿ ನಮ್ಮ ಸರ್ಕಾರ ಮಹತ್ತರವಾದ ಹೆಜ್ಜೆಯನ್ನು ಇಟ್ಟಿದೆ. ಅದರಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಿದೆ ಎನ್ನುವುದನ್ನು ನಾನು ಹೆಮ್ಮೆಯಿಂದ ಹೇಳುತ್ತೇನೆ, ನಾನು ಶಾಸಕನಾಗಿ ಬಂದಾಗ ನನ್ನ ಜಿಲ್ಲಾ ಆಸ್ಪತ್ರೆಯಲ್ಲಿ ಕೇವಲ ನಾಲ್ಕು ಜನ ವೈದ್ಯರುಗಳು ಇದ್ದರು. 29 ಹುದ್ದೆಗಳು ಖಾಲಿ ಇದ್ದವು. ಎಕ್ಸ್‌ರೇ ಮಿಷನ್ ಕೆಟ್ಟು ಹೋಗಿ ವರ್ಷಗಳೇ ಕಳೆದಿದ್ದವು. ಸ್ಕ್ಯಾನರ್ ಮಿಷನ್ ನಾವು ನೋಡಿಯೇ ಇರಲಿಲ್ಲ. ರಕ್ತ ನಿಧಿ ಬ್ಯಾಂಕ್ ಇರಲಿಲ್ಲ. ಎಲ್ಲಿ ನೋಡಿದರೂ ಅಲ್ಲಿ ಭಯದ ವಾತಾವರಣ. ಸರ್ಕಾರೀ ಆಸ್ಪತ್ರೆಗೆ ಕಾಲಿಟ್ಟರೆ ದುಡ್ಡು ತೆಗೆದುಕೊಳ್ಳುತ್ತಾರೆ. ಮದ್ದಿಗಾಗಿ ಚೀಟಿಯನ್ನು ಹೊರಗೆ ಕಳುಹಿಸುತ್ತಾರೆನ್ನುವ ವಾತಾವರಣ ಇತ್ತು. ಕಳೆದ ಐದು ವರ್ಷಗಳ ನನ್ನ ಅನುಭವವನ್ನು ಮಾನ್ಯ ಸಭಾಧ್ಯಕ್ಷರೆ, ನಿಮ್ಮಲ್ಲಿ ಹೇಳಬಯಸುತ್ತೇನೆ. ಕಳೆದ ನಾಲ್ಕು ವರ್ಷಗಳ ಹಿಂದೆ ನಮ್ಮ ಸರ್ಕಾರ ಬಂದ ಮೇಲೆ ನಮ್ಮ ಜಿಲ್ಲಾ ಆಸ್ಪತ್ರೆಗೆ 29, ವೈದ್ಯಕೀಯ ತಜ್ಞರ ನೇಮಕವಾಯಿತು. ರಕ್ತ ನಿಧಿ ಬ್ಯಾಂಕನ್ನು ಸ್ಥಾಪನೆ ಮಾಡಲು ಸಾಧ್ಯವಾಯಿತು. ಮೊದಲು ಒಬ್ಬ ಬಡವನಿಗೆ ರಕ್ತದ ಅವಶ್ಯಕತೆ ಬಿದ್ದರೆ ಅವರು ಮಣಿಪಾಲ ಆಸ್ಪತ್ರೆಗೆ ಹೋಗಿ 600 ರೂಪಾಯಿ ಕೊಟ್ಟು ಮತ್ತೆ ಒಂದು ಬಾಟಲ್ ರಕ್ತ ಕೊಡುವಂತಹ ಪರಿಸ್ಥಿತಿ ಇತ್ತು. ಇವತ್ತು ನಮ್ಮ ರಕ್ತ ನಿಧಿ ಬ್ಯಾಂಕಿನಲ್ಲಿ ನಾವು ಪ್ರತಿ ಶನಿವಾರ ರಕ್ತದಾನ ಶಿಬಿರಗಳನ್ನು ಮಾಡಿ ಎಲ್ಲೆಲ್ಲಿ ಯಾವ ಯಾವ ಸಂಘಟನೆಗಳಿವೆ ಅವುಗಳನ್ನೆಲ್ಲಾ ಸೇರಿಸಿ ನಮ್ಮ ಜಿಲ್ಲಾ ಆಸ್ಪತ್ರೆಯಲ್ಲಿ ಸುಮಾರು ಒಂದು ಸಾವಿರಕ್ಕೂ ಅಧಿಕ ರಕ್ತದ ಯೂನಿಟ್‌ಗಳನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದೇವೆ. ಇದರ ಜೊತೆಗೆ ಯಾವ 29 ಯುವ ವೈದ್ಯರನ್ನು ಗುತ್ತಿಗೆ ಆದಾರದ ಮೇಲೆ ಅವರಿಗೆ ಜವಾಬ್ದಾರಿಯನ್ನು ಹೊರಿಸಿದ್ದೇವೆ, ಅವರು ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುವುದರ ಜೊತೆಗೆ ನಮ್ಮ ಆರೋಗ್ಯ ಇಲಾಖೆಯಿಂದ ಬಂದಿರುವಂತಹ ಹಣದಿಂದ ನಾವು ಎರಡು ಎಕ್ಸರೇ ಮಿಷಿನ್‌ಗಳನ್ನು ಸ್ಥಾಪನೆ ಮಾಡಲಾಗಿದೆ. ಅದರ ಜೊತೆಗೆ ಸ್ಕ್ಯಾನರ್ ಕೂಡ ಸ್ಥಾಪಿಸಲಾಗಿದೆ. ಬಡತನದಲ್ಲಿರುವ ವ್ಯಕ್ತಿ ಎಲ್ಲಿಯಾದರೂ ಸ್ಕ್ಯಾನಿಂಗ್ ಮಾಡಿಸಬೇಕಾದರೆ ಮೂರು ಸಾವಿರ ನಾಲ್ಕು ಸಾವಿರ ವೆಚ್ಚ ಕೊಟ್ಟು ಅವನು ಸ್ಕ್ಯಾನಿಂಗ್ ಮಾಡುವ ಪರಿಸ್ಥಿತಿಯನ್ನು ಸರ್ಕಾರ ತಪ್ಪಿಸಿದೆ. ಹಾಗೂ ಆ ಕೇಂದ್ರಗಳಿಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೇ, ನನಗೆ ಹೆಮ್ಮೆ ಎನಿಸುತ್ತದೆ. ನಾವು ಜಯದೇವ ಹೃದ್ರೋಗ ಆಸ್ಪತ್ರೆಯಂತಹ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಕಟ್ಟಿಸಿದ್ದೇವೆ, ಜನರಿಗೆ ಉತ್ತಮವಾದ ಸೌಲಭ್ಯವನ್ನು ಕೊಡುವುದಕ್ಕೋಸ್ಕರ ನಾವು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಈ ಸಂಸ್ಥೆಯನ್ನು ಕಟ್ಟಿದ್ದೇವೆ. ಇವೊತ್ತು ನಾರಾಯಣ ಹೃದಯಾಲಯದ ಬಗ್ಗೆ ಮಾತನಾಡುತ್ತೇವೆ, ಸತ್ಯಸಾಯಿಯವರ ಆಸ್ಪತ್ರೆ ಬಗ್ಗೆ ಮಾತನಾಡುತ್ತೇವೆ. ಆದರೆ ನಮ್ಮದೇ ಆದಂಥ ಜಯದೇವ ಹೃದಯ ಆಸ್ಪತ್ರೆಯನ್ನು ಇನ್ನುಷ್ಟು ಪರಿಣಾಮಕಾರಿಯಾಗಿ ಅದು ಕೆಲಸ ಮಾಡುವಂತೆ ನಾವು ಏಕೆ ಕ್ರಮ ತೆಗೆದುಕೊಳ್ಳಬಾರದು? ನನ್ನ ಕ್ಷೇತ್ರದ ಸುಮಾರು ಹತ್ತು ಜನರಿಗೆ ಹೃದಯಕ್ಕೆ ಸಂಬಂಧಪಟ್ಟಂತೆ

ಚಿಕಿತ್ಸೆಯಲ್ಲಿ ನಾನು ಮಾಡಿಸಿದ್ದೇನೆ. ಆ ಆಸ್ಪತ್ರೆಗೆ ಬೇಕಾದ ಹಣದ ಕೊರತೆಯನ್ನು ಆರ್ಥಿಕ ಇಲಾಖೆಯು ನಿಭಾಯಿಸಿದರೆ ಸಾಕು. ಇದರ ಬಗ್ಗೆ ಆರ್ಥಿಕ ಕಾರ್ಯದರ್ಶಿಯವರು ಏತಕ್ಕಾಗಿ ಆಸಕ್ತಿ ವಹಿಸುತ್ತಿಲ್ಲ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಈ ಜಯದೇವ ಹೃದ್ರೋಗ ಆಸ್ಪತ್ರೆಗೆ ಹಣದ ಬಿಡುಗಡೆ ಮಾಡಿರುವ ಬಗ್ಗೆ ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವಿಷಯ ಸಮಿತಿಯ ವರದಿಯಲ್ಲಿ ತಿಳಿಸಿರುವಂತೆ 2003–04ನೇ ಸಾಲಿನಲ್ಲಿ ಯೋಜನೆಯಲ್ಲಿ 68 ಲಕ್ಷ ರೂಪಾಯಿಗಳನ್ನು ಹಾಗೂ ಯೋಜನೇತರದಲ್ಲಿ 341.51 ಲಕ್ಷ ರೂಪಾಯಿಗಳನ್ನು ಅನುದಾನದ ರೂಪದಲ್ಲಿ ಒದಗಿಸಿಲಾಗಿರುತ್ತದೆ. 2001–02ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಹಾಗೂ ಯೋಜನೇತರದಲ್ಲಿ ಮೂರು ಕೋಟಿ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿರುತ್ತದೆ. 2002–2003 ನೇ ಸಾಲಿನಲ್ಲಿ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿ ಹಾಗೂ ಯೋಜನೇತರದಲ್ಲಿ ಮೂರು ಕೋಟಿ ನಲವತ್ತೊಂದು ಲಕ್ಷ ರೂಪಾಯಿಗಳನ್ನು ಒಳಗಿಸಲಾಗಿರುತ್ತದೆ ಎಂದು ಹೇಳಿದ್ದಾರೆ. ಆದರೆ ಈ ಹೊಸ ಕಟ್ಟಡಕ್ಕೆ ಹೊರ ರೋಗಿಗಳ ವಿಭಾಗವನ್ನು ಪ್ರಾರಂಭ ಮಾಡಿದ ಮೇಲೆ ಒಂದು ವರ್ಷದಲ್ಲಿ ಒಂದು ಲಕ್ಷ ಹತ್ತು ಸಾವಿರ ಹೊರ ಯೋಗಿಗಳಿಗೆ ಹಾಗೂ ಹನ್ನೆರಡು ಸಾವಿರ ಒಳ ರೋಗಿಗಳಿಗೆ ಚಿಕಿತ್ಸೆಯನ್ನು ಮಾಡಲಾಗಿರುತ್ತದೆಂದು ವರದಿಯಲ್ಲಿ ಹೇಳಿದ್ದಾರೆ. Is it not an achievement? ಆದ್ದರಿಂದ ಇವೊತ್ತು ಅದಕ್ಕೆ ಬೇಕಾದ ಆರ್ಥಿಕ ಸಹಾಯವನ್ನು ಸಾಧ್ಯವಾದಷ್ಟು ನಾವು ಮಾಡಲೇಬೇಕಾಗಿದೆ. ಇವೊತ್ತು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಲೇ ಪ್ರತಿ ವರ್ಷ 30 ರಿಂದ 32 ಲಕ್ಷ ರೂಪಾಯಿಗಳು ಈ ಜಯದೇವ ಹೃದ್ರೋಗ ಆಸ್ಪತ್ರೆಗೆ ಬರುತ್ತದೆ ಎಂದರೆ ಎಷ್ಟು ಬಡ ಜನರು ತಮ್ಮ ಆರೋಗ್ಯ ತಪಾಸಣೆಗೆ ಮತ್ತು ಹೃದಯ ರೋಗದ ಬಗ್ಗೆ ಚಿಕಿತ್ಸೆಗೆ ಅಲ್ಲಿಗೆ ಹೋಗಿ ಶುಶ್ರೂಷೆಯನ್ನು ಪಡೆದುಕೊಳ್ಳುತ್ತಾರೆ ಎನ್ನುವುದನ್ನು ನಾನು ನಿಮ್ಮ ಮುಂದೆ ಇಡಬಯಸುತ್ತೇನೆ. ಇನ್ನು ಈ ಆಸ್ಪತ್ರೆಯಲ್ಲಿ 350 ಹಾಸಿಗೆಗಳು ಲಭ್ಯವಿದೆ. ಇದನ್ನು 520 ಹಾಸಿಗೆಗಳಿಗೆ ಏರಿಸಲು ಸಾಮರ್ಥ್ಯ ಕೂಡ ಇದೆ. ನಮ್ಮಲ್ಲೇನಾಗಿದೆಯೆಂದರೆ ಎಲ್ಲಾ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವಂಥ ಕೆಲಸ ನಡೆದಿದೆ. ಆದರೆ ಮೇಲ್ದರ್ಜೆಗೆ ಏರಿಸಿ ಅದಕ್ಕೆ ಕಟ್ಟಡವನ್ನು ಮಾತ್ರ ಕಟ್ಟಿದರೆ ಸಾಕುಗುವುದಿಲ್ಲ. ಅದರ ನಿರ್ವಹಣೆಗೂ ಕೂಡ ನಿರ್ವಹಣಾ ವೆಚ್ಚಕ್ಕೆ ಅಗತ್ಯವಾದ ಹಣವನ್ನು ಮುಂದಿನ ಮುಂಗಡ ಪತ್ರದಲ್ಲಿ ನಾವು ಇಡಬೇಕಾಗಿದೆ. ನನ್ನ ಜಿಲ್ಲಾ ಸರ್ಕಾರಿ ಆಸ್ಪತ್ರೆಯನ್ನು ಒಂದು ನೂರು ಹಾಸಿಗೆಗಳಿಂದ ಎರಡುನೂರ ಐವತ್ತು ಹಾಸಿಗೆಗಳ ಆಸ್ಪತ್ರೆಯಾಗಿ ಬಡ್ತಿಗೊಳಿಸಿ ನಾವು ಸುಮಾರು ಮೂರು ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದ್ದೇವೆ. ಆದರೆ ಅದಕ್ಕೆ ಸೀಮಿತವಾಗಿ ನಾವು ಅಲ್ಲಿಗೆ ವೈದ್ಯರುಗಳ ನೇಮಕ, ಸಿಬ್ಬಂದಿ ನೇಮಕಕ್ಕೆ ನಾವು ಹತ್ತು ಹಾಸಿಗೆಗಳಿಗೆ ಒಬ್ಬ ನರ್ಸ್‌ನ್ನು ನೇಮಕ ಮಾಡಲು ಆಗಲಿಲ್ಲ. ಇದನ್ನು ಏಕೆ ನಾವು ಮಾಡುವುದಿಲ್ಲ? ಇದನ್ನು ಮಾಡಲೇಬೇಕಾಗುತ್ತದೆ. ನನ್ನ ಉಡುಪಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಐದು ಜನ ಸಿಬ್ಬಂದಿಗಳಿಗೆ ನನ್ನ ಸಂಬಳದಿಂದ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇನೆ. 29 ವೈದ್ಯರುಗಳನ್ನು 15 ದಿನಗಳಿಗೊಮ್ಮೆ ನಾನು ಭೇಟಿಯಾದಾಗ ಅವರು ನನಗೆ ಕೊಡತಕ್ಕಂಥ ಮನಿವಿಯಲ್ಲಿ, ಶಾಸಕರೆ, ನಾವು ಕೆಲಸ ಮಾಡುವುದಕ್ಕೆ ತಯಾರಿದ್ದೇವೆ, ಆದರೆ ನೀವು ನಮಗೆ ಅಗತ್ಯವಾಗಿ ಬೇಕಾಗಿರುವ ನರ್ಸ್‌ಗಳನ್ನು ನೀವು ನೇಮಕ ಮಾಡಿಸಿಕೊಡಿ, ಈ ಕಾರ್ಯವನ್ನು ನೀವು ಮಾಡಿಸಿಕೊಟ್ಟರೆ ನಾವು ಚೆನ್ನಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಅದಕ್ಕಾಗಿ ಐದು ಜನ

ನರ್ಸ್‌ಗಳನ್ನು ನೇಮಕ ಮಾಡಿ ಒಬ್ಬರಿಗೆ ಎರಡು ಸಾವಿರ ರೂಪಾಯಿಗಳಂತೆ ಐದು ಜನರಿಗೆ ಹತ್ತು ಸಾವಿರ ರೂಪಾಯಿಗಳನ್ನು ನನ್ನ ಸಂಬಳದಲ್ಲಿ ಕೊಟ್ಟು ಕೆಲಸ ಮಾಡಿಸುವುದರ ಜೊತೆಯಲ್ಲಿ ಅಲ್ಲಿ ಅನೇಕ ಧಾರ್ಮಿಕ ಸಂಸ್ಥೆಗಳು ಅನೇಕ ಸಂಘಟನೆಗಳು ಬೇರೆ ಬೇರೆ ರೀತಿಯಲ್ಲಿ ನಮಗೆ ಸಹಕಾರವನ್ನುಕೊಟ್ಟು ಇವೊತ್ತು 50 ಜನ ಹೊರರೋಗಿಗಳು ಬರತಕ್ಕಂಥ ಒಂದು ಆಸ್ಪತ್ರೆಗೆ ಸುಮಾರು 500 ಕ್ಕೂ ಹೆಚ್ಚು ಹೊರ ರೋಗಿಗಳು ಬಂದು, ಅದರಲ್ಲಿ ಶೇಕಡ 87 ರಷ್ಟು ಬಡ ಜನರು ಅಲ್ಲಿಗೆ ಬಂದು ಮದ್ದು ತೆಗೆದುಕೊಂಡು ಹೋಗುವಂಥ ಪರಿಸ್ಥಿತಿ ಉದ್ಭವವಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಆರೋಗ್ಯ ಮಂತ್ರಿಗಳಾದ ಮೇಲೆ ಪ್ರತಿ ಸಲ ನಮ್ಮ ಜಿಲ್ಲೆಗೆ ಭೇಟಿ ನೀಡಿದಾಗ ವೆನ್‌ಲಾಕ್ ಆಸ್ಪತ್ರೆ, ಈ ಕಡೆಯಿಂದ ನಮ್ಮ ಆಸ್ಪತ್ರೆ, ಅವರು ಹೋಗುವ ರಸ್ತೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆಯೋ ಅಲ್ಲಿಗೆ ಹೋಗಿ ಅಲ್ಲಿಯ ವೈದ್ಯರುಗಳನ್ನು ಹುರಿದಂಬಿಸಿ ಅಲ್ಲಿರತಕ್ಕಂಥ ನ್ಯೂನತೆಗಳನ್ನು ಹೋಗಲಾಡಿಸುವುದಕ್ಕೆ ದಿಟ್ಟ ಹೆಜ್ಜೆಯನ್ನು ಅವರು ಇಟ್ಟಿದ್ದಾರೆ. ಇದೇ ರೀತಿಯ ಕೆಲಸ ನಮ್ಮ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಆಗಬೇಕಾಗಿದೆ. ಇದೇ ರೀತಿ ನಮ್ಮ ಸಂಜಯಗಾಂಧಿ ಅಪಘಾತ ಆಸ್ಪತ್ರೆ ಇದೆ. ಇದರಲ್ಲೂ ಸಾಕಷ್ಟು ಉಪಕರಣಗಳು ಇವೆ. ಅವುಗಳನ್ನು ಬಳಸಿ ಜನಗಳಿಗೆ ಸಹಾಯ ಮಾಡುವುದಕ್ಕೆ ಅವಕಾಶವಿದೆ. ಅದಕ್ಕೆ ಹಣದ ಅಗತ್ಯವಿದೆ. ಅನುದಾನದ ಬಿಡುಗಡೆಯ ಅಗತ್ಯವಿದೆ. ಒಂದು ಯೋಜನೆಯನ್ನು ಪ್ರಾರಂಭಿಸುವುದು ದೊಡ್ಡ ವಿಷಯವಲ್ಲ. ಆದರೆ ಆ ಯೋಜನೆಯ ಫಲ ಸರಿಯಾಗಿ ಪರಿಣಾಮಕಾರಿಯಾಗಿ ಮುಟ್ಟಿಸುವಂಥ ಕೆಲಸವಾಗಬೇಕೆಂದರೆ ಕಾಲ ಕಾಲಕ್ಕೆ ಸರಿಯಾದ ಅನುದಾನ ಬಿಡುಗಡೆಯಾಗಬೇಕಾದ ಅಗತ್ಯವಿದೆ. ನಾವು ಒಂದು ಯೋಜನೆಯನ್ನು ಪ್ರಾರಂಭಿಸಿ ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವಾಗ ವಾರ್ಷಿಕವಾಗಿ ಮುಂಗಡಪತ್ರದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಿದ್ದೇವೆಯೋ ಆ ಹಣವನ್ನು ವರ್ಷದ ಕೊನೆಯ ಅವಧಿಯಲ್ಲಿ ನೀವು ಹಿಂದಕ್ಕೆ ಪಡೆದುಕೊಂಡರೆ ನಿರ್ದಿಷ್ಟವಾದ ಗುರಿಯನ್ನು ಆ ಇಲಾಖೆ ಮುಟ್ಟುವುದಾದರೂ ಹೇಗೆ? ಅದಕ್ಕಾಗಿ ನಾನು ಜಲಸಂಪನ್ಮೂಲ, ಲೋಕೋಪಯೋಗಿ ಇಲಾಖಾ ವಿಷಯ ಸಮಿತಿಯ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ ಏನೆಂದರೆ ಸಂಪನ್ಮೂಲದ ಕೊರತೆ ಮತ್ತು ರಾಜ್ಯದ ಒಟ್ಟು ಹಿತಾಸಕ್ತಿಯನ್ನು ಕಾಪಾಡಿಕೊಂಡು ನಾವು ಹಣದ ವಿಂಗಡಣೆಯನ್ನು ಮಾಡುತ್ತೇವೆ ಎನ್ನುವ ಹಾರಿಕೆ ಉತ್ತರವನ್ನು ನಮಗೆ ಹಣಕಾಸು ಇಲಾಖೆಯವರು ಏನು ಕೊಡುತ್ತಾರೋ ಆ ರೀತಿಯ ಕೆಲಸವನ್ನು ಇನ್ನು ಮುಂದಕ್ಕೆ ಆಗಬಾರದು ಎಂದು ಹೇಳಿದ್ದೇನೆ. ಹಣವನ್ನು ಯಾವುದಕ್ಕೆ ಆದ್ಯತೆ ಮೇಲೆ ಕೊಡಬೇಕು ಎನ್ನುವುದರ ಜೊತೆಗೆ ಇಂಥ ಒಂದು ಸಂಸ್ಥೆಗಳನ್ನು ತರುವಾಗ ಅವುಗಳಿಂದ ಜನರಿಗೆ ಎಷ್ಟು ಪ್ರಯೋಜನವಾಗುತ್ತಿದೆ, ತಾವು ಬಿಡುಗಡೆ ಮಾಡತಕ್ಕಂಥ ಹಣದಿಂದ ಜನರಿಗೆ ಎಷ್ಟು ಸೌಲಭ್ಯವನ್ನು ಈ ಸರ್ಕಾರದಿಂದ ಕೊಡಲಾಗುತ್ತಿದೆ ಎನ್ನುವಂಥ ಮಾನದಂಡವನ್ನು ಕೂಡ ಹಣಕಾಸು ಕಾರ್ಯದರ್ಶಿಯವರು ಚಿಂತನೆ ಮಾಡಬೇಕಾಗಿದೆ. ಮುಖ್ಯಮಂತ್ರಿಗಳನ್ನು ಓಲೈಸುವುದಕ್ಕೆ ಅಥವಾ ಬಹಳ ದೊಡ್ಡ ಆರ್ಥಿಕ ತಜ್ಞರ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಹೋದರೆ, ವಿವಿಧ ಪ್ರತಿಯೊಂದು ಇಲಾಖೆಗಳ ವರದಿಗಳನ್ನು ನಾವು ಓದುವಾಗ ನಮಗೆ ಬಹಳ ಬೇಸರವಾಗುತ್ತದೆ. ಮುಂಗಡ ಪತ್ರದಲ್ಲಿ ತೋರಿಸುವ ಹಣ ಬೇರೆ, ಅನುದಾನ ಬಿಡುಗಡೆಯಾಗುವಾಗ ಹಣದ ವ್ಯವಸ್ಥೆಯಲ್ಲಿ ಕುಂಠಿತವಾಗುತ್ತದೆ, ಕೊನೆಯ ನಾಲ್ಕು ತಿಂಗಳು ಇರುವಾಗ ಅದನ್ನು ಬೇರೆ ಇಲಾಖೆಗೆ ವರ್ಗಾಯಿಸಿ ನಿಮಗೆ ಇಷ್ಟೇ ಕೊಟ್ಟಿದ್ದೇವೆ, ಇಷ್ಟರೊಳಗೆ ನೀವು ಮುಗಿಸಿಬಿಡಿ ಎಂದು ಆದೇಶವನ್ನು ಕೊಟ್ಟುಬಿಡುತ್ತಾರೆ. ಹೀಗಾದರೆ ಪ್ರತಿಯೊಂದು

ಒಂದೊಂದು ಇಲಾಖೆಯ ಕಾರ್ಯದರ್ಶಿಗಳು ನಿಗದಿ ಮಾಡಿಕೊಂಡಿರುವ ಗುರಿಯನ್ನು ತಲುಪುವುದಾದರೂ ಹೇಗೆ ಸಾಧ್ಯ? ಆದರೂ ಇದ್ದ ವ್ಯವಸ್ಥೆಯಲ್ಲಿ ಉತ್ತಮವಾದ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಡಿದಂಥ ಕೆಲಸಗಳಿಂದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವ ಕೆಲಸ ನಡೆದಿದೆ. ನಾವೆಲ್ಲ ಇಂದು ವೈದ್ಯರುಗಳು ಗ್ರಾಮೀಣ ಪ್ರದೇಶಗಳಿಗೆ ಹೋಗುವುದಿಲ್ಲ ಎನ್ನುವಂಥ ಆರೋಪವನ್ನು ಮಾಡುತ್ತಿದ್ದೇವೆ. ಆದರೆ ಎಂ.ಬಿ.ಬಿ.ಎಸ್. ಮಾಡಿರುವ ವೈದ್ಯರು ಗ್ರಾಮೀಣ ಪ್ರದೇಶಕ್ಕೆ ಹೋದಾಗ ಅವರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥ ಜವಾಬ್ದಾರಿಯನ್ನು ನಾವು ವಹಿಸಿಕೊಂಡಿದ್ದೇವೆಯೇ? ಅದು ನಾವು ಮಾಡಬೇಕಾದ ಪ್ರಥಮವಾದ ಹೆಜ್ಜೆ. ಗ್ರಾಮೀಣ ಪ್ರದೇಶದ ಆರೋಗ್ಯ ಕೇಂದ್ರಗಳಿಗೆ ಹೋಗುವ ವೈದ್ಯರಿಗೆ ಅಲ್ಲಿಯೇ ಇರಲು ಅನುಕೂಲವಾಗುವಂತೆ ಒಂದು ವಸತಿ ಸೌಲಭ್ಯವನ್ನು ನಾವು ಮಾಡಿಕೊಟ್ಟಿದ್ದೇ ಆದರೆ ಅಲ್ಲಿ ಬೇಕಾದಷ್ಟು ಒಳ್ಳೆಯ ಪರಿಣಾಮ ಆಗುತ್ತದೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಸುಮಾರು ಐದಾರು ವರ್ಷಗಳ, ಎಂಟತ್ತು ವರ್ಷಗಳ ಹಿಂದಿನಿಂದ ನಮ್ಮಲ್ಲಿ ಹಿರಿಯಡಕ ಎಂಬ ಗ್ರಾಮ ಪಂಚಾಯತಿ ಇದೆ. ಅಲ್ಲಿ ಹತ್ತು ಬೆಡ್‌ಗಳಲ್ಲಿ ಒಳರೋಗಿಗಳನ್ನಾಗಿ ದಾಖಲಿಸಲು ಅವಕಾಶವಿದೆ. ಆ ಆಸ್ಪತ್ರೆ ಬೀಗ ಹಾಕಿಕೊಂಡು ಮುಚ್ಚಲ್ಪಟ್ಟಿತು. ನಾಲ್ಕು ವರ್ಷದ ಹಿಂದೆ ಒಬ್ಬ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನಾವು ನೇಮಕ ಮಾಡಿದೆವು. ನೇಮಕ ಮಾಡಿದ ಪ್ರಾರಂಭದಲ್ಲಿಯೇ ನಾನು ಮಾಡಿದ ಕೆಲಸವೆಂದರೆ ಸಂಸತ್ ಸದಸ್ಯರ ನಿಧಿಯಿಂದ, ಶಾಸಕರ ನಿಧಿಯಿಂದ ಆ ವೈದ್ಯರ ಮನೆಯನ್ನು ರಿಪೇರಿ ಮಾಡಿ ಅವರು ಕುಳಿತುಕೊಳ್ಳುವ ವ್ಯವಸ್ಥೆ ಮಾಡಿದ್ದೆವು. ಹಿಂದೆ ಹತ್ತು ಹೊರ ರೋಗಿಗಳು ಬರುತ್ತಿದ್ದ ಕಡೆ ಇಂದು ನೂರು ಹೊರ ರೋಗಿಗಳು ಅಲ್ಲಿಗೆ ಬಂದು ಉಚಿತವಾಗಿ ಮದ್ದುಗಳನ್ನು ತೆಗೆದುಕೊಂಡು ಹೋಗುವಂಥ ಕೆಲಸ ನಡೆದಿದೆ. ಒಬ್ಬ ಹೆಣ್ಣು ಮಗಳು ಪ್ರಸವಕ್ಕೆ ಬರಬೇಕಿದ್ದರೆ ಅವಳು ದೂರದ ಮಣಿಪಾಲಕ್ಕೋ, ಉಡುಪಿಗೋ ಹೋಗಬೇಕಾಗಿತ್ತು. ಆದರೆ ಆ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೇ ಪ್ರಸವದ ವ್ಯವಸ್ಥೆಗೆ ಬೇಕಾದ ವ್ಯವಸ್ಥೆಯನ್ನು ಮಾಡಿದ ಮೇಲೆ ಎಷ್ಟೋ ಬಡ ಜನರಿಗೆ ಅನುಕೂಲವಾಗಿದೆ. ಇದಕ್ಕೆ ಕಾರಣವೇನೆಂದರೆ ಆ ಗ್ರಾಮಾಂತರ ಪ್ರದೇಶಕ್ಕೆ ಬಂದ ಆ ವೈದ್ಯರಿಗೆ ಕೊಟ್ಟಂಥ ಮೂಲಭೂತ ಸೌಕರ್ಯದಿಂದಲೇ ಸಾಧ್ಯವಾಗಿದೆ ಎಂದು ಹೇಳಬಯಸುತ್ತೇನೆ. ಆದ್ದರಿಂದ ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಯಾವ ವೈದ್ಯರುಗಳಿದ್ದಾರೆಯೋ ಅವರಿಗೆ ಆ ಗ್ರಾಮದಲ್ಲಿಯೇ ಒಂದು ಒಳ್ಳೆಯ ಮನೆಯನ್ನು ಕಟ್ಟಿಸಿಕೊಟ್ಟಿದ್ದೇ ಆದರೆ ಖಂಡಿತವಾಗಿ ಒಳ್ಳೆಯ ಪರಿಣಾಮ ಬೀರುತ್ತದೆ ಎನ್ನುವುದನ್ನು ಉದಾಹರಣೆಯೊಂದಿಗೆ ನಾನು ಹೇಳುತ್ತಿದ್ದೇನೆ. ನಮ್ಮ ದುರ್ದೆಸೆ ಏನು ಎಂದರೆ ಇಡೀ ರಾಜ್ಯದಲ್ಲಿ ನನ್ನ ಉಡುಪಿ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಏಡ್ಸ್ ರೋಗಿಗಳಿರುವ ಜಿಲ್ಲೆಗಳಲ್ಲಿ ಒಂದು ಎಂದು ಹೇಳುವುದನ್ನು ಅತ್ಯಂತ ವಿಷಾದಪೂರ್ವಕವಾಗಿ ನಾನು ಹೇಳಬಯಸುತ್ತೇನೆ. ನಮ್ಮಲ್ಲಿಯಿಂದ ವಲಸೆ ಹೋದಂತಹ ಮುಂಬೈ ಅಥವಾ ಬೇರೆ ಬೇರೆ ರಾಜ್ಯಗಳಿಗೆ ನಮ್ಮ ಜಿಲ್ಲೆಯ ಜನ ಉದ್ಯೋಗಕ್ಕಾಗಿ ಹೋಗಿ ಅಲ್ಲಿ ಅವರಿಗೆ ಬಂದಿರತಕ್ಕಂಥ ರೋಗವನ್ನು ಹಿಡಿದು ನಮ್ಮಲ್ಲಿ ಬರುತ್ತಾರೆ. ಸಂಪಾದನೆ ಮಾಡುವತನಕ ಆ ಕುಟುಂಬಕ್ಕೆ ಅವನು ಬಹಳ ದೊಡ್ಡ ಜನ. ಆದರೆ ಅವನಿಗೆ ಏನಾದರೂ ರೋಗ ಬಂದು ಊರಿಗೆ ಅವನು ಬಂದರೆ ಅವನನ್ನು ಮುಟ್ಟುವುದಕ್ಕೆ ಕೂಡ ಆ ಕುಟುಂಬಗಳು ತಯಾರಿಲ್ಲ. ನನ್ನ ಜಿಲ್ಲೆಯಲ್ಲಿ ಕನಿಷ್ಟ ತಿಂಗಳಿಗೆ

ನನ್ನ ಗಮನಕ್ಕೆ ಬಂದ ರೀತಿಯಲ್ಲಿ ಸುಮಾರು ಐದರಿಂದ ಹತ್ತು ರೋಗಿಗಳು ಬರುತ್ತಿದ್ದಾರೆ. ಅದರ ಜೊತೆಗೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಂದ ಬಂದಂತಹ ವಲಸೆ ಕಾರ್ಮಿಕರುಗಳು ಮೂರೂವರೆಯಿಂದ ಐದು ಲಕ್ಷ ಜನ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದಾರೆ. ಅಲ್ಲಿಯೂ ಕೂಡ ಹಾಗೆ, ಮಲೇರಿಯಾ, ಏಡ್ಸ್ ರೋಗ ಇದನ್ನೆಲ್ಲಾ ತಂದು ನಮ್ಮ ಜಿಲ್ಲೆಯಲ್ಲಿ ರೋಗ ಹರಡುತ್ತಿರುವ ದುರ್ದಿನವನ್ನು ನಾವು ನೋಡುತ್ತಿದ್ದೇವೆ. ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ 20 ಜನ ಹೆಚ್‌ಐವಿ ಪಾಸಿಟೀವ್ ರೋಗಿಗಳನ್ನು ನಾವು ಶುಶ್ರೂಷೆ ಮಾಡುತ್ತಿದ್ದೇವೆ. ಮೊನ್ನೆ ಉಡುಪಿ ತಾಲ್ಲೂಕಿನಲ್ಲಿ ರಿಹಾಬಿಲಿಟೇಷನ್ ಸೆಂಟರ್ ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಸುಮಾರು 20 ಬೆಡ್‌ನಲ್ಲಿ 20 ಜನ ಏಡ್ಸ್ ರೋಗಿಗಳು ಇದ್ದಾರೆ. ಏಡ್ಸ್ ರೋಗ ಮಾರಕ ರೋಗ ಎಂದು ತಿಳಿದುಕೊಂಡು ಮಾನವೀಯತೆಯನ್ನು ಇಟ್ಟು ಅವನನ್ನು ತಿರಸ್ಕಾರ ಮಾಡಬಾರದು, ನಿನ್ನೆ ಡೆಲ್ಲಿಯಲ್ಲಿ ನಡೆದಿರುವಂತಹ ಏಡ್ಸ್ ರೋಗದ ಬಗ್ಗೆ ಒಂದು ಉತ್ತಮವಾದಂತಹ ವಿಚಾರ ವಿಮರ್ಶೆ, ರಾಷ್ಟ್ರೀಯ ಮಟ್ಟದಲ್ಲಿ ಶಾಸಕರುಗಳು, ಚುನಾಯಿತ ಪ್ರತಿನಿಧಿಗಳು ಭಾಗವಹಿಸಿರುವುದನ್ನು ಇಲ್ಲಿ ನಾನು ನೆನಪಿಸುತ್ತೇನೆ. ಏಡ್ಸ್ ರೋಗಿಗಳ ಬಗ್ಗೆ ಭಯ ಬೇಡ ಹಾಗೂ ಇದು ಬಾರದೆ ಇರುವ ಹಾಗೆ ತಡೆಗಟ್ಟುವುದು ಹೇಗೆ ಎನ್ನುವುದನ್ನು ನೀವು ಹಳ್ಳಿಹಳ್ಳಿಗಳಲ್ಲಿ ಪ್ರಚಾರ ಮಾಡಬೇಕಾಗಿದೆ. ಪ್ರಾಥಮಿಕ ಆರೋಗ್ಯಕ್ಕೆ ಪ್ರಾಶಸ್ತ್ಯ ನೀಡುವಲ್ಲಿ ಕೂಡ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲೂ ಪ್ರಮುಖವಾಗಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡಿದ್ದರಿಂದ ತುಂಬಾ ಅನುಕೂಲವಾಯಿತು. ಇದರಿಂದ ಇನ್ನೂ ಹೆಚ್ಚಿನ ಪ್ರಯೋಜನ ಆಗಬೇಕಾದರೆ ಅದಕ್ಕೆ ಬೇಕಾದಂತಹ ಶುಶ್ರೂಶಿಕಿಯರನ್ನು ಕೂಡ ನೇಮಕಾತಿ ಮಾಡುವಂತಹ ಎದೆಗಾರಿಕೆಯನ್ನು ತೋರಿಸಬೇಕಾಗಿದೆ. ಅದರ ಜೊತೆಗೆ ಪ್ರಯೋಗಾಲಯ ತಜ್ಞರ ನೇಮಕಾತಿಯೂ ಆಗಬೇಕಾಗಿದೆ, ರಕ್ತ ನಿಧಿ ಬ್ಯಾಂಕ್‌ನ್ನು ಸ್ಥಾಪನೆ ಮಾಡಿದ್ದರಿಂದಾಗಿ ಎಷ್ಟೋ ಜನ ಬಡವರಿಗೆ ರಕ್ತದ ನಿಧಿ ಬ್ಯಾಂಕ್‌ನಿಂದ ರಕ್ತವನ್ನು ಉಚಿತವಾಗಿ ಕೊಡುವಂತಹ ಸೌಲಭ್ಯ ಜನರಿಗೆ ಸಿಕ್ಕಿದೆ. ಅದರಿಂದಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ ಹಾಸಿಗೆಗಳು ಭರ್ತಿ ಆಗಿ ಈಗ ನೆಲದ ಮೇಲೆ ಮಲಗಿಸುವಂತಹ ಪರಿಸ್ಥಿತಿ ಬಂದಿದೆ. ಅದಷ್ಟೇ ಅಲ್ಲ, ಹೊರಗಡೆ ಐದಾರು ಮದ್ದಿನಂಗಡಿಗಳು ಇದ್ದವು. ಸರ್ಕಾರಿ ಆಸ್ಪತ್ರೆ ವೈದ್ಯರುಗಳು ಮದ್ದಿಗೆ ಚೀಟಿಯನ್ನು ಬರೆದು ಹೊರಗಡೆ ಕಳುಹಿಸುತ್ತಿದ್ದರು. ಈಗ ಆ ಅಂಗಡಿಗಳು ಮುಚ್ಚಿವೆ. ಏಕೆಂದರೆ ಔಷಧಿಗಳನ್ನು ಸರ್ಕಾರ ಕೊಡುವುದರಿಂದ ನಮಗೆ ಬಹಳಷ್ಟು ಅನುಕೂಲವಾಗಿದೆ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುವುದೇನೆಂದರೆ, ಏಷಿಯಾದಲ್ಲಿ ಅತ್ಯಂತ ದೊಡ್ಡದು ಎನಿಸಿರುವ ಮತ್ತು ಪ್ರಮುಖವಾದಂತಹ ಹೆಸರನ್ನು ಪಡೆದಿರತಕ್ಕಂಥ ಸಂಜಯಗಾಂಧಿ ಅಪಘಾತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಆಸ್ಪತ್ರೆ, ಈ ಎಲ್ಲಾ ಸಂಸ್ಥೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಷಯ ಸಮಿತಿ ವರದಿಯಲ್ಲಿ ನಮೂದಿಸಿರತಕ್ಕಂಥ ಶಿಫಾರಸ್ಸುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕಾಗಿದೆ. ಈ ವರ್ಷದ 2003-04ರ ಅವಧಿಯಲ್ಲಿ ಹಣವನ್ನು ಅವರು ಏನು ಕೇಳಿದ್ದಾರೋ ಅಷ್ಟು ಹಣ ಬಿಡುಗಡೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಿಸಬೇಕೆಂದು ವಿನಂತಿಸುತ್ತೇನೆ ಆ ಮೂಲಕ ಇಷ್ಟೊಂದು ಹೆಮ್ಮೆಯ ಸಂಸ್ಥೆಗಳಿಂದ ಜನಸಾಮಾನ್ಯರಿಗೆ ಇನ್ನಷ್ಟು ಹೆಚ್ಚಿನ ಪ್ರಯೋಜನ ಆಗಲಿ ಎನ್ನುವ ಮಾತಿನೊಂದಿಗೆ ನಾನು ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖಾ ಕಾರ್ಯಕ್ರಮಗಳಿಗೆ

ನಾನು ಬರುತ್ತಿದ್ದೇನೆ. ನಾವು ಈ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆಯನ್ನು ಒಂದೊಂದು ದಿನ ಇಟ್ಟು ಚರ್ಚಿಸಿದರೂ ಕೂಡ ನಮಗೆ ಹೊಸತನವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಗಂಭೀರವಾಗಿ ಪರಿಶೀಲಿಸಬೇಕು. ಒಂದೇ ದಿನದಲ್ಲಿ 26-27 ಇಲಾಖೆಗಳ ಬಗ್ಗೆ ನಾವು ಚರ್ಚೆ ಮಾಡಿ ಅದರಲ್ಲಿ ಹೊರಗಡೆ ತರತಕ್ಕಂಥ ವಿಷಯಗಳು ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಶೂನ್ಯವೇಳೆ ಇರಬಹುದು. ನಿಯಮಗಳಡಿಯಲ್ಲಿ ತರತಕ್ಕಂಥ ನಿಲುವಳಿ ಸೂಚನೆಗಳಿರಬಹುದು ಅದನ್ನೆಲ್ಲಾ ಮಧ್ಯಾಹ್ನದೊಳಗೆ ಮುಗಿಸಿ, ಮಧ್ಯಾಹ್ನದ ನಂತರದ ಅವಧಿಯನ್ನು ಖಾಯಂ ಆಗಿ ಬೇಡಿಕೆಗಳ ಮೇಲೆ ಚರ್ಚೆಗೆ ಇಟ್ಟುಕೊಂಡರೆ ಇನ್ನಷ್ಟು ಪರಿಣಾಮಕಾರಿಯಾಗಿ ಚುನಾಯಿತ ಪ್ರತಿನಿಧಿಗಳು ಕಾರ್ಯನಿರ್ವಹಿಸಬಹುದು. ಅವರ ಅನೇಕ ರೀತಿಯ ಅನುಭವದ ಹಿನ್ನೆಲೆಯಲ್ಲಿ ವಿಷಯ ಸಮಿತಿಗಳ ಪ್ರಸ್ತಾವನೆಗಳನ್ನು ಪರಿಶೀಲಿಸುವುದಕ್ಕೆ ಹೋದಾಗ ಅದರಲ್ಲಿ ಬರತಕ್ಕಂಥ ಲೋಪದೋಷಗಳನ್ನು ಸರಿಪಡಿಸಲು ಕೂಡ ಪರಿಣಾಮ ಬೀರುತ್ತದೆ ಎಂದು ಹೇಳುತ್ತೇನೆ. ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರಾಷ್ಟ್ರದಲ್ಲಿ ಅಲ್ಲ, ಇಡೀ ಜಗತ್ತಿನಲ್ಲಿ ಕಣ್ಣುತೆರೆಸುವಂತಹ ಕೆಲಸವನ್ನು ಮಾಡಿದೆ ಎಂದು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ತಾವು ಕಾಮನ್ ವೆಲ್ತ್ ಸಂಸದೀಯ ಏಷಿಯನ್ ರಾಷ್ಟ್ರಗಳ ಒಂದು ವಿಚಾರ ಸಂಕೀರ್ಣಕ್ಕೆ ಕೊಲೋಂಬೊಗೆ ನನ್ನನ್ನು ಕಳುಹಿಸಿದ್ದಿರಿ. ಅಲ್ಲಿ ಪಾಕಿಸ್ತಾನ್, ಬಾಂಗ್ಲಾ, ಮಾಲ್ಡೀವ್ಸ್, ಥಾಯ್ಲೆಂಡ್ ಮತ್ತು ಶ್ರೀಲಂಕಾ ಅಲ್ಲದೆ ಅಮೆರಿಕಾ ಹಾಗೂ ಲಂಡನ್‌ನಿಂದ ಬಂದಿರತಕ್ಕಂಥ ಪ್ರತಿನಿಧಿಗಳ ಜೊತೆ ನಾವು ಮುಂಗಡ ಪತ್ರದ ನಿರ್ವಹಣಾ ವೃತ್ತ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಸುಮಾರು ನಾಲ್ಕು ದಿನಗಳ ಕಾಲ 12 ವಿಷಯಗಳ ಮೇಲೆ ಚರ್ಚಿಸಿದೆವು. ತಾವು ಕರ್ನಾಟಕದ ಪ್ರತಿನಿಧಿಯಾಗಿ ನನ್ನನ್ನು ಅಲ್ಲಿಗೆ ಕಳುಹಿಸಿದಾಗ ಅದರ ಪೂರ್ವಭಾವಿ ಸಿದ್ಧತೆಯನ್ನು ನಡೆಸಿ ಅಲ್ಲಿ ಸ್ತ್ರಿ ಶಕ್ತಿ ಯೋಜನೆಯನ್ನು ಪ್ರಸ್ತಾಪಿಸಿದೆ. ಅದರ ಜೊತೆಗೆ ನಮ್ಮ ಪಾರದರ್ಶಕತೆ ಕಾಯಿದೆ ಹಾಗೂ ಮಾಹಿತಿ ಹಕ್ಕು ಕಾಯಿದೆ ಬಗ್ಗೆ ನಾನು ಎರಡು ಪುಸ್ತಕಗಳನ್ನು ಕೊಂಡುಹೋಗಿದ್ದೆ. ಈ ಪಶ್ಚಿಮ ಏಶಿಯಾ ರಾಷ್ಟ್ರಗಳಿಗೆ ಇದೊಂದು ಅಭೂತಪೂರ್ವ ಕಾಯಿದೆಯನ್ನು ತಂದಿದ್ದೀರಿ ಎನ್ನುವಂತಹ ಹೆಮ್ಮೆಯ ವಿಷಯವನ್ನು ಜಾಗತಿಕ ಬ್ಯಾಂಕ್ ಪ್ರತಿನಿಧಿ ಅವರ ಚರ್ಚೆಯಲ್ಲಿ ನಮ್ಮ ಕರ್ನಾಟಕವನ್ನು ಸಂಭೋದಿಸಿದ್ದು ಅತ್ಯಂತ ಹೆಮ್ಮೆಯ ವಿಷಯವೆಂದು ನಾನು ಪರಿಗಣಿಸಿದ್ದೇನೆ. ಸ್ತ್ರಿ ಶಕ್ತಿ ಯೋಜನೆ ಈ ರಾಜ್ಯದಲ್ಲಿ ಬಹಳ ದೊಡ್ಡ ಆರ್ಥಿಕ ಕ್ರಾಂತಿ ಮಾಡಿದೆ ಎಂದು ನಾನು ಹೇಳುತ್ತಿದ್ದೇನೆ. ಸ್ತ್ರಿ ಶಕ್ತಿ ಯೋಜನೆಗೆ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಗೆ ಕಳೆದ ವರ್ಷಕ್ಕಿಂತ ಈ ವರ್ಷ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಹಣಕಾಸಿನ ನೆರವನ್ನು ಹೆಚ್ಚುವರಿ ಕೊಟ್ಟಿದ್ದಾರೆ ಇದು ಪ್ರಶಂಸನೀಯ ವಿಚಾರ ಎಂದು ಹೇಳಬಯಸುತ್ತೇನೆ. ನಾನು ಒಂದು ಅಂಕಿ ಅಂಶವನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಜೂನ್ 2003ರಲ್ಲಿ ಒಂದು ಪ್ರಗತಿ ವರದಿ ವಿಧಾನಪರಿಷತ್ತಿನಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಮಂಡನೆಯಾಗಿತ್ತು. ಈ ರಾಜ್ಯದಲ್ಲಿ ಒಟ್ಟು 75,958 ಗುಂಪುಗಳ ಸಾಧನೆ, ಅದರಲ್ಲಿ 70,611 ಗುಂಪುಗಳು ಬ್ಯಾಂಕ್‌ನಲ್ಲಿ ಖಾತೆಗಳನ್ನು ತೆರೆದು 140.65 ಕೋಟಿ ರೂಪಾಯಿ ಉಳಿತಾಯಾ ಮಾಡಿದ್ದಾರೆ. ಇದು ದೊಡ್ಡ ಕ್ರಾಂತಿ ಅಲ್ಲವೆ? ಬಡತನದ ರೇಖೆಯಿಂದ ಕೆಳಗೆ ಇರುವಂತಹ ಒಬ್ಬ ಸ್ತ್ರೀಯರಲ್ಲಿ ಉಳಿತಾಯದ ಮನೋಭಾವವನ್ನು ಪ್ರಚೋದಿಸಿ, ಅವರನ್ನು ಸಂಘಟನೆಗೊಳಿಸಲಾಗಿದೆ, ಏಕಾಂಗಿಯಾಗಿ ಹೋಗದೆ 10-15 ಜನರ ಗುಂಪುಗಳೊಂದಿಗೆ ಹೋಗಿ ಅಲ್ಲಿ ಉಳಿತಾಯದ ಪ್ರವೃತ್ತಿಯನ್ನು ಹೆಚ್ಚಿಸುವಂತಹ ಕಾರ್ಯಕ್ರಮವನ್ನು ನಮ್ಮ ಸರ್ಕಾರ

ಮಾಡಿರುವುದರಿಂದ ಬಡತನದಿಂದ ಜನರನ್ನು ಮೇಲಕ್ಕೆ ಎತ್ತುವಂತಹ ಕೆಲಸವನ್ನು ಮಾಡಿದೆ ಎಂದು ತಮ್ಮ ಮುಂದೆ ಹೆಮ್ಮೆಯಿಂದ ಹೇಳಬಯಸುತ್ತೇನೆ. ಒಟ್ಟು 70,611 ಖಾತೆಗಳಲ್ಲಿ 140.65 ಕೋಟಿ ರೂಪಾಯಿ ಉಳಿತಾಯವಾಗಿದೆ ಅಲ್ಲದೆ ಅವರೊಳಗೆ 207.86 ಕೋಟಿ ರೂಪಾಯಿ ಆಂತರಿಕ ಸಾಲ ಕೊಟ್ಟು ಕೊಂಡು ಅವರ ಆರ್ಥಿಕ ಚೈತನ್ಯವನ್ನು ಅವರ ಕಸುಬುಗಳನ್ನು ಹೆಚ್ಚಿಸುವಲ್ಲಿ ಅವರ ಸಾಧನೆಯನ್ನು ತೋರಿಸಿದ್ದಾರೆ. ರಾಷ್ಟ್ರದಲ್ಲೇ ಮಾತ್ರ ಅಲ್ಲ ಮೊನ್ನೆ ಶ್ರೀಲಂಕಾದಲ್ಲಿ ನಡೆದ ಕಾಮನ್ ವೆಲ್ತ್‌ನ ಪಶ್ಚಿಮ ಏಷಿಯನ್ ರಾಷ್ಟ್ರಗಳ ಪ್ರತಿನಿಧಿಗಳು ಇದನ್ನು ಅಧ್ಯಯನ ಮಾಡುವುದಕ್ಕೆ ಮುಂದಿನ ಸೆಪ್ಟೆಂಬರ್ ತಿಂಗಳಿಗೆ ನಾವು ಬರುತ್ತಿದ್ದೇವೆ ಎಂದು ಕೂಡ ಹೇಳಿದ್ದಾರೆ. ಇದರಲ್ಲಿ ಇನ್ನು ಹೆಚ್ಚಿನ ಮಹತ್ವಪೂರ್ಣ ವಿಚಾರ ಎಂದರೆ ಇವತ್ತು 70,600 ಗುಂಪುಗಳಲ್ಲಿ ಕೇವಲ 14,982 ಗುಂಪುಗಳಿಗೆ ಮಾತ್ರ ಬ್ಯಾಂಕಿನವರು ಸಾಲ ಕೊಟ್ಟಿದ್ದಾರೆ. ಬ್ಯಾಂಕಿನವರು ಸ್ವಸಹಾಯ ಗುಂಪುಗಳಿಗೆ ಹೆಚ್ಚು ಮಹತ್ವ ಕೊಡಬೇಕು. 49.96 ಕೋಟಿ ರೂಪಾಯಿ ಸಾಲವನ್ನು ಕೊಟ್ಟಿರುವುದರಲ್ಲಿ ಶೇಕಡ 95 ಪರ್ಸೆಂಟ್ ರೆಕವರಿ ನಾಲ್ಕು ವರ್ಷಗಳಲ್ಲಾಗಿದೆ.

12.10 ಪಿಎಂ

ಈ ಒಂದು ಮಾನಸಿಕ ಧೃಡತ್ವವನ್ನು ನಮ್ಮ ಮಹಿಳೆಯರಿಗೆ ಕೊಟ್ಟಿದ್ದೇವೆ. ಅವರೆಷ್ಟು ಆರ್ಥಿಕ ಚೈತನ್ಯವನ್ನು ಪಡೆದುಕೊಂಡು ಮೇಲೆ ಬಂದಿದ್ದಾರೆ ಎಂದರೆ, ಕಳೆದ ಬಾರಿ ಸರ್ಕಾರ ಬಿಡುಗಡೆಗೊಳಿಸಿದಂತಹ ಐದು ಸಾವಿರ ರೂಪಾಯಿಗಳ "ಸುತ್ತು ನಿಧಿ"ಯ ಚೆಕ್ ವಿತರಣೆ ಮಾಡಲು ನಾನು ಗ್ರಾಮೀಣ ಪ್ರದೇಶಕ್ಕೆ ಹೋದಂತಹ ಸಂದರ್ಭದಲ್ಲಿ ಒಬ್ಬ ಮಹಿಳೆಯನ್ನು ನಾನು ಕರೆದು, ಈ ಸ್ವಸಹಾಯ ಗುಂಪಿನಿಂದ ನೀನು ಏನು ಪ್ರಯೋಜನವನ್ನು ಪಡೆದಿದ್ದಿಯಾ? ಎಂದು ಕೇಳಿದಾಗ, ಈ ಸ್ವಸಹಾಯ ಗುಂಪಿಗೆ ಸೇರಿದಂದಿನಿಂದ, ನನ್ನ ಗಂಡ ನಾನು ಹೇಳಿದ ಹಾಗೆ ಕೇಳುವುದಕ್ಕೆ ಪ್ರಾರಂಭ ಮಾಡಿದ್ದಾನೆಂಬ ಮಾತನ್ನು ಹೇಳಿದ್ದಾಳೆ, ನಾವು ಅವರಲ್ಲಿ ಎಷ್ಟು ಆತ್ಮ ವಿಶ್ವಾಸವನ್ನು ಮೂಡಿಸಿದ್ದೇವೆ, ಎಂಬುದು ಹೆಮ್ಮೆ ಪಡುವಂತಹ ವಿಚಾರವಾಗಿದೆ. ನಮ್ಮ ಅಂಗನವಾಡಿ ಸಹಾಯಕಿಯರು, ಅಂಗನವಾಡಿ ಶಿಕ್ಷಕಿಯರು, ಮಾಡಿದಂತಹ ತ್ಯಾಗಕ್ಕೆ, ಫಲಕ್ಕೆ, ನಮ್ಮ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಅವರಿಗೆ ಗೌರವ ಧನದ ಮೊತ್ತವನ್ನು ಹೆಚ್ಚು ಮಾಡಿರುವುದು ಶ್ಲಾಘನೀಯ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿ ಹೇಳುವುದಕ್ಕೆ ಶುರು ಮಾಡಿದರೆ, ನಾವು ಇನ್ನು ಮುಂದೆ ಗಂಡಸರದ್ದು ಒಂದು ಸಂಘ ಮಾಡಬೇಕಾಗುತ್ತದೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ, ನಮಗೆ ನಾಚಿಕೆಯಾಗಬೇಕು, ಏಕೆಂದರೆ, ಇಲ್ಲಿ ಅವರು ಪ್ರಗತಿ ಹೊಂದುತ್ತಾ ಹೋಗುತ್ತಿದ್ದಾರೆ, ನಾವು ಈ ಪುರುಷ ಪ್ರಾಬಲ್ಯ ಸಮಾಜದಲ್ಲಿ, ಇವರನ್ನು ಎಷ್ಟು ಧಮನ ಮಾಡಿದರೂ ಕೂಡ, ಅವರ ಸ್ವಂತಿಕೆಯಲ್ಲಿ ಮಹಿಳೆಯರು ಬೆಳೆಯುತ್ತಾ ಹೋಗುತ್ತಿದ್ದಾರೆ. ನಿಮ್ಮನ್ನು ಸ್ವಸಹಾಯ ಗುಂಪನ್ನು ಮಾಡುವುದಕ್ಕೆ ಬೇಡವೆಂದು ಯಾರು ಹೇಳಲಿಲ್ಲ. ಆದರೆ 'ಕುಡುಕರ ಸಂಘ' ಮಾಡುವುದಕ್ಕೆ ಸ್ವಸಹಾಯ ಗುಂಪು ಮಾಡುವುದಕ್ಕೆ ಬೇಕಾದರೆ ತಯಾರಾಗಬಹುದೇ? ಈ ರೀತಿ ಆರ್ಥಿಕ ಚೈತನ್ಯದ ಕೆಲಸವನ್ನು ಮಾಡುವುದಕ್ಕೆ, ಸ್ವಸಹಾಯ ಗುಂಪುಗಳನ್ನು ತರುವುದಕ್ಕೆ ನಾವು ಸಹಿತ ಶತ ಪ್ರಯತ್ನವನ್ನು ಮಾಡಿದ್ದೇವೆ ನಮ್ಮ ಉಡುಪಿ ಕ್ಷೇತ್ರದಲ್ಲಿ ಸುಮಾರು ನೂರಕ್ಕೂ ಹೆಚ್ಚು "ಪುರುಷರ ಸ್ವಸಹಾಯ ಗುಂಪು" ಗಳನ್ನು ನಾವು ಸಂಘಟಿಸಿದ್ದೇವೆಂಬ ಮಾತನ್ನು ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ.

ಶ್ರೀ ಡಿ. ವಿ. ಸದಾನಂದ ಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಾನು ಇಲ್ಲವೆಂದು ಹೇಳುತ್ತಾ ಇಲ್ಲ, ಆದರೆ ಈಗಾಗಲೇ ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ, ಗ್ರಾಮೀಣಾಭಿವೃದ್ಧಿ ಯೋಜನಾವತಿಯಿಂದ, ಪ್ರಗತಿಪಥ ತಂಡ ಎಂದು ಗಂಡಸರ ತಂಡಗಳನ್ನು ಮಾಡಿದ್ದಾರೆ, ಇಲ್ಲಿ ಆರ್ಥಿಕವಾಗಿ ಯಾರು ದುರ್ಬಲರಾಗಿರುತ್ತಾರೆ, ಅವರು ಅಭಿವೃದ್ಧಿ ಯಾಗುವುದಕ್ಕೆ ಆಗುತ್ತಾ ಇಲ್ಲ, ಅಂಥವರ ತಂಡಗಳನ್ನು ಮಾಡಿ, ಅವರ ಸ್ವಶಕ್ತಿಯಿಂದ, ದೈಹಿಕವಾದಂತಹ ಕ್ರೋಢೀಕರಣ ಮಾಡಿ, ಅದರ ಮುಖಾಂತರ ಸಣ್ಣ ಸಣ್ಣ ಜಾಗಗಳನ್ನು ಅಭಿವೃದ್ಧಿ ಪಡಿಸುವಂಥಾದ್ದು, ಆರ್ಥಿಕವಾಗಿ ಬೇಕಾದಂತಹ ಸಹಾಯ ಧನವನ್ನು ಕೊಡುವಂಥಾದ್ದು, ಈ ಎಲ್ಲಾ ಕೆಲಸಕಾರ್ಯಗಳನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ, ಪುತ್ತೂರು ತಾಲ್ಲೂಕು, ಬೆಳ್ತಂಗಡಿ ತಾಲ್ಲೂಕು, ಕಾರ್ಕಳ ತಾಲ್ಲೂಕಿಗೆ ವಿಸ್ತರಣೆಯಾಗಿದೆ, ಈಗಾಗಲೇ ಸುಮಾರು ಐವತ್ತು ಸಾವಿರಕ್ಕಿಂತಲೂ ಹೆಚ್ಚು ಪ್ರಗತಿಪಥ ತಂಡಗಳು ಕೆಲಸಗಳನ್ನು ಮಾಡುತ್ತಿವೆ, ಇವು ಅತ್ಯಂತ ಯಶಸ್ವಿಯಾಗಿ ಮಾಡಿವೆ, ಅದರಲ್ಲೂ ಮಹಿಳೆಯರ ಸ್ವಸಹಾಯ ಗುಂಪುಗಳು ಎಂದು ಮಾಡಿದ್ದಾರೆ, ಅದರಲ್ಲೂ ಕೂಡ ಸುಮಾರು ಇಪ್ಪತ್ತೊಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಈ ಮೂರು ತಾಲ್ಲೂಕುಗಳಿಂದ ಆಗಿದೆ.

ಅಧ್ಯಕ್ಷರು:- ಶ್ರೀಮತಿ ಮೋಟಮ್ಮನವರೇ, ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ಗುರುತು ಮಾಡಿಕೊಳ್ಳಿ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ, ನಾವು ಈ ವಿಚಾರಕ್ಕೆ ಅಪ್ರೀಶಿಯೇಟ್ ಮಾಡುತ್ತೇವೆ, ಈ ಖಾಸಗೀಯವರು ಈ ಗುಂಪುಗಳನ್ನು ಮಾಡಿ, ಅವರಿಗೆ ಆರ್ಥಿಕ ಸ್ವಾವಲಂಬನೆಯನ್ನು ಕೊಟ್ಟು, ಅವರು ಸಾಮಾಜಿಕವಾಗಿ ಹೇಗೆ ಪರಿವರ್ತನೆಯಾಗಬೇಕು, ಮತ್ತೆ ಆರ್ಥಿಕವಾಗಿ ಅವರು ಹೇಗೆ ಸಬಲರಾಗಬೇಕೆಂದು ಅವರು ಹೇಳಿದ್ದಾರೆ, ಆದರೆ ನಮ್ಮ ಕರ್ನಾಟಕ ಸರ್ಕಾರ ಮಾಡಿದಂತಹ ಒಂದು ಲಕ್ಷ ಗುಂಪನ್ನು ಮಾಡುವುದಾಗಲಿ, ಮತ್ತೆ ಆ ಗುಂಪುಗಳಿಗೆ ತರಬೇತಿಯನ್ನು ಕೊಡುವುದಾಗಲಿ, ಹಾಗೆ ಪ್ರತಿ ಗುಂಪಿಗೆ "ಸುತ್ತು ನಿಧಿ"ಯನ್ನು ಕೊಡುವಂತಹ ಕೆಲಸವನ್ನು ಅವರಿಗೆ ಮಾಡುವುದಕ್ಕೆ ಆಗಿಲ್ಲ, ಅವರದ್ದು ಸಣ್ಣ ಗುಂಪು, ಆದರೆ ಅವರು ಮಾಡಿರುವಂಥಾದ್ದಕ್ಕೆ ನಾನು ಅಪ್ರೀಷಿಯೇಟ್ ಮಾಡುತ್ತೇನೆ, ಹಾಗೆ ವಿಶ್ವ ಬ್ಯಾಂಕ್‌ನ ಅಡಿಯಲ್ಲಿ "ಸ್ವಶಕ್ತಿ ಗುಂಪುಗಳು" ರಚನೆಯಾಗಿದೆ, ಇದು ಹಿಂದುಳಿದ ಜಿಲ್ಲೆಗಳಾದ ಕೋಲಾರ, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಇಂತಹ ಕಡೆಗಳಲ್ಲಿ ಈ ವಿಶ್ವಬ್ಯಾಂಕಿನ ನೆರವಿನಿಂದ 22,000ಸಾವಿರ ಗುಂಪುಗಳನ್ನು ಮಾಡಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳಿದಂತಹ ವಿಚಾರ ಸತ್ಯ ಇದು, ಒಂದು ರೀತಿಯ ಮೌನ ಕ್ರಾಂತಿ. ನಾವು ಮೊನ್ನೆ ಬೆಳಗಾಂ ಜಿಲ್ಲೆಯಲ್ಲಿ ವಿಭಾಗ ಮಟ್ಟದಲ್ಲಿ ಕಾರ್ಯಕ್ರಮವನ್ನು ಮಾಡಿದಂತಹ ಸಂದರ್ಭದಲ್ಲಿ ಅಲ್ಲಿ ಹೆಣ್ಣು ಮಕ್ಕಳು, ಅವರೇ ಸಣ್ಣ ಸಣ್ಣ ಟ್ರಾಕ್ಟರ್‌ಗಳಲ್ಲಿ ಬಂದಿದ್ದರು, ನಾವು ಯಾವುದೇ ವಾಹನದ ವ್ಯವಸ್ಥೆಯನ್ನಾಗಲೀ, ಊಟದ ವ್ಯವಸ್ಥೆಯನ್ನಾಗಲೀ ಮಾಡಿರಲಿಲ್ಲ. ಅವರೇ ಊಟವನ್ನು ತೆಗೆದುಕೊಂಡು ಬಂದಿದ್ದರು ಒಬ್ಬ ಬಿಜಾಪುರದ ಹೆಣ್ಣು ಮಗಳು ಭಾಷಣ ಮಾಡಿದಂತಹ ವಿಚಾರ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ, ಅವಳು ನೋಡಿ ಈ ಗುಂಪನ್ನು ಮಾಡುವಂತಹ ಸಂದರ್ಭದಲ್ಲಿ ಜನರು ನಮ್ಮನ್ನು ನೋಡಿ ನಗುತ್ತಿದ್ದರು, ನನ್ನ ಗಂಡ ಸಿಕ್ಕಾಪಟ್ಟೆ ಬಯ್ಯುತ್ತಿದ್ದನು, ಮತ್ತೆ ತುಂಬಾ ಕುಡಿಯುತ್ತಿದ್ದನು, ನಾನು ಈ ಗುಂಪನ್ನು ಸೇರಿದ ಮೇಲೆ, ನಮ್ಮ ಉಳಿತಾಯ ಚಟುವಟಿಕೆಗಳು ಪ್ರಾರಂಭವಾದ ಮೇಲೆ ನನ್ನ

ಗಂಡ ಬಹಳ ಪ್ರೀತಿ ಮಾಡುತ್ತಾನೆಂದು ಹೇಳಿದಳು, ಮತ್ತೆ ನಮ್ಮ ಗುಂಪಿನ ಮಹಿಳೆಯರೆಲ್ಲರೂ ಸೇರಿ ಶಾಲೆಯ ಕಟ್ಟಡವನ್ನು ಕಟ್ಟಿದ್ದೇವೆ, ನಮಗೆ ಈಗ ಬಹಳ ಶಕ್ತಿ ಬಂದಿದೆ, ನಾವೆಲ್ಲರೂ ಕಾನೂನಿನ ಬಗ್ಗೆ ಕೇಳುತ್ತೇವೆಂದು ಹೇಳಿದ್ದಾಳೆ, ಇದು ಒಂದು ರೀತಿಯ ಆತ್ಮ ಸ್ಥೈರ್ಯ, ಇದು ಒಂದು ರೀತಿಯಲ್ಲಿ ರಾಜ್ಯದಲ್ಲೆ ಆಂಧೋಲನದ ರೀತಿಯಲ್ಲಿ ಆಗಿರುವಂಥಾದ್ದನ್ನು ಅವರು ಅಪ್ರಿಶಿಯೇಟ್ ಮಾಡುತ್ತಿದ್ದಾರೆ.

ಶ್ರೀ ಡಿ .ವಿ. ಸದಾನಂದ ಗೌಡ:-- ಮಾನ್ಯ ಅಧ್ಯಕ್ಷರೇ, ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಖಂಡಿತವಾಗಿ ಮೆಚ್ಚುಗೆಯನ್ನು ಸೂಚಿಸುತ್ತೇನೆ, ಅದರಲ್ಲಿ ಎರಡು ಮಾತು ಇಲ್ಲ. ಆದರೆ ನಾನ್ ಗೌರ್ವಮೆಂಟ್ ಆರ್ಗನೈಜೇಷನ್ (ಎನ್‌ಜಿಒ)ಗಳು, ಅದರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಸಂಸ್ಥೆಗಳು, ಇವತ್ತು ಪ್ರತಿ ಮನೆ ಮನೆಗಳಿಗೂ ವಿಸ್ತರಣೆ ಮಾಡಿದಂತಹ ವಿಚಾರವನ್ನು ನಾನು ಇಲ್ಲಿ ಹೇಳಿದ್ದೇನೆಯೇ, ಹೊರತು ತಮ್ಮ ಕೆಲಸ ಕಾರ್ಯಗಳು ಒಳ್ಳೆಯದಾಗಿದೆ, ನಾನು ಇಲ್ಲವೆಂದು ಹೇಳುತ್ತಾ ಇಲ್ಲ. ಆದರೆ ಅಭೂತಪೂರ್ವವಾಗಿ ಯಾರು ಗಂಡಸರು ಎಂದು ಪ್ರಗತಿಪರ ತಂಡಗಳೆಂದು ತಯಾರು ಮಾಡಿ. ಅದರ ಮೂಲಕ ದುಶ್ಚಟಗಳನ್ನು ದೂರ ಮಾಡುವಂತಹ ವ್ಯವಸ್ಥೆಯನ್ನು ತಂಡಗಳು ಇರುವಂಥಾದ್ದು, ಇವತ್ತು ತಮಗೂ ಗೊತ್ತಿದೆ, ನಮ್ಮ ರಾಜ್ಯ ಸರ್ಕಾರ ಸಾಕಷ್ಟು ಸಾರಾಯಿ ಅಂಗಡಿಗಳು ಪರವಾನಗಿಯನ್ನು ಕೊಟ್ಟು ಅದನ್ನು ಓಪನ್ ಮಾಡಿದ್ದರೂ ಕೂಡ, ಅದರಿಂದ ದೂರ ಹೋಗಬೇಕೆಂಬ, ವಿಚಾರವನ್ನು ಹೇಳುವ ಕೆಲಸವನ್ನು ಈ ಪ್ರಗತಿಪಂಥ ತಂಡಗಳು ಮಾಡುತ್ತಿವೆ, ಎಂಬುದನ್ನು ಹೇಳುತ್ತಿದ್ದೇನೆ. ಇದು ಒಂದು ರೀತಿಯಲ್ಲಿ ಸರ್ಕಾರ ಏನು ಕೆಲಸವನ್ನು ಮಾಡುತ್ತಿದೆ, ಅದರ ಜೊತೆಯಲ್ಲೆ ಈ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ ಎಂಬ ಮಾತನ್ನು ಹೇಳುತ್ತಿದ್ದೇನೆ, ನಿಮ್ಮ ಬಗ್ಗೆ ನಾವು ಖಂಡಿತವಾಗಿ ಅಪಸ್ವರದ ಮಾತನ್ನು ಹೇಳಿಲ್ಲ.

ಶ್ರೀ ಯು.ಆರ್. ಸಭಾಪತಿ:-- ಮಾನ್ಯ ಅಧ್ಯಕ್ಷರೇ, "ಸ್ತ್ರೀ ಶಕ್ತಿ" ಯೋಜನೆಯನ್ನು ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿದ್ದೇವೆ. ಆದರೆ ನಗರ ಪ್ರದೇಶಗಳಲ್ಲಿ ಈ "ಸ್ತ್ರೀಶಕ್ತಿ" ಯೋಜನೆಯನ್ನು ಸಂಘಟಿಸುವುದಕ್ಕೆ, ಬೇರೆ ಬೇರೆ ಸರ್ಕಾರೇತರ ಸಂಸ್ಥೆಗಳು ಮುಂದೆ ಬಂದಿವೆ, ಇದರಲ್ಲಿ ನವೋದಯ ಸಂಸ್ಥೆಗಳು ಸಹಕಾರಿ ಸಂಘಗಳ ಮೂಲಕ ಡಿಸಿಸಿ ಬ್ಯಾಂಕ್‌ನವರು ಸ್ಥಾಪನೆ ಮಾಡಿದಂತಹ ಸಂಘಗಳು ಇವೆ. ಇದರ ಜೊತೆಗೆ ನಮ್ಮ ನಗರಸಭೆಯ ಮೂಲಕ "ಸ್ವರ್ಣ ಜಯಂತಿ ರೋಜ್‌ಗಾರ್" ಗುಂಪುಗಳು ಬಂದಿವೆ, ಇದರ ಜೊತೆಗೆ ನಮ್ಮ ಕರಾವಳಿ ನಗರಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ನಾವು ಒಂದು ಸಾವಿರ ಕೋಟಿ ರೂಪಾಯಿಗಳನ್ನು ವ್ಯಯ ಮಾಡುವುದಕ್ಕೆ ಹೋದಾಗ, ಅಲ್ಲಿ ಶೌಚಾಲಯ ನಿರ್ಮಾಣಕ್ಕೋಸ್ಕರ ಸರ್ಕಾರೇತರ ಸಂಘಸಂಸ್ಥೆಗಳನ್ನು ನೇಮಕ ಮಾಡಿದಾಗ, ಶ್ರೀ ಕ್ಷೇತ್ರ ಧರ್ಮಸ್ಥಳ ನಗರ ಸಮೂದಾಯ ಯೋಜನೆಯವರು, ನಮ್ಮ ಸರ್ಕಾರದೊಟ್ಟಿಗೆ ಇದ್ದಾರೆ, ನಮ್ಮ ಸರ್ಕಾರ ಶ್ರೀ ಕ್ಷೇತ್ರ ನಗರ ಸಮುದಾಯ ಯೋಜನೆಗೆ ಹಣವನ್ನು ಬಿಡುಗಡೆ ಮಾಡುತ್ತಾ ಇದೆ, ಆದರೆ ಶ್ರೀ ಕ್ಷೇತ್ರ ನಗರ ಸಮುದಾಯ ಯೋಜನೆಯಡಿಯಲ್ಲಿ ನನ್ನ ನಗರದಲ್ಲಿ ಬರುವಂತಹ ಸುಮಾರು 250ಸ್ವಸಹಾಯ ಗುಂಪುಗಳನ್ನು ಅವರು ಮಾಡಿದ್ದಾರೆ. 'ನವೋದಯ ಗುಂಪುಗಳು' ಸುಮಾರು 150 ಗುಂಪುಗಳು ಬಂದಿವೆ, ಒಂದು ವಿಧಾನಸಭಾ ಕ್ಷೇತ್ರದಾದ್ಯಂತ ಸುಮಾರು 600ರಿಂದ 700ಗುಂಪುಗಳು ಬೇರೆ ಬೇರೆ ಅಂದರೆ ಸ್ತ್ರೀ ಶಕ್ತಿ ಯೋಜನೆಯಡಿಯದ್ದು ಬಿಟ್ಟು, ಸರ್ಕಾರೇತರ ಸಂಸ್ಥೆಗಳಿಂದಲೂ ಆಗಿದೆ, ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ ಈ ಎಲ್ಲವನ್ನು ಸ್ತ್ರೀ ಶಕ್ತಿ ಯೋಜನೆಯಡಿಗೆ ತರಬೇಕು. ಆ ಮೂಲಕ ಸರ್ಕಾರದ ಮೂಲಕ ಈಗ ಒಂದು ಲಕ್ಷಕ್ಕಿಂತ ಹೆಚ್ಚಿಗೆ ಉಳಿತಾಯ ಮಾಡುವಂತಹ

ಸ್ವಸಹಾಯ ಗುಂಪುಗಳಿಗೆ 20,000ರೂಪಾಯಿಗಳ ಸುತ್ತು ನಿಧಿಯನ್ನು ಏನು ಕೊಡುತ್ತಿದೆ, ಅದನ್ನು ಈ ಬಾರಿಯ ಮುಂಗಡ ಪತ್ರದಲ್ಲಿ ಅನೌನ್ಸ್ ಮಾಡಿದ್ದೇನೆ ಅದನ್ನು ಆ ಸ್ವಸಹಾಯ ಗುಂಪುಗಳಿಗೂ ಅಳವಡಿಸಬೇಕೆಂಬ ಬೇಡಿಕೆಯನ್ನು ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ಮಾನ್ಯ ಸಚಿವರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ, ಮತ್ತೆ ನಗರಪ್ರದೇಶಗಳಲ್ಲೂ ಕೂಡ ಬಿಲೋ ಪಾವರ್ಟಿಯಲ್ಲಿರುವ ಹೆಣ್ಣುಮಕ್ಕಳು ಇದ್ದಾರೆ, ಈ ಬಡತನ ರೇಖೆಗಿಂತ ಕೆಳಗೆ ಇರುವಂತಹ ಹೆಣ್ಣು ಮಕ್ಕಳು ಈ ನಗರ ಪ್ರದೇಶಗಳಲ್ಲಿ ಇಲ್ಲವೇ? ಅವರಿಗೆ ಏಕೆ ಈ ಸ್ತ್ರೀ ಶಕ್ತಿ ಯೋಜನೆಯನ್ನು ವಿಸ್ತರಿಸಬಾರದು? ಅವರಿಗೆ ಏಕೆ ಇವರು ನಗರ ಪ್ರದೇಶದವರು ಎಂದು ಬೇರೆ ಯೋಜನೆ ಎಂದು, ಏಕೆ ತರಬೇಕು? ಇದು ಬೇಕಾಗಿಲ್ಲ, ನಗರ ಪ್ರದೇಶದಲ್ಲಿರುವಂತಹ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೂ ಕೂಡ, ಈ ಯೋಜನೆಯಲ್ಲಿ ಮಾನ್ಯತೆ ಸಿಗಬೇಕು, ಸರ್ಕಾರದಿಂದ ಬರುವಂತಹ ಸುತ್ತು ನಿಧಿಯ ಪ್ರಯೋಜನ, ಆ ಗುಂಪುಗಳಿಗೂ ನೀಡಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದಿಡುತ್ತೇನೆ, ಈ ಸ್ವಸಹಾಯ ಗುಂಪುಗಳ ಸಾಧನೆಯೊಂದಿಗೆ, ಇದಕ್ಕೆ ಆರ್ಥಿಕ ಚೈತನ್ಯವನ್ನು ಮೂಡಿಸುವಲ್ಲಿ ಯಶಸ್ವಿಯಾಿ. ಪ್ರಾಯಶ: ನಮ್ಮ ಸರ್ಕಾರ ಅವರಿಗೆ ರೇಷನ್ ಅಂಗಡಿಗಳನ್ನು ವಹಿಸಿಕೊಳ್ಳುವಂತಹ ಜವಾಬ್ದಾರಿಯನ್ನು ಕೂಡ, ಮುಂಗಡ ಪತ್ರದಲ್ಲಿ ಅದಕ್ಕೆ ವ್ಯವಸ್ಥೆಯನ್ನು ಮಾಡಿದೆ, ಇದನ್ನು ಕಾರ್ಯ ರೂಪಕ್ಕೆ ತರಬೇಕಾಗಿದೆ, ಈಗ ಇರುವಂತಹ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿ ವರ್ಗವನ್ನು ಅನಿವಾರ್ಯವಾಗಿ ಹೆಚ್ಚು ಮಾಡಬೇಕಾಗಿದೆ. ಈ ವಿಚಾರವನ್ನು ಮಹಿಳಾ ಮಂತ್ರಿಯವರು ಮಾನ್ಯ ಮುಖ್ಯಮಂತ್ರಿಯವರ ಮುಂದೆ ಇಡಬೇಕಾಗಿದೆ, ಏಕೆಂದರೆ, ಈಗ ಇರುವಂತಹ ಮಹಿಳಾ ಮತ್ತು ಮಕ್ಕಳ ಇಲಾಖೆ, ಸಿಬ್ಬಂದಿ ವರ್ಗ, ಇಷ್ಟೊಂದು ಕ್ರಾಂತಿಕಾರಣ ಬದಲಾವಣೆಯನ್ನು ತರುವುದಕ್ಕೆ ಹುದ್ದೆಗಳು ಅನೇಕ ಖಾಲಿ ಇವೆ, ಹೊಸ ಹುದ್ದೆಗಳು ಸೃಷ್ಟಿಯಾಗಬೇಕಾಗಿದೆ. ಏಕೆಂದರೆ ಮುಂದಿನ ದಿವಸಗಳಲ್ಲಿ ಇವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನತರಬೇಕೆಂದರೆ, ಸಿಬ್ಬಂದಿವರ್ಗವನ್ನು ಹೆಚ್ಚಿಗೆ ಮಾಡಬೇಕಾದಂತಹ ಅನಿವಾರ್ಯ ಹೆಚ್ಚಿಸುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ, ನಾವು ಮುಂದೆ ಮುಂದೆ ಹೋದಾಗ ಈ ಯೋಜನೆಯಿಂದ ಹೆಚ್ಚು ಆಕರ್ಷಣೆ ಜನರು ಆಗುವಂತಹ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸಬಹುದು, ಮತ್ತೆ ಅವರಿಗೆ ತರಬೇತಿಯನ್ನು ಕೊಟ್ಟು ಅವರನ್ನು ಮುಂದೆ ತರುವಾಗ ಅವರಿಗೆ ಬೇಕಾದಂತಹ ಉದ್ದಿಮೆಗಳನ್ನು ಸೃಜಿಸುವಾಗ, ನಾವು ಅವರಿಗೆ ಬೇರೆ ಬೇರೆ ರೀತಿಯಲ್ಲಿ ಅವರಿಗೆ ಸಹಕಾರ ಮಾಡಬೇಕಾದರೆ ಮೇಲ್ವಿಚಾರಕರ ಸಂಖ್ಯೆಯು ಹೆಚ್ಚಾಗಬೇಕು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಬೇರೆ ಬೇರೆ ಹುದ್ದೆಗಳನ್ನು ಸೃಷ್ಟಿಸಿ, ಆ ಮೂಲಕ ಈ ಒಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಬಹುದು ಎಂದು ಹೇಳುತ್ತೇನೆ.

ಇನ್ನು ಕಾನೂನು ಮತ್ತು ಸುವ್ಯವಸ್ಥೆಯು ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತಿದ್ದೇನೆ. ಬಹುಶ: ಮುಂಗಡಪತ್ರದ ಇತಿಹಾಸದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲಿಸ್ ಇಲಾಖೆಗೆ ನೀಡಿರುವ ಆರ್ಥಿಕ ಹೊಣೆಗಾರಿಕೆಯಿಂದಾಗಿ ಬಹುಶ: ಬುಹತ್ತರವಾದ ಬದಲಾವಣೆ ಈ ರಾಷ್ಟ್ರದಲ್ಲಿಯೇ ಕರ್ನಾಟಕ ಪೋಲಿಸ್ ವ್ಯವಸ್ಥೆ ಅತ್ಯಂತ ಆಧುನಿಕ ರೀತಿಯಲ್ಲಿ ಅತ್ಯಂತ ಸಮರ್ಥವಾಗಿ, ಹಿಂದೆ ಒಂದು ಕಾಲವಿತ್ತು, ಇಲ್ಲಾ ಪ್ರಕರಣಗಳು ಕೂಡ ಇಲ್ಲಿ ಸದನದಲ್ಲಿ ಯಾರಾದರು ವಿರೋಧಪಕ್ಷದವರ ಮೂಲಕ ಬೆಳಕಿಗೆ ತರುತ್ತಿದ್ದೇವು. ಈಗ ವಿರೋಧಪಕ್ಷದವರಿಂದ ತರಬೇಕಾಗಿಲ್ಲ, ಪ್ರಕರಣಗಳನ್ನು ಪತ್ತೆಯನ್ನು

ನಮ್ಮ ಪೋಲಿಸ್ ಇಲಾಖೆಯೇ ಮಾಡುತ್ತಿದೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ನಮ್ಮ ಪೋಲಿಸ್ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಜಂಟಿಯಾಗಿ ಮಾಡಿರುವ ಕೆಲಸ, ಕೊಟ್ಟಿರುವ ಬೆಂಬಲ, ಏನೆಂದರೆ, ಸುಮಾರು 6000 ಪೋಲಿಸರನ್ನು ನೇಮಕ ಮಾಡಿದ ಇತಿಹಾಸ ಕಳೆದ ನಾಲ್ಕು ವರ್ಷದಲ್ಲಿ ನಮ್ಮ ರಾಜ್ಯ ಸರ್ಕಾರದ್ದಾಗಿದೆ. ಇವತ್ತು ಸುಮಾರು 6000 ಪೊಲೀಸರನ್ನು ನೇಮಕ ಮಾಡುವುದೆಂದರೆ ಅಷ್ಟೇನು ಸಣ್ಣ ಕೆಲಸವಲ್ಲ, 150 ಪೋಲಿಸ್ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಬಡ್ತಿ ಕೊಟ್ಟಿದ್ದಲ್ಲದೆ, 67 ಇನ್‌ಸ್ಪೆಕ್ಟರ್‌ಗಳಿಗೆ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್ ಆಗಿ ನೇಮಕ ಮಾಡಿದ್ದಲ್ಲದೆ, ಸುಮಾರು 50 ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್‌ರಿಗೂ ಬಡ್ತಿ ಕೊಟ್ಟದ್ದಲ್ಲದೆ, 324 ಪೋಲಿಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿಯನ್ನು ಈ ಸರ್ಕಾರ ಮಾಡಿದೆ ಎಂದು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಸುಮಾರು 700 ಹೆಚ್ಚು ಪೋಲಿಸ್ ಕಾನ್‌ಸ್ಟೇಬಲ್‌ಗಳ ನೇಮಕ ಈ ಇಲಾಖೆಯಲ್ಲಾಗಿದೆ. ಒಂದು ಕಡೆ ಉದ್ಯೋಗಾವಕಾಶಕ್ಕೆ ನಮ್ಮ ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ, ಇನ್ನೊಂದು ಕಡೆ ಪೋಲಿಸರಿಗೆ ಕೊಡುವ ಮೂಲಭೂತ ಸೌಕರ್ಯವನ್ನು ಕೂಡ ಹೆಚ್ಚಳ ಮಾಡಲಾಗಿದೆ. ಅವರಿಗಾಗಿ ಸುಮಾರು 750 ಕೋಟಿ ರೂಪಾಯಿಯ ಕ್ರಿಯಾ ಯೋಜನೆಯನ್ನು ರೂಪಿಸಿ ಐದು ವರ್ಷಗಳಲ್ಲಿ ಅದನ್ನು ಮಹತ್ವಪೂರ್ಣವಾಗಿ ಕಾರ್ಯಗತಗೊಳಿಸುವಂತಹ ಹೆಮ್ಮೆಯ ಕೆಲಸ ಮಾಡುವುದರೊಂದಿಗೆ ಇವತ್ತು ಪೋಲಿಸ್ ಇಲಾಖೆಯ ಕಾನ್‌ಸ್ಟೇಬಲ್ ಮುಂಬೈಯ ಚಾಲ್‌ನಲ್ಲಿತರಕ್ಕಂಥ ಸಣ್ಣ ಸಣ್ಣ ಗುಡಿಸಲುಗಳಲ್ಲಿರತಕ್ಕಂಥ ಪರಿಸ್ಥಿತಿ ಇತ್ತು. ಇವತ್ತು ಪ್ರತಿಯೊಂದು ಪೋಲಿಸ್ ಇಲಾಖೆಯ ಸಿಬ್ಬಂದಿಗೂ ಕೂಡ ಒಂದು ಉತ್ತಮವಾದ ವಸತಿಗೃಹ ಮಾಡುವಂತಹ ಕೆಲಸ ನಡೆದಿದೆ. ಪೋಲಿಸ್ ಠಾಣೆಗಳು ಎಷ್ಟು ಅವ್ಯವಸ್ಥೆಯಲ್ಲಿತ್ತು ಎಂದರೆ ಆ ಪೋಲಿಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್‌ಗೆ ವಾಹನ ಸೌಲಭ್ಯವಿರಲಿಲ್ಲ, ಇವತ್ತು ನಮ್ಮ ರಾಜ್ಯದ ಎಲ್ಲಾ ಪೋಲಿಸ್ ಠಾಣೆಗಳಿಗೂ ಕೂಡ ಒಂದು ವಾಹನ ಸೌಲಭ್ಯ ಕೊಡುವುದರೊಂದಿಗೆ, ಅದನ್ನು ಗಣಕೀಕರಣ ಮಾಡುವ ಕೆಲಸದಿಂದಾಗಿ ಇವತ್ತು ಗಣನೀಯ ಪ್ರಮಾಣದಲ್ಲಿ ಜನಸಂಖ್ಯೆ ಹೆಚ್ಚಾದಂತೆ ನಿರುದ್ಯೋಗ ಹೆಚ್ಚಾಗಿ ಅಪರಾಧಗಳು ಹೆಚ್ಚಾದರೂ ಕೂಡ ಅಪರಾಧಗಳು ಹೆಚ್ಚದಂತೆ ಕಾಲಕಾಲಕ್ಕೆ ಅದನ್ನು ತಡೆಗಟ್ಟುವಲ್ಲಿ ನಮ್ಮ ಗೃಹ ಇಲಾಖೆ ಅತ್ಯಂತ ಪರಿಣಾಮಕಾರಿಯಾಗಿ ಸಾಧನೆ ಮಾಡಿದೆ. ಇವತ್ತು ಗೃಹ ಇಲಾಖೆಯ ಸಾಧನೆಯ ಪಟ್ಟಿಯಲ್ಲಿ ಅನೇಕ ಪ್ರಕರಣಗಳಲ್ಲಿ, ಒಬ್ಬ ಸಹಸದಸ್ಯರಾದ ಅಸ್ನೋಟಿಕರ್ ಕೊಲೆ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳನ್ನು ಹಿಡಿಯುವಲ್ಲಿಯೂ ನಮ್ಮ ಗೃಹ ಇಲಾಖೆ ಯಶಸ್ವಿಯಾಗಿದೆ ನಮ್ಮ ಸರ್ಕಾರ ಕೊಲೆ ಆರೋಪಿಯನ್ನು ಹಿಡಿದುತಂದವರಿಗೆ 5 ಲಕ್ಷ ರೂಪಾಯಿಗಳ ಪ್ರೋತ್ಸಾಹಧನ ಕೊಡುವುದಾಗಿ ಘೋಷಣೆ ಮಾಡಿದೆ. ಇವತ್ತು ಮಾನ್ಯ ಗೃಹಮಂತ್ರಿಗಳಿಗೆ ಜ್ಞಾಪಿಸುತ್ತಿದ್ದೇನೆ ಆ 5 ಲಕ್ಷ ರೂಪಾಯಿಗಳನ್ನು ನಿಜವಾಗಿಯು ಅಂತಹ ಪೋಲಿಸ್ ಅಧಿಕಾರಿಗಳಿಗೆ ಕೊಡಬೇಕಲ್ಲದೆ, ಅದೊಂದು ಸಾಧನೆ ಎಂದು ಹೇಳುತ್ತೇನೆ. ಕಂಬಾಲಪಲ್ಲಿ ಅಥವಾ ಬಾಂಬ್ ಬ್ಲಾಸ್ಟ್ ಪ್ರಕರಣವಿರಲಿ ಅಥವಾ ನ್ಯಾಯವಾದಿಗಳ ಅಜಿಟೇಷನ್ ಇರಲಿ, ರಾಜಕುಮಾರ್ ಅಪಹರಣದ ಪ್ರಕರಣದಲ್ಲಿ ವೀರಪನ್ ಕಪಿಮುಷ್ಠಿಯಲ್ಲಿ ಅವರು ಸೇರಿಕೊಂಡಿದ್ದು, ಅಲ್ಲಿಂದ ಅವರನ್ನು ಬಿಡುಗಡೆಗೊಳಿಸಿದ್ದು, ನಮ್ಮ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡಾದ ಮೇಲೆ ಒಂದರ ಮೇಲೆ ಮತ್ತೊಂದು ಬಂದಂತಹ ಗಂಭೀರವಾದ ಸವಾಲುಗಳನ್ನು ನಾಲ್ಕು ವರ್ಷಗಳ ಕಾಲ ಎದುರಿಸಿಕೊಂಡು ಸರ್ಕಾರ ನಡೆಸಿಕೊಂಡು ಬಂದಿದ್ದಾರೆ. ಎಂಥಂತ ಕಠಿಣ ಸವಾಲುಗಳನ್ನು ಕೂಡ ನಮ್ಮ ಸಮಯಪ್ರಜ್ಞೆ, ನಮ್ಮ ಕರ್ತವ್ಯ ಪ್ರಜ್ಞೆಯನ್ನು ಬಹಳ

ಮೆಚ್ಚುವ ರೀತಿಯಲ್ಲಿ ನಮ್ಮ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಈ ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ ಎಂದು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಇವತ್ತು ಪೋಲಿಸ್ ಇಲಾಖೆಯಲ್ಲಾಗಿರುವ ಅನೇಕ ಪ್ರಗತಿಗಳ ಬಗ್ಗೆ ಹೆಚ್ಚು ವಿಷಯವನ್ನು ನಾನು ಹೇಳಬೇಕಾಗಿಲ್ಲ, ಎಲ್ಲದಕ್ಕಿಂತ ಇಲಾಖೆಯನ್ನು ಆಧುನೀಕರಣಗೊಳಿಸಲು 750 ಕೋಟಿ ರೂಪಾಯಿ ಏನು ಇಟ್ಟಿದ್ದೀರಿ ಇದನ್ನು ಸ್ವಾಗತ ಮಾಡುತ್ತೇನೆ. ಇನ್ನು ನಮ್ಮ ಮುಖ್ಯಮಂತ್ರಿಗಳ ಮೇಲೊಂದು ಆರೋಪವಿದೆ, ಮುಖ್ಯಮಂತ್ರಿಗಳು ಬೆಂಗಳೂರು ನಗರವನ್ನು ಮಾತ್ರ ಸಿಂಗಾಪುರವಾಗಿ ಬೆಳಸುತ್ತಿದ್ದಾರೆನ್ನುವ ಮಾತನ್ನು ಸಾರ್ವತ್ರಿಕವಾಗಿ ಕೇಳುತ್ತಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರವನ್ನು ಹೇಗೆ ಇಟ್ಟುಕೊಳ್ಳಬೇಕೊ ಅದೇ ರೀತಿಯಲ್ಲಿ ನಮ್ಮ ರಾಜ್ಯದ ಎಲ್ಲಾ ನಗರಗಳನ್ನು ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಇವತ್ತು ಕರಾವಳಿ ನಗರ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇವತ್ತು ನನ್ನ ಉಡುಪಿ ಜಿಲ್ಲೆಯಾದ ಮೇಲೆ, ಜಿಲ್ಲಾ ಕೇಂದ್ರವಾಗಿ ಬರುವಂತಹ, ಒಂದು ಧಾರ್ಮಿಕ ಕೇಂದ್ರವಾಗಿ ಬರುವಂತಹ ಉಡುಪಿಯ ನಗರಕ್ಕೆ 129 ಕೋಟಿ ರೋಪಾಯಿ ಮೊತ್ತದ ಒಂದು ಯೋಜನೆಯನ್ನು ನಮಗೆ ಕಲ್ಪಿಸಿಕೊಟ್ಟು, ಮೂಲಭೂತ ಸೌಕರ್ಯಕ್ಕೆ ಬೇಕಾದ ಕುಡಿಯುವ ನೀರಿರಲಿ, ಒಳಚರಂಡಿ ಯೋಜನೆ ಇರಲಿ 2000 ಶೌಚಾಲಯ ರಹಿತ ಬಡತನರೇಖೆಗಿಂತ ಕೆಳಗಿರುವ ಕುಟುಂಬದವರಿಗೆ ಅವರನ್ನು ಗುರುತಿಸಿ 2600 ಶೌಚಾಲಯವನ್ನು ಕಟ್ಟುವಂತ ದೊಡ್ಡ ಕಾರ್ಯಕ್ರಮದಲ್ಲಿ ಸುಮಾರು 8000–12000 ರೂಪಾಯಿಗಳ ಶೌಚಾಲಯವನ್ನು ಕಟ್ಟತಕ್ಕಂಥ ಯೋಜನೆಯಲ್ಲಿ 4 ಸಾವಿರ ರೂಪಾಯಿ ಅನುದಾನ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ:– ಯಾವ ಯೋಜನೆ ಅದು? ಯಾವ ಯೋಜನೆ, ಯಾವಾಗ ಆದದ್ದು?

ಶ್ರೀ ಯು.ಆರ್. ಸಭಾಪತಿ:– ಕರಾವಳಿ ನಗರ ಅಭಿವೃದ್ಧಿ ಯೋಜನೆ, ಏಷ್ಯಾನ್ ಡವಲಪ್‌ಮೆಂಟ್ ಪ್ರೋಗ್ರಾಂ, ಕಳೆದ ವರ್ಷ ಮಂಜೂರಾಗಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಹಿಂದಿನ ಸರ್ಕಾರ ಮಾಡಿದ್ದನ್ನು ತಮ್ಮ ಸರ್ಕಾರ ಮಾಡಿದ್ದೆಂದು ಹೇಳುತ್ತಿದ್ದೀರಿ.

ಶ್ರೀ ಯು.ಆರ್. ಸಭಾಪತಿ:– ಹಿಂದಿನ ಸರ್ಕಾರದ 5 ವರ್ಷಗಳಲ್ಲಿ ಇವರೇ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು, ಸ್ವರ್ಣಸ್ವರ್ಯಾ ಎರಡನೆ ಹಂತದ ಯೋಜನೆಯನ್ನು ನಮಗೆ ಕೊಡಿ ಎಂದು ನಾನು ಬೊಬ್ಬೆ ಹೊಡೆದೆ, ಮಾನ್ಯ ನಗರಾಭಿವೃದ್ಧಿ ಸಚಿವರಾಗಿದ್ದ ಬಚ್ಚೇಗೌಡರು ಇಲ್ಲಿ ನಮಗೆಲ್ಲಾ ತುಪ್ಪ ಸವರಿ ಏಷ್ಯಾನ್ ಡವಲಪ್‌ಮೆಂಟ್ ಬ್ಯಾಂಕ್‌ನಿಂದ ಹಣ ತರುತ್ತೇವೆಂದು ಹೇಳಿ ಚುನಾವಣೆ ಬಂದರು ನೀವು ತರಲಿಲ್ಲ, ನೀವು ಅನುಷ್ಠಾನಕ್ಕೆ ತರಲಿಲ್ಲ, ನೀವು ಕಳೆದ ಬೇಡಿಕೆಗೆ ಅನುಗುಣವಾಗಿ ಚರ್ಚೆ ಆರಂಭಿಸಿರಬಹುದು, ಆ ಬಗ್ಗೆ ನೀವು ಚಿಂತನೆ ಆರಂಭಿಸಿದ್ದೀರಿ ಎಂದು ಹೇಳುವುದಾದರೆ ನಾನು ಒಪ್ಪುತ್ತೇನೆ. ಅದಕ್ಕಿಂತ 1993–1994ನೇ ಇಸವಿಯಲ್ಲಿ ಇದನ್ನು ಹುಟ್ಟು ಹಾಕಿದವರು ಸನ್ಮಾನ್ಯ ವೀರಪ್ಪ ಮೊಯಿಲಿಯವರು, ಕಾಂಗ್ರೆಸ್ ಸರ್ಕಾರ ಇದನ್ನು ಹುಟ್ಟು ಹಾಕಿದ್ದು, ಆ ಮೇಲೆ 5 ವರ್ಷಗಳವರೆಗೆ ಚಿಂತನೆ ಮಾಡುತ್ತಾ ಇದ್ದೀರಿ, ಅದನ್ನು ಅನುಷ್ಠಾನಕ್ಕೆ ತಂದವರು ನಮ್ಮ ಎಸ್.ಎಂ.ಕೃಷ್ಣ ನೇತೃತ್ವದ ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ. ಇವತ್ತು ಮಾನ್ಯ ಯೋಗೀಶ್ ಭಟ್‌ರವರು ಬಹಳ ಸಂತೋಷದಿಂದಿದ್ದಾರೆ, ಏಕೆಂದರೆ ಮಂಗಳೂರು ಮಹಾನಗರ ಪಾಲಿಕೆಗೆ

300 ಕೋಟಿ ರೂಪಾಯಿ ಬರುತ್ತದೆ. ಹಾಗೆಯೇ ಕರಾವಳಿಯ ಸುಮಾರು 10 ನಗರಗಳಿಗೆ ಸುಮಾರು 1000 ಕೋಟಿ ರೂಪಾಯಿ ಮೊತ್ತದ ಬೃಹತ್ ಯೋಜನೆ ಹಮ್ಮಿ ಕೊಳ್ಳಲಾಗಿದೆ.

ಶ್ರೀ ಎನ್.ಯೋಗೀಶ್ ಭಟ್:- ಪೂರ್ಣ ಅನುದಾನವಲ್ಲ, ಸಾಲ ಮತ್ತು ಅನುದಾನ ಇದರಲ್ಲಿ ಸೇರಿದೆ.

ಶ್ರೀ ಯು.ಆರ್. ಸಭಾಪತಿ:- ನನಗೆ ನಗೆ ಬರುತ್ತಿದೆ, ನಾವು ಯೋಜನೆಯನ್ನು ತಂದಿದ್ದೇವೆ ಶೇಕಡ 42 ರಷ್ಟು ಅನುದಾನವನ್ನು ಸರ್ಕಾರ ಕೊಡುತ್ತಿದೆ. ಮಹಾನಗರಪಾಲಿಕೆ, ನಗರಸಭೆಗಳಿಗೆ ಸಾಲವನ್ನು ನಾವು ಮಾಡಿ ಅವರಿಗೆ ಕೊಟ್ಟಿದ್ದೇವೆ, ಸಾಲವೆಂದು ಅವರಿಗೆ ಹೇಳಿದ್ದೇವೆ, ಎಂದಾದರು ಆ ಸಾಲವನ್ನು ನಗರಸಭೆಗಳು ಪಾವತಿಸಲಿಲ್ಲ, ನಾವೇ ಅವರಿಗೆ ಅನುದಾನ ರೂಪದಲ್ಲಿ ಕೊಟ್ಟು ನಮ್ಮ ಸಾಲಕ್ಕೆ ವಜಾ ಮಾಡುತ್ತಾ ಹೋಗಿದ್ದೇವೆಯೆ ವಿನ: ನಗರದ ಮೂಲಭೂತ ಸೌಕರ್ಯವನ್ನು ಹೆಚ್ಚಿಸಲು, ನಗರದಿಂದ ಬರುವ ತೆರಿಗೆಯಿಂದ ಅಭಿವೃದ್ಧಿಪಡಿಸಲಾಗಲಿಲ್ಲ. ಇವತ್ತು ನಗರಸಭೆಗಳು ತಮ್ಮ ಸಿಬ್ಬಂದಿವರ್ಗಗಳಿಗೆ ಸಂಬಳಕೊಡಲಾಗದಂತಹ ಪರಿಸ್ಥಿತಿಯಲ್ಲಿ, ನೀರಿನ ಸರಬರಾಜಿಗೋಸ್ಕರ ಮಾಡಿರುವ ವಿದ್ಯುತ್ ಪಾವತಿಯ ಬಿಲ್ ಅನ್ನು ಈ ಸರ್ಕಾರ ವಹಿಸಿಕೊಂಡು, ಅದನ್ನು ಬಿಡುಗಡೆ ಮಾಡಿದ್ದರಿಂದ ನಗರ ಅಭಿವೃದ್ಧಿ ಮಾಡುವುದಕ್ಕಾಗಿದೆ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪಾಟತೆತ್ತಿದರೆ ಸಾಕು ಪತ್ರಿಕೆಗಳಲ್ಲಿ ಮತ್ತು ಎಲ್ಲ ಕಡೆಗಳಲ್ಲಿಯೂ ಒಂದು ರೀತಿಯ ಅಪಪ್ರಚಾರವಾಗುತ್ತಿತ್ತು. ಏನೆಂದರೆ, ಮಾನ್ಯಮುಖ್ಯಮಂತ್ರಿಗಳು ಹೈ-ಟೆಕ್ ಮುಖ್ಯಮಂತ್ರಿಗಳು, ಅವರು ಬೆಂಗಳೂರನ್ನು ಮಾತ್ರ ನೋಡುತ್ತಿದ್ದಾರೆ, ಬೇರೆಲ್ಲೂ ಕಣ್ಣು ತೆರೆಯುವುದಿಲ್ಲ ಎನ್ನುವ ಅಪಪ್ರಚಾರವಿತ್ತು. ನಮ್ಮ ಸರ್ಕಾರ ಬರುವ ಮೊದಲು ನಮ್ಮ ಗ್ರಾಮ ಪಂಚಾಯಿತಿ ವ್ಯವಸ್ಥೆ ಯಾವ ರೀತಿ ಇತ್ತು? ನಾವು ಅಧಿಕಾರ ಸ್ವೀಕಾರ ಮಾಡುವಾಗ, ಎಸ್.ಎಂ.ಕೃಷ್ಣಾರವರು ಅಧಿಕಾರಕ್ಕೆ ಬಂದಾಗ, ಪ್ರತಿ ಗ್ರಾಮ ಪಂಚಾಯಿತಿಗೆ ಸರ್ಕಾರದಿಂದ ಒಂದು ಲಕ್ಷ ರೂಪಾಯಿಗಳ ಅನುದಾನ ಮಾತ್ರ ಹೋಗುತ್ತಿತ್ತು. ಅದನ್ನು ಒಂದು ಲಕ್ಷ ರೂಪಾಯಿಗಳಿಂದ ಮೂರು ಲಕ್ಷ ರೂಪಾಯಿಗಳಿಗೆ ಏರಿಸಿದೆವು. ಈಗ ಮತ್ತೆ ಅದನ್ನು ಮೂರು ಲಕ್ಷದಿಂದ ಐದು ಲಕ್ಷ ರೂಪಾಯಿಗಳಿಗೆ ತಂದಿದ್ದು, ಗ್ರಾಮ ಪಂಚಾಯಿತಿಗಳಿಗೆ ಕಾರ್ಯಕಾರಿ ನಿರ್ವಹಣೆಯನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ಇಚ್ಛೆ ಅವರಲ್ಲಿ ಇದೆ. ಅದನ್ನು ನಾನು ರಾಜಕೀಯ ಇಚ್ಛಾಶಕ್ತಿ ಎಂದು ಹೇಳಬಯಸುತ್ತೇನೆ. ಯಾವುದೇ ಒಬ್ಬ ರಾಜಕಾರಣಿಗೆ ಆ ಒಂದು ಇಚ್ಛಾಶಕ್ತಿ ಬರಬೇಕು. ಆ ರಾಜಕೀಯ ಇಚ್ಛಾಶಕ್ತಿ ಇದ್ದಲ್ಲಿ ಮಾತ್ರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ತನ್ನ ನಿರ್ದಾಕ್ಷಿಣ್ಯವಾದ ನಿರ್ಣಯಗಳನ್ನು ತರಲು ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ನಾನು ಜೆ.ಹೆಚ್.ಪಟೇಲ್‌ರನ್ನು ಸ್ಮರಿಸುತ್ತೇನೆ. ರಾಜ್ಯದಲ್ಲಿ ಹೊಸ ಜಿಲ್ಲೆಗಳನ್ನು ನೇಮಕ ಮಾಡಬೇಕು ಎನ್ನುವ ನಮ್ಮ ಬೇಡಿಕೆ ಅನೇಕ ವರ್ಷಗಳಿಂದ ಇತ್ತು. ಅವರು ಅಂಥ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿ, ಹೊಸದಾಗಿ ಏಳು ಜಿಲ್ಲೆಗಳ ಅನುಷ್ಠಾನವನ್ನು ಮಾಡಿದರು. ಜಯಪ್ರಕಾಶ ಹೆಗಡೆಯವರೇ, ಹೆದರಬೇಡಿ, ನೀವು ಮಾಡಿರುವುದನ್ನೂ ನಾನು ಹೇಳುತ್ತೇನೆ, ನೀವು ರಾಜಕೀಯ ಇಚ್ಛಾಶಕ್ತಿ ಹೊಂದಿದ್ದರೆ ನಾವು ಅದನ್ನು ಪ್ರಶಂಸಿಸುತ್ತೇವೆ. ಆದರೆ ಆ ಇಚ್ಛಾಶಕ್ತಿ ಚುನಾಯಿತ ಪ್ರತಿನಿಧಿಗಳಿಗೆ ಮಾತ್ರ ಸೀಮಿತವಾಗಬಾರದು. ಆ ಇಚ್ಛಾಶಕ್ತಿ ಅಧಿಕಾರ ವರ್ಗದಲ್ಲೂ ಬರಬೇಕು. ಈಗ ಅದು ಹೆಚ್ಚಾಗಿ ಬರುತ್ತಿಲ್ಲ. ನಾವು ಅದನ್ನು ಬರುವಂತೆ ಮಾಡಬೇಕಾಗಿದೆ. ಅಧಿಕಾರ ವರ್ಗದಲ್ಲಿ ಅದು ಇಲ್ಲದಿದ್ದರೆ, ನಾವು ಎಷ್ಟೇ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದರೂ ಕೂಡ ಸಾಧ್ಯವಾಗುವುದಿಲ್ಲ. ಏಕೆಂದರೆ, ಐದು ಬೆರಳು ಒಂದೇ ರೀತಿ ಇರುವುದಿಲ್ಲ.

ಇಷ್ಟೊಂದು ದೊಡ್ಡ ರೂಪದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಸರ್ಕಾರದವರು ಹಾಕಿಕೊಂಡು, ಅದು ಸ್ವಚ್ಛ ಗ್ರಾಮ ಯೋಜನೆ ಇರಲಿ ಅಥವಾ ಬೇರೆ ಯಾವುದೇ ಯೋಜನೆ ಇರಲಿ ಅಥವಾ ಸಿಬ್ಬಂದಿಯನ್ನು ನೇಮಕ ಮಾಡುವಾಗ, ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಸರ್ಕಾರದಿಂದ ಹೋಗತಕ್ಕಂಥ ಹಣ ಯಾವುದೇ ಗ್ರಾಮದ ಮೂಲೆಯಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆಗಳೂ ಅದನ್ನು ಮುಟ್ಟಿಸತಕ್ಕಂಥ ಒಂದು ಸಂಕಲ್ಪವನ್ನು ನಾವು ಮಾಡಿದ್ದೇವೆ. ಹೀಗಿರುವಾಗ, ಏಕಾಏಕಿಯಾಗಿ, ಮುಖ್ಯಮಂತ್ರಿಗಳು ಬೆಂಗಳೂರನ್ನು ಮಾತ್ರ ನೋಡುತ್ತಾರೆ, ಅವರು ಬೇರೆಲ್ಲಿಯೂ ಹೋಗುವುದಿಲ್ಲವೆಂದರೆ ಹೇಗೆ? ನಮ್ಮ ಮುಖ್ಯಮಂತ್ರಿಗಳು, ಅವರ ಈ ಪ್ರಾಯದಲ್ಲಿ, ತಿಂಗಳಲ್ಲಿ ಎಷ್ಟು ಜಿಲ್ಲೆಗಳಲ್ಲಿ ಸಂಚಾರ ಮಾಡಿದ್ದಾರೆ. ಅವರಲ್ಲಿರತಕ್ಕಂಥ ತಾಳ್ಮೆ, ಕರ್ತವ್ಯ ಪ್ರಜ್ಞೆ, ಮತ್ತು ಆರೋಗ್ಯ ಶಕ್ತಿಯನ್ನು ದೇವರು ಇನ್ನಷ್ಟು ಹೆಚ್ಚು ಕೊಡಲಿ ಎಂದು ನಾವು ದೇವರಲ್ಲಿ ಬೇಡುತ್ತೇವೆ. ಏಕೆಂದರೆ, ಅವರು ಅಷ್ಟೊಂದು ಹೊಣೆಗಾರಿಕೆಯನ್ನು ಪ್ರದರ್ಶಿಸಿ, ಎಂಥ ಸಂಕಟ ಪರಿಸ್ಥಿತಿಯಲ್ಲೂ ಕೂಡ ಕರ್ನಾಟಕ ಘನತೆಯನ್ನು ಕೆಳಗಿಸಲಿಲ್ಲ. ಕರ್ನಾಟಕದ ಘನತೆಯನ್ನು ಹೆಚ್ಚುಹೆಚ್ಚಾಗಿ ಎತ್ತಿಹಿಡಿದು, ಪ್ರತಿಯೊಂದು ಸಂದರ್ಭದಲ್ಲೂ ತಾಳ್ಮೆಯನ್ನು ತಂದುಕೊಂಡು ಎಲ್ಲ ರೀತಿಯಲ್ಲಿಯೂ ಕೂಡ ಸೌಹಾರ್ದತೆಯಿಂದ ನಾವು ಹೋಗುತ್ತಿದ್ದೇವೆ. ಈ ರಾಜ್ಯದ ಬಡ ಜನರಿಗೆ ಕುಡಿಯುವ ನೀರು, ಇರಲಿಕ್ಕೆ ಆಶ್ರಯವಾಗಿ ಮನೆಗಳನ್ನು ಕಟ್ಟಿಸುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಇವತ್ತು ರಸ್ತೆಗಳ ಪರಿಸ್ಥಿತಿಯನ್ನು ನೋಡುವುದಾದರೆ, ಈವರೆಗೆ ಕಾಣದೇ ಇರತಕ್ಕಂಥ ಅಭಿವೃದ್ಧಿ ಕೆಲಸಗಳು ನಮ್ಮ ರಸ್ತೆಗಳಲ್ಲಿ ಆಗಿರುವಂಥಾದ್ದನ್ನು ನಾವು ಕಾಣಬಹುದು. ಕಾಂಕ್ರೀಟೀಕರಣದ ಕೆಲಸವನ್ನು ನಮ್ಮ ಜಿಲ್ಲೆಯಲ್ಲಿ ನಾವು ಪ್ರಾರಂಭಿಸಿದ್ದೇವೆ. ಬೇರೆ ಕಡೆಗಳಲ್ಲಿ ಕೂಡ ಅದನ್ನು ಪ್ರಯೋಗ ಮಾಡಬಹುದು. ನಮ್ಮ ಜಿಲ್ಲೆಯಲ್ಲಿ ನಾವು ಏಕೆ ಕಾಂಕ್ರೀಟೀಕರಣಕ್ಕೆ ಶರಣು ಹೋಗಬೇಕಾಯಿತು ಎಂದರೆ ನಮ್ಮ ಜಿಲ್ಲೆಯಲ್ಲಿ ಬರತಕ್ಕಂಥ ತೀವ್ರವಾದ ಮಳೆಗೆ ಆಧಾರಿತವಾಗಿ ನಮ್ಮ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಅದಕ್ಕೆ ಕೋಟ್ಯಾಂತರ ರೂಪಾಯಿ ಮೊತ್ತದ ಹಣದ ಅವಶ್ಯಕತೆ ಇದೆ. ಅದಕ್ಕೆ ನಾವು ರಾಜ್ಯ ಸರ್ಕಾರದ ಅನುದಾನವೊಂದನ್ನೇ ಕಾಯಲಿಲ್ಲ. ಸಂಸತ್ ಸದಸ್ಯರ ನಿಧಿಯಿಂದ ಆ ಕೆಲಸವನ್ನು ಮಾಡಿದ್ದೇವೆ. ಯಾವ ಕಾಮಗಾರಿಗಳನ್ನು, ಯಾವ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರದಲ್ಲಿ ಹಣದ ಕೊರತೆ ಇದೆಯೋ, ಆ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸಂಸತ್ ಸದಸ್ಯರ ನಿಧಿಯಿಂದ ಅದನ್ನು ಭರಿಸಿಕೊಂಡಿದ್ದೇವೆ ಎನ್ನುವುದನ್ನು ನಾನು ಬಹಳ ಹೆಮ್ಮೆಯಿಂದ ಹೇಳಬಯಸುತ್ತೇನೆ. ಇನ್ನು ನಾನು ಹೆಚ್ಚು ಮಾತನಾಡುವುದಿಲ್ಲ. ಎಲ್ಲಕ್ಕಿಂತಲೂ ಮಹತ್ವಪೂರ್ಣವಾಗಿ ಒಂದು ಅಂಶವನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದಾಗ ನಾವು, ಈ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸುವ ಬಗ್ಗೆ ಒಂದು ಘೋಷಣೆಯನ್ನು ಮಾಡಿದ್ದೆವು. ಅಂದು ನಾನು ಈ ಬಗ್ಗೆ ಸದನದಲ್ಲಿ ಭಾಷಣ ಮಾಡಿದಾಗ, ಅಂದು ಮುಖ್ಯಮಂತ್ರಿಗಳು ಮಾಹಿತಿ ತಂತ್ರಜ್ಞಾನವನ್ನು ಅಳವಡಿಸುವ ಬಗ್ಗೆ ಅವರ ಚಿಂತನೆಯನ್ನು ಮುಂದಿಟ್ಟಾಗ, ನಾವು ಅನೇಕ ಟೀಕೆಗೊಳಗಾಗಿದ್ದೆವು. ಹೈ-ಟೆಕ್ ಮುಖ್ಯಮಂತ್ರಿಗಳು, ಹೈ-ಟೆಕ್ ಸಭಾಪತಿಯವರು, ಇವರೆಲ್ಲಾ ಹೈ-ಟೆಕ್ ನಲ್ಲಿದ್ದಾರೆ, ಕಂಪ್ಯೂಟರ್ ಯುಗದಲ್ಲಿದ್ದಾರೆ ಎನ್ನುವ ಟೀಕೆಗಳು ಬಂದಿದ್ದವು. ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ರಾಜ್ಯದ ಮೂಲ್‌ಮೂಲೆಯಲ್ಲಿ ಕಂಪ್ಯೂಟರ್‌ಗಳಿಲ್ಲದೇ ಕೆಲಸ ನಡೆಯದೇ ಇರುವ ಪರಿಸ್ಥಿರಿಗೆ ನಾವು ಬಂದಿದ್ದೇವೆ. ನಮ್ಮ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸುವಲ್ಲಿ, ಬೆಂಗಳೂರನ್ನು

'ಸಿಲಿಕಾನ್ ವ್ಯಾಲಿ' ಎಂದು ಜಗತ್ತಿನ ಮ್ಯಾಪಿನಲ್ಲಿ ಗುರುತಿಸುವಂತಾಗಿರುವುದಕ್ಕೆ ಈ ಮಾಹಿತಿ ತಂತ್ರಜ್ಞಾನವೇ ಕಾರಣ. ನಮ್ಮಲ್ಲಿರತಕ್ಕಂಥ ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ ಕಂಪನಿಗಳು ಮತ್ತು ಹಾರ್ಡ್‌ವೇರ್ ಡೆವೆಲಪ್‌ಮೆಂಟ್ ಕಂಪನಿಗಳು ಸುಮಾರು 15 ರಿಂದ 30 ಸಾವಿರ ಕೋಟಿ ರೂಪಾಯಿಗಳಷ್ಟು ರಫ್ತು ಮಾಡುವ ಪರಿಸ್ಥಿತಿಗೆ ಬಂದಿದ್ದೇವೆ. ಮೊದಲು ನಾವು ಏಕೆ ಇದನ್ನು ಚಿಂತನೆ ಮಾಡಲಿಲ್ಲ? ಏಕೆ ಜನ ಸ್ವೀಕಾರ ಮಾಡಲಿಲ್ಲ? ಅನವಶ್ಯಕವಾದ ಅಪಪ್ರಚಾರಗಳಾದವು. ಇವತ್ತು ಮಾಹಿತಿ ತಂತ್ರಜ್ಞಾನ ಅಳವಡಿಕೆ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಅವಶ್ಯಕ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ತೋರಿಸಿಕೊಟ್ಟಿದ್ದಾರೆ. ಆದರೆ ಇಚ್ಛಾಶಕ್ತಿಯ ಕೊರತೆ ಅಧಿಕಾರ ವರ್ಗದಲ್ಲಿ ಹೆಚ್ಚೆಚ್ಚು ಬೆಳೆಯುತ್ತಿದೆ. ಇ-ಗವರ್ನೆನ್ಸ್ ತರಬೇಕು ಎಂದ ನಾನು ಪ್ರತಿ ವಿಧಾನ ಸಭಾ ಅಧಿವೇಶನದಲ್ಲೂ ಪ್ರತಿ ಇಲಾಖೆಗಳಿಗೂ ಪ್ರಶ್ನೆಗಳನ್ನು ಕೇಳುತ್ತಾ ಹೋಗಿದ್ದೆ. ಯಾವಯಾವ ಇಲಾಖೆಗಳು ತಮ್ಮ ಇಲಾಖೆಯಲ್ಲಿ ಮಾಹಿತಿ ತಂತ್ರಜ್ಞಾನದ ಅಳವಡಿಕೆಗೆ ಕಾರ್ಯೋನ್ಮುಖವಾಗಿವೆ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೆ. ಯಾವಯಾವ ಮಂತ್ರಿಗಳು ಇ-ಮೇಲ್ ವ್ಯವಸ್ಥೆಯನ್ನು ರೂಪಿಸಿದ್ದಾರೆ ಎಂದು ನಾನು ಹೇಳಿದ್ದೇನೆ. ಆ ಒಂದು ರಾಜಕೀಯ ಇಚ್ಛಾಶಕ್ತಿ ನಮ್ಮ ಮುಖ್ಯಮಂತ್ರಿಗಳಲ್ಲಿ ಇದ್ದುದರಿಂದಾಗಿ, ಇವತ್ತು ಹಂತಹಂತವಾಗಿ ಅದನ್ನು ಬೆಳೆಸಲು ಸಾಧ್ಯವಾಯಿತು. ನಾನು ಅನೇಕ ಬಾರಿ ಇ-ಮೇಲ್‌ನಿಂದ ಮುಖ್ಯಮಂತ್ರಿಗಳಿಗೆ ಕಳುಹಿಸಿದಂಥ ಪತ್ರಕ್ಕೆ ಅವರು ನೇರವಾಗಿ ಉತ್ತರವನ್ನು ಕೊಡುತ್ತಿದ್ದರು. ಅದು ಗ್ರಾಮೀಣ ಇಲಾಖೆಯಿಂದ, ಇಂಧನ ಇಲಾಖೆಯಿರಲಿ, ಯಾವಯಾವ ಇಲಾಖೆಗಳಲ್ಲಿ ಇ-ಮೇಲ್ ವ್ಯವಸ್ಥೆ ಇದೆ, ಅಲ್ಲಿಗೆ ಇಂಟರ್‌ನೆಟ್ ಮೂಲಕ, ಇ-ಮೇಲ್ ವ್ಯವಸ್ಥೆಯಿಂದ ನಾವು ಕಳುಹಿಸಿದಂಥ ಪತ್ರಕ್ಕೆ ಉತ್ತರ ಪಡೆಯಬಹುದು. ಅದು ನೀರು ಸರಬರಾಜು ಯೋಜನೆಯಲ್ಲಿ ಬರತಕ್ಕಂಥ ಅನುದಾನವಿರಬಹುದು ಅಥವಾ ಬೇರೆಬೇರೆ ರೀತಿಯಲ್ಲಿ .....

ಶ್ರೀ ಎನ್. ಯೋಗೀಶ್ ಭಟ್:- ಸಭಾಪತಿಗಳೇ, ಒಂದು ನಿಮಿಷ. ತಾವು ಏನು ಹೇಳಿದಿರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನನ್ನ ಒಂದು ಪ್ರಶ್ನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳಿಗಿರುವಂಥ ಕಾಳಜಿ ಉಳಿದ ಮಂತ್ರಿಗಳಿಗೆ, ಉಳಿದ ಇಲಾಖೆಗಳಿಗೆ ಏಕಿಲ್ಲ? ಅವರು ಏಕೆ ಅದನ್ನು ಅನುಷ್ಠಾನಕ್ಕೆ ತಂದಿಲ್ಲ? ಈ ವೈಫಲ್ಯತೆಯಿಂದಾಗಿ, ಅದು ಅಕ್ಷರಶ: ಅನುಷ್ಠಾನಕ್ಕೆ ಬಂದಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಯು.ಆರ್. ಸಭಾಪತಿ:- ಯೋಗೀಶ್ ಭಟ್‌ರವರ ಕಳಕಳಿ ನನ್ನಲ್ಲಿಯೂ ಇದೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಎಲ್ಲದಕ್ಕೂ ಒಂದು ರಾಜಕೀಯ ಇಚ್ಛಾಶಕ್ತಿ ಬರಬೇಕು. ಇದಕ್ಕೆ ನೀವು ಕೇವಲ ಮಂತ್ರಿಗಳನ್ನು ದೂಷಿಸಬೇಕಾಗಿಲ್ಲ. ಎಷ್ಟೋ ಮಂದಿ ಅಧಿಕಾರ ವರ್ಗದವರು ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇ-ಗವರ್ನೆನ್ಸ್, ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆಯ ಘೋಷಣೆ ಸರ್ಕಾರದಿಂದ ಆಗಿದೆ, ಅದನ್ನು ನಾವು ಅನುಷ್ಠಾನಕ್ಕೆ ತರಬಾರದು ಎಂದು ಇಲಾಖಾ ಕಾರ್ಯದರ್ಶಿಗಳು ಕಾರ್ಯೋನ್ಮುಖರಾಗಲಿಲ್ಲ. ಇದರ ಜೊತೆ, ಹಣಕಾಸು ಇಲಾಖೆಯ ಕಾರ್ಯದರ್ಶಿಗಳೂ ಸಹ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಅವರು ಇದನ್ನು ಲಾಸ್ಟ್ ಸ್ಟೇಜ್ ಎಂದು ಇಟ್ಟುಕೊಂಡಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ಅಧಿಕಾರಿಗಳು ಒಂದು ಸಾರಿ ನೌಕರಿಗೆ ಸೇರಿದರೆ 30 ವರ್ಷ ಗಟ್ಟಿಯಾಗಿ ಇರುತ್ತೇವೆ ಎನ್ನುವುದು ಅವರ ಮನಸ್ಸಿನಲ್ಲಿದೆ. ಆದರೆ ರಾಜಕಾರಣಿಗಳಿಗೆ

ಹಾಗಲ್ಲ. ಅವರು ಐದು ವರ್ಷಗಳಿಗೊಮ್ಮೆ ಚುನಾವಣೆಗೆ ಹೋಗಬೇಕು ಅಥವಾ ಎರಡು ವರ್ಷಗಳಿಗೂ ಚುನಾವಣೆಗೆ ಹೋಗುವ ಅವಕಾಶವಿದೆ. ಹೀಗಾಗಿ ರಾಜಕಾರಣಿಗಳಿಗೆ ಇಚ್ಛಾಶಕ್ತಿ ಇದೆ. ಅಧಿಕಾರಿಗಳಿಗೂ, ನಮಗೂ ಇರುವ ವ್ಯತ್ಯಾಸ ಇಷ್ಟೇ.

ಶ್ರೀ ಯು.ಆರ್. ಸಭಾಪತಿ:- ಕಂಪ್ಯೂಟರ್ ಕಲಿಯಬೇಕು ಎಂದರೆ ಅದಕ್ಕೆ ತುಂಬಾ ತಲೆ ಕೆಡಿಸಿಕೊಳ್ಳಬೇಕಾದುದಿಲ್ಲ. ನಮ್ಮ ಜಿಲ್ಲೆಯಲ್ಲಿ ಒಂದನೇ ಕ್ಲಾಸಿನ ಮಗು ಕೂಡ ಗಣಕ ಯಂತ್ರವನ್ನು ಹಿಡಿದುಕೊಂಡು, ಕೈ ಆಡಿಸಲು ಶುರುಮಾಡಿದೆ. ನಾಲ್ಕನೇ ಕ್ಲಾಸಿನವರೆಗೆ ಕಲಿತಂತ ಒಬ್ಬ ಹುಡುಗ, ಇವತ್ತು ಗಣಕ ಯಂತ್ರದಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿ ನಮ್ಮ ರಾಜ್ಯದಲ್ಲಿ ಮೂಡಿ ಬಂದಿದ್ದಾನೆ. ಆದ್ದರಿಂದ, ನಮ್ಮ ಲೆಜಿಸ್ಲೇಟಿವ್ ಡಿಪಾರ್ಟ್‌ಮೆಂಟ್, ಎಲ್ಲಾ ಚುನಾಯಿತ ಪ್ರತಿನಿಧಿಗಳು, ಅಧಿಕಾರ ವರ್ಗದವರು ಇದರ ಬಗ್ಗೆ ಸ್ವಲ್ಪ ತಲೆಕೆಡಿಸಿಕೊಳ್ಳಬೇಕು. ಏಕೆಂದರೆ, ಇ-ಗವರ್ನೆನ್ಸ್‌ನ್ನು ನಾವು ಕಾರ್ಯರೂಪಕ್ಕೆ ತಂದಾಗ ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಸಾಧ್ಯವಿದೆ. ಭ್ರಷ್ಟಾಚಾರ ಸಂಪೂರ್ಣವಾಗಿ ನಿಂತುಹೋಗುತ್ತದೆ ಎಂದು ನಾನು ಹೇಳುವುದಿಲ್ಲ ಆದರೆ ಭ್ರಷ್ಟಾಚಾರವನ್ನು ಸಾಧ್ಯವಾದಷ್ಟೂ ಕಡಿಮೆಗೊಳಿಸಲು ಇದರಿಂದ ಸಾಧ್ಯ. ದೀರ್ಘ ಕಾಲದಿಂದ ಕಡತಗಳನ್ನು ವಿಶ್ಲೇಷಣೆ ಮಾಡತಕ್ಕಂಥ ನಮ್ಮ ಇಂದಿನ ಪರಿಸ್ಥಿತಿಯನ್ನು ನಿಭಾಯಿಸಲು ಈ ಗಣಕೀಕರಣ ವ್ಯವಸ್ಥೆಯಿಂದ ಸುಲಭವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿಗೆ ಗಣಕೀಕರಣ ವ್ಯವಸ್ಥೆಯನ್ನು ತಂದಾಗ, ನನ್ನ ತಾಲ್ಲೂಕು ಪಂಚಾಯಿತಿಗೆ ಗಣಕೀಕರಣ ವ್ಯವಸ್ಥೆಯನ್ನು ತಂದಾಗ, ನನ್ನ ನಗರಸಭೆಗೆ ಗಣಕೀಕರಣ ವ್ಯವಸ್ಥೆಯನ್ನು ತಂದಾಗ ಅಲ್ಲಿ ನಾವು ನಮ್ಮ ಜನರಿಗೆ ಕೊಡತಕ್ಕಂಥ ಸೇವೆ ಅತ್ಯಂತ ಶೀಘ್ರಗತಿಯಲ್ಲಿ ಕೊಡಲು ಮತ್ತು ಮುಂದೆ ಹೋಗಲು ಸಾಧ್ಯವಾಗುತ್ತದೆ. ಚುನಾಯಿತ ಪ್ರತಿನಿಧಿಗಳಾದ ನಾವು ಗಣಕೀಕೃತ ವ್ಯವಸ್ಥೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡರೆ ನಮಗೆ ಬೇಕಾದ ಮಾಹಿತಿ ಸಿಗುತ್ತದೆ. ನಮಗೆ ಮುಖ್ಯವಾಗಿ ಬೇಕಾಗಿರುವುದು ಮಾಹಿತಿ. ಈ ಮಾಹಿತಿ ಪಡೆಯಲು ಟೆಲಿಫೋನ್ ಮಾಡಿ ದೂರದಲ್ಲಿರತಕ್ಕಂಥ ಅಧಿಕಾರಿಗಳನ್ನು ಕೇಳಬೇಕಾಗಿಲ್ಲ. ನಾವು ಮಾಹಿತಿಗಳನ್ನು ಸಂಗ್ರಹ ಮಾಡಿ, ನಮ್ಮ ಸಾಫ್ಟ್‌ವೇರ್‌ನಲ್ಲಿ ಮೂಡಿಸಿದರೆ, ನಾವು ಯಾವ ರೀತಿಯಲ್ಲಾದರೂ ಮುಂದೆ ಹೋಗಲು ಸಾಧ್ಯವಾಗುತ್ತದೆ. ನಾನು ಒಂದು ಪ್ರಯೋಗ ಮಾಡಿದೆ. ಜನಸಾಮಾನ್ಯರನ್ನು ಮುಖ್ಯಮಂತ್ರಿಗಳಿಗೆ ಹೇಗೆ ಸಂಪರ್ಕಿಸಬಹುದು ಎಂದು ಪ್ರಯೋಗ ಮಾಡಿದೆ. ನಾನು ನನ್ನ ಕಛೇರಿಯಲ್ಲಿ ಗಣಕೀಕರಣದ ವ್ಯವಸ್ಥೆ ಮಾಡಿ, ನನ್ನ ಕಛೇರಿಯಿಂದ ನಮ್ಮ ಗ್ರಾಮ ಪಂಚಾಯಿತಿ ಸದಸ್ಯರುಗಳನ್ನು ಕೂಡಿಸಿ, ಮುಖ್ಯಮಂತ್ರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸಿಂಗ್ ಕೂಡ ಮಾಡಿದ್ದೆ. ಇದನ್ನು ನಾನು ನಿಮಗೆ ನೆನಪಿಸಿಕೊಡುತ್ತಿದ್ದೇನೆ.

12.40 ಪಿಎಂ

ಆ ನಮ್ಮ ಗ್ರಾಮ ಪಂಚಾಯತಿ ಸದಸ್ಯರು ಉಡುಪಿಯಂಥ ಆ ಸಣ್ಣ ಊರಿನಲ್ಲಿ ಕುಳಿತುಕೊಂಡು ಬೆಂಗಳೂರಿನಲ್ಲಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳಿಗೆ ನಿರಾತಂಕವಾಗಿ ಪ್ರಶ್ನೆ ಕೇಳಿ ಅವರಿಂದ ಉತ್ತರ ಪಡೆಯುತ್ತಾರೆಂದಾದರೆ ಇದಕ್ಕಿಂತ ದೊಡ್ಡ ಸೌಲಭ್ಯ ಏನಿದೆ? ಇನ್ನೊಂದು ಪ್ರಯೋಗವನ್ನು ಮುಂದಿನ 2-3 ತಿಂಗಳಲ್ಲಿ ಮಾಡಬಯಸುತ್ತಿದ್ದೇನೆ. ಅದೇನೆಂದರೆ ಗ್ರಾಮಸಭೆಗಳನ್ನೇ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಂಭಾಷಣೆ ಮಾಡತಕ್ಕಂಥ ಒಂದು ಆಧುನಿಕ ತಂತ್ರಜ್ಞಾನದ ವ್ಯವಸ್ಥೆಗೆ ನಮ್ಮ ಸರ್ಕಾರವನ್ನು ತೊಡಗಿಸಿಕೊಳ್ಳಲಿಕ್ಕೆ ನನ್ನ ಒಂದು ಪ್ರಯೋಗವನ್ನು ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಆದರೆ, ವಿಧಾನಸಭೆಯಲ್ಲಿ ಉತ್ತರ ಸಿಗುವುದಿಲ್ಲ, ಏನು ಮಾಡ್ತೋಣ.

ಶ್ರೀ ಯು.ಆರ್. ಸಭಾಪತಿ:- ಶ್ರೀ ಶಿವಾನಂದ ಪಾಟೀಲರು ಹೇಳಿದಂಥ ಮಾತನ್ನು ನಾನು ಒಪ್ಪುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಅದು ನಮ್ಮ ವ್ಯವಸ್ಥೆ, ಅದನ್ನು ಸರಿಪಡಿಸಲಿಕ್ಕೆ ನಾವೆಲ್ಲರೂ ಒಟ್ಟಿಗೆ ದುಡಿಯೋಣ, ಯಾವ ರೀತಿಯಲ್ಲಿ ಅದಕ್ಕೆ ಆಧುನಿಕತೆಯನ್ನು ಬಳಸಿ ಅದನ್ನು ಮುಂದಕ್ಕೆ ತರೋಣ ಎನ್ನುವುದರ ಬಗ್ಗೆ ನಾವು ಚಿಂತನೆ ನಡೆಸೋಣ. ನಾನು ಇಲ್ಲ ಎಂದು ಹೇಳುವುದಿಲ್ಲ, ಲೋಪದೋಷಗಳನ್ನು ಸರಿಪಡಿಸಲಿಕ್ಕೆ ಒಮ್ಮೆಂದಲೇ ಹೇಗೆ ಸಾಧ್ಯ? ಮುಖ್ಯಮಂತ್ರಿಗಳ ರಾಜಕೀಯ ಇಚ್ಛಾಶಕ್ತಿಯನ್ನು ಎಲ್ಲಾ ಮಂತ್ರಿಗಳು ಕೂಡ ಪಡೆಯಬೇಕು, ಅವರು ಸರ್ವಜ್ಞರಾಗಬೇಕು, ನಾವು ಎಲ್ಲಾ ಶಾಸಕರು ಸರ್ವಜ್ಞರಾಗಬೇಕು ಎಂದು ಹೇಳಲಿಕ್ಕೆ ಆಗುವುದಿಲ್ಲ. ಇದು ಹಂತಹಂತವಾಗಿ ನಾವು ಮುಂದುವರಿಯಬೇಕಾದಂಥ ಅನಿವಾರ್ಯ ಪರಿಸ್ಥಿತಿಯಲ್ಲಿ ನಾವು ಮುಂದೆ ಹೋಗಬೇಕೆನ್ನುವಂಥ ಮಾತಿನೊಂದಿಗೆ ನಾನು ಮಾಹಿತಿ ತಂತ್ರಜ್ಞಾನ ಇಲಾಖೆಯ ವರದಿಯನ್ನು ಓದಿದೆ. ಮಾಹಿತಿ ತಂತ್ರಜ್ಞಾನ ಇಲಾಖೆಗೆ ಕೊಟ್ಟಿರತಕ್ಕಂಥ ಅನುದಾನ ಬಹಳ ಕಡಿಮೆ ಆಗಿದೆ, ಅದನ್ನು ಹೆಚ್ಚಿಗೆ ಮಾಡಬೇಕು ಆ ವರದಿಯ ಆಧಾರದ ಮೇಲೆ ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸಬೇಕೆಂದು ಹೇಳಿಕೊಂಡು, ಕೊನೆಯದಾಗಿ ಮೀನಿಗಾರಿಕೆ ಇಲಾಖೆ ಬಗ್ಗೆ ಹೇಳಬಯಸುತ್ತೇನೆ. ಏಕೆಂದರೆ ನಾನು ಒಬ್ಬ ಮೀನುಗಾರನಾಗಿ ನನ್ನ ಮೀನುಗಾರಿಕಾ ಸಮಾಜದ ಒಂದು ಭಾವಣೆಯನ್ನು ಈ ಸದನದಲ್ಲಿ ಹೇಳದೇ ಹೋದರೆ ಅದು ತಪ್ಪಾಗುತ್ತದೆಂದು ಹೇಳಬಯಸುತ್ತೇನೆ. ಯಾವ ರೀತಿಯಲ್ಲಿ ರೈತರ ಬಗ್ಗೆ ನಾವು ಕಾಳಜಿಯನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದೇವೆ ಅದೇ ರೀತಿ ಇವತ್ತು ಮೀನುಗಾರಿಕೆಗೂ ಕೂಡ ನಮ್ಮ ಸರ್ಕಾರ ಕಾಳಜಿಯನ್ನು ವ್ಯಕ್ತಪಡಿಸಿದೆ. ನಮ್ಮ ಸರ್ಕಾರ ಮೀನುಗಾರಿಕೆಯವರು ಉಪಯೋಗಿಸತಕ್ಕಂಥ ಯಾಂತ್ರಿಕ ದೋಣಿಗಳಿಗೆ ಕೊಡತಕ್ಕಂಥ ರಿಯಾಯಿತಿಯನ್ನು ಮುಂದುವರಿಸಿಕೊಂಡು ಬಂದಿದೆ. ಇದಕ್ಕೆ ಹಿಂದಿನ ಸರ್ಕಾರ ಕೂಡ ಸಹಕರಿಸಿದೆ ಇಲ್ಲ ಎಂದು ಹೇಳುವುದಿಲ್ಲ. ಅದನ್ನು ಮುಂದುವರಿಸಿಕೊಂಡು ನಾವು ಬಂದಿದ್ದೇವೆ. ಈ ಒಂದು ಪರಿಸ್ಥಿತಿಯಲ್ಲಿ ಇಡೀ ದೇಶದಾದ್ಯಂತ ಮೀನುಗಾರಿಕೆಗೆ ಸಮರ್ಥವಾದಂಥ ಒಂದು ನೀತಿಯನ್ನು ನಾವು ರೂಪಿಸಬೇಕಾಗಿದೆ. ಆ ನೀತಿಯನ್ನು ರೂಪಿಸಿದ್ದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಾವು ಕಾರ್ಯನಿರ್ವಹಿಸಬಹುದು ಎನ್ನುವ ಮಾತನ್ನು ಈ ಸದನದ ಮುಂದೆ ಹೇಳಬಯಸುತ್ತೇನೆ. ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ಪರಿಸ್ಥಿತಿ ಮೀನುಗಾರರಿಗೆ ಉದ್ಭವವಾಗುತ್ತದೆ.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು). ಈ ಸಂದರ್ಭದಲ್ಲಿ ರಾಷ್ಟ್ರದ ಎಲ್ಲಾ ಮೀನುಗಾರಿಕ ಮಂತ್ರಿಗಳನ್ನು, ಮೀನುಗಾರಿಕಾ ಇಲಾಖೆಯ ಅಧಿಕಾರಿವರ್ಗದವರನ್ನು ಸೇರಿಸಿ ನಾವು ಇಲ್ಲಿ ಒಂದು ಸಭೆ ಕರೆದು 2-3 ದಿವಸಗಳವರೆಗೆ ಚಿಂತನ-ಮಂಥನ ನಡೆಸಿ ಯಾವ ರೀತಿ ಮೀನುಗಾರಿಕೆಯನ್ನು ಉದ್ಧಿಮೆಯಾಗಿ ಮುಂದುವರಿಸಿಕೊಂಡು ಹೋಗಬಹುದು, ಇವತ್ತು ಇಷ್ಟೊಂದು ಕೊರತೆ ಇದ್ದರೂ ಕೂಡ ಸುಮಾರು 150 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯವನ್ನು ಮೀನುಗಾರಿಕೆ ಉದ್ದಿಮೆಯಿಂದ ನಾವು ಪಡೆಕೊಳ್ಳುತ್ತಿದ್ದೇವೆ. ಆದರೆ ಅದನ್ನು ಇನ್ನೂ ಹೆಚ್ಚಿಗೆ ಮಾಡಲಿಕ್ಕೆ ನಮ್ಮಿಂದ ಆಗಲಿಲ್ಲ. ಏಕೆ? ಕಾಲಕಾಲಕ್ಕೆ ಬರತಕ್ಕಂಥ ಮೀನಿನ ಸಂಪಾದನೆ ಕಡಿಮೆಯಾಗುತ್ತಾ ಹೋಗಿದೆ. ಅದಕ್ಕೆ ಬೇರೆ ಬೇರೆ

ಕಾರಣಗಳು ಇರುಬಹುದು. ಅದರ ಬಗ್ಗೆ ನಾವು ಅಧ್ಯಯನ ಮಾಡಲಿಲ್ಲ. ಇದರ ಅಧ್ಯಯನದ ಅವಶ್ಯಕತೆ ಇದೆ. ಇವತ್ತು ಹೊಸ ತಾಂತ್ರಿಕತೆಯಿಂದ ರೈತರು ಬೆಳೆದಂಥ ಕೃಷಿಗೆ ನಾವು ಆದ್ಯತೆಯನ್ನು ಕೊಡುತ್ತಾ ಬಂದಿದ್ದೇವೆ. ಅದೇ ಒಂದು ಹೊಸ ಆದ್ಯತೆಯನ್ನು ಮೀನುಗಾರಿಕಾ ಇಲಾಖೆಗೂ ನಾವು ಕೊಡುತ್ತಾ ಬಂದರೆ ಕರಾವಳಿಯಲ್ಲಿರತಕ್ಕಂಥ ಸುಮಾರು ಮೂರೂವರೆ ಲಕ್ಷ ಮೀನುಗಾರರು ಹಾಗೂ ಒಳನಾಡಿನಲ್ಲಿ ಮೀನುಗಾರಿಕೆ ಉದ್ದಿಮೆಯನ್ನು ನಂಬಿರತಕ್ಕಂಥ ಜನಸಾಮಾನ್ಯ ಮೀನುಗಾರರಿಗೆ ಹೊಸ ಆರ್ಥಿಕ ಚೈತನ್ಯವನ್ನು ಕೊಡಲಿಕ್ಕೆ ಆಗುತ್ತದೆ. ಈ ದಿಶೆಯಲ್ಲಿ ಸರ್ಕಾರ ಕಾರ್ಯಪ್ರಮುಖವಾಗಬೇಕೆನ್ನುವ ಮಾತಿನೊಂದಿಗೆ ನಾನು 2003–04ರ ಮುಂಗಡ ಪತ್ರದ ಬೇಡಿಕೆಗಳ ಮೇಲಿನ ಚರ್ಚೆ ಏನು ಇದೆ, ಈ ಚರ್ಚೆಯನ್ನು, ಈ ಬೇಡಿಕೆಗಳ ವರದಿಯನ್ನು ನಾವು ನೋಡುವಾಗ ಈ–ವರದಿಗಳ ಪರಿಣಾಮಕಾರಿ ಅನುಷ್ಠಾನವನ್ನು ಈ ಸದನ ಒಮ್ಮತದಿಂದ ಸ್ವೀಕಾರ ಮಾಡಬೇಕು. ಈ ಸದನದಿಂದ ಹೋಗಿರತಕ್ಕಂಥ ಸಂದೇಶದ ಮೂಲಕ ಎಲ್ಲಾ ಅಧಿಕಾರಿ ವರ್ಗದವರು ಕೂಡ ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಪ್ರತಿಯೊಂದು ವಿಷಯ ಸಮಿತಿಯಲ್ಲಿಯೂ ಸಭೆಯ ಪ್ರಾರಂಭದಲ್ಲಿಯೇ ಹಿಂದಿನ ವರ್ಷಗಳ ವರದಿಯನ್ನು ತಂದು – 'ಇದನ್ನು ಏಕೆ ಅನುಷ್ಠಾನಕ್ಕೆ ತರಲಿಲ್ಲ' ಎಂದು ಕೇಳುವುದರೊಂದಿಗೆ ನಾವು ಚರ್ಚೆಯನ್ನು ಪ್ರಾರಂಭಿಸುತ್ತಿದ್ದೇವೆ. ಇದು ಆಗಬಾರದು. ನನ್ನದೇ ಆದಂಥ ಒಂದು ವಿಚಾರದಲ್ಲಿ ನಾನು ಸ್ಟಾಟಿಸ್ಟಿಕಲ್ ಇನ್‌ಫಾರ್ಮೇಷನ್ ಪಡೆದುಕೊಂಡ ಪ್ರಕಾರ ನಾವು ಏನು ವಿಷಯ ಸಮಿತಿಯನ್ನು ರಚಿಸಿದ್ದೇವೆ ಆ ವಿಷಯ ಸಮಿತಿಯಲ್ಲಿ ಆದಂಥ ಶಿಫಾರಸ್ಸುಗಳಲ್ಲಿ ಕನಿಷ್ಟ ಶೇಕಡ 60 ರಷ್ಟಾದರೂ ಕಾರ್ಯಗತ ಆಗಬೇಕೆನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಆದರೆ ಇವತ್ತು ಅದು ಆಗುತ್ತಿಲ್ಲ. ಇದು ಕೇವಲ ಶೇಕಡ 25ಕ್ಕೆ ಸೀಮಿತವಾಗಿದೆ. ಇದಕ್ಕಾಗಿ ಎಲ್ಲಾ ಇಲಾಖಾ ಮಂತ್ರಿಗಳು ಕೂಡ ಎಲ್ಲಾ ವಿಷಯ ಸಮಿತಿಗಳ ವರದಿಯನ್ನು ಪ್ರಮುಖವಾಗಿ ಅಧ್ಯಯನ ನಡೆಸಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೂಡಿ ಯಾವ ಇಲಾಖಾಧಿಕಾರಿಗಳು ವಿಷಯ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವುದಿಲ್ಲವೋ ಅಂಥವರ ಮೇಲೆ ಗಂಭೀರವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವಂಥ ಮಾತಿನೊಂದಿಗೆ ನನಗೆ ಇಷ್ಟೊಂದು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟು ಈ ಸರ್ಕಾರ ಆರ್ಥಿಕವಾಗಿ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಈ ರಾಜ್ಯವನ್ನು ಮುಂದೆತ್ತಿಕೊಂಡು ಹೋಗಲಿಕ್ಕೆ ಸಮರ್ಥವಾಗಿದೆ ಎನ್ನುವ ಮಾತನ್ನು ಮತ್ತೊಮ್ಮೆ ಹೇಳಿ ತಮಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ.ಚೆನ್ನಿಗಪ್ಪ (ಕೊರಟಗೆರೆ):– ಮಾನ್ಯ ಉಪಾಧ್ಯಕ್ಷರೆ, 2003–04 ಸಾಲಿನ ಮುಂಗಡ ಪತ್ರದ ಮೇಲಿನ ಚರ್ಚೆಯಲ್ಲಿ 28 ಇಲಾಖೆಗಳಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಸಾಧನೆ ಮಾಡಿದೆ, ಆ ಸಾಧನೆಯಲ್ಲಿ ಆದಂಥ ಸಾಧಕಬಾಧಕ ಮತ್ತು ಆಗಿರುವಂಥ ಸಾಧನೆ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ಮೊಟ್ಟಮೊದಲನೆಯದಾಗಿ ಕೃಷಿ ವಿಚಾರದಲ್ಲಿ ಚರ್ಚೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ಈ ರಾಷ್ಟ್ರದಲ್ಲಿ 100 ಕ್ಕೆ 70 ರಷ್ಟು ಜನರ ಜೀವನ ಕೃಷಿಯನ್ನು ಅವಲಂಬಿಸಿರುತ್ತದೆ. ಇದನ್ನು ನೋಡಿಕೊಳ್ಳುವುದಕ್ಕೆ ಕೃಷಿ ಇಲಾಖೆ ಇದೆ. ಈ ಕೃಷಿ ಇಲಾಖೆಗೆ ಸರ್ಕಾರ ತನ್ನ ಬಜೆಟ್‌ನಲ್ಲಿ ಇಟ್ಟಿರತಕ್ಕಂಥ ಹಣ ಬಹಳ ಕಡಿಮೆಯಾಗಿರುತ್ತದೆ. ಅದರೂ ಇಟ್ಟಂಥ ಬಜೆಟ್ ಹಣದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಅದು ರೈತರಿಗೆ ಬೇಕಾದಂಥ ರೈತ ಮಾರುಕಟ್ಟೆ ಇರಬಹುದು, ರೈತರಿಗೆ ಕೊಡತಕ್ಕಂಥ ಬೀಜ ಆಗಬಹುದು, ಸಬ್ಸಿಡಿ ಆಗಬಹುದು ಮತ್ತು ರೈತರ ಪಂಪುಸೆಟ್‌ಗೆ

ಕೊಡತಕ್ಕಂಥ ವಿದ್ಯುಚ್ಛಕ್ತಿ ಆಗಬಹುದು, ಇವೆಲ್ಲವನ್ನು ನಾವು ನೋಡಿದಾಗ ಸರ್ಕಾರ ತಮ್ಮ ಬಜೆಟ್‌ನಲ್ಲಿ ಹೇಳಿದಂಥ ವಿಚಾರದಲ್ಲಿ 100ಕ್ಕೆ 100 ನಾವು ಅದನ್ನು ಸ್ವಾಗತ ಮಾಡಬಹುದು. ಆದರೆ ಇಲ್ಲಿ ಆಗಿರುವಂಥ ವಿಚಾರವನ್ನು ನಾವು ಪ್ರಾಕ್ಟಿಕಲ್ ಆಗಿ ನೋಡಿದಾಗ, ಉದಾಹರಣೆಗೆ ಈಗ ಬೀಜ ಬಿತ್ತುವಂಥ ಕಾಲ, ಕಳೆದ 20 ದಿವಸಗಳಿಂದ ಬೀಜವನ್ನು ಬಿತ್ತುತ್ತಿದ್ದಾರೆ. ಆದರೆ ಬಿತ್ತನೆ ಬೀಜವನ್ನು ನಿಗಮ ಮಳಿಗೆಗಳಿಂದ ಅಥವಾ ಕೃಷಿ ಇಲಾಖೆಯ ಮೂಲಕ ಅಧಿಕಾರಿಗಳು ಏನು ಕೊಡುತ್ತಾರೆ ಅದರಲ್ಲಿ 100ಕ್ಕೆ 60 ರಿಂದ 70 ಪರ್ಸಂಟ್ ಬೀಜಗಳು ಕಳಪೆ ದರ್ಜೆಯಾಗಿರುತ್ತವೆ. ಇವತ್ತು ರೈತರಿಗೆ ಒಳ್ಳೆಯ ಗುಣಮಟ್ಟದ ಬಿತ್ತನೆ ಬೀಜಗಳನ್ನು ಸಫಿಸಿಯೆಂಟ್ ಆಗಿ ಸರ್ಕಾರ ಒದಗಿಸುತ್ತಿಲ್ಲ. ರಾಜ್ಯದಲ್ಲಿ ಬರಗಾಲವಿರುವುದರಿಂದ, ಅಲ್ಪಸ್ವಲ್ಪ ಮಳೆಯಾದಾಗ ರೈತರು ತಮ್ಮ ವ್ಯವಸಾಯದಲ್ಲಿ ತೊಡಗಿಕೊಂಡಾಗ ಅವರಿಗೆ ಗೊಬ್ಬರ ಸಪ್ಲೈ ಮಾಡುವುದರ ಜೊತೆಗೆ ಸಬ್ಸಿಡಿ ವಿಚಾರ ಆಗಿರಬಹುದು ಅದನ್ನು ಇವತ್ತು ಸರ್ಕಾರ ಕೊಟ್ಟಿಲ್ಲ. ಬಹಳಷ್ಟು ರೈತರು ಇವತ್ತು ವಿದ್ಯಾವಂತರಾಗಿರುವುದರಿಂದ ಎಲ್ಲರೂ ವ್ಯವಸಾಯವನ್ನೇ ಅವಲಂಬಿಸಿ ಕೊಂಡಿರುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಬೇರೆ ಬೇರೆ ಉದ್ಯೋಗ ಬೇಕು. ಯಾವುದೇ ಸರ್ಕಾರ ಅದು ಹಿಂದಿನ ಸರ್ಕಾರ ಇರಬಹುದು, ಇವತ್ತಿನ ಸರ್ಕಾರ ಆಗಿರಬಹುದು, ಮುಂದಿನ ಸರ್ಕಾರ ಆಗಿರಬಹುದು, ಒಟ್ಟಿನಲ್ಲಿ ರೈತರ ಮಕ್ಕಳಿಗೆ ಉದ್ಯೋಗವನ್ನು ಒದಗಿಸುವಂಥ ವಿಚಾರದಲ್ಲಿ ಸರ್ಕಾರಗಳು ಮುಂದಾಗಬೇಕೆಂದು ಹೇಳಬಯಸುತ್ತೇನೆ. ಆದರೆ ಯಾವ ಸರ್ಕಾರ ಕೂಡ ರೈತರ ಮಕ್ಕಳ ಬಗ್ಗೆ ಚಿಂತನೆ ಮಾಡಿಲ್ಲ. ಉದಾಹರಣೆಗೆ ನಮ್ಮಲ್ಲಿ ಬಿ.ಎಸ್‌.ಸಿ. (ಎಜಿ) ಮಾಡಿಕೊಂಡು, ಬಿ.ಇ. ಮಾಡಿಕೊಂಡು, ಮೆಡಿಕಲ್ ಓದಿದಂಥ ಅನೇಕ ರೈತ ಮಕ್ಕಳು ಇದ್ದಾರೆ. ಇವತ್ತು ರೈತರು ಮಕ್ಕಳಿಗೆ ಅಪಾಯಿಂಟ್‌ಮೆಂಟ್ ಇಲ್ಲ. ಈಗ ಕೃಪಾಂಕದ್ದು ಪರ್ಸಂಟೇಜ್ ಬೇರೆ ಫಿಕ್ಸ್ ಮಾಡಿದ್ದಾರೆ. ಕೆ.ಪಿ.ಎಸ್.ಸಿ.ಯಲ್ಲಿ ಅಪಾಯಿಂಟ್‌ಮೆಂಟ್‌ಗೂ ಪರ್ಸಂಟೇಜ್, ಬೇರೆ ಅಪಾಯಿಂಟ್‌ಮೆಂಟ್‌ಗೂ ಪರ್ಸಂಟೇಜ್, ರೈತರ ಮಕ್ಕಳಿಗೆ ಸರಿಯಾದ ಶಾಲೆಗಳ ವ್ಯವಸ್ಥೆ ಇಲ್ಲ, ಕಾಲೇಜು ವ್ಯವಸ್ಥೆ ಇಲ್ಲ, ಇದರಿಂದ ಸಿಟಿ ಮಕ್ಕಳ ಮಟ್ಟಕ್ಕೆ ಆ ರೈತನ ಮಕ್ಕಳು ಕಲಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ತಮ್ಮ ಮುಖಾಂತರ ಹೃತ್ಪೂರ್ವಕವಾಗಿ ವಿನಂತಿ ಮಾಡುವುದೇನೆಂದರೆ, ರೈತರು ಕೃಷಿ ಮಾಡುವುದಕ್ಕೆ ಉತ್ತಮವಾದಂಥ ಬೀಜವನ್ನು ಕೊಡತಕ್ಕಂಥ ನೀತಿಗೆ ಸರ್ಕಾರ ಬರಬೇಕು. ರೈತರು ಬೆಳೆದಂಥ ಬೆಳೆಗೆ ಉತ್ತಮವಾದಂತಹ ಬೆಲೆ ಕೊಡುವಂಥದ್ದಕ್ಕೆ ಸರ್ಕಾರ ಒಂದು ಕಾನೂನನ್ನು ಅಳವಡಿಸಿಕೊಳ್ಳಬೇಕು. ಉದಾಹರಣೆಗೆ ಕಂಪನಿಯಲ್ಲಿ ತಯಾರು ಮಾಡಿದಂಥ ಒಂದು ನೇಗಿಲಿನ ಗುಳಕ್ಕೆ 380 ರೂಪಾಯಿ ಎಂದು ಫಿಕ್ಸ್ ಮಾಡಿ ಪ್ರಿಂಟ್ ಮಾಡಿದ ರೇಟ್‌ಗೆ ರೈತನು ಪಡೆದುಕೊಳ್ಳಬೇಕಾಗುತ್ತದೆ. ಆದರೆ ನಮ್ಮ ರೈತ ಬೆಳೆಯುವಂಥ ತರಕಾರಿ ಆಗಬಹುದು, ಹಣ್ಣು ಆಗಬಹುದು, ರಾಗಿ ಆಗಬಹುದು, ಭತ್ತ ಆಗಬಹುದು, ಹೀಗೆ ಯಾವುದೇ ಒಂದು ಪದಾರ್ಥಕ್ಕೂ ಇವತ್ತು ಸ್ಥಿರವಾದಂಥ ಬೆಲೆ ಇಲ್ಲ. ಇದರ ಪರಿಣಾಮ ರೈತನಿಗೆ ಆರ್ಥಿಕವಾಗಿ ದುರ್ಬಲತೆ ಬರುತ್ತದೆ. ಆಗ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆಗ ಅವನು ಜೀವನದಲ್ಲಿ ಜಿಗುಪ್ಸೆ ಪಟ್ಟುಕೊಳ್ಳಬೇಕಾಗುತ್ತದೆ. ಇದರಿಂದ ಸರ್ಕಾರ ರೈತರ ಬಗ್ಗೆ ಕಾಳಜಿ ವಹಿಸಿ ಕೆಲಸ ಮಾಡುತ್ತಿಲ್ಲವೆಂದು ದೂರುತ್ತಾರೆ. ಈ ದೂರಿನಿಂದ ದೂರ ಆಗಬೇಕಾದರೆ ನನ್ನ ಅನಿಸಿಕೆ ಪ್ರಕಾರ ಸರ್ಕಾರ ರೈತರು, ಆರ್ಥಿಕವಾಗಿ ಅನುಕೂಲಕರವಾಗಿ ಜೀವನ ಮಾಡುವುದಕ್ಕೆ ರೈತರ ಪಂಪುಸೆಟ್ಟುಗಳಿಗೆ ಸರಿಯಾದ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಸರಿಯಾದ ಕಾಲಕ್ಕೆ ಉತ್ತಮವಾದಂಥ ಬೀಜಗಳನ್ನು ಒದಗಿಸುವಂಥ ಕಾರ್ಯ

ಆಗಬೇಕು. ಮತ್ತೆ ಬೆಳೆದ ಬೆಳೆಗಳಿಗೆ ರೇಟ್ ಸಿಗುವ ವ್ಯವಸ್ಥೆಯಾಗಬೇಕು. ಕೃಷಿ ಸಂರಕ್ಷಣೆ ಮಾಡುವ ಘಟಕಗಳನ್ನು ಓಪನ್ ಮಾಡುವುದಕ್ಕೆ ಸಬ್ಸಿಡಿ ಕೊಡುವ ರೀತಿಯಲ್ಲಿ ಸರ್ಕಾರ ಮುಂದಾಗಬೇಕು. ರೈತರು ಬೀದಿಗೆ ಬರುತ್ತಾರೆ. ರೈತರು 100ಕ್ಕೆ 70 ಪರ್ಸೆಂಟ್ ರಷ್ಟು ಇವತ್ತೇನು ರಾಷ್ಟ್ರದಲ್ಲಿ ವ್ಯವಸಾಯವನ್ನು ಅವಲಂಬನೆ ಮಾಡಿದ್ದಾರೆ, ಅವರು ಬೀದಿಗೆ ಬಂದಾಗ ಯಾವುದೇ ಸರ್ಕಾರ ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಸರ್ಕಾರ ಇವತ್ತೇನು ರೈತರಿಗೆ ಕೊಟ್ಟಿರುವ ಸಬ್ಸಿಡಿ ಅಮೌಂಟ್‌ನಲ್ಲೂ ಅಷ್ಟೆ, ಎಷ್ಟು ಜಾಸ್ತಿ ಕೊಟ್ಟಿದ್ದೀರಿ, ಕೇವಲ 25 ರಿಂದ 50 ಪರ್ಸೆಂಟ್ ಹೇಳಿದರು. ಆ ಸಹಾಯ ಧನವನ್ನೂ ಸಹ ಇವತ್ತು ಬಿಡುಗಡೆ ಮಾಡಿಲ್ಲ, ಅದು ರೈತರಿಗೆ ಸಿಕ್ಕಿಲ್ಲ. ಮತ್ತೆ ರೈತರ ವಿಮೆ ಎಂದು ಹೇಳಿ ಅದನ್ನು ಕೂಡಲೇ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಅನೌನ್ಸ್ ಮಾಡಿದ್ದರು. ಆ ವಿಮೆ ಅಮೌಂಟ್ ಕೂಡ ರೈತರಿಗೆ ಇವತ್ತು ಸಿಕ್ಕಿಲ್ಲ. ದಯವಿಟ್ಟು ಸರ್ಕಾರ ಕೂಡಲೇ ಇದನ್ನು ಬರಗಾಲದಲ್ಲಿ ಬಿಡುಗಡೆ ಮಾಡಿ, ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಈ ಸದನದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ರೈತರ ಚೈತನ್ಯವಾದ ಹನಿ ನೀರಾವರಿಗೆ ನೂರಕ್ಕೆ ನೂರ ರಷ್ಟು ಸಬ್ಸಿಡಿ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾವು ಅದನ್ನು ಸ್ವಾಗತಿಸಿದೆವು. ಆದರೆ, ನಮ್ಮ ಪ್ರಕಾರ ನೂರಕ್ಕೆ ನೂರರಷ್ಟು ಹನಿ ನೀರಾವರಿಗೆ ಏನು ಸಬ್ಸಿಡಿ ಕೊಡುತ್ತೇವೆಂದಿದ್ದಾರೆ ಅದು ಎಲ್ಲಾ ಜಿಲ್ಲೆಗಳಿಗೂ ಬರಬೇಕು. ಕೇವಲ ಬಿಜಾಪುರಕ್ಕೆ ಮಾತ್ರವಲ್ಲ, ಇಡೀ ರಾಜ್ಯದ ಮೂಲೆಮೂಲೆಯಲ್ಲೂ ಅದು ಬರುವ ಹಾಗೆ ಆಗಬೇಕು. ತೋಟಗಾರಿಕೆ ಮಾಡುವವರಿಗೆ, ಎಲ್ಲಾ ರೈತರಿಗೂ ಅದು ಸಿಗುವ ಹಾಗೆ ಅನುಕೂಲ ಮಾಡಬೇಕು. ವ್ಯವಸಾಯದಲ್ಲಿ ಮತ್ತೊಂದು ರೈತ ಸೇವಾ ಕೇಂದ್ರಗಳನ್ನು ನಾವು ಪ್ರಾರಂಭಿಸುತ್ತೇವೆಂದು ಹೇಳಿ, ಮಾಡಿದ್ದಾರೆ. ಯಾವುದೇ ಹೋಬಳಿಯಲ್ಲಿ ರೈತ ಸೇವಾ ಕೇಂದ್ರ ಸಮರ್ಪಕವಾಗಿ ರೈತರ ಕೆಲಸವನ್ನು ಮಾಡುತ್ತಿಲ್ಲ. ಅಲ್ಲಿ ಅಧಿಕಾರಿಗಳಿಲ್ಲ. ಅಲ್ಲಿ ಯಾರು ಇವತ್ತು ವಿ.ಎಸ್. ಎಂದು ಇರುತ್ತಾರೆ, ಅವರು ರೈತರ ಜಮೀನಿಗೆ ಹೋಗಿ, ಈ ತರಹ ಕೆಲಸ ಮಾಡಿ, ಬೀಜವನ್ನು ಇವತ್ತು ಹಾಕಿ, ಇದಕ್ಕೆ ಗೊಬ್ಬರ ಹಾಕಿ, ಇದಕ್ಕೆ ಔಷಧಿ ಸಿಂಪಡಿಸಿ ಎಂದು ಹೇಳುವ ಮಟ್ಟದಲ್ಲಿ ಅಧಿಕಾರಿಗಳಿಲ್ಲ. ಕೆಲವು ಅಧಿಕಾರಿಗಳು ಮಾತ್ರ ಅ ಕೆಲಸ ಮಾಡುತ್ತಿದ್ದು, ಅವರ ಸಂಖ್ಯೆ ಭಾರೀ ಕಡಿಮೆ. ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಏನು ಪಾರದರ್ಶಕವಾದ ಸರ್ಕಾರವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ, ನಾನು ಅದನ್ನು ಸ್ವಾಗತಿಸುತ್ತೇನೆ, ಆದರೆ, ಎಲ್ಲಾ ವಿಚಾರದಲ್ಲೂ ಕೂಡ ಪಾರದರ್ಶಕವಾಗಬೇಕು. ಏಕೆಂದರೆ, ಅಲ್ಲಿ ನಮ್ಮ ಜವಾಬ್ದಾರಿಯೂ ಉಂಟು. ಶಾಸಕರು, ಅಧಿಕಾರಿಗಳು, ಪ್ರತಿಯೊಬ್ಬರ ಜವಾಬ್ದಾರಿ ಇಟ್ಟುಕೊಂಡರೆ ಅವರು ಹೇಳಿದ ಮಾತಿಗೆ ಅನುಕೂಲವಾಗುತ್ತದೆ, ಅದಕ್ಕೆ ಸಾರ್ಥಕತೆ ಬರುತ್ತದೆ. ರೈತರ ಮಕ್ಕಳಿಗೆ ವಿದ್ಯಾಭ್ಯಾಸದ ನಂತರ, ಇವತ್ತು ಏನೂ ಇಲ್ಲ. ಇವತ್ತು ಸಣ್ಣ ಕೈಗಾರಿಕೆಗಳು, ಅನೇಕ ಕೈಗಾರಿಕೆಗಳು ಮುಚ್ಚಿವೆ. ರೈತರ ಮಕ್ಕಳು ವಿದ್ಯಾಭ್ಯಾಸವಾದ ನಂತರ ಮನೆಯಲ್ಲೂ ಕೆಲಸವಿಲ್ಲ, ಸರಿಯಾಗಿ ವಿದ್ಯುಚ್ಛಕ್ತಿ ಸರಬರಾಜಿಲ್ಲ, ಬೆಳೆದ ಬೆಳೆಗೆ ಬೆಲೆ ಇಲ್ಲ. ಈ ಎಲ್ಲಾ ಕಾರಣಗಳಿಂದ, ರೈತರ ಮಕ್ಕಳಿಗೆ ಇವತ್ತು ಭಾರೀ ತೊಂದರೆಯಾಗಿದೆ. ಸರ್ಕಾರ ಹೆಚ್ಚಾಗಿ ಹಣವನ್ನು ಬಡ್ಜೆಟ್‌ನಲ್ಲಿ ವಿನಿಯೋಗಿಸಿ, ರೈತರ ಜೀವನಕ್ಕೆ ನಾಂದಿ ಹಾಡಬೇಕೆಂದು ಹೇಳಿ ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಮತ್ತು ಇಲಾಖಾ ಸಚಿವರನ್ನು ವಿನಂತಿಸುತ್ತೇನೆ.

ಇನ್ನೂ ತೋಟಗಾರಿಕೆ ಇಲಾಖೆ ಬಗ್ಗೆ ಹೇಳುವುದಾದರೆ, ನಾನೊಬ್ಬ ರೈತನ ಮಗ. ನಾವೆಲ್ಲರೂ ತೋಟದಲ್ಲಿ ತೆಂಗು, ಅಡಿಕೆ, ಸಪೋಟ, ಸೀಬೆ, ದಾಳಿಂಬೆ, ನಿಂಬೆ ಹಣ್ಣುಗಳು ಇವೆಲ್ಲವನ್ನೂ ಬೆಳೆದು ಜೀವನ ಮಾಡಿಕೊಂಡು, ಇವತ್ತು ರೈತರು ಆರ್ಥಿಕವಾಗಿ ಸ್ವಲ್ಪ ಶಕ್ತಿ ಪಡೆಯಬೇಕೆಂದು ಹೊರಟಿದ್ದೇವೆ. ಉದಾಹರಣೆಗೆ ತೆಂಗಿನ ಮರಕ್ಕೆ ನುಸಿ ರೋಗ ಬಂತು. ಮಾನ್ಯ ಮುಖ್ಯಮಂತ್ರಿಗಳನ್ನು ನೀವೇ ಇಂಜೆಕ್ಷನ್ ಹಾಕಿದ್ದೀರೆಂದು ಹೇಳುವ ಪರಿಸ್ಥಿತಿಗೆ ನಾನು ಹೋಗುವುದಿಲ್ಲ. ಅಧಿಕಾರಿಗಳು ಮತ್ತು ಅಲ್ಲಿನ ವಿಜ್ಞಾನಿಗಳು ಆ ಔಷಧಿಯನ್ನು ಸಿಂಪಡಣೆ ಮಾಡಬೇಕು, ಇಂಜೆಕ್ಟ್ ಮಾಡಬೇಕೆಂದು ಹೇಳಿದಾಗ, ಅದು ಸರಿಯೋ, ಇಲ್ಲವೋ ಎಂದು ಪ್ರಯೋಗ ಮಾಡದೆ, ತಪ್ಪು ವಿವರವನ್ನು ಸರ್ಕಾರಕ್ಕೆ ನೀಡಿ, ಇವತ್ತು ಇಂಜೆಕ್ಷನ್ ಕೊಟ್ಟ ಮರಗಳು 100ಕ್ಕೆ 90ರಷ್ಟು ಒಣಗಿ ಹೋಗಿವೆ.

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):– ಈ ವಿಚಾರದಲ್ಲಿ ನಾವು ಸಾಕಷ್ಟು ಈ ಸದನದಲ್ಲಿ ಉತ್ತರ ಕೊಟ್ಟಿದ್ದೇವೆ. ನಾವು ನುಸಿ ರೋಗಕ್ಕೆ ಸಂಬಂಧಿಸಿದಂತೆ ಆ ಸಂದರ್ಭದಲ್ಲಿ ನಾವು ವಿಶ್ವವಿದ್ಯಾನಿಲಯದ ವಿಜ್ಞಾನಿಗಳು, ತಾಂತ್ರಿಕ ತಜ್ಞರು ಏನು ವರದಿ ಕೊಟ್ಟಿದ್ದಾರೆ, ಯಾವ ಔಷಧಿಗಳನ್ನು ಹೊಡೆಯಬೇಕೆಂದು ಹೇಳಿದ್ದಾರೆ, ಅಂಥದ್ದನ್ನು ಹತ್ತಾರು ಬಾರಿ ಚರ್ಚಿಸಿ, ಇಂಟರ್‌ನ್ಯಾಷನಲ್ ಲೆವೆಲ್ ಸೆಮಿನಾರ್‌ಗಳು ಬೆಂಗಳೂರಿನಲ್ಲಿ ಆಗಿ, ಮತ್ತೆ ಭಾರತ ಸರ್ಕಾರದ ಸ್ಟೀರಿಂಗ್ ಕಮಿಟಿ ರಿಪೋರ್ಟ್‌ಗಳ ಮೇಲೆ ಔಷಧಿಗಳನ್ನು ಕೊಟ್ಟಿರುವುದು. ಪದೇ ಪದೇ ನುಸಿ ರೋಗಕ್ಕೆ ಇಂಜೆಕ್ಷನ್ ಕೊಟ್ಟು ಹೀಗಾಯಿತು ಎಂದು ಎಷ್ಟರಮಟ್ಟಿಗೆ ಹೇಳುತ್ತೀರಿ ಎಂಬುದು ಅರ್ಥವಾಗಲಿಲ್ಲ. ಇವತ್ತು ಸಂಪೂರ್ಣವಾಗಿ ವಿಜ್ಞಾನಿಗಳು ಕೊಟ್ಟಿರುವ, ಅವರು ಸೂಚಿಸಿರುವ ಔಷಧಿಗಳನ್ನು ಮಾತ್ರ ನಾವು ಕೊಟ್ಟದ್ದೇವೆಯೋ ಹೊರತು ಸರ್ಕಾರವಾಗಲೀ ಅಥವಾ ಇಲಾಖೆಯಾಗಲೀ ಏಕಾಏಕಿ ಕೊಡುವ ಕೆಲಸವನ್ನು ಮಾಡುತ್ತಿರುವುದು ಆಗಿಲ್ಲ. ಆದ್ದರಿಂದ ದಯವಿಟ್ಟು ತಾವು ವಿಚಾರವನ್ನು ಹೇಳುವಾಗ ಅರ್ಥ ಮಾಡಿಕೊಂಡು ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಸಿ. ಚನ್ನಿಗಪ್ಪ:– ಮಾನ್ಯ ಸಚಿವರು ಭಾರೀ ಚೆನ್ನಾಗಿ ಸಮರ್ಥಿಸುತ್ತಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ಇಲ್ಲವೆಂದಲ್ಲ. ನೀವು ತೆಂಗಿನ ಮರ ಎಷ್ಟು ವರ್ಷದಿಂದ ತೋಟದಲ್ಲಿದೆ ಎಂದು ಹೇಳಿದ್ದರೆ ನಾನು ನಿಮ್ಮನ್ನು ಒಪ್ಪುತ್ತಿದ್ದೆ. ನಾನು ಅದನ್ನು ಪ್ರಶ್ನೆ ಮಾಡಲಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್:– ಹಾಗೆ ಆಗಿಲ್ಲ. ನೀವು ಇನ್ನೊಮ್ಮೆ ಸ್ಟೀರಿಂಗ್ ಕಮಿಟಿಯಲ್ಲಿ ನೋಡಿ. ಅದರಲ್ಲಿ ಎಷ್ಟು ವಿಜ್ಞಾನಿಗಳು ಇದ್ದರು? ಕೆಲವರು ಮೋನೋಕ್ರೋಟೋಫಾಸ್ ಹೊಡೆಯಬಾರದೆಂದು ಬ್ಯಾಕ್–ಔಟ್ ಮಾಡಿದ್ದಾರೆ. ಸ್ವಲ್ಪ ತೆಗೆದು ನೋಡಿ.

ಶ್ರೀ ಎಂ. ಶಿವಣ್ಣ:– ಮೋನೋಕ್ರೋಟೋಫಾಸ್ ಅನ್ನು ಇವತ್ತಿನಿಂದಲ್ಲ ಸುಮಾರು 10–20 ವರ್ಷಗಳಿಂದ ಗಿಡಗಳಿಗೆ ಹೊಡೆಯುವ ಕೆಲಸವಾಗುತ್ತಾ ಬಂದಿದೆ. ಕಪ್ಪುತಲೆ ಹುಳುಗಳಿಗೆ ಆ ಔಷಧಿ ಬಿಟ್ಟರೆ ಬೇರೆ ಯಾವುದೂ ಇಲ್ಲ ಎನ್ನುವುದು ಸಾಬೀತಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮೋನೋಕ್ರೋಟೋಫಾಸ್ It is a banned drug. ನೀವು ಬೇಕಾದರೆ ತೆಗೆದು ನೋಡಿ. Go on records.

ಶ್ರೀ ಸಿ. ಚನ್ನಿಗಪ್ಪ:– ತಾವು ಸಚಿವರು, ನಾನು ಬೇಕೆಂದು ಪ್ರಶ್ನೆ ಮಾಡುತ್ತಿಲ್ಲ. ಸಾರ್ವಜನಿಕವಾಗಿ, ಇವತ್ತು ರಾಜ್ಯದಲ್ಲಿ ಆಗಿರುವ ಅನ್ಯಾಯದ ಬಗ್ಗೆ ಸರ್ಕಾರದ ಗಮನಕ್ಕೆ ತರಲು, ಚರ್ಚೆಯಲ್ಲಿ ಹೇಳುತ್ತೇನಷ್ಟೆ. ಇದರಲ್ಲಿ ಬೇಕೂ ಎಂದು ನಿಮ್ಮ ಮೇಲೆ ಇಟ್ಟು ಹೇಳುವ ಮಾತನ್ನು ಪ್ರಯೋಗ ಮಾಡಬೇಕಾದ್ದಿಲ್ಲ. ಇವತ್ತು ತೆಂಗಿನ ಮರಗಳ ಪರಿಸ್ಥಿತಿ ಹೀಗಿದ್ದಾಗ, ಸರ್ಕಾರವನ್ನು

ವಿನಂತಿಸುತ್ತೇನೆ. ಆಗಿರುವ ಅನ್ಯಾಯಕ್ಕೆ ಸರ್ಕಾರವೇನಾದರೂ ಮಾರ್ಗೋಪಾಯಗಳನ್ನು ಹಿಡಿಯಬೇಕು. ಇವತ್ತೇನು 100ಕ್ಕೆ 70ರಷ್ಟು ರೈತರು ಅದರ ಮೇಲೆ ಜೀವನ ಮಾಡುತ್ತಿದ್ದಾರೆ, ಅವರಿಗೆ ಸರ್ಕಾರ ಅನುಕೂಲ ಮಾಡಲೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ನಿಮ್ಮ ಮೂಲಕ ವಿನಂತಿಸುತ್ತೇನೆಯೇ ಹೊರತು ಇದು ತಪ್ಪು ಎಂದು ಹೇಳುವುದಕ್ಕೆ ನಾನು ರೆಡಿ ಇಲ್ಲ. ಕಾರಣ, ಔಷಧಿ ಕೊಡಬೇಕಾದರೆ ಸ್ಟೀರಿಂಗ್ ಕಮಿಟಿ ಇತ್ತು. ತಪ್ಪು ಮಾಡಿದ್ದಕ್ಕೆ ಯಾರು ಹೊಣೆ ಎಂದು ಕೇಳುತ್ತಾರೆ, ಸರ್ಕಾರವನ್ನು ಆಳುವವರು ನೀವು, ಜನರು ನಿಮ್ಮನ್ನು ಕೇಳುತ್ತಾರೆಯೇ ಹೊರತು ನಮ್ಮನ್ನು ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ತಪ್ಪೋ, ರೈಟೋ ಮಾಡಬೇಕಾಗಿತ್ತು. ಸಸಿಗಳನ್ನು ಉಳಿಸಬೇಕಾಗಿತ್ತು. ಅದು ನಿಮ್ಮ ಫಂಡಮೆಂಟಲ್ ಡ್ಯೂಟಿ. ಅದು ಬಿಟ್ಟು, ತಪ್ಪಾಯಿತು, ಸ್ಟೀರಿಂಗ್ ಕಮಿಟಿಯವರು ಹಾಗೆ ಮಾಡಿದರು, ಎನ್ನುವುದು. ಅವರು ಕಾರಣಕರ್ತರಲ್ಲ, that is your bounden duty to rectify it. ಅದನ್ನು ಮಾಡಬೇಕಾಗಿತ್ತು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಸಚಿವರು ಉತ್ತರ ಕೊಡುವಾಗ ಈ ಸದನದಲ್ಲಿ, ಇದು ಟೋಟಲಿ ಎಂಟು ಕೋಟಿ ಮರಗಳು ಏನಿವೆ ಅವೆಲ್ಲದಕ್ಕೂ ಔಷಧಿ ಕೊಟ್ಟು ಮಾಡಲಿಕ್ಕಾಗುವುದಿಲ್ಲ, ಇದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಇದು ಸೈಕಲ್‌ನಲ್ಲಿ ನಿಯಂತ್ರಣವಾಗಬೇಕಷ್ಟೆ, ಇದು ಯಾವುದೇ ಪ್ರಯತ್ನ ಪಟ್ಟರೂ ಸಾಧ್ಯವಿಲ್ಲ, ಈ ಔಷಧಿ ಫಲಕಾರಿಯಾಗಿಲ್ಲ, ಇದರಿಂದ ಏನೂ ಪ್ರತಿಫಲ ಸಿಗಲಿಲ್ಲ ನಮಗೆ ಎಂದು ಉತ್ತರಿಸಿದ್ದೀರಿ. ಮರ ತೆಗೆಯುವವರಿಗೆ, ಲಕ್ಷಾಂತರ ಸಸಿ ತೆಗೆದಿರುವವರಿಗೆ ಪರಿಹಾರ ಕೊಡಿ ಎಂದು ಹೇಳಿದೆವು. ಅದು ಸಾಧ್ಯವಿಲ್ಲವೆಂದು ಹೇಳಿದರು. ಮಾನ್ಯ ಚನ್ನಿಗಪ್ಪನವರು, ಶಾಸಕರು ಪರಿಹಾರವೇನಾದರೂ ಕೇಳುತ್ತೀರಾ, ಹಾಗೆ, ಏನೆಂದು ತಿಳಿಸಬೇಕು. ಅವರು ಆಗುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಸಿ. ಚನ್ನಿಗಪ್ಪ:- ಬಚ್ಚೇಗೌಡ ಬಳಿ ಸುಮಾರು 4-5 ಸಾವಿರ ತೆಂಗಿನ ಗಿಡವಿರಬಹುದು. ಅವರಿಗೆ ನೋವು ಗೊತ್ತಾಗಿ ಹೇಳುತ್ತಾರಷ್ಟೆ.

ಶ್ರೀ ಬಿ.ಎನ್. ಬಚ್ಚೇಗೌಡ:- 4-5 ಸಾವಿರ ಇರುವುದು. ಎಕರೆ ಅಲ್ಲ.

ಶ್ರೀ ಸಿ. ಚನ್ನಿಗಪ್ಪ:- ನೀವು ಲ್ಯಾಂಡ್‌ಲಾರ್ಡ್ ಎಂಬುದು ಎಲ್ಲರಿಗೂ ಗೊತ್ತಿದೆ. ಬಚ್ಚೇಗೌಡರ ಹೊಸಕೋಟೆ ಎಂದರೆ ಜಮೀನ್ದಾರರೆಂಬುದು ಗೊತ್ತಿದೆ.

ಶ್ರೀ ಬಿ.ಎನ್. ಬಚ್ಚೇಗೌಡ:- 5 ಎಕರೆ ಇಲ್ಲ, 5 ಸಾವಿರ ಮರವಿದೆ.

ಶ್ರೀ ಸಿ. ಚನ್ನಗಪ್ಪ:- ನಾನು ಸರ್ಕಾರವನ್ನು ವಿನಂತಿಸುತ್ತೇನೆ, ಸರ್ಕಾರ, ತೆಂಗಿನ ಮರ ಕಳೆದುಕೊಂಡ ರೈತರಿಗೇನಾದರೂ ಅನುಕೂಲ ಮಾಡುವ ಹಾಗಿದ್ದರೆ, ದಯವಿಟ್ಟು ಎಲ್ಲದಕ್ಕೂ ಹಣ ಕೊಡಿ ಎಂದು ಹೇಳುವುದು ಚೆನ್ನಾಗಿ ಕಾಣುವುದಿಲ್ಲ. ತೆಂಗಿನ ಮರ ನನ್ನದೂ ಹೋಗಿದೆ. ನನ್ನದೂ 3 ಸಾವಿರ ಗಿಡ ಇದೆ. ಎಲ್ಲದ್ದೂ ಎರಡು ಸಾವಿರ, ಐದು ಸಾವಿರ ಕೊಡಿ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಆರ್ಥಿಕ ಶಕ್ತಿ ಇರಬೇಕು. ಆಕಸ್ಮಾತ್ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿ ಕೊಟ್ಟರೆ, ರಾಜ್ಯದ ಜನರು, ನಾವೆಲ್ಲರೂ ಅವರಿಗೆ ಆಭಾರಿಯಾಗುತ್ತೇವೆ. ಇಲ್ಲವೆಂದರೂ ಕೂಡ ನಾವು ಆಭಾರಿಯಾಗುವುದಿಲ್ಲವೆಂದು ಹೇಳುವುದಿಲ್ಲ. ಸರ್ಕಾರ ತನ್ನ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಕೊಡುವ ವ್ಯವಸ್ಥೆ ಮಾಡಿದಾಗ ಅದನ್ನು ನಾನು ಸ್ವಾಗತಿಸುತ್ತೇನೆ. ಆದೇ ರೀತಿ ಹನಿ ನೀರಾವರಿ ವಿಚಾರದಲ್ಲಿ, ಸರ್ಕಾರವೇನು ಇವತ್ತು 100ಕ್ಕೆ 100ರಷ್ಟು ಸಬ್ಸಿಡಿ ಕೊಡುತ್ತೇವೆಂದು ಹೇಳಿದೆ, ತೋಟಗಾರಿಕೆ ಮತ್ತು ಹಣ್ಣು ಬೆಳೆಗಾರರ ಪ್ರಾಂತ್ಯಕ್ಕೆ, ರಾಜ್ಯದ ಎಲ್ಲಾ ಮೂಲೆಯ ತೋಟದ

ಬೆಳೆಗಾರರಿಗೂ ಅದು ಸಿಗಬೇಕು. ಅದು ಕೇವಲ ಯಾವುದೇ ತಾಲ್ಲೂಕು, ಜಿಲ್ಲೆಗೆ ಸಿಕ್ಕರೆ ಸಾಲದು. ಆ ವಿಚಾರದಲ್ಲಿ ಸರ್ಕಾರ ಮುಂದಾಗಬೇಕೆಂದು ತಿಳಿಸಿ, ಇವತ್ತು ಸಸಿಗಳನ್ನು ವಿತರಣೆ ಮಾಡುವ ವಿಚಾರದಲ್ಲಿ, ಬಡವರಿಗೆ ಎಸ್‌ಸಿಪಿಯಲ್ಲಿ ಕೊಡುವ ಸಸಿಗಳ ವಿಚಾರದಲ್ಲಿ, ಏನು ಸಸಿಗಳನ್ನು ನಾವು ಹಂಚಿಕೊಡುತ್ತೇವೆ, ಅವು ಕಳಪೆ ಸಸಿಗಳು. ಅವು ಉತ್ತಮವಾದ ನರ್ಸರಿ ಅಲ್ಲ. ಯಾವುದೋ ತೆಂಗಿನ ಕಾಯಿ ತಂದು ನರ್ಸರಿ ಮಾಡಿ, ಸುಮ್ಮನೆ ಸಸಿ ಒಂದು ಅಡಿ ಬಂದ ತ್ಕ್ಷಣ ಹಂಚಿ, ಸರ್ಕಾರದ ಲೆಕ್ಕಕ್ಕೆ ಅದು ಬರಬಾರದು. ಇವತ್ತು ಅನೇಕ ತೆಂಗಿನ ಸಸಿಗಳನ್ನು ಹಾಕಿದ್ದಾರೆ. ಅವುಗಳಲ್ಲಿ ಕಾಯಿ ಬಿಟ್ಟಿಲ್ಲ. ಅನೇಕ ಸಪೋಟ ಗಿಡ ಕೊಟ್ಟಿದ್ದಾರೆ. ಸಪೋಟದಿಂದ ಹಣ್ಣು 10 ಗ್ರಾಮ್ ಬರುವುದಿಲ್ಲ. ಇಂಥ ಕಳಪೆ ಸಸಿಗಳನ್ನು, ಮಾವಿನ ಗಿಡಗಳೂ ಅಷ್ಟೇ, ಕಸಿ ಮಾಡುತ್ತೇವೆಂದು ಹೇಳುತ್ತಾರೆ ಸರ್ಕಾರದ ಗಿಡ ಎಂದರೆ ಯಾರಿಗೂ ನಂಬಿಕೆಯಿಲ್ಲ ಆ ಮಟ್ಟಕ್ಕೆ ಇವತ್ತು ಸರ್ಕಾರದ ವತಿಯಿಂದ ಸಸಿಗಳನ್ನು ಹಂಚುವ ವಿಚಾರದಲ್ಲಿ ಮಾನ್ಯ ಸಚಿವರು ಗಮನಹರಿಸಬೇಕು. ರೈತರಿಗೆ ಉತ್ತಮವಾದಂಥ ಸಸಿಗಳನ್ನು ಹಂಚುವ ನಿಟ್ಟಿನಲ್ಲಿ ಅವರು ಮುಂದಾಗಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದ ಸಬ್ಸಿಡಿ ಏನು ಎಸ್‌ಸಿ–ಎಸ್‌ಟಿ ಜನಾಂಗಕ್ಕೆ ತೋಟಗಾರಿಕೆ ಮಾಡುವವರಿಗೆ ನೂರಕ್ಕೆ ನೂರು ಉಚಿತವಾಗಿ ಸಸಿಗಳು, ಗೊಬ್ಬರ, ಬೋರ್‌ವೆಲ್, ಕರೆಂಟ್, ಎಲ್ಲವನ್ನೂ ಕೊಡುತ್ತಿದ್ದಾರೆ ನಾನು ಇದನ್ನು ಸ್ವಾಗತಿಸುತ್ತೇನೆ, ಆದರೆ ಕೊಡುವುದು ಪರ್ಸೆಂಟ್ ಮಾತ್ರ. ಒಂದು ತಾಲ್ಲೂಕಿಗೆ ಗಂಗಾಕಲ್ಯಾಣದಲ್ಲಿ ಇಬ್ಬರು ಜೆಂಟ್ಸ್, ಒಂದು ಲೇಡಿಸ್‌ಗೆ, ಎರಡು ಎಸ್‌ಸಿ, ಒಂದು ಎಸ್‌ಟಿಗೆ ಮಾತ್ರ ಕೊಟ್ಟರೆ ಸಾಲದು, ಆ ಜನಾಂಗದ ನಿಜವಾದ ರೈತರಿಗೆ ನೂರಕ್ಕೆ ನೂರು ಪರ್ಸೆಂಟ್ ಸಬ್ಸಿಡಿ ಕೊಡುವ ರೀತಿಯಲ್ಲಿ ಸರ್ಕಾರ ಮುಂದಾಗಬೇಕು. ಕಾರಣ ಏನೆಂದರೆ, ನಮ್ಮ ಹಳ್ಳಿಗಾಡಿನಲ್ಲಿ ವ್ಯವಸಾಯ ಮಾಡುವುವರು ಅವರೇ, ದುಡಿಯುವವರು ಅವರೆ, ಭಾರಿ ಆಸಕ್ತಿಯಿಂದ ನಮ್ಮ ಎಸ್‌ಸಿ:ಎಸ್‌ಟಿ ಜನಾಂಗದ ಬಂಧುಗಳು ಇವತ್ತು ನಮ್ಮ ತಾಲ್ಲೂಕಿನಲ್ಲಿ ನೂರಕ್ಕೆ 70 ಪರ್ಸೆಂಟ್ ತೋಟಗಳನ್ನು ಮಾಡಿರುತ್ತಾರೆ. ಕೊರಟಗೆರೆ ತಾಲ್ಲೂಕಿನಲ್ಲಿ ಎಸ್‌ಸಿಎಸ್‌ಟಿ ಜನಾಂಗದ ಬಂಧುಗಳು ಅತ್ಯುತ್ತಮವಾದ ತೋಟಗಾರಿಕೆಯನ್ನು ಮಾಡಿದ್ದಾರೆ. ಆದರೆ ಸರ್ಕಾರದಿಂದ ಕೊಡತಕ್ಕಂಥ ಬೋರವೆಲ್ ಕೇವಲ ಎರಡು, ಒಂದು ಎಸ್‌ಟಿ ಗೆ ಕೊಟ್ಟಿದ್ದಾರೆ ಇದು ಸಾಲದು, ತಾಲ್ಲೂಕಿಗೆ ಒಂದು ವರ್ಷ ಕೊನೇಪಕ್ಷ 200 ರಿಂದ 250 ಬೋರ್‌ವೆಲ್‌ಗಳನ್ನು ಆ ಜನಾಂಗದ ಬಂಧುಗಳಿಗೆ ಕೊಟ್ಟರೆ, ರಾಜಕೀಯವಾಗಿ ಅಲ್ಲ ಅವರು ಆರ್ಥಿಕವಾಗಿ ಆ ಜನಾಂಗವನ್ನು ಮುಂದೆ ತರುವ ವಿಚಾರದಲ್ಲಿ ಸರ್ಕಾರ ಒಳ್ಳೆಯ ಸಾಧನೆ ಮಾಡಿದ ಹಾಗೆ ಆಗುತ್ತದೆ. ಆ ವಿಚಾರವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಂಡು ಈ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಕೊಡುವ ಮುಖೇನ ಆ ಜನಾಂಗದ ಕಲ್ಯಾಣಕ್ಕೆ ನಾಂದಿ ಹಾಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೂ ವಿದ್ಯುಚ್ಛಕ್ತಿ ಸರಬರಾಜು ಈ ವಿಷಯದ ಬಗ್ಗೆ ಹೇಳುವುದಾದರೆ ಇವತ್ತು 10 ರಿಂದ 15 ವರ್ಷಗಳಲ್ಲಿ ಎಲ್ಲಾ ಸರ್ಕಾರಗಳು ಈ ವಿಚಾರದಲ್ಲಿ ಒಂದು ಯೂನಿಟ್‌ಗೆ ಒಂದು ಹೆಚ್‌ಪಿ ಗೆ 300 ರೂಪಾಯಿ ವಸೂಲಿ ಮಾಡಿ ಎಂದು ಹೇಳಿದರು, ಅದನ್ನು ನಮ್ಮ ಸರ್ಕಾರದವರು ವಸೂಲಿ ಮಾಡಲಿಲ್ಲ, ಈ ಸರ್ಕಾರದವರು ವಸೂಲಿ ಮಾಡಲಿಲ್ಲ, ಮೊನ್ನೆ ಏನು ಮಾಡಿದ್ದಾರೆಂದರೆ ಒಂದು ಪಂಪ್‌ಸೆಟ್ಟಿಗೆ 20 ಸಾವಿರ 30–50, ಸಾವಿರ ರೂಪಾಯಿ ಬಿಲ್ ಕಟ್ಟಿಸಿಕೊಂಡರು, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಅದರ ಮೇಲಿನ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದರು,

ಕೆಲವು ರೈತರು ಬಡ್ಡಿ ಮನ್ನಾ ಆಗಿದೆ ಎಂದು ಕಟ್ಟಿಬಿಟ್ಟರು, ಕೆಲವರು ಇನ್ನೂ ಕಟ್ಟಿಲ್ಲ. ಆದರೂ ಈ ಬರಗಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಪ್ರಾರ್ಥನೆ ಮಾಡುತ್ತೇನೆ, ದಯಮಾಡಿ ವಸೂಲಾತಿಯನ್ನು ಮುಂದಕ್ಕೆ ಹಾಕಬೇಕು, ಅದರ ಮೇಲಿರುವ ಬಡ್ಡಿಯನ್ನು ಮನ್ನಾ ಮಾಡಬೇಕು, ವಿದ್ಯುಚ್ಛಕ್ತಿ ಪಡೆಯುವುದಕ್ಕೆ ಫೀ ಕೊಡುವುದಕ್ಕೆ ಅದನ್ನು ಬೇಡವೆಂದು ಹೇಳುವುದಕ್ಕೆ ಆಗುವುದಿಲ್ಲ ಏಕೆಂದರೆ ಸರ್ಕಾರ ನಡೆಯಬೇಕಾಗುತ್ತದೆ. ಆದರೆ ಅದನ್ನು ಕಟ್ಟುವಂಥ ಅವಧಿಯನ್ನು ವಿಸ್ತರಣೆ ಮಾಡಬೇಕು, ಅದನ್ನು ಮುಂದಕ್ಕೆ ಹಾಕಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸೋಲಾರ್ ವಿಚಾರದಲ್ಲಿ ಹೇಳುವುದಾದರೆ, ಸೋಲಾರ್‌ನಿಂದಾಗಿ ಪಂಪ್‌ಸೆಟ್ಸ್ ಓಡುತ್ತವೆ ಹೀಗಾಗಿ ರೈತರಿಗೆ ಬೆಳೆ ಸಿಗುತ್ತದೆ ಎನ್ನುವ ಅನುಕೂಲದಿಂದ ಸರ್ಕಾರ ಒಂದು ಯೋಜನೆ ಮಾಡಿದೆ. ಅದನ್ನು ನೂರಕ್ಕೆ ನೂರರಷ್ಟು ರೈತರಿಗೆ ಆ ಪಂಪ್‌ಸೆಟ್‌ಗಳಿಗೆ ಸಬ್ಸಿಡಿ ಕೊಟ್ಟರೆ ಅದರಿಂದ ವಿದ್ಯುತ್‌ಚ್ಛಕ್ತಿಯನ್ನು ಕಡಿಮೆ ಬಳಕೆ ಮಾಡುವುದರಿಂದ ಅದರ ಮೇಲೆ ಅವಲಂಬನೆ ಕೂಡ ಕಡಿಮೆಯಾಗುತ್ತದೆ. ಇದಕ್ಕೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಒತ್ತು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯಿಸುತ್ತೇನೆ. ಒಟ್ಟಾರೆಯಾಗಿ ರೈತರ ಜೀವಕ್ಕೆ ನಾನು ಕಳಕಳಿ ಮಾಡುವುದೇನೆಂದರೆ, ಏಕೆಂದರೆ, ನಾವೆಲ್ಲರೂ ರೈತರ ಮಕ್ಕಳು, ಇವತ್ತು ರೈತರ ಮಕ್ಕಳಿಗೆ ಉದ್ಯೋಗ ಸಿಗಬೇಕು, ಅಥವಾ ರೈತರು ಬೆಳೆದಂಥ ಬೆಳೆಗಳಿಗೆ ಬೆಲೆ ಸಿಗಬೇಕು, ರೈತರಿಗೆ ಸಕಾಲದಲ್ಲಿ ಬೀಜ ದೊರೆಯಬೇಕು. ಮಾನ್ಯ ದೇವೇಗೌಡರವರು ಪ್ರಧಾನಿ ಮಂತ್ರಿಯಾದ ತಕ್ಷಣ ಒಂದು ಟನ್‌ಗೆ ಎರಡು ಸಾವಿರ ರೂಪಾಯಿ ಸಬ್ಸಿಡಿ ಕೊಟ್ಟರು, ಕೇಂದ್ರ ಸರ್ಕಾರದಲ್ಲಿ, ಆ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಅವರ ಕಾಲದಲ್ಲಿ ರೈತರ ಮಕ್ಕಳಿಗೆ, ಅವರು ರೈತರ ಕುಟುಂಬದಿಂದ ಬಂದವರಾಗಿರುವುದರಿಂದ, ಅತ್ಯುತ್ತಮವಾದ ಯೋಜನೆಯನ್ನು ಈ ಬಜೆಟ್‌ನಲ್ಲಿ ಹಾಕಿ ಅವರಿಗೆ ಅನುಕೂಲ ಮಾಡಬೇಕೆಂದು ರೈತರು ಪರವಾಗಿ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ ಕೆಲವು ಇಲಾಖೆಗಳು ಇವೆ, ಮಾನ್ಯ ಸದಸ್ಯರಾದ ಸಭಾಪತಿಯವರು ಹೇಳಿದ ಹಾಗೆ ಸರ್ಕಾರಕ್ಕೆ ಇಚ್ಛಾಶಕ್ತಿ ಬೇಕಾಗುತ್ತದೆ, ಎಲ್ಲಾ ಮಂತ್ರಿಗಳಿಗೂ ಇದು ಇರಬೇಕೆಂದು ಒಂದು ಮಾತನ್ನು ಹೇಳಿದರು. ಎಲ್ಲಾ ಇಲಾಖೆಯ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಆದೇಶವನ್ನು, ಅವರು ಬಜೆಟ್‌ನಲ್ಲಿ ರಾಜ್ಯದ ಜನತೆಗೆ ಏನು ತಿಳಿಸಿದ್ದಾರೆ ....

ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಚನ್ನಿಗಪ್ಪನವರು ಇವತ್ತು ರೈತರ ಪರವಾಗಿ ಮಾತನಾಡುತ್ತಿದ್ದಾರೆ, ಬಹುಶ: ತಾವು ಇವತ್ತಿನ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿರಬಹುದು. ನಿನ್ನೆಯ ದಿನಸ ಕೇಂದ್ರದ ನಮ್ಮ ಪ್ರಧಾನ ಮಂತ್ರಿಗಳು ಈ ರೈತರ ಬೆಳೆ ಸಾಲದ ಮೇಲಿರುವ ಬಡ್ಡಿಯನ್ನು ಗಣನೀಯವಾಗಿ ಇಳಿಸಬೇಕು, ಅದೂ ಕೂಡ 50,000 ರೂಪಾಯಿವರೆಗೆ ಶೇಕಡ 9ಕ್ಕಿಂತ ಜಾಸ್ತಿ ನಿಗದಿಪಡಿಸಬಾರದು, ಎರಡು ಲಕ್ಷರೂವರೆವಿಗೂ ಭಾರಿ ಕಡಿಮೆ ಬಡ್ಡಿಯಲ್ಲಿ ಬೇರೆ ಎಲ್ಲಾ ಸಾಲಗಳಿಗಿರುವಂಥ ಬಡ್ಡಿಯಲ್ಲಿ ಅತ್ಯಂತ ಕಡಿಮೆ ಬಡ್ಡಿಯಲ್ಲಿ ರೈತರಿಗೆ ಕೊಡಬೇಕೆಂದು ಹೆಳುವಂಥದ್ದು ಬಹುಶ: ಅತ್ಯಂತ ದೊಡ್ಡ ಸಂಗತಿ ಈ ದೇಶದಲ್ಲಿ ಎಂದು ನಾನು ಭಾವಿಸಿದ್ದೇನೆ, ಪ್ರಾಯಶ: ನಾವೆಲ್ಲಾ ರೈತರ ಮಕ್ಕಳಾಗಿ ಇಷ್ಟೆಲ್ಲಾ ಚರ್ಚೆ ಮಾಡುವವರು, ಖಂಡಿತವಾಗಿ ಮಾನ್ಯ ಪ್ರಧಾನಿಯವರನ್ನು ಹಾಗೂ ಅವರು ತೆಗೆದುಕೊಂಡಿರುವ ನಿಲುವಿನ ಬಗ್ಗೆ ನಾವು ಗಂಭೀರವಾಗಿ ತೆಗೆದುಕೊಂಡು ಅವರನ್ನು ಶ್ಲಾಘನೆ ಮಾಡುವಂಥದ್ದು ಅವಶ್ಯವಿದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:– ಮಾನ್ಯ ಸದಾನಂದ ಗೌಡರವರು ತಿಳಿಸಿದ ಹಾಗೆ ಇದು ಷೆಡ್ಯಲ್ಡ್ ಬ್ಯಾಂಕ್‌ಗೆ ಮಾತ್ರ ಅಪ್ಲೈಯಾಗುತ್ತಿದೆ. ಸಹಕಾರಿ ಕ್ಷೇತ್ರದಲ್ಲಿ ಆಗಲೇ ಈ ತೀರ್ಮಾನ ತೆಗೆದುಕೊಂಡು 9 ಪರ್ಸೆಂಟ್ ಬಡ್ಡಿಯನ್ನು, ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ತಿಳಿಸಿದ್ದರು, ಕಳೆದ ವರ್ಷ 9 ಪರ್ಸೆಂಟ್ ಬಡ್ಡಿ ಅಥವಾ ಇನ್ನೂ ಕಡಿಮೆಯಾದರೂ ಮಾಡುತ್ತೇವೆಂದು ಹೇಳಿದ್ದರು. ಆ ಬಡ್ಡಿಯನ್ನು ಕಡಿಮೆ ಮಾಡುವಂಥ ಬೇರೆ ಬ್ಯಾಂಕ್‌ಗೆ ರೀಇಂಬಾರ್ಸ್ ಮಾಡುವಂಥ ಪ್ರಯತ್ನ ಆಗಲಿಲ್ಲ. ಇದನ್ನು ಷೆಡ್ಯೂಲ್ಡ್ ಬ್ಯಾಂಕ್‌ಗೆ ಏನು ಮಾನ್ಯ ಸದಾನಂದಗೌಡರವರು ಹೇಳಿದರು, ಕೇಂದ್ರ ಸರ್ಕಾರದ ತೀರ್ಮಾನ ರೈತರ ಪರವಾಗಿದೆ ಎಂದು ಏನು ಹೇಳಿದರು, ಅದು ಎಲ್ಲರಿಗೂ ಸಿಗುವಂಥದ್ದಾಗಬೇಕು, ಕೇವಲ ಷೆಡ್ಯೂಲ್ಡ್ ಬ್ಯಾಂಕ್‌ನಲ್ಲಿ ಲೋನ್ ತೆಗೆದುಕೊಂಡಿರುವವರಿಗೆ ಮಾತ್ರ 9 ಪರ್ಸೆಂಟ್, ಮತ್ತೆ ಅವರೇನು ಹೇಳಿದ್ದಾರೆ ಎಂದರೆ, ಎರಡು ಲಕ್ಷ ರೂಪಾಯಿ ತೆಗೆದುಕೊಳ್ಳುವರೆವಿಗೂ ನಾವು ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ ಅದು ಇನ್ನೂ ತೀರ್ಮಾನವಾಗಿಲ್ಲ. ಇನ್ನೂ ಕಡಿಮೆ ಬಡ್ಡಿಗೆ ನಾವು ಅದನ್ನು ತೆಗೆಯುವಂಥ ಕಾರ್ಯವನ್ನು ಮಾಡುತ್ತೇವೆಂದು ಹೇಳಿದ್ದಾರೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ:– ಸುಮಾರು ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ಈ ಬಡ್ಡಿ ದರ ಕಡಿಮೆ ಮಾಡಲಿಕ್ಕಾಗಿ ಕೇಂದ್ರ ಸರ್ಕಾರ ಕೊಡುತ್ತದೆ ಎಂದು ಹೇಳುವಂಥದ್ದು ಇದೊಂದು ಕ್ರಾಂತಿಕಾರಕವಾದ ಹೆಜ್ಜೆ. ನಮ್ಮ ರಾಜ್ಯದಲ್ಲಿ ಕೂಡ ಸಬಾರ್ಡ್, ಅಪೆಕ್ಸ್‌ಬ್ಯಾಂಕ್, ಡಿಸಿಸಿ ಬ್ಯಾಂಕ್, ಪ್ರಾಥಮಿಕ ಸಹಕಾರ ಸಂಘಕ್ಕೂ ಹೋಗುವಾಗ 13 ರಿಂದ 14 ಪರ್ಸೆಂಟ್ 15 ಪರ್ಸೆಂಟ್ ರೈತರಿಗೆ ಬಡ್ಡಿಯಾಗುತ್ತಿದೆ. ಅದರಿಂದಾಗಿ ಮಾನ್ಯ ಪ್ರಧಾನಮಂತ್ರಿಗಳು ಏನು ಹೇಳಿದ್ದಾರೆ, ಕಾಸ್ಟ್ ಅಫ್ ಪ್ರೊಡೆಕ್ಷನ್ ನಮ್ಮ ಉತ್ಪಾದನಾ ವೆಚ್ಚವನ್ನು ಏನು ರೈತರು ತಗ್ಗಿಸಬೇಕು ಎಂದು ಕರೆ ಕೊಟ್ಟಿದ್ದಾರೆ, ಇದಕ್ಕೆ ಬಹಳ ನೆರವಾಗುವಂಥ ರೀತಿಯಲ್ಲಿ ಕೇಂದ್ರ ಸರ್ಕಾರದ ಜೊತೆಗೆ ಸ್ಪಂದಿಸತಕ್ಕಂಥ ಕೆಲಸ, ಕೇಂದ್ರ ಸರ್ಕಾರದ ನೆರವನ್ನು ಪಡೆಯತಕ್ಕಂಥ ಕೆಲಸ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮಾಡಿದರೆ, ಮಾನ್ಯ ಬಚ್ಚೇಗೌಡರವರು ಹೇಳಿದ ಹಾಗೆ, ನಮ್ಮ ಸಹಕಾರಿ ರಂಗದಲ್ಲಿ ಕೂಡ ಸಾಲವನ್ನು ಪಡೆಯತಕ್ಕಂಥ ರೈತರಿಗೆ ಇದು ನೆರವಾಗುವ ಹಾಗೆ ಆ ಒಂದು ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಪ್ರವೇಶ ಮಾಡಿ ಮಾಡುವಂಥದ್ದು ಒಳ್ಳೆಯದೆಂದು ನನ್ನದೊಂದು ಅನಿಸಿಕೆ, ಮತ್ತೆ ಎಲ್ಲಿ ಈ ಷೆಡ್ಯೂಲ್ಡ್ ಬ್ಯಾಂಕ್‌ಗಳು ಇಲ್ಲ ಅಲ್ಲಿ ಪೋಸ್ಟ್ ಅಫೀಸ್‌ಗಳಿಂದಲೂ ಕೂಡ ರೈತನಿಗೆ ಬೇಕಾಗಿರುವ ಸಾಲಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದಾಗಿ ಎಲ್ಲಾ ಷೆಡ್ಯೂಲ್ಡ್ ಬ್ಯಾಂಕ್‌ಗಳು ಇವತ್ತು ಬಡ್ಡಿದರವನ್ನು ಕಡಿಮೆ ಮಾಡಿದೆ. ಬಹಳ ದೊಡ್ಡ ಹೆಜ್ಜೆ ಇದು, ಇಡೀ ರಾಷ್ಟ್ರ ಮಟ್ಟದಲ್ಲಿ, ಖಂಡಿತವಾಗಿ ರಾಜ್ಯ ಇದನ್ನು ಪರಿಣಾಮ ಕಾರಿಯಾಗಿ ಬಳಕೆ ಮಾಡಿಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಡಿ. ವಿ. ಸದಾನಂದಗೌಡ:– ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇರುವುದರಿಂದ, ಒಂದು ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಈಗ ಸದನದಲ್ಲಿ ನಾನು ಈ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತಿದ್ದೇನೆ. ದಿನಾಂಕ 31–3–2003 ರಂದು ಕರ್ನಾಟಕ ರಾಜ್ಯದ ಸಹಕಾರಿ ಸಂಘಗಳ ನಿಬಂಧಕರು ಇಡೀ ರಾಜ್ಯದಲ್ಲಿರುವಂಥ ಎಲ್ಲಾ ರೈತಾಪಿ ವರ್ಗಗಳ ಸಹಕಾರಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದರು. ಅದೇ ರೀತಿಯ ಒಂದು ಸುತ್ತೋಲೆಯನ್ನು 31–3–2003ಕ್ಕೆ ಕಳುಹಿಸಿಕೊಟ್ಟರು. ಇದರಿಂದಾಗಿ ತುಂಬಾ ಸಂತೋಷವಾಯಿತು

ಮತ್ತು ಎಲ್ಲಾ ರೈತರು ಸಾಧಾರಣವಾಗಿ, ವಿಶೇಷವಾಗಿ ದಕ್ಷಿಣ ಕನ್ನಡ, ಉಡುಪಿ, ಕೊಡಗು ಈ ಭಾಗದ ಎಲ್ಲಾ ರೈತರು, ತಮ್ಮ ಭಾಗದ ಸಾಲದ ಅಸಲನ್ನು ಮರುಪಾವತಿ ಮಾಡುವಂಥ ಕೆಲಸ ಕಾರ್ಯಗಳನ್ನು ಮಾಡಿದರು. ವಿಶೇಷವಾಗಿ ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ಎಲ್ಲಾ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಸುತ್ತೋಲೆ ಹೋಯಿತು, ನಿಮ್ಮ ಅಸಲನ್ನು ಪಾವತಿ ಮಾಡಿದರೆ ಸಾಕು ಬಡ್ಡಿಯನ್ನು ಮನ್ನಾ ಮಾಡಲಿಕ್ಕೆ ಸರ್ಕಾರ ಈಗಾಗಲೇ ಸರ್ಕಾರದ ವತಿಯಿಂದ ಸುತ್ತೋಲೆಗಳು ಬಂದಿವೆ ಎಂದು ಎಲ್ಲವನ್ನು ಮನ್ನಾ ಮಾಡಿದರು. ಇತ್ತೀಚೆಗೆ ಅಂದರೆ ಒಂದು ವಾರದಂದೀಚೆಗೆ ಏಕಾಏಕಿ ಯಾಗಿ ಕೇಂದ್ರ ಸಹಕಾರಿಬ್ಯಾಂಕ್‌ನಿಂದ ಒಂದು ಸುತ್ತೋಲೆಯನ್ನು ಜಾರಿ ಮಾಡಿ ಅದನ್ನು ಎಲ್ಲಾ ಸಹಕಾರಿ ಸಂಘಗಳಿಗೆ ಅಂದರೆ ದಕ್ಷಿನ ಕನ್ನಡ ಆ ಭಾಗದಲ್ಲಿರುವಂಥ ಎಲ್ಲಾ ಸಂಘಗಳಿಗೂ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ನಿಮಗೆ ಈ ಬಡ್ಡಿ ಮನ್ನಾ ಅನ್ವಯವಾಗುತ್ತಿಲ್ಲ, ನೀವು ಮತ್ತೆ ಬಡ್ಡಿಯನ್ನು ಮರುಪಾವತಿ ಮಾಡಬೇಕು, ದಕ್ಷಿಣ ಕನ್ನಡ ಜಿಲ್ಲೆ ಬರಪೀಡಿತ ಪ್ರದೇಶ ಅಲ್ಲ ಆ ಕಾರಣ ಬಡ್ಡಿ ಮನ್ನಾ ಇದ್ದದ್ದನ್ನು ರದ್ದು ಮಾಡಿ ತಕ್ಷಣ ಆದೇಶವನ್ನು ಕೊಟ್ಟಿದ್ದಾರೆ. ಈ ಆದೇಶದಿಂದಾಗಿ ಏನಾಗಿದೆ ಎಂದರೆ, ಕೇಂದ್ರ ಸಹಕಾರಿ ಬ್ಯಾಂಕ್ ಏನು ಮಾಡಿದೆ ಎಂದರೆ, ಇವತ್ತಿನ ಈ ಕಂಪ್ಯೂಟರ್‌ನ ವ್ಯವಸ್ಥೆಯಿಂದ ಏನು ಪ್ರೋಗ್ರಾಂ ಪಟ್ಟಿಯ ಪ್ರಕಾರ ನಾವು ಅಸಲನ್ನು ಮರುಪಾವತಿ ಮಾಡಿದ್ದೇವೆ, ಇಡೀ ಪ್ರೋಗ್ರಾಂ ಪಟ್ಟಿಯನ್ನು ಬದಲಾವಣೆ ಮಾಡಿ ಎಲ್ಲಾ ಪ್ರಾಥಮಿಕ ಸಹಕಾರಿ ಬ್ಯಾಂಕ್‌ಗಳಿಗೆ ನೇರವಾಗಿ ಆ ಬಡ್ಡಿಯನ್ನು ಸೇರಿಸಿಕೊಂಡು ಅವರ ಹೆಸರಿಗೆ ನೀವು ಇಷ್ಟು ಸಾಲವನ್ನು ಪಡೆದುಕೊಂಡಿದ್ದೀರಿ ಎಂದು ಹೇಳುವಂಥ ಕೊಡುಗೆಯನ್ನು ಕೊಟ್ಟಿದ್ದಾರೆ. ಇದರಿಂದ ಸೊಸೈಟಿಯವರು ಏನು ಮಾಡಿದ್ದಾರೆಂದರೆ, ಎಲ್ಲಾ ರೈತರಿಗೆ ನೀವು ಬಡ್ಡಿಯನ್ನು ಮತ್ತೆ ಕಟ್ಟಬೇಕು ಎನ್ನುವ ಸಂಗತಿಯನ್ನು ಮಾಡಿದ್ದಾರೆ. ಎರಡು-ಮೂರು ಸಂಗತಿಗಳು ಇದರಲ್ಲಿ ಆಗಿದ್ದು ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದಿತ್ತು. ಏಕೆಂದರೆ, ಇತ್ತೀಚಿಗೆ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸಹಕಾರಿ ಬ್ಯಾಂಕ್ ನಿಮ್ಮ ಬಡ್ಡಿಯನ್ನು ಪುನ: ಕಟ್ಟಬೇಕೆಂದು ಈಗಾಗಲೇ ನೋಟೀಸ್ ಕೊಟ್ಟಿದೆ. ನಿಮ್ಮದು ಬರಪೀಡಿತ ಅಲ್ಲ ಆದಕಾರಣ ಕಟ್ಟಬೇಕೆಂದು ಹೇಳಿದೆ. ಇಡೀ ರಾಜ್ಯಕ್ಕೆ ಇದು ಅಪ್ಲೈಯಾಗುತ್ತದೆಂದು ತಮ್ಮ ರಿಜಿಸ್ಟ್ರಾರ್ ಆದೇಶದ ಮುಖಾಂತರ ಎಲ್ಲಾ ಮೊತ್ತವನ್ನು ಈಗಾಗಲೇ ರೈತರು ಮರುಪಾವತಿ ಮಾಡಿಯಾಗಿದೆ. ಈಗ ಕೇಂದ್ರ ಸಹಕಾರಿ ಬ್ಯಾಂಕ್ ಏಕಾಏಕಿಯಾಗಿ ಕಂಪ್ಯೂಟರ್‌ನಲ್ಲಿ ಇಡೀ ಪ್ರೋಗ್ರಾಂ ಅನ್ನು ಬದಲಾವಣೆ ಮಾಡಿ ಬಡ್ಡಿ ಸಮೇತವಾಗಿ ಕೂಡಲೇ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ತುಂಬಬೇಕು ಎಂದು ಆದೇಶಗಳನ್ನು ಜಾರಿ ಮಾಡಿದೆ, ರೈತರಿಗೆ ನೋಟೀಸ್ ಜಾರಿ ಮಾಡಲಿಕ್ಕೆ ಎಲ್ಲಾ ಪ್ರಾಥಮಿಕ ಸಹಕಾರಿ ಸಂಘಗಳು ಪ್ರಾರಂಭ ಮಾಡಿವೆ.

1.10 ಪಿಎಂ

ನಮ್ಮಲ್ಲಿ ತುಂಬಾ ಜನ ಏನು ಮಾಡಿದ್ದಾರೆ ಎಂದರೆ, ಈಗಾಗಲೇ ಅಸಲನ್ನು ಪಾವತಿ ಮಾಡಿದ್ದೇವೆಂದು ತಮ್ಮ ಮೆಂಬರ್ ಶಿಫ್‌ಗಳನ್ನು ರದ್ದು ಮಾಡಿಕೊಂಡಿದ್ದಾರೆ. ಈಗ ಅವರ ಹತ್ತಿರ ಯಾವುದೇ ಬಾಂಡ್ ಕೂಡ ಇಲ್ಲ. ಆದ್ದರಿಂದ, ಅವರಿಂದ ಈಗ ಬಡ್ಡಿ ವಸೂಲು ಮಾಡುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈಗಾಗಲೇ ಮಾಡಿರತಕ್ಕಂಥ ಸಾಲದ ಬಡ್ಡಿ ಹಣ ಮನ್ನಾ ಆಗುತ್ತದೆ ಎಂದು ತಿಳಿದು ರೈತರು ಬೇರೆ ಬೇರೆ ಕಡೆಯಿಂದ ಮತ್ತೆ ಸಾಲ ಮಾಡಿ ಇದನ್ನು ತುಂಬುವಂಥ ಕೆಲಸವನ್ನು ಮಾಡಿದ್ದಾರೆ. ಈಗ

ಅಡಿಷನಲ್ ಆಗಿ ಯಾರ ಹತ್ತಿರವೂ ಬಾಂಡ್ ಇಲ್ಲ. ಸಹಕಾರಿ ಸಂಘಗಳು ರೈತರಿಂದ ಈ ಬಡ್ಡಿಯನ್ನು ಮತ್ತೆ ವಸೂಲ್ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ಹೊಸದಾಗಿ ಬಾಂಡ್ ಬರೆದು ಕೊಟ್ಟಿಲ್ಲ. ಕೇಂದ್ರ ಸಹಕಾರಿ ಬ್ಯಾಂಕ್‌ಗಳು ನೇರವಾಗಿ ಸಹಕಾರಿ ಬ್ಯಾಂಕ್‌ಗಳಲ್ಲಿ ಇರತಕ್ಕಂಥ ಪ್ರೋಗ್ರಾಂ ಅನ್ನು ಚೇಂಜ್ ಮಾಡಿಕೊಳ್ಳಿ ಎಂದು ಈಗ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಮಾಡಿಕೊಳ್ಳುವುದು ಏನೆಂದರೆ, ನಮ್ಮ ಭಾಗದಲ್ಲಿರತಕ್ಕಂಥ ರೈತಾಪಿ ಜನರು ಈಗಾಗಲೇ ಸಾಲದ ಹಣವನ್ನು ಪಾವತಿ ಮಾಡಿದ್ದಾರೆ. ಆದ್ದರಿಂದ, ದಿನಾಂಕ 31-3-2003 ರಲ್ಲಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಏನೊಂದು ಸುತ್ತೋಲೆಯನ್ನು ಹೊರಡಿಸಲಾಗಿತ್ತೋ ಅದನ್ನೇ ಮತ್ತೆ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸದರಿ ಸುತ್ತೋಲೆಯಲ್ಲಿರತಕ್ಕಂಥ ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸುತ್ತೋಲೆ ಸಂಖ್ಯೆ:ಸಿಆರ್‌ಡಿ 134 ಕೆ.ಎ.ಆರ್.ಎಫ್. 2002-2003ರ ಸುತ್ತೋಲೆಯಲ್ಲಿ ತಾವು ನೇರವಾಗಿ ಏನು ಹೇಳಿದ್ದೀರಿ ಎಂದರೆ, 1-3. 2002 ರಿಂದ 30-2-2003ರವರೆಗೆ ವಿತರಿಸಲಾಗಿರುವ ಅಲ್ಪಾವಧಿ ಬೆಲೆ ಸಾಲದ ಬಡ್ಡಿ ಮೇಲೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಅಪೆಕ್ಸ್ ಬ್ಯಾಂಕ್‌ಗಳು ಮತ್ತು ರಾಜ್ಯದ ಎಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಿಗೆ ಹಾಗೂ ಕೃಷಿ ಪತ್ತಿನ ಸಂಖ್ಯೆಗಳಿಗೆ 31-3--2003ರ ವರೆಗೆ ಬರಬೇಕಾಗಿರತಕ್ಕಂಥ ಬಡ್ಡಿ ಹಣವನ್ನು ಮನ್ನಾ ಮಾಡಿದ್ದು ಸಾಲದ ಹಣವನ್ನು ಕೂಡಲೇ ಮರುಪಾವತಿ ಮಾಡುವ ಬಗ್ಗೆ ತಾವೇನು ಹಿಂದೆ ಸುತ್ತೋಲೆಯನ್ನು ಹೊರಡಿಸಿದ್ದೀರಿ, ಅದೇ ರೀತಿಯಾಗಿ ಮತ್ತೆ ಇದು ಜಾರಿಗೆ ಬರಬೇಕು. ಇಲ್ಲದಿದ್ದರೆ ರೈತರು ತೊಂದರೆಗೆ ಒಳಗಾಗುತ್ತಾರೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಸಹಕಾರಿ ಸಂಘಗಳು ಮತ್ತು ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಇದರಿಂದ ಸ್ವಲ್ಪ ಗೊಂದಲ ಉಂಟಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಹಿಂದೆ ಇದ್ದಂಥ ಸುತ್ತೋಲೆಯನ್ನು ಮತ್ತೆ ಮುಂದುವರಿಸಿಕೊಂಡು ಹೋಗುವುದಕ್ಕೆ ಕೃಷಿ ಆಯುಕ್ತರಿಗೆ ಮಾನ್ಯ ಮುಖ್ಯಮಂತ್ರಿಯವರು ಆದೇಶ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಉಪಾಧ್ಯಕ್ಷರೆ, ರೈತರ ಪರವಾಗಿ ಮಾನ್ಯ ಸದಾನಂದಗೌಡರು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಇವತ್ತಿನದಿವಸ ನಮ್ಮಲ್ಲಿ ಬರಗಾಲ ಬಂದಿರುವುದರಿಂದ ರೈತರು ಮಾಡಿರತಕ್ಕಂಥ ಸಾಲವನ್ನು ತೀರಿಸುವುದಕ್ಕೂ ಕೂಡ ಅವರ ಹತ್ತಿರ ಮನೆ-ಮಠವೂ ಕೂಡ ಇಲ್ಲದಂತಾಗಿದೆ. ಹಾಗೆಯೇ ಇವತ್ತಿನ ದಿವಸ ಯಾವುದೇ ರೀತಿಯ ಬೆಳೆ ಬಂದಿಲ್ಲ, ತೆಂಗುಬಂದಿಲ್ಲ ಅಡಿಕೆ ಫಸಲೂ ಬಂದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಾನೂ ಸಹ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇದುವರೆಗೂ ಯಾವುದೇ ಸರ್ಕಾರ ರೈತರಿಗೆ ಕೊಟ್ಟಿರತಕ್ಕಂಥ ಸಾಲದ ಹಣವನ್ನು ಮನ್ನಾ ಮಾಡಿ ಎಂದು ನಾನೂ ಕೂಡ ಇಚ್ಚೆಪಡುವುದಿಲ್ಲ. ಆದರೆ, ಕಷ್ಟದ ಕಾಲದಲ್ಲಿ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವಂಥ ಸರ್ಕಾರದ ಉದ್ದೇಶ ಏನಿದೆ ಅದನ್ನು ಮಾಡುವುದಕ್ಕೆ ಕೂಡಲೇ ಆದೇಶ ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಇದನ್ನು ಎಲ್ಲಾ ಬ್ಯಾಂಕ್‌ಗಳಿಗೆ ಸೀಮಿತವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಪಿ.ಎಲ್.ಡಿ. ಬ್ಯಾಂಕ್‌ಗಳು 16 ಪರ್ಸೆಂಟ್ ಬಡ್ಡಿದರಲ್ಲಿ ಸಾಲವನ್ನು ಕೊಡುತ್ತಿವೆ. ಇದನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಏಕೆಂದರೆ, ನಮ್ಮಲ್ಲಿರತಕ್ಕಂಥ ಶೆಡ್ಯೂಲ್ಡ್ ಬ್ಯಾಂಕ್‌ಗಳಾದ

ಕೆನಾರ ಬ್ಯಾಂಕ್ ಮತ್ತು ವಿಜಯ ಬ್ಯಾಂಕ್ ಮತ್ತು ಇತರೇ ಬ್ಯಾಂಕ್‌ಗಳು ಕೇವಲ 8.5. ಪರ್ಸೆಂಟ್ ಬಡ್ಡಿದರಲ್ಲಿ ಸಾಲವನ್ನು ಕೊಡುತ್ತಿವೆ. ಆದರೆ, ರೈತರಿಗೆ ಸಹಕಾರಿಯಾಗುವುದಕ್ಕೋಸ್ಕರ ಇರತಕ್ಕಂಥ ಪಿ.ಎಲ್.ಡಿ. ಬ್ಯಾಂಕ್‌ನವರೇ ರೈತರಿಗೆ 16 ಪರ್ಸೆಂಟ್ ಬಡ್ಡಿಯನ್ನು ಚಾರ್ಜ್ ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಕೂಡ ಅನ್ಯಾಯದ ಪರಮಾವಧಿಯಾಗಿದೆ. ಇಷ್ಟೊಂದು ಬಡ್ಡಿಯನ್ನು ರೈತರು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಪಿ.ಎಲ್.ಡಿ. ಬ್ಯಾಂಕ್‌ನವರು ರೈತರಿಂದ ವಸೂಲ್ಮಾಡತಕ್ಕಂಥ ಬಡ್ಡಿಯನ್ನು ಹಾಗೂ ಬಡ್ಡಿ ದರವನ್ನು ಕಡಿಮೆ ಮಾಡಿದರೆ ಈ ರಾಜ್ಯದ ರೈತರಿಗೆ ಅನುಕೂಲವಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ರೈತರ ಜಮೀನಿಗೆ ಸಂಬಂಧಪಟ್ಟಂತೆ ಪಹಣಿ ಮತ್ತು ಪಟ್ಟದ ವಿವರಗಳನ್ನು ಕಂಪ್ಯೂಟರ್ ಮೂಲಕ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ. ಆದರೆ, ಇವತ್ತಿನದಿವಸ ಕೆಲವು ಕಡೆ ಏನಾಗಿದೆ ಎಂದರೆ, ಸರಿಯಾಗಿ ವಿದ್ಯುತ್ ಸರಬರಾಜು ಇಲ್ಲದೆ ಕಂಪ್ಯೂಟರ್‌ಗಳು ಕೆಲಸ ಮಾಡುತ್ತಿಲ್ಲ. ಮತ್ತೆ ಕೆಲವು ಕಡೆ ಕಂಪ್ಯೂಟರ್‌ಗಳು ಕೆಟ್ಟು ಹೋಗಿವೆ. ಇವತ್ತಿನದಿವಸ ಪಹಣಿ ಕೊಡುವುದಕ್ಕೆ ರೈತರಿಂದ 15 ರೂಪಾಯಿ ಕಟ್ಟಿಸಿಕೊಂಡು ಮೂರು ಅಥವಾ ನಾಲ್ಕು ದಿವಸ ಬಿಟ್ಟುಕೊಂಡು ಬಂದರೆ ಕೊಡುತ್ತೇವೆಂದು ಹೇಳುತ್ತಾರೆ. ಏಕೆಂದು ಕಾರಣ ಕೇಳಿದರೆ ನಮ್ಮಲ್ಲಿರತಕ್ಕಂಥ ಕಂಪ್ಯೂಟರ್‌ಗಳು ಕೆಟ್ಟು ಹೋಗಿವೆ, ಇನ್ನು ರಿಪೇರಿ ಆಗಿಲ್ಲ ಎಂದು ರೈತರಿಗೆ ಉತ್ತರ ಹೇಳುತ್ತಾರೆ. ಇದರ ಬಗ್ಗೆ ಸರ್ಕಾರ ದಯಮಾಡಿ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. 24 ಗಂಟೆಯೊಳಗೆ ರೈತರಿಗೆ ರೆಕಾರ್ಡ್ಸ್ ಒದಗಿಸಿಕೊಡಲಾಗುತ್ತದೆ ಎಂದು ತಾವು ಹೇಳಿದ್ದೀರಿ. ಅದರ ಪ್ರಕಾರ ರೈತ ಹಣ ಕಟ್ಟಿದ 24 ಗಂಟೆಯೊಳಗೆ ಆತನಿಗೆ ರೆಕಾರ್ಡ್ಸ್ ಒದಗಿಸಿಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ರೈತರ ಮಕ್ಕಳಿಗೆ ಉದ್ಯೋಗಾವಕಾಶದಲ್ಲಿ ಇಂತಿಷ್ಟೆಂದು ಪರ್ಸೆಂಟ್ ಎಂದು ನಿಗದಿ ಮಾಡಲಾಗಿತ್ತು. ಆದರೆ, ದುರುದೃಷ್ಟವಶಾತ್ ಇದು ಸುಪ್ರೀಂ ಕೋರ್ಟ್‌ನಲ್ಲಿ ಬಿದ್ದು ಹೋಯಿತು. ಈಗಾಗಲೇ ಗ್ರಾಮೀಣ ಕೃಪಾಂಕದ ಮೇಲೆ ಕೆಲಸಕ್ಕೆ ಸೇರಿದ್ದ ರೈತರ ಮಕ್ಕಳು ಈ ಒಂದು ಆದೇಶದ ಮೇರೆಗೆ ಮನೆಗೆ ವಾಪಸ್ಸು ಬಂದಿದ್ದಾರೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಬೇರೆ ಯಾವುದಾದರೊಂದು ಹೊಸ ಆ್ಯಕ್ಟನ್ನು ತರುವುದಾಗಲಿ ಅಮೆಂಡ್‌ಮೆಂಟ್ ಮಾಡಿ ಹಳ್ಳಿ ಭಾಗದ ರೈತರ ಮಕ್ಕಳಿಗೆ ಉದ್ಯೋಗಾವಕಾಶದಲ್ಲಿ ಮತ್ತು ತಾಂತ್ರಿಕ ಮತ್ತು ಮೆಡಿಕಲ್ ಪೋಸ್ಟ್‌ಗಳಲ್ಲಿ ಮೀಸಲಾತಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಈ ಸರ್ಕಾರ ಉತ್ತಮವಾದಂಥ ಒಂದು ಕಾನೂನನ್ನು ತರಬೇಕೆಂದು ಈ ರಾಜ್ಯದ ಜನತೆಯ ಪರವಾಗಿ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ಹೇಳುವುದಾದರೆ, ಹಳ್ಳಿಗಳಲ್ಲಿ ಶೌಚಾಲಯ ಅಭಿವೃದ್ಧಿ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಇವತ್ತಿನದಿವಸ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚಿನ ಶಕ್ತಿಯನ್ನು ಕೊಟ್ಟು ಇವತ್ತಿನದಿವಸ ಸರ್ಕಾರ ಹೆಚ್ಚಿನ ಹಣವನ್ನು ಕೂಡ ಬಿಡುಗಡೆ ಮಾಡಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಇವತ್ತಿನ ದಿವಸ ಪಂಚಾಯತಿಗಳಿಗೆ ಕೊಡತಕ್ಕಂಥ ಅನುದಾನ ಸದುಪಯೋಗವಾಗುತ್ತಿಲ್ಲ. ಕಾರಣ ಏನೆಂದರೆ ಇವತ್ತಿನ ದಿವಸ ಪಂಚಾಯತಿಗಳಲ್ಲಿ 100ಕ್ಕೆ 90 ರಷ್ಟು ಸದಸ್ಯರಿಗೆ ಉತ್ತಮವಾದಂಥ ವಿದ್ಯಾಭ್ಯಾಸ ಇರುವುದಿಲ್ಲ. ಬಹಳಷ್ಟು ಜನರಿಗೆ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರದೇ ಕೆಲವು

ಛೇರ್ಮನ್‌ರವರು ಇವತ್ತಿಗೂ ಕೂಡ ಹೆಬ್ಬೆಟು ಒತ್ತುತ್ತಿದ್ದಾರೆ. ಹಾಗೆಯೇ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿ ಬರೆದುಕೊಂಡು ಬಂದಂಥ ಚೆಕ್‌ಗೆ ಸಹಿ ಮಾಡಿ ಬಿಲ್‌ನ್ನು ಪಾಸ್ ಮಾಡಿಕೊಂಡು ಹೋಗತಕ್ಕಂಥ ಉದಾಹರಣೆಗಳಿವೆ. ಇದಕ್ಕೆ ಸಂಬಂಧಪಟ್ಟಂತೆ ಇವತ್ತಿನದಿವಸ ಅನೇಕ ಕೇಸ್‌ಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೆಲಮಂಗಲ ತಾಲ್ಲೂಕಿನ ಬೇಗೂರು ಗ್ರಾಮ ಪಂಚಾಯತಿಯ ಕಾರ್ಯದರ್ಶಿ 20 ಸಾವಿರ ಟ್ಯಾಕ್ಸ್ ಕಲೆಕ್ಟ್ ಮಾಡಿರತಕ್ಕಂಥದ್ದಕ್ಕೆ ಬಿಲ್ ಹಾಕಿ ಅನಂತರ ಡ್ಯೂಪ್ಲಿಕೇಟ್ ಬಿಲ್‌ನಲ್ಲಿ 2000 ರೂಪಾಯಿ ಎಂದು ಬಿಲ್ ಹಾಕಿಕೊಂಡು 18,000 ರೂಪಾಯಿಗಳನ್ನು ಸರ್ಕಾರಕ್ಕೆ ದ್ರೋಹ ಮಾಡಿರತಕ್ಕಂಥ ಕೃತ್ಯ ನಡೆದಿದೆ. ಸಂಬಂಧಪಟ್ಟಂಥ ಅಧಿಕಾರಿಯನ್ನು ಈಗ ಸಸ್ಪೆಂಡ್ ಮಾಡಲಾಗಿದೆ. ಇದನ್ನು ತಪ್ಪಿಸಬೇಕಾದರೆ, ಉತ್ತಮ ಆಡಳಿತ ದಕ್ಷತೆಯನ್ನು ಹೊಂದಿರತಕ್ಕಂಥ ಅಧಿಕಾರಿಗಳು ಇರಬೇಕಾಗುತ್ತದೆ. ಇವತ್ತಿನದಿವಸ ನಮ್ಮಲ್ಲಿ ಉತ್ತಮ ಅಧಿಕಾರಿಗಳು ಸಾಕಷ್ಟು ಜನರಿದ್ದಾರೆ. ಆದರೆ, ಕೆಲವು ಅಧಿಕಾರಿಗಳು ಈ ರೀತಿಯಾಗಿ ಅನ್ಯಾಯ ಮಾಡತಕ್ಕಂಥವರನ್ನು ಪತ್ತೆಹಚ್ಚಿ ಶಿಕ್ಷೆ ಕೊಡುವುದಕ್ಕೋಸ್ಕರ ಒಂದು ಪ್ರತ್ಯೇಕ ವಿಂಗ್‌ನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆ ಹೇಳುವುದಾದರೆ, ಬರಪರಿಹಾರಕ್ಕೆ ವಿತರಣೆ ಮಾಡಬೇಕಾಗಿರತಕ್ಕಂಥ ಸುಮಾರು 225 ಕ್ವಿಂಟಲ್ ಅಕ್ಕಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿನ ಪಂಚಾಯತಿಯಿಂದ ದೊಡ್ಡಬಳ್ಳಾಪುರಕ್ಕೆ ಮಾರಾಟ ಮಾಡುವುದಕ್ಕೋಸ್ಕರ ತೆಗೆದುಕೊಂಡು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ದೊಡ್ಡಬಳ್ಳಾಪುರು ಪೋಲೀಸ್‌ನವರು ಇದನ್ನು ಸೀಜ್ ಮಾಡಿದರು. ಆ ನಂತರ ಇದರ ಬಗ್ಗೆ ಬೆಂಗಳೂರು ಜಿಲ್ಲಾಧಿಕಾರಿಗಳು ತನಿಖೆ ಮಾಡಿ ಇ.ಓ.ರವರನ್ನು ಸಸ್ಪೆಂಡ್ ಮಾಡಿದ್ದಾರೆ. ಆದ್ದರಿಂದ ಇವುಗಳೆಲ್ಲವನ್ನೂ ಪತ್ತೆ ಹಚ್ಚುವುದಕ್ಕೋಸ್ಕರ ಒಂದು ಪ್ರತ್ಯೇಕ ವಿಂಗ್ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಕೂಡಲೇ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಚ್ಛಗ್ರಾಮ ಎಂಬ ಯೋಜನೆಯನ್ನು ಮಾಡುತ್ತಿದ್ದೇವೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಗೋಸ್ಕರ ಸರ್ಕಾರ ಇವತ್ತಿನದಿವಸ ಪಂಚಾಯತಿಗೆ ಸಾಕಷ್ಟು ಶಕ್ತಿ ಕೊಟ್ಟಿದೆ. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುವ ಜನರ ಆರೋಗ್ಯ ಕಾಪಾಡುವುದಕ್ಕೋಸ್ಕರ ಉತ್ತಮವಾದ ಚರಂಡಿ ಮತ್ತು ರಸ್ತೆಯ ವ್ಯವಸ್ಥೆಯನ್ನು ಮಾಡುವುದಕ್ಕೆ ಮತ್ತು ಮಕ್ಕಳಿಗೋಸ್ಕರ ಅಂಗನವಾಡಿ ಕೇಂದ್ರ ಹಾಗೂ ಸ್ಕೂಲ್ ವ್ಯವಸ್ಥೆ ಮಾಡಿ ಎಂದು ಸರ್ಕಾರ ಇವತ್ತಿನದಿವಸ ಸಾವಿರಾರು ಸುತ್ತೋಲೆಯನ್ನು ಹೊರಡಿಸುತ್ತಿದೆ. ಮಾನ್ಯ ಮುಖ್ಯಮಂತ್ರಿಯವರ ಕನಸಾಗಿರತಕ್ಕಂಥ ನವಗ್ರಾಮದ ಬಗ್ಗೆ ಹೇಳುವುದಾದರೆ, ನವಗ್ರಾಮ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿಯೇ ನಮ್ಮ ತಾಲ್ಲೂಕಿನ ಕೊರಟಗೆರೆ ಒಳ್ಳೆಯ ಹೆಸರನ್ನು ಗಳಿಸಿದೆ. ನಮ್ಮ ಎಕ್ಸಿಕ್ಯೂಟಿವ್ ಆಫೀಸರ್ ಆಗಿರತಕ್ಕಂಥ ಸಿದ್ಧರಾಮಯ್ಯರವರ ಮತ್ತು ಸೆಂಟ್ರಲ್‌ನ ಆರ್.ಡಿ.ಪಿ.ಆರ್. ಕಾರ್ಯದರ್ಶಿಯಾಗಿರತಕ್ಕಂಥ ನಾಯರ್‌ರವರು ನಮ್ಮಲ್ಲಿಗೆ ಬಂದು ಅಲ್ಲಿರತಕ್ಕಂಥ ನವಗ್ರಾಮವನ್ನು ಪರಿಶೀಲನೆ ಮಾಡಿ ಇದು ರಾಜ್ಯದಲ್ಲಿಯೇ ಅತ್ಯಾಧುನಿಕವಾದ ನವಗ್ರಾಮ ಎಂದು ಹೇಳಿದರು. ಆದ್ದರಿಂದ, ಈ ಒಂದು ಕನಸನ್ನು ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ಗ್ರಾಮಕ್ಕೆ ವಿಸ್ತಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ನಮಗ್ರಾಮ ಯೋಜನೆಯಲ್ಲಿ ಒಂದೇ ಕಡೆ ಕುಡಿಯುವ ನೀರಿನ ಸೌಲಭ್ಯ ಮತ್ತು ಶೌಚಾಲಯದ ವ್ಯವಸ್ಥೆ, ವಿದ್ಯುಚ್ಛಕ್ತಿ ಸಂಪರ್ಕ ಮತ್ತು

ಉತ್ತಮವಾದ ರಸ್ತೆಯ ಸೌಕರ್ಯವನ್ನು ನಮ್ಮ ಕೊರಟಗೆರೆ ತಾಲ್ಲೂಕಿನಲ್ಲು ಬಹಳ ಉತ್ತಮವಾಗಿ ಮಾಡಲಾಗಿದೆ. ಆದರೆ, ಇವತ್ತಿನ ದಿವಸ ನೆಲಮಂಗಲ ತಾಲ್ಲೂಕಿನಲ್ಲಿ ಅಧಿಕಾರಿಗಳು ಸರಿಯಾದ ಕೆಲಸ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು 100ಕ್ಕೆ 80 ರಷ್ಟು ಬಡ ಜನರ ಮನೆಯಲ್ಲಿ ವಿದ್ಯುತ್ ದೀಪ ಇಲ್ಲ. ಮತ್ತೆ ಉತ್ತಮವಾದ ಚರಂಡಿ ವ್ಯವಸ್ಥೆ ಇಲ್ಲ ಇದಕ್ಕೆ ಸಂಬಂಧಪಟ್ಟಂತೆ ಪಂಚಾಯತಿಯನ್ನು ಕೇಳಿದರೆ ನಮ್ಮಲ್ಲಿ ಹಣ ಇಲ್ಲ. ಆದ್ದರಿಂದ ಕುಟೀರ ಜ್ಯೋತಿಯಲ್ಲಿ ಕನೆಕ್ಷನ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ವಿದ್ಯುತ್ ಸಂಪರ್ಕಬೇಕೆಂದು ಅರ್ಜಿ ಕೊಟ್ಟರೆ 6 ತಿಂಗಳಾದರೂ ಕೆ.ಇ.ಬಿ.ಯಲ್ಲಿ ಸ್ಯಾಂಕ್ಷನ್ ಆಗುತ್ತಿಲ್ಲ. ಇವತ್ತಿನ ದಿವಸ ಪಂಚಾಯತಿ ಮೂಲಕ ಕುಟೀರ ಜ್ಯೋತಿಗೆ ಅರ್ಜಿಯನ್ನು ಕೆ.ಇ.ಬಿ.ಯವರಿಗೆ ಕೊಟ್ಟಿದ್ದಾರೆ, ಅದನ್ನು ಕೂಡಲೇ ಸ್ಯಾಂಕ್ಷನ್ ಮಾಡಿ ಕೊಡುವಂತೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ನಾವು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಸಭೆಗೆ ನಾವು ಹೋಗಿ ಕುಳಿತುಕೊಳ್ಳುತ್ತೇವೆ. ಇವತ್ತಿನ ದಿವಸ ಅಲ್ಲಿ ಶಾಸಕರಾಗಲಿ ಅಥವಾ ಮಂತ್ರಿಗಳಿಗಾಗಲಿ ಲೆಕ್ಕಕ್ಕೆ ಇಲ್ಲ. ಅಲ್ಲಿರತಕ್ಕಂಥ ಸದಸ್ಯರೆಲ್ಲರೂ ಒಂದೊಂದು ಲೆಟರ್ ಹೆಡ್ ಪುಸ್ತಕಗಳಲ್ಲಿ ತಮಗೆ ಬೇಕಾದ ರೀತಿಯಲ್ಲಿ ಬರೆದುಕೊಳ್ಳುತ್ತಿದ್ದಾರೆ. ಇದು ನಮ್ಮ ಹಣ ಮತ್ತು ನಮ್ಮ ಭಾಗ ಹಾಗೂ ನಮ್ಮ ಇಷ್ಟ ಎಂದು ಯಾವುದು ಸಾರ್ವಜನಿಕರಿಗೆ ಬೇಡವಾದಂಥ ಕೆಲಸವನ್ನು ಆಯ್ಕೆ ಮಾಡಿಕೊಂಡು ಇಂತಿಷ್ಟು ಪರ್ಸೆಂಟೇಜ್‌ನ್ನು ಇಂಜಿನಿಯರ್‌ಗಳು ಕೊಡಬೇಕು ಎನ್ನತಕ್ಕಂಥ ಮಟ್ಟಕ್ಕೆ ಜಿಲ್ಲಾ ಪಂಚಾಯತಿನ ಕೆಲವು ಸದಸ್ಯರು ಕೆಲಸ ಮಾಡುತ್ತಿದ್ದಾರೆ. ಎಲ್ಲರೂ ಇದೇ ರೀತಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಸುಮಾರು 20 ರಿಂದ 30 ಪರ್ಸೆಂಟ್‌ನಷ್ಟು ನಿಷ್ಠಾವಂತರು ಇದ್ದಾರೆ. ಕೊಟ್ಟಂಥ ಅಧಿಕಾರವನ್ನು ಎಷ್ಟರ ಮಟ್ಟಿಗೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಿಮ್ಮಲ್ಲಿ ಆಗಿದೆಯೋ ಇಲ್ಲವೋ ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಆದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ತುಮಕೂರು ಜಿಲ್ಲೆಯಲ್ಲಿ ಈ ರೀತಿಯಾದ ಹಗರಣಗಳು ಆಗಿದೆ. ಇವತ್ತಿನ ದಿವಸ ಜಿಲ್ಲಾ ಪಂಚಾಯತ್ ವತಿಯಿಂದ ಆಗಿರತಕ್ಕಂಥ ಕೆಲಸಗಳು 100ಕ್ಕೆ 70 ರಿಂದ 80 ಪರ್ಸೆಂಟ್‌ನಷ್ಟು ಕಳಪೆ ಕೆಲಸಗಳಾಗಿವೆ. ನಾನು ಇದನ್ನು ಚೆಕ್ ಮಾಡಿದ್ದೇನೆ. ಇವತ್ತಿನ ದಿವಸ ಸರ್ಕಾರದ ಹಣ ದುರುಪಯೋಗವಾಗುತ್ತದೆ. ಇವತ್ತಿನ ದಿವಸ ಸರ್ಕಾರ ಎಷ್ಟೇ ಸ್ಟ್ರಿಕ್ಟ್ ಆಗಿ ಸುತ್ತೋಲೆ ಹೊರಡಿಸಿದರೂ ಕೂಡ ಅವರು ಒಂದು ಕೆಟ್ಟ ಚಾಳಿ ಇಟ್ಟುಕೊಂಡು ಉತ್ತಮವಾದ ಕೆಲಸ ಮಾಡುವುದಕ್ಕೆ ಅವರು ಅನುವುಮಾಡಿಕೊಡುತ್ತಿಲ್ಲ. ಆದ್ದರಿಂದ ಒಂದು ಪ್ರತ್ಯೇಕವಾದ ಸ್ಕ್ವಾಡ್ ರಚನೆ ಮಾಡಿ ಜಿಲ್ಲಾ ಪಂಚಾಯತ್ ವತಿಯಿಂದ ಆಗತಕ್ಕಂಥ ಕೆಲಸವನ್ನು ಪರಿಶೀಲನೆ ಮಾಡಿಸತಕ್ಕಂಥ ವಿಧಾನವನ್ನು ಸರ್ಕಾರ ಮಾಡಿದರೆ ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಾಗಿ ಇವತ್ತಿನದಿವಸ ರೆವಿನ್ಯೂ ಜಾಗದ 10 ಗುಂಟೆ ಜಮೀನಿಗೆ ಖಾತೆ ಮಾಡಿಕೊಡಿ ಎಂದು ಕೊಟ್ಟರೆ ಕನ್ವರ್ಶನ್ ಆಗಿಲ್ಲ, ಆದ್ದರಿಂದ ಕನ್ವರ್ಶನ್ ಫೀಜ್ ಕಟ್ಟಬೇಕು ಮತ್ತೆ 2000 ರೂಪಾಯಿ ಫೈನ್ ಕಟ್ಟಬೇಕು ಎನ್ನತಕ್ಕಂಥ ಒಂದು ಕೆಟ್ಟ ವಾತಾವರಣ ನಿರ್ಮಾಣವಾಗಿದೆ. ಇದರ ಬಗ್ಗೆ ಸರ್ಕಾರ ದಯಮಾಡಿ ಚಿಂತನೆ ಮಾಡಬೇಕು. ಇವತ್ತಿನ ದಿವಸ ಬಡವರಿಗೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆ ಅಡಿಯಲ್ಲಿ ಎರಡು ಮನೆಗಳು ಸಿಗಬೇಕೆಂದು ಸರ್ಕಾರದ ನೀತಿ ಏನಿದೆ ಅದರ ಪ್ರಕಾರ ಅವರಿಂದ ಕನ್ವರ್ಶನ್

ಚಾರ್ಜ್ ತೆಗೆದುಕೊಳ್ಳದೇ 30 x 40 ಸುತ್ತಳತೆಯ ನಿವೇಶನದಲ್ಲಿ ಮನೆಕಟ್ಟಿಕೊಳ್ಳವುದಕ್ಕೆ ಅರ್ಜಿ ಕೊಟ್ಟರೆ ಅದಕ್ಕೆ ಲೈಸೆನ್ಸ್ ಕೊಡುವುದಕ್ಕೆ ಸರ್ಕಾರ ಆದೇಶ ಮಾಡಬೇಕೆಂದು ಬಡ ಜನತೆಯ ಪರವಾಗಿ ಸರ್ಕಾರವನ್ನು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು:– ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಸಿ. ಚನ್ನಿಗಪ್ಪ:– ಇದರ ಬಗ್ಗೆ ಮಾತನಾಡುವುದಕ್ಕೆ ನನಗೆ ಇನ್ನೂ ಸಮಯ ಬೇಕಾಗಿದೆ. ದುಯವಿಟ್ಟು ಕ್ಷಮಿಸಬೇಕು. ಬೇರೆ ಪಕ್ಷದವರಿಗೆ ಒಂದೂವರೆ ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಮ್ಮ ಜೆ.ಡಿ.(ಎಸ್.) ಪಷ್ಷಕ್ಕೆ ಕೇವಲ 20 ನಿಮಿಷಕೊಟ್ಟರೆ ಹೇಗೆ? ಇದು ನಮಗೆ ಸಾಕುಗುವುದಿಲ್ಲ.

ಉಪಾಧ್ಯಕ್ಷರು:– ಬೇಗ ಮುಗಿಸಬೇಕೆಂದು ನಾನು ಸೂಚನೆ ಕೊಟ್ಟಿದ್ದೇನಷ್ಟೆ.

ಶ್ರೀ ಸಿ. ಚನ್ನಿಗಪ್ಪ:– ತಾಲ್ಲೂಕು ಪಂಚಾಯಿತಿಯಲ್ಲಿ ಇವತ್ತು ಸಾಮಾಜಿಕ ನ್ಯಾಯ ಸಮಿತಿ ಎಂದು ಮಾಡಿದ್ದಾರೆ, ಆ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಇವತ್ತು, ಸರ್ಕಾರ ಕೊಟ್ಟಿರತಕ್ಕಂಥ ಮನೆಗಳನ್ನು ಹಂಚುವುದಕ್ಕೆ 10 ರಂತೆ ಮನೆಗಳನ್ನು ಕೊಟ್ಟಿದ್ದಾರೆ. ಆ ಮನೆಗಳನ್ನು ಇವತ್ತು ಮೆಂಬರ್‌ಗಳು ಹಂಚಿಕೊಂಡು ಅವರಿಗೆ ಯಾರು ಬೇಕು ಅವರಿಗೆ ಇವತ್ತು ಹಂಚಿ ಅನ್ಯಾಯವಾದಂತಾಗಿರುತ್ತದೆ. ದಯಮಾಡಿ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಆದಂಥ ಅನ್ಯಾಯವನ್ನು ಸರಿಪಡಿಸದೇ ಹೋದರೆ, ಇದರ ಬಗ್ಗೆ ಮಾನ್ಯ ಆರ್‌ಡಿಪಿಆರ್ ಸಚಿವರು ಒಂದು ಸೀರಿಯಸ್ಸಾದ ಸುತ್ತೋಲೆಯನ್ನು ಹೊರಡಿಸಬೇಕು. ಯಾರು ಬಡ ಫಲಾನುಭವಿಗಳು ಸಿಗುತ್ತಾರೆ ಅವರಿಗೆ ಮನೆಗಳನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ಆ ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯಲ್ಲಿ ಆರಿಸುವಂತೆ ಸೂಚನೆಯನ್ನು ಕೊಟ್ಟರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ಆ ಬಡವರಿಗೆ ಮನೆಗಳು ಸಿಗುವುದಿಲ್ಲ, ಅದರ ಜೊತೆಗೆ ಇವತ್ತು ಕೊಟ್ಟಿರುವಂಥ ಅನುದಾನವನ್ನು ನೋಡಿಕೊಂಡು ಆಕ್ಷನ್‌ಪ್ಲಾನ್ ಮಾಡುತ್ತಾರೆ, ಅಲ್ಲಿ ನಮಗೆ ನಾವು ಅಧಿಕಾರವನ್ನು ಕೊಡಿ ಎಂದು ಕೇಳುವುದಿಲ್ಲ. ಆಟ್‌ಲೀಸ್ಟ್ ಶಾಸಕರು ಎಲ್ಲರೂ ನಾವು ತಮ್ಮನ್ನು ವಿನಂತಿಯನ್ನು ಮಾಡಿಕೊಂಡು ಕೆಲಸವನ್ನು ಮಾಡಿಸುವಂಥ ಪ್ರಸಂಗ ನಮಗಾಗಿಗೆ. ಆದರೆ ನಾವು ಅಲ್ಲಿಗೆ ಹೋದಾಗ ಕುಡಿಯುವ ನೀರಿಗೆ ಶಾಸಕರನ್ನು ಬಂದು ಕೇಳುತ್ತಾರೆ, ರಸ್ತೆಗೆ ಮತ್ತು ಚರಂಡಿಗೂ ಬರುತ್ತಾರೆ, ಒಂದು ಲೈಟ್‌ನ್ನು ಹಾಕಿಸಬೇಕಾದರೂ ಕೂಡ ಸಾರ್ವಜನಿಕರು ಶಾಸಕರ ಮನೆಯ ಹತ್ತಿರ ಬರುತ್ತಾರೆ. ಆಕ್ಷನ್ ಪ್ಲಾನ್ ಮಾಡುವಾಗ ಎಲ್ಲಿ ನೆಸೆಸಿಟಿ ಇದೆ, ಯಾವ ಊರಿನಲ್ಲಿ ಯಾವ ರಸ್ತೆ ಆಗಬೇಕು, ಕುಡಿಯುವ ನೀರು ಆಗಬೇಕು ಓವರಟ್ಯಾಂಕ್ ಆಗಬೇಕು, ಅಂಗನವಾಡಿ ಆಗಬೇಕು, ಶಾಲಾ ಕಟ್ಟಡ ಆಗಬೇಕು, ಇಂತಹವುಗಳನ್ನು ಗುರುತಿಸಬೇಕಾದರೆ, ಶಾಸಕರನ್ನುಳಗೊಂಡಂಥ ಒಂದು ಆಕ್ಷನ್‌ಪ್ಲಾನ್ ಸಮಿತಿಯನ್ನು ಮಾಡುವಂಥ ಸುತ್ತೋಲೆಯನ್ನು ಸರ್ಕಾರ ಮಾಡಬೇಕು. ಇಲ್ಲದಿದ್ದರೆ, they won't care ಎಂಎಲ್‌ಎ ಹೋಗಿರಿ ನಮ್ಮಿಷ್ಟ ಎಂದು ಅನ್ನುತ್ತಾರೆ. ಯಾವ ಊರಿಗೆ ನೀರು ಬೇಕು ಅಲ್ಲಿ ಅದು ಆಗುತ್ತದೆ, ಯಾರಾದರೊಬ್ಬರು ಕಂಟ್ರಾಕ್ಟ್‌ದಾರರನ್ನು ಅವರೆ ನೇಮಕ ಮಾಡುತ್ತಾರೆ. ಅಧಿಕಾರಿಗಳ ಮೇಲೆ ದಬ್ಬಾಳಿಕೆಯನ್ನು ಮಾಡುವುದು, ಈ ಒಂದು ಕೆಟ್ಟ ಅಭಿಪ್ರಾಯ ಹೋಗಬೇಕಾದರೆ, ದಯಮಾಡಿ ಗ್ರಾಮೀಣಾಭಿವೃದ್ಧಿ ಸಚಿವರು ಈ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿ ಶಾಸಕರು ನಿಜವಾದಂಥ ಒಂದು ಸೂಚನೆಯುನ್ನು ಪಡೆಯುವಂಥ ಒಂದು ಸುತ್ತೋಲೆಯನ್ನು ಸರ್ಕಾರ ಮಾಡಿಕೊಟ್ಟರೆ ಅಲ್ಲಿ ಸಮಂಜಸವಾಗಿ, ಸರ್ಕಾರದ ಬಗ್ಗೆ ಯಾವುದೇ

ಭಿನ್ನಾಭಿಪ್ರಾಯ ಇರುವುದಿಲ್ಲ. ಅದನ್ನು ಮಾಡಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಆಶ್ರಯ ಕಾಲೋನಿಗಳಿಗೆ ಇವತ್ತು ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಆಶ್ರಯ ಕಾಲೋನಿಗಳಲ್ಲಿ ಉತ್ತಮವಾದ 20 ರಿಂದ 50 ಮನೆಗಳ ಫಾರ್ಮೇಶನ್ ಇವತ್ತು ಆಗಿರುತ್ತವೆ. ಎರಡು ವರ್ಷವಾಯಿತು ಇವತ್ತಿನವರೆಗೂ ಲೈಟ್ ಕಂಬಗಳನ್ನು ಹಾಕಿರುವುದಿಲ್ಲ. ಒಂದು ಕಂಬಕ್ಕೆ 800 ರೂಪಾಯಿಗಳನ್ನು ಕಟ್ಟಿ ಎಂದು ಕೇಳುತ್ತಿದ್ದಾರೆ. ಅವರು ಬಡವರು ಇರುವುದರಿಂದ ಕೆಇಬಿ ಯವರೆಗೆ 800 ರೂಪಾಯಿಗಳನ್ನು ಅವರಿಂದ ಕಟ್ಟುವುದಕ್ಕಾಗುವುದಿಲ್ಲ. ಕುಡಿಯುವ ನೀರಿನ ಜೊತೆಗೆ ಆ ಹರಿಜನ ಕಾಲೋನಿಗಳಿಗೆ ಮುಕ್ತಟೆಯಾಗಿ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಇದೆ ಆದರೆ ಇವತ್ತು ಕೊಡುತ್ತಿಲ್ಲ. ಇದು ಎರಡು ವರ್ಷವಾಯಿತು. ಆದ್ದರಿಂದ ದಯಮಾಡಿ ವಿದ್ಯುಚ್ಛಕ್ತಿಯ ಶುಲ್ಕ ಬರುತ್ತದೆ, ಅದನ್ನು ಸರ್ಕಾರವೇ ಬೇರ್ ಮಾಡಿ ಹರಿಜನ-ಗಿರಿಜನ ಕಾಲೋನಿಗಳಿಗೆ ಸರ್ಕಾರ ಅನುವು ಮಾಡಿಕೊಡಬೇಕು, ಆ ಕೆಲಸವನ್ನು ಇವತ್ತು ಸರ್ಕಾರ ಮಾಡಿದೆ. ಪ್ರತಿಯೊಬ್ಬರಿಗೂ ಶಿಕ್ಷಣ ಬೇಕಾದಂಥ ಒಂದು ಉತ್ತಮವಾದಂಥ ಜ್ಞಾನದ ಕೇಂದ್ರ, ಜ್ಞಾನಜ್ಯೋತಿ. ನಾವೆಲ್ಲಾ ಹಳ್ಳಿಗಳಲ್ಲಿ ಓದಿ ಬಂದಿರುವವರು, ನಾವು ಓದ ಬೇಕಾದರೆ ಹಳ್ಳಿಯಲ್ಲಿ ಯಾವುದೋ ಒಂದು ಚಾವಡಿಯಲ್ಲಿ, ಭಜನೆ ಮಂದಿರದಲ್ಲಿ ಪಾಠವನ್ನು ಅಂದು ಕಲಿಸುತ್ತಿದ್ದರು. ಅಲ್ಲಿ ಓದಿಕೊಂಡು ಬಂದಿರುವ ನಾವು ಆ ದೇವರ ದಯದಿಂದ ಹಾಗೂ ಜನರ ದಯದಿಂದ ಇಲ್ಲಿಗೆ ಬಂದು ಕುಳಿತುಕೊಂಡಿದ್ದೇವೆ. ಈವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಇವತ್ತು ಶಿಕ್ಷಣಕ್ಕೆ ಖರ್ಚು ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಅದರಲ್ಲಿಯೂ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಧುನಿಕ ರೀತಿಯಲ್ಲಿ ಶಿಕ್ಷಣವನ್ನು ಕೊಡಬೇಕು...

ಶ್ರೀ ಶಿವಾನಂದ ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಇವರ ಭಾಷಣವನ್ನು ಯಾರು ಬರೆದುಕೊಳ್ಳುತ್ತಿದ್ದಾರೆ, ಯಾರು ಕೇಳುತ್ತಿದ್ದಾರೆ.

ಉಪಾಧ್ಯಕ್ಷರು:- ರೆಕಾರ್ಡ್ ಆಗುತ್ತಿದೆ.

ಶ್ರೀ ಸಿ. ಚನ್ನಿಗಪ್ಪ:- ಇರಲಿ ಬಿಡಿ, ಅದನ್ನು ನಾನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. It is my duty to tell something to the Government.

ಶ್ರೀ ಶಿವಾನಂದ ಎಸ್.ಪಾಟೀಲ್:- ರೆಕಾರ್ಡ್ ಆಗುತ್ತಿದೆ, ಸಂಬಂಧಪಟ್ಟ ಒಬ್ಬ ಸಚಿವರಾದರೂ ಇದ್ದಾರೆಯೇ?

ಉಪಾಧ್ಯಕ್ಷರು:- ಅವರ ಪ್ರಶ್ನೆಗೆ ಉತ್ತರ ಸಿಕ್ಕರೆ ಸಾಕಲ್ಲವೇ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ:- ಮಾನ್ಯ ಉಪಾಧ್ಯಕ್ಷರೆ, ತಾವು ಏನು ಹೇಳಿದಿರಿ, ರೆಕಾರ್ಡ್ ಅಂತೂ ಆಗುತ್ತಿದೆ, ನಾವು ಕಳೆದ ನಾಲ್ಕು ವರ್ಷಗಳಿಂದ ಇದನ್ನೇ ಮಾಡಿಕೊಂಡು ಬಂದಿದ್ದೇವೆ. ನಾವು ಮಾತನಾಡಿರುವ ಬಗ್ಗೆ ರೆಕಾರ್ಡ್ ಮಾತ್ರ ಆಗಿರುವುದು. ರಿಪ್ಲೈ ನಮಗೆ ಏನೂ ಸಿಕ್ಕಿಲ್ಲ. ಅದು ನಮಗೆ ನೋವು ಇದೆ.

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಉಪಾಧ್ಯಕ್ಷರೆ, ರಿಪ್ಲೈ ಮಾಡಿ ಅನುಕೂಲ ಮಾಡಿಕೊಟ್ಟರೆ ಸರ್ಕಾರ ಮತ್ತೆ ಬರುತ್ತದೆ, ಇಲ್ಲದಿದ್ದರೆ ಜನರು ಇವರನ್ನು ಮನೆಗೆ ಕಳುಹಿಸುತ್ತಾರೆ. ಆರಿಸಿ ಕಳುಹಿಸಿರುವ ಜನರು ನಮ್ಮನ್ನು ನೋಡಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ, ಅವರುಗಳು ಸಹ ಎಲ್ಲವನ್ನೂ ವೀಕ್ಷಣೆ ಮಾಡುತ್ತಾರೆ. ನಮ್ಮ ಆಕ್ಟಿವಿಟೀಸ್‌ನ್ನು ಬೆಳಿಗ್ಗೆ ಎದ್ದ ತಕ್ಷಣ ಅವರು ನೋಡುತ್ತಾರೆ. ಓಹೋ ಇವರು ಈ ರೀತಿಯಾದ ಮಟ್ಟದಲ್ಲಿ ಕೆಲಸವನ್ನು ಮಾಡುತ್ತಾರೆಯೇ ಎಂದು ಮನೆಗೆ ಕಳುಹಿಸುವಂಥ

ಪರಿಸ್ಥಿತಿ ಬರುತ್ತದೆ. ನಾವು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾದದ್ದು ಇಲ್ಲ. ಇವತ್ತು ನಾವು ಸರ್ಕಾರವನ್ನು ಕೇಳುವಂಥದ್ದು ನಮ್ಮೆಲ್ಲರ ಕರ್ತವ್ಯ ನಾವು ಕೇಳುತ್ತಿದ್ದೇವೆ. ಆ ವಿಷಯವನ್ನು ಅವರ ಮುಂದೆ ಇಡುತ್ತೇವೆ, ಅದನ್ನು ಮಾಡುವ ಸಲುವಾಗಿ ಸರ್ಕಾರವನ್ನು ಮಾಡಿದ್ದಾರೆ ಅವರ ಡ್ಯುಟಿಯನ್ನು ಅವರು ಮಾಡುತ್ತಾರೆ. ಇಲ್ಲದಿದ್ದರೆ ಜನರು ಅವರಿಗೆ ಬುದ್ಧಿಯನ್ನು ಕಲಿಸುವಂಥ ಕಾಲ ಬರುತ್ತದೆ, ಕಲಿಸುತ್ತಾರೆ. ಅದು ನಮ್ಮ ಡ್ಯುಟಿ ಅಲ್ಲ ಬಿಡಿ, ಅದು ನಮಗೆ ಸಂಬಂಧಿವಿಲ್ಲ. ದಯಮಾಡಿ ಇವತ್ತು ಶಿಕ್ಷಣವನ್ನು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದರ ಮುಖಾಂತರ ಇವತ್ತು ಉತ್ತಮವಾದಂಥ ಶಾಲಾ ಕೊಠಡಿಗಳು ಬೇಕು. ಉತ್ತಮವಾದ ಶಿಕ್ಷಕರು ಬೇಕು, ಆ ಶಿಕ್ಷಕರಿಗೆ ಒಳ್ಳೆಯ ಟ್ರೈನಿಂಗ್ ಕೊಡಬೇಕು. ಇದರ ಜೊತೆಗೆ ಎಕ್ವಿಪ್‌ಮೆಂಟ್ಸ್ ಬೇಕು, ಆಟೋಪಕರಣ, ಪಾಠೋಪಕರಣ, ಪೀಠೋಪಕರಣ ಎಲ್ಲಾ ಬೇಕೆಂದು ವೈಜ್ಞಾನಿಕವಾಗಿ ಆ ಇಲಾಖೆಗೆ ತನ್ನದೇ ಆದಂಥ ಒಂದು ಸಾದ್ಭಾವನೆಯನ್ನಿಟ್ಟು ನಮ್ಮ ಸರ್ಕಾರ ರಾಜ್ಯ ಸರ್ಕಾರವಾಗಬಹುದು, ಕೇಂದ್ರ ಸರ್ಕಾರವಾಗಬಹುದು ಒಂದು ಉತ್ತಮವಾದಂಥ ನೀತಿಯನ್ನು ಇವತ್ತು ಜಾರಿಗೆ ತಂದಿದೆ. ಆ ಒಂದು ವಿಚಾರದಲ್ಲಿ ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹೈಸ್ಕೂಲ್ ಟೀಚರ್‌ಗೆ ಪಿಸಿಎಂ ಆಗಿರಬೇಕು, ಆರ್ಟ್ಸ್, ಸೈನ್ಸ್, ಕಾಮರ್ಸ್‌ಗಳಿಗೂ ಎಲ್ಲಾ ಟೀಚರ್ಸ್‌ಗಳು ಇರಬೇಕು. ಎಕನಾಮಿಕ್ಸ್, ಹಿಸ್ಟರಿ, ಪೊಲಿಟಿಕಲ್ ಸೈನ್ಸ್, ಕೆಮೆಸ್ಟ್ರಿ, ಫಿಜಿಕ್ಸ್ ಬಯಲೋಜಿ ಎಲ್ಲಾ ಸಬ್ಜೆಕ್ಟ್ ಮೇಷ್ಟ್ರ ಇರಬೇಕು. ಟ್ರೈನಿಂಗ್ ಮಾಡಿದವರು ಬಿ.ಇಡ್ ಅಥವಾ ಟಿಸಿಹೆಚ್ ಆಗಿರಬಹುದು, ಅವರು ತಮ್ಮ ಸಬ್ಜೆಕ್ಟ್ ಪ್ರಕಾರ ಟ್ರೈನಿಂಗ್ ಮಾಡಿರುತ್ತಾರೆ. ಮೆಥಮೆಟಿಕ್ಸ್ ಟೀಚರ್ ಹೈಸ್ಕೂಲಿನಲ್ಲಿ ಸಿಕ್ಕುವುದೇ ಇಲ್ಲ. ನಮ್ಮ ಊರಿನ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲೀಷ್ ಶಿಕ್ಷಕರು ಇಲ್ಲವೇ ಇಲ್ಲ. ಎರಡು ವರ್ಷವಾಗಿರುವುದರಿಂದ ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಂಡೆ, ಸ್ವಾಮಿ, ನಮ್ಮಲ್ಲಿ ಇಂಗ್ಲೀಷ್ ಶಿಕ್ಷಕರು ಇಲ್ಲದಿರುವುದರಿಂದ ಒಬ್ಬ ಉತ್ತಮ ಶಿಕ್ಷಕರನ್ನು ಹಾಕಿಕೊಡಿ ಎಂದು ಬರೆದು ಕೊಟ್ಟಿರುತ್ತೇನೆ. ಅವರು ಕೂಡಲೇ ಅಲ್ಲಿಗೆ ಶಿಕ್ಷಕರನ್ನು ನಿಯೋಜಿಸಿ ಎಂದು ಬರೆದರು, ಆದರೆ ಯಾರೂ ಬರಲಿಲ್ಲ, ಎರಡು ವರ್ಷದಿಂದ ಆ ಮಕ್ಕಳ ಇಂಗ್ಲೀಷ್ ಕಲಿಕೆ ಏನಾಗಬೇಕು? ದಯಮಾಡಿ, ಮಾನ್ಯ ಸಚಿವರು ಇದರ ಬಗ್ಗೆ ಚಿಂತನೆ ಮಾಡಿ, ನಾನು ಓಪನ್ ಆಗಿ ಹೇಳುತ್ತೇನೆ. ನಮ್ಮದೇನು, ಇದರಲ್ಲಿ ಸ್ವಾರ್ಥ ಏನಿದೆ? ದಯಮಾಡಿ ನಾನು ಅದಕ್ಕೋಸ್ಕರವಾಗಿ ಹೇಳುತ್ತೇನೆ. ಊರಿನಲ್ಲಿ ಯಾವುದೇ ಇರಲಿ, ಬಿಡಲಿ ಉತ್ತಮವಾದ ಶಾಲಾ ಕೊಠಡಿಗಳು, ಉತ್ತಮವಾದ ಶಿಕ್ಷಕರು ಬಹಳ ಮುಖ್ಯ. ಇವತ್ತು ಬಿಸಿಯೂಟವನ್ನು ಕೊಡುತ್ತೀರಿ ಅದರ ಬಗ್ಗೆ ನಾನು ಸ್ವಾಗತವನ್ನು ಮಾಡುತ್ತೇನೆ. ಒಳ್ಳೆಯದು ಬಡಮಕ್ಕಳಿಕೆ ಊಟ ಸಿಗಬೇಕು, ಆದರೆ ನೀವು 1ನೇ ತರಗತಿಯಿಂದ 5ನೇ ತರಗತಿಯವರೆಗೆ ಮಾತ್ರ ಕೊಡುತ್ತೀರಿ, 6,7,8, ಕ್ಲಾಸಿನ ಹುಡುಗರು ನೋಡುತ್ತಿರುತ್ತಾರೆ, ಇದು ಯಾವ ನೀತಿ? ಅಲ್ಲಾ ಸ್ವಾಮಿ ಒಂದೇ ಸ್ಕೂಲಿನಲ್ಲಿ 1 ರಿಂದ 8 ನೇತರಗತಿಯ ಸ್ಕೂಲ್ ಇದೆ. ನಮ್ಮಲ್ಲಿ ಗುರುಗನಹಳ್ಳಿ ಎಂದಿದೆ, ನಮ್ಮಲ್ಲಿ ಆಧುನಿಕ ಶಿಕ್ಷಣಬೇಕು ಅಂದರೆ ಆರೋಗ್ಯವನ್ನು ಕಾಪಾಡಬೇಕು. ಮಕ್ಕಳಿಗೆ ಮೊಟ್ಟೆಯನ್ನು ಕೊಡಬೇಕು, ಹಾಲು ಕೊಡಬೇಕು, ಇದನ್ನು ನಾವು ಸೈಂಟಿಫಿಕ್ ಆಗಿ ಮಾಡುವುದಕ್ಕೆ ನಾವು ಹೊರಟಿರುತ್ತೇವೆ. ನಾವು ಅಡುಗೆಯನ್ನು ಮಾಡುವ ಜಾಗ ಬೀದಿಯಲ್ಲಿ ಒಂದು ಪಾತ್ರೆಯನ್ನು ಇಟ್ಟುಕೊಂಡು, ಹಕ್ಕಿಪಿಕ್ಕಿ ಜನಾಂಗದವರು ಅಡುಗೆ ಮಾಡುತ್ತಾರಲ್ಲಾ ಆ ರೀತಿಯಾಗಿ ಅಡುಗೆಯನ್ನು ಮಾಡಿ ಮಕ್ಕಳಿಗೆ ಹಾಕುತ್ತೇವೆ. ಅವರು ಮಕ್ಕಳಿಗೆ ತಟ್ಟೆಯನ್ನು ಈ ರೀತಿಯಾಗಿ ಹಿಡಿದುಕೊಂಡು ಬನ್ನಿ ಎಂದು ಹೇಳುತ್ತಾರೆ. ಅಲ್ಲಿ ಅಡುಗೆಯ ಮನೆ ಎಂದು ಇದೆಯಾ? ಊಟವನ್ನು ಮಾಡುವುದುಕ್ಕೆ

ನೀವು ಯಾವುದಾದರೊಂದು ಹಾಲ್‌ನ್ನು ಮಾಡಿದ್ದೀರಾ? ಅಲ್ಲಿ ಸ್ಟೌವ್ ಇದೆಯಾ? ಪೂರ್ವನಿಯೋಜಿತವಾದ ಯಾವ ಒಂದು ಯೋಜನೆ ಇಲ್ಲದೆ ನಮ್ಮ ನಾಗರೀಕ ಮಕ್ಕಳನ್ನು ಅನಾಗರೀಕ ವ್ಯವಸ್ಥೆಯ ಕಡೆಗೆ ಕೊಂಡೊಯ್ಯುವಂತೆ ಮಾಡಿದ್ದಾರೆ. ಇದರ ಮಾನ್ಯ ಸಚಿವರು ಕೊಡಲೇ ಒಂದು ಚಿಂತನೆಯನ್ನು ಮಾಡಿ ಮಕ್ಕಳಿಗೆ ಆರೋಗ್ಯಕರವಾದಂಥ ಊಟವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಆ ಯೋಜನೆಯನ್ನು ಕೈಬಿಟ್ಟು ಅದೇ ಅಕ್ಕಿ ಮತ್ತು ಹಣವನ್ನು ಆ ರೈತರ ಬಡಮಕ್ಕಳಿಗೆ ಕೊಟ್ಟು, ವಿದ್ಯಾರ್ಥಿಗಳಿಗೆ ಕೊಟ್ಟು ಸಹಕರಿಸಬೇಕೆಂದು ನನ್ನ ಅನಿಸಿಕೆಯಾಗಿದೆ. ಆದರೆ ನಿಮಗೆ ಇಷ್ಟಬಂದಂತೆ ನೀವು ಮಾಡುತ್ತೀರಿ ಮಾಡಿ. ನನಗೆ ಒಬ್ಬ ಮೇಷ್ಟ್ರ ಹೇಳಿದರು ಸೌದೆ ತರಿಸಬೇಕು, ಸೀಮೆ ಎಣ್ಣೆ ತರಿಸಬೇಕು, ನಮಗೆ ಇನ್ನೂ ಸ್ಟೌವ್ ಬಂದಿಲ್ಲ, ಸೀಮೆಎಣ್ಣೆ ಬಂದಿಲ್ಲ, ಅಕ್ಕಿಯಲ್ಲಿ ಕಂಪ್ಲೀಟ್ ಹುಳ ಬಿದ್ದು ಹೋಗಿದೆ. ಒಳ್ಳೆಯ ಅಕ್ಕಿ ಎಲ್ಲಾ ಕಡೆ ಬಂದಿಲ್ಲ, ಕೆಲವು ಬಂದಿವೆ. ಕೆಲವು ಶಾಲೆಗಳಲ್ಲಿ ಕಂಪ್ಲೇಂಟ್ಸ್ ಇಲ್ಲ. 100 ಕ್ಕೆ 70 ಪರ್ಸೆಂಟ್ ಶಾಲೆಗಳಲ್ಲಿ ಇವತ್ತು ಸರಿಯಾಗಿ ಪಾತ್ರೆಯ ಸಾಮಾನುಗಳು ಬಂದಿರುವುದಿಲ್ಲ. ಸರಿಯಾಗಿ ಬೇಳೆ ಬಂದಿಲ್ಲ, ಸರಿಯಾದ ಎಣ್ಣೆ ಇಲ್ಲ, ಅಂಗನವಾಡಿ ಶಾಲೆಗಳಲ್ಲಿ ಶಿಕ್ಷಕರು ಕೆಲವೊಂದನ್ನು ಕದ್ದು ಓಯ್ಯುತ್ತಿದ್ದರು, ಆದರೆ ಇವತ್ತು ಈ ಶಿಕ್ಷಕರು ಪಾಠವನ್ನು ಮಾಡುವುದು ಬಿಟ್ಟು ಬೋಧನೆಯನ್ನು ಬಿಟ್ಟು, ಅಡುಗೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ, ಈ ಮಟ್ಟಕ್ಕೆ ಸರ್ಕಾರ ಹೋಗಬಾರದು. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ಸರ್ಕಾರ ಆಧುನಿಕ ಶಿಕ್ಷಣಕ್ಕೆ ಕೊಡುವಂಥ ಒತ್ತನ್ನು ಆದಷ್ಟು ಬೇಗ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳ ನಿಜವಾದ ಅನಿಸಿಕೆಯನ್ನು ಸ್ವಾಗತ ಮಾಡುತ್ತೇನೆ. ಅವರು ಎಷ್ಟೇ ಇರಲಿ, ಹೈಟೆಕ್ ಕರ್ನಾಟಕ ಮಾಡುತ್ತೇನೆಂದು ಹೇಳಿದರು, ಅದನ್ನು ನಾನು ಅಪ್ರೀಷಿಯೇಟ್ ಮಾಡುತ್ತೇನೆ. ಅವರು ಹೈಟೆಕ್ ಕರ್ನಾಟಕವನ್ನು ಮಾಡಲಿ, ಪ್ರತಿಯೊಬ್ಬರಿಗೂ ಊಟವನ್ನು ಕೊಡಲಿ ನಾನು ಬೇಡವೆಂದು ಹೇಳುವುದಿಲ್ಲ, ಕೊಡುವಂಥ ಈ ಊಟ ನಿಜವಾಗಲೂ ಆರೋಗ್ಯಕ್ಕೆ ಅನುಕೂಲವಾಗಬೇಕು, ಆಧುನಿಕವಾಗಿರಬೇಕು, ಉತ್ತಮವಾದಂಥ ಪಾಕಶಾಲೆ ಇರಬೇಕು, ಉತ್ತಮವಾದಂಥ ಮಕ್ಕಳಿಗೆ ಭೋಜನಕ್ಕೆ ಜಾಗವಿರಬೇಕು, ಆಗ ಆಧುನಿಕವಾದಂಥ ಮನಸ್ಸು ಬಂದು ಆ ಕಲಿಕೆಯಲ್ಲಿ ಮಕ್ಕಳ ಇಂಟ್ರೆಸ್ಟ್ ಹೆಚ್ಚಾಗಿ ಅಭಿವೃದ್ಧಿಯಾದರೆ ಒಳ್ಳೆಯದು, ಇಲ್ಲದಿದ್ದರೆ ಭಿಕ್ಷೆ ಬೇಡುವಂಥ ಒಂದು ಪರಿಪಾಠವನ್ನು ಕಲಿಯುತ್ತಾರೆ. ಶಿಕ್ಷಣ ಕಲಿತು ಅಪಾಯಿಂಟ್‌ಮೆಂಟ್ ಸಿಗದಿದ್ದರೆ ಬೇಡುವುದಕ್ಕೆ ಹೋಗುತ್ತಾರೆ: ಅದು ಆಗಬಾರದು. ಆ ಒಂದು ಕೆಟ್ಟ ನೀತಿಯನ್ನು ದಯಮಾಡಿ ಸರ್ಕಾರ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೈಸ್ಕೂಲ್‌ಗಳಲ್ಲಿ ಎಲ್ಲಾ ಸಬ್ಜೆಕ್ಟ್ ಮೇಸ್ಟ್ರಗಳನ್ನು ಕೂಡಲೇ ನಿಯೋಜಿಸಬೇಕು. ಪ್ರೈಮರಿ ಸ್ಕೂಲ್‌ನಲ್ಲಿ ಶಿಕ್ಷರ ಟ್ರೈನಿಂಗ್ ಆದಮೇಲೆ ಅವರಿಂದ ಬೋರ್ಡ್ ಮೇಲೆ ಬರೆಸಿ: ಇದರ ಬಗ್ಗೆ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ನಮ್ಮ ಸಚಿವರು ಇಲ್ಲ, ಟಿ.ಸಿ.ಹೆಚ್. ಮಾಡಿರುವಂತಹ ಕೆಲವು ಮೇಷ್ಟ್ರಗಳು ಹಳ್ಳಿ ಕಡೆಗಳಲ್ಲಿ ಇದ್ದಾರೆ. ಅವರಿಗೆ ಕಂಪ್ಲೀಟಾಗಿ ಕಾಗುಣಿತವೇ ಬರುವುದಿಲ್ಲ, ಅವರಿಗೆ ಏನಾದರೂ ಎಕ್ಸಾಮ್ ಮಾಡಿದರೆ ಅವರೇ ಫೇಲಾಗುತ್ತಾರೆಂದು ನಾನು ಹೇಳುತ್ತೇನೆ. ಅಂತಹ ಶಿಕ್ಷಕರು ಪಾಠ ಮಾಡುವಂತಹ ಮಟ್ಟಕ್ಕೆ ಹೋಗಿದ್ದಾರೆ. ಕಾರಣವೇನೆಂದರೆ ಟಿಸಿಹೆಚ್ ಕಾಲೇಜುಗಳಲ್ಲಿ ಓದುವುದಕ್ಕೆ 50 ಸಾವಿರದಿಂದ ಹಿಡಿದು ಒಂದು ಲಕ್ಷರೂವರೆಗೆ ಡೊನೇಷನ್‌ನ್ನು ತೆಗೆದುಕೊಳ್ಳುತ್ತಾರೆ. ಅಷ್ಟಕ್ಕೆ ಅದು ಸೀಮಿತವಾಗಿದೆಯೇ ಹೊರತು ಅವರಿಗೆ ಉತ್ತಮವಾದಂತಹ ಟ್ರೈನಿಂಗ್ ಕೊಡುವುದಕ್ಕೆ ಸೀಮಿತವಾಗಿ ಯಾವುದೇ ಒಂದು ಸಂಸ್ಥೆ ಇಲ್ಲ. ಅದು ಗೌರ್ನಮೆಂಟ್ ಕಾಲೇಜು ಅಥವಾ ಪ್ರೈವೇಟ್

ಇನ್‌ಸ್ಟಿಟ್ಯೂಷನ್ ಆಗಬಹುದು. ಅವರಿಗೆ ಯಾವುದೇ ಒಂದು ಆಸಕ್ತಿ ಇಲ್ಲ, ದಯಮಾಡಿ ಕೂಡಲೇ ಇದರ ಬಗ್ಗೆ ಸರ್ಕಾರ ಸರಿಯಾದ ಚಿಂತನೆಯನ್ನು ಮಾಡದೆ ಇದ್ದರೆ ಇದಕ್ಕೆ ಸರ್ಕಾರವೇ ಕಾರಣ. ಈ ರಾಜ್ಯದ ಅನೀತಿಗೆ ಮತ್ತು ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಇವರೇ ಕಾರಣವೆಂದು ಹೇಳಬೇಕಾಗುತ್ತದೆ. ದಯಮಾಡಿ ಸರ್ಕಾರ ಇದನ್ನು ಸರಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಮತ್ತು ಕುಟುಂಬ ವಿಚಾರದ ಬಗ್ಗೆ ಹೇಳುವುದಾದರೆ ಕೋಟ್ಯಾಂತರ ರೂಪಾಯಿಯನ್ನು ಬಜೆಟ್‌ನಲ್ಲಿ ಮಾಡುತ್ತೀರಿ. ಅದು ತಮಾಷೆ ಅಲ್ಲ.

ಉಪಾಧ್ಯಕ್ಷರು:– ತಮಗೆ ಬೆಲ್ ಹೊಡೆಯುವುದು ಕೇಳುತ್ತಿಲ್ಲವೇ?

ಶ್ರೀ ಸಿ. ಚನ್ನಿಗಪ್ಪ:– ಮಾನ್ಯ ಉಪಾಧ್ಯಕ್ಷರೆ, ಆ ಆರೋಗ್ಯದಲ್ಲಿ ಇವತ್ತು ಆಸ್ಪತ್ರೆಗಳನ್ನು ಹಳ್ಳಿಗಳ ಕಡೆಗಳಲ್ಲಿ ಮಾಡಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ಇವತ್ತು ಡಾಕ್ಟರ್‌ಗಳೇ ಇಲ್ಲ. ಸರ್ಕಾರವೇ ಆಸ್ಪತ್ರೆ ಕಟ್ಟಿದೆ, ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ, ಆಸ್ಪತ್ರೆ ಬಿಲ್ಡಿಂಗ್ ಕಟ್ಟಿದ್ದಾರೆ. ಇವತ್ತು ತುಮಕೂರಿನ ಆಸ್ಪತ್ರೆ ಹಾಗೂ ತ್ಯಾಮಗೊಂಡ್ಲು ಆಸ್ಪತ್ರೆಯಲ್ಲಿ ಹೆಂಚುಗಳೆಲ್ಲವೂ ಬಿದ್ದುಹೋಗಿವೆ. ಗಾಳಿಯು ಬರುತ್ತದೆ, ಆ ಬಿಲ್ಡಿಂಗ್ ರಿಪೇರಿಯಾಗಿರುವುದಿಲ್ಲ. ಅಲ್ಲಿಗೆ ಡಾಕ್ಟರ್‌ನ್ನು ಹಾಕಿದರೆ ಒಬ್ಬರೂ ಇರುವುದಿಲ್ಲ. ಅಲ್ಲಿ ರಾತ್ರಿ ಹೊತ್ತಿನಲ್ಲಿ ಯಾರೊಬ್ಬ ಡಾಕ್ಟರ್ ಇರುವುದಿಲ್ಲ. ಹಳ್ಳಿಗಳ ಕಡೆಗಳಲ್ಲಿ ಹೆಣ್ಣುಮಕ್ಕಳು ಹೆರಿಗೆಗೆ ಬಂದರೆ ಯಾವ ಡಾಕ್ಟರ್ ಇಲ್ಲದೆ ಅನೇಕ ಜನರು ಸತ್ತಿದ್ದಾರೆ. ಇದು ತಮಾಷೆ ಅಲ್ಲ, ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿಮಾಡುತ್ತೇನೆ ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕು. ಮಾನ್ಯ ಸಚಿವರು ಈ ಸದನದಲ್ಲಿ ಕುಳಿತಿದ್ದಾರೆ. ತಾವು ಏನು ಡಾಕ್ಟರ್‌ಗಳನ್ನು ನಿಯೋಜಿಸಿದ್ದೀರಿ, ಆ ಡಾಕ್ಟರ್ 24 ಗಂಟೆ ಶಿಫ್ಟ್, ಬೈ ಶಿಫ್ಟ್ ಹಳ್ಳಿಗಳಲ್ಲಿ ಕೆಲಸ ಮಾಡುವಂತೆ ಆಗಬೇಕು. ಹೋಬಳಿ ಹೆಡ್ ಕ್ವಾಟರ್‌ನಲ್ಲಿ ಯಾವ ಆಸ್ಪತ್ರೆಗಳೂ ಇಲ್ಲ. ಮಾನ್ಯ ಸಭಾಪತಿಯವರು ಹೇಳುತ್ತಿದ್ದರು, ಸ್ಟಾಫ್ ನರ್ಸಸ್ ಇಲ್ಲ. ಹೆರಿಗೆ ಮಾಡಿಸುವಂತಹ ನರ್ಸ್‌ಗಳನ್ನು ಕೇಳಿದರೆ ಇಲ್ಲ ಹೋಗಿ ನೀವು ಪ್ರೈವೇಟ್ ಆಸ್ಪತ್ರೆಗೆ ಹೋಗಿ ಎಂದು ಹೇಳುತ್ತಾರೆ. ಅವರ ಹತ್ತಿರ 100 ರೂಪಾಯಿಗಳು ಕೂಡ ಚಾರ್ಜ್‌ಗೆ ಇರುವುದಿಲ್ಲ. ಹೆಣ್ಣುಮಗಳು ಹೆರಿಗೆಗಾಗಿ ಬೆಂಗಳೂರಿಗೆ ಹೋಗಿ ಎಂದು ಹೇಳಿದರೆ ಯಾವ ಕಾರುಸಿಗುತ್ತದೆ, ಯಾವ ಬಸ್ಸು ಸಿಗುತ್ತದೆ? ಅವರಿಗೆ ದುಡ್ಡು ಕೊಡುತ್ತಾರೆ? ಇಂಥ ಅನ್ಯಾಯ ಆಗಬಾರದು, ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ನಡೆಸಿ ಕೂಡಲೇ ಪ್ರತಿಯೊಂದು ಆಸ್ಪತ್ರೆಗಳಲ್ಲಿಯೂ ಕೂಡ ಹೋಬಳಿಗಳಲ್ಲಿ ಲೇಡಿ ಡಾಕ್ಟರ್‌ನ್ನು ರಾತ್ರಿ ಮತ್ತು ಹಗಲು ಡ್ಯೂಟಿ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಇವತ್ತು ಬ್ಲಡ್ ಟೆಸ್ಟ್ ಮಾಡುವುದಕ್ಕೆ ಟೆಕ್ನಿಷಿಯನ್‌ಗಳು ಇಲ್ಲ, ಆಸ್ಪತ್ರೆಗೆ ಜ್ವರ ಬಂತು ಎಂದು ಹೋದರೆ ನೀವು ಹೋಗಿ ತುಮಕೂರಿಗೆ ಇಲ್ಲ ಬೆಂಗಳೂರಿಗೆ ಹೋಗಿ ಟೆಸ್ಟ್ ಮಾಡಿಸಿಕೊಂಡು ಬನ್ನಿ ಎಂದು ಬರೆದುಕೊಂಡುತ್ತಾರೆ. ಅಲ್ಲಿ ಬ್ಲಡ್ ಟೆಸ್ಟ್ ಮಾಡುವುದಕ್ಕೆ ಸುಮಾರು 200 ರೂಪಾಯಿಗಳಾಗುತ್ತದೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿ ಇರಬೇಕಾಗಿತ್ತು, ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೂಡಲೇ ಪ್ರತಿ ತಾಲ್ಲೂಕಿನಲ್ಲಿಯೂ ಟೆಕ್ನಿಷಿಯನ್ಸ್‌ಗಳು ಇರಬೇಕು, ಮೈನರ್ ಓ.ಟಿ. ತಾಲ್ಲೂಕು ಹೆಡ್ ಕ್ವಾಟ್ರರ್ಸ್ ನಲ್ಲಿ ಇರಬೇಕು, ಆಪರೇಷನ್ ಎಂದ ತಕ್ಷಣ ಕರೆಂಟ್ 2 ಗಂಟೆ ಇರುತ್ತದೆ, ಅಪರೇಷನ್‌ಗಾಗಿ ಪೇಷಂಟ್ ಇದ್ದಾಗ ಕರೆಂಟ್ ಹೋದರೆ ಅವರ ಗತಿ ಏನಾಗಬೇಕು? ಆಸ್ಪತ್ರೆಗಳಿಗೆ ಜನರೇಟರ್‌ನ್ನು ಕೊಡಬೇಕೆಂದು ಕಳೆದ ಮಾರ್ಚ್ ತಿಂಗಳಲ್ಲಿ ಇದರ ಬಗ್ಗೆ ಕೇಳಿಕೊಂಡಾಗ

ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ಜನರೇಟರ್‌ನ್ನು ಕೊಡುತ್ತೇವೆಂದು ಹೇಳಿದರು. ಆದರೆ ಇದುವರೆವಿಗೂ ಯಾವ ಆಸ್ಪತ್ರೆಗಳಿಗೂ ಜನರೇಟರ್ ಹೋಗಿಲ್ಲ, ದಯಮಾಡಿ ನಾನು ತಮ್ಮ ಮುಖಾಂತರ ಸಂಬಂಧಪಟ್ಟ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸರ್ಕಾರದವರು ಕೊಡಲೇ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾಟ್ರರ್ಸ್ ಆಸ್ಪತ್ರೆಗೆ ಜನರೇಟರ್‌ನ್ನು ಕೊಡುವ ಮುಖಾಂತರ ಅಲ್ಲಿಯ ಬಡ ರೈತರ ಸಾರ್ವಜನಿಕರ ಮತ್ತು ನಾಗರೀಕರ ಒಂದು ಅವಕಾಶ ಮಾಡಿಕೊಡುವಂತಹ ಸಂದರ್ಭದಲ್ಲಿ ಅನುಕೋಲವಾಗಲಿ ಇದನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಾಗಿ ಇವತ್ತು ಉಪಾಧ್ಯಕ್ಷರೆ,

ಉಪಾಧ್ಯಕ್ಷರು:– ಆಯಿತು ತಮ್ಮ ಭಾಷಣ ಮುಗಿಸಿಬಿಡಿ.

ಶ್ರೀ ಸಿ. ಚನ್ನಿಗಪ್ಪ:– ಆಸ್ಪತ್ರೆಗಳಲ್ಲಿ ಶುಚಿತ್ವ ಇಲ್ಲದಿರುವ ವಿಚಾರದ ಬಗ್ಗೆ ಹೇಳುವುದಾದರೆ ಆಸ್ಪತ್ರೆಗಳಿಗೆ ಹೋದರೆ ಅಲ್ಲಿ ವಾಸನೆ ಬರುತ್ತಿರುತ್ತದೆ, ಅವರು ಫೆನಾಯಿಲ್‌ನ್ನು ಹಾಕಿ ಒರೆಸುವುದಿಲ್ಲ, ಕಾರಣ ಅಲ್ಲಿ ಫೆನಾಯಿಲ್ ಸಪ್ಲೈ ಇರುವುದಿಲ್ಲ. ತಾವು ತುಮಕೂರಿನ ಆಸ್ಪತ್ರೆಗೆ ಬನ್ನಿ ಈಗ ಮಾನ್ಯ ಉಫಾಧ್ಯಕ್ಷರು ತಾವು ಬನ್ನಿ ಬೇಕಾದರೆ ಮಂತ್ರಿಗಳೂ. ಸಹ ಬರಲಿ, ಸಾಯಂಕಾಲ ಹೋದರೆ ಅಲ್ಲಿ ಡಾಕ್ಟರ್‌ಗಳೇ ಇರುವುದಿಲ್ಲ. ಅಲ್ಲಿ ಹೊಲಸು ವಾಸನೆಯು ಬರುತ್ತಿರುತ್ತದೆ. ದಯಮಾಡಿ ಈ ನಾಗರೀಕ ಸರ್ಕಾರ, ಆಧುನಿಕವಾದ ಸರ್ಕಾರ ಆ ಮಟ್ಟಕ್ಕೆ ನಮ್ಮ ನಾಗರೀಕರನ್ನು ಅಥವಾ ಪ್ರಜೆಗಳನ್ನು ಕೆಟ್ಟತನಕ್ಕೆ ತೆಗೆದುಕೊಂಡು ಹೋಗಬಾರದು. ಆ ರೀತಿಯಾಗಿ ಮಾಡಬಾರದು ಎಂದು ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕೂಡಲೇ ಎಲ್ಲಾ ಆಸ್ಪತ್ರೆಗಳಿಗೂ ಫೆನಾಯಿಲ್ ಆಗಬಹುದು, ಅಥವಾ ಬೇರೆ ಯಾವುದಾದರೂ ಒಂದು ಕೆಮಿಕಲ್ಸ್‌ನ್ನು ಕೊಟ್ಟು ಅಲ್ಲಿ ಕ್ಲೀನ್ ಮಾಡಿಸಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಕೇಳಿಕೊಂಡು ಮತ್ತೆ, ಮಾನ್ಯ ಉಪಾಧ್ಯಕ್ಷರೆ, ಇನ್ನೂ ಅನೇಕ ಇಲಾಖೆಗಳಿವೆ, ಇನ್ನು ಬೇಕಾದಷ್ಟು ವಿಚಾರಗಳು ಇವೆ. ಪುನ: ಮಾತನಾಡುವುದಕ್ಕೆ ಸಾಯಂಕಾಲ ಟೈಮ್ ಕೊಡುತ್ತೀರಾ? ದಯಮಾಡಿ ಕೊಡಿ.

ಉಪಾಧ್ಯಕ್ಷರು:– ಮಾನ್ಯ ಚನ್ನಿಗಪ್ಪನವರೆ ಮತ್ತೆ ಬೇಡ. ಸಾಕು, ಇನ್ನು ಬೇರೆಯವರು ಮಾತನಾಡುತ್ತಾರೆ. ಮಾನ್ಯ ರಾಮದಾಸ್‌ರವರೇ, ತಾವು ಮಾತನಾಡಿ.

ಶ್ರೀ ಸಿ. ಚನ್ನಿಗಪ್ಪ:– ಮಾನ್ಯ ಉಪಾಧ್ಯಕ್ಷರೆ, ಇನ್ನು ಅನೇಕ ಇಲಾಖೆಗಳ ಬಗ್ಗೆ ನಾನು ಮಾತನಾಡಬೇಕಾಗಿದೆ. ನಾನು ಕೇವಲ 3 ಇಲಾಖೆಗಳ ಬಗ್ಗೆ ಮಾತನಾಡಿದ್ದೇನೆ. ಇನ್ನೂ 25 ಇಲಾಖೆಗಳಿವೆ, ನನ್ನ ಪಾರ್ಟಿಯಿಂದ ನನಗೆ ಒಂದೂವರೆ ಘಂಟೆ ಬೇಕು.

ಉಪಾಧ್ಯಕ್ಷರು:– ನಿಮ್ಮ ಸ್ನೇಹಿತರುಗಳು ಬೇರೆ ಬೇರೆ ಇಲಾಖೆಗಳ ಬಗ್ಗೆ ಮಾತನಾಡುತ್ತಾರೆ.

ಶ್ರೀ ಸಿ. ಚನ್ನಿಗಪ್ಪ:– ನಮ್ಮ ಪಾರ್ಟಿಯಿಂದ ನಾನೊಬ್ಬನೇ ಮಾತನಾಡುತ್ತಿರುವುದು ಯಾರೂ ಬರುವುದಿಲ್ಲ. ಇದು ದೇವೇಗೌಡ ಪಾರ್ಟಿ, ಜೆಡಿಎಸ್ ಈ ಪಾರ್ಟಿ, ತತ್ವ ಧರ್ಮ, ನೀತಿಯಿಂದ ಇರುವ ಪಾರ್ಟಿ ದಯಮಾಡಿ ನನಗೆ ಅವಕಾಶವನ್ನು ಕೊಡಬೇಕು..

ಉಪಾಧ್ಯಕ್ಷರು:– ಮಾನ್ಯ ಚನ್ನಿಗಪ್ಪನವರೆ, ತಮಗೆ ಈಗಾಗಲೇ ಒಂದು ಗಂಟೆಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಸಾಕು, ಮತ್ತೆ ಬೇರೆಯವರಿಗೆ ಅವಕಾಶ ಕೊಡಬೇಕು.

ಶ್ರೀ ಸಿ. ಗುರುಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ...

ಉಪಾಧ್ಯಕ್ಷರು:- ಮಾನ್ಯ ಗುರುಸ್ವಾಮಿಯವರೆ, ಮಾನ್ಯ ರಾಮದಾಸ್‌ರವರಿಗೆ ತುರ್ತು ಕೆಲಸವಿರುವ ಪ್ರಯುಕ್ತ, ಅವರು ಹೋಗುತ್ತಿದ್ದಾರೆ, ಆದಕಾರಣ ಅವರಿಗೆ ಈಗ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಉಪಾಧ್ಯಕ್ಷರೆ, ನನಗೆ ಆಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಅವರು ಮಾತನಾಡಿದ ನಂತರ ನನಗೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷರು:- ಇನ್ನೊಂದು ಅವಕಾಶ ಬಂದಾಗ ತಮಗೆ ಮಾತನಾಡುವುದಕ್ಕೆ ಕೊಡುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಚನ್ನಿಗಪ್ಪ:- ಸರಿ ಮಾನ್ಯ ಉಪಾಧ್ಯಕ್ಷರೆ.

ಶ್ರೀ ಸಿ. ಗುರುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ.

ಉಪಾಧ್ಯಕ್ಷರು:- ಮಾನ್ಯ ಗುರುಸ್ವಾಮಿಯವರೇ, ನಾನು ಮಾನ್ಯ ರಾಮದಾಸ್‌ರವರ ಹೆಸರನ್ನು ಕರೆದಿದ್ದೇನೆ. ನೆಕ್ಸ್ಟ್ ತಾವು ಮಾತನಾಡಬಹುದು.

+ಶ್ರೀ ಎ.ರಾಮದಾಸ್ (ಕೃಷ್ಣರಾಜ):- ಮಾನ್ಯ ಉಪಾಧ್ಯಕ್ಷರೆ, ಇವತ್ತು ಸರ್ಕಾರ ನಾಲ್ಕು ತಿಂಗಳ ವೋಟ್ ಆನ್ ಅಕೌಂಟ್‌ನ್ನು ತೆಗೆದುಕೊಂಡು ಆ ಸಂದರ್ಭದಲ್ಲಿ ಒಂದು ವಿಚಾರವನ್ನು ಹಣಕಾಸಿನ ಮಂತ್ರಿಗಳು ಮತ್ತು ಸಭಾನಾಯಕರು ಇಟ್ಟರು. ಅದೇನೆಂದರೆ, ರಾಜ್ಯದ ಹಣಕಾಸಿನ ಪರಿಸ್ಥಿತಿ ತುಂಬಾ ಚೆನ್ನಾಗಿದೆ, ವಿವಿಧ ಇಲಾಖೆಗೆ ಪ್ರೋಗ್ರೆಸಿವ್ ವರ್ಕ್‌ಗೆ ಅಲೋಕೇಷನ್ಸ್ ಬಗ್ಗೆ ಯಾವುದೇ ಸಮಸ್ಯೆ ಇಲ್ಲ ಎನ್ನುವಂತಹ ಮಾತನ್ನು ಅವರ ಭಾಷಣದಲ್ಲಿ ಹೇಳಿದಂತಹ ಮಾತು ತಾವು ಹೇಳಿದಹಾಗೆ ರೇಕಾರ್ಡ್‌ನಲ್ಲಿಯೂ ಇದೆ, ಎಲ್ಲಾ ಮಾಧ್ಯಮಗಳಲ್ಲೂ ಬಂತು. ಯಾವುದೋ ಒಂದು ಸರ್ಕಾರ ಬಹಳ ಆರೋಗ್ಯಕರವಾಗಿ ಸರ್ಕಾರವನ್ನು ನಡೆಸುತ್ತಿದೆ ಎಂದು ಹೇಳುವುದಾದರೆ ವಿಶೇಷವಾಗಿ ನಾಲ್ಕು ಇಲಾಖೆಗಳಲ್ಲಿ ತನ್ನ ಆರ್ಥಿಕ ವ್ಯವಸ್ಥೆಯ ಸಮತೋಲನವನ್ನು ಹೇಗೆ ಇಟ್ಟುಕೊಂಡಿದೆ ಎನ್ನುವಂತಹ ಆಧಾರದ ಮೇಲೆ ಸರ್ಕಾರ ಹೇಗಿದೆ ಸರ್ಕಾರದ ಸ್ಥಿತಿಗಳೇನು ಎಂದು ಹೇಳಿ, ಅದು ರಾಜ್ಯವಿರಬಹುದು, ದೇಶವಿರಬಹುದು, ಪ್ರಪಂಚದಲ್ಲಿಯೂ ಕೂಡ ನಾವು ಯೋಚನೆಯನ್ನು ಮಾಡುತ್ತೇವೆ ಅದು ಒಳ್ಳೆಯ ಸರ್ಕಾರವೆಂದು. ಅದು ಪ್ರಮುಖವಾಗಿ ವಿದ್ಯಾ ಇಲಾಖೆ, ಎರಡನೆಯದಾಗಿ ಸೋಷಿಯಲ್ ಸೆಕ್ಯುರಿಟಿ, ಹಾಗೂ ಅಲ್ಲಿರುವಂತಹ ಇನ್‌ಫ್ರಾಸ್ಟ್ರಕ್ಚರ್‌ಗೆ ಬೇಕಾಗಿರುವಂತಹ ಹಣವನ್ನು ಕ್ರೋಢೀಕರಿಸುವಂಥದ್ದು ಎಲ್ಲದಕ್ಕಿಂತ ಪ್ರಮುಖವಾಗಿ ಆ ರಾಜ್ಯ ಅಥವಾ ಆ ದೇಶದ ಆರೋಗ್ಯ ವ್ಯವಸ್ಥೆಯ ಬಗ್ಗೆ ಹಣವನ್ನು ಹೇಗೆ ಇಟ್ಟಿದ್ದಾರೆ ಎನ್ನುವುದರ ಆಧಾರದ ಮೇಲೆ ಆ ಸರ್ಕಾರದ ವ್ಯವಸ್ಥೆಗಳು ಹೇಗಿವೇ ಸರ್ಕಾರದ ಸ್ಥಿತಿಗತಿಗಳು ಹೇಗಿದೆ ಎನ್ನುವಂತಹ ಮಾತನ್ನು ನಾವು ಎಲ್ಲರೂ ಕೂಡ ಯೋಚನೆಯನ್ನು ಮಾಡುತ್ತೇವೆ. ಹಿರಿಯರೂ ಕೂಡ ಆ ವಿಚಾರದಲ್ಲಿ ಭಾಷಣವನ್ನು ಮಾಡಿದಾಗ ಕಾಂಗ್ರೆಸ್ಸಿನ ಬಹಳಷ್ಟು ಪ್ರಮುಖರು ರಾಜ್ಯದ ಅರ್ಥಸ್ಥಿತಿಯ ಬಗ್ಗೆ ಚರ್ಚೆ ಮಾಡುವಾಗಲೂ ಕೂಡ ಈ ವಿಚಾರವನ್ನು ಹೇಳಿದರು. ಆದರೆ ಇವತ್ತು ಸನ್ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯ ಕಳೆದ ನಾಲ್ಕು ವರ್ಷಗಳಿಂದ ನಾವು ನಾಲ್ಕು ಬಜೆಟ್‌ಗಳನ್ನೂ ಸಹ ನೋಡಿದ್ದೇವೆ, ಒಂದು ವರ್ಷದಿಂದ ಒಂದು ವರ್ಷಕ್ಕೆ ಪ್ರಗತಿದಾಯಕವಾದಂತಹ ಬಜೆಟ್ ಎಂದು ಎಲ್ಲರೂ ಕೂಡ ಯೋಚನೆಯನ್ನು ಮಾಡಿದ್ದೇವೆ ಆದರೆ ಪ್ರತಿವರ್ಷವೂ ಕೂಡ ಇರುವಂತಹ ಬಜೆಟ್‌ನ್ನು ನೋಡಿಕೊಂಡು ಬಂದಾಗ ಎಲ್ಲಾ ಸೆಕ್ಟಾರ್‌ಗಳಲ್ಲೂ ಕೂಡ, ನಾನು ಆಗಲೇ ಹೇಳಿದಹಾಗೆ ನಾಲ್ಕು ಪ್ರಮುಖವಾದಂತಹ ಇಲಾಖೆಗಳಲ್ಲಿ ಹಣಕಾಸಿನ ಅಲೋಕೇಷನ್ಸ್‌ಗಳು ಕಡಿಮೆಯಾಗುತ್ತಾ

ಬರುತ್ತಿದೆ. ಮೊದಲನೆಯ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮೆಡಿಕಲ್ ಎಜುಕೇಷನ್‌ಗೆ ಸಂಬಂಧಪಟ್ಟ ಹಾಗೆ ಅಲೋಕೇಷನ್‌ನ್ನು ತಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ. 2001–02ನೇ ಸಾಲಿಗೆ ಸಂಬಂಧಪಟ್ಟ ಹಾಗೆ 1250 ಕೋಟಿ ರೂಪಾಯಿಗಳ ಬಜೆಟ್ ಅಲೋಕೇಷನ್ಸ್ ಇತ್ತು, ಆದರೆ ಆ ಒಂದು ಕೊನೆಯಲ್ಲಿ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿತು, ಈ ಇಲಾಖೆಯಲ್ಲಿಯೂ ಕೂಡ ಶೇಕಡ 10 ಪರ್ಸೆಂಟ್ ಬಜೆಟ್ ಕಟ್ ಮಾಡುತ್ತಿದ್ದೇವೆಂದು ಹೇಳಿ ಇಲಾಖೆಗೆ ಕೊಟ್ಟರು. ಅದರ ಪ್ರಕಾರದಲ್ಲಿ 1250 ಕೋಟಿ ರೂಪಾಯಿಗಳಲ್ಲಿ 125 ಕೋಟಿ ರೂಪಾಯಿಗಳನ್ನು ಸರ್ಕಾರವು ಹಿಂದಕ್ಕೆ ತೆಗೆದುಕೊಂಡಿತು, ಅದರಲ್ಲಿ ಖರ್ಚು ಮಾಡಿದಂತಹ ಹಣ 1125 ಕೋಟಿ ರೂಪಾಯಿಗಳು ಮಾತ್ರ, 2002–03ನೇ ಸಾಲಿಗೆ ಹಿಂದಿನ ವರ್ಷ ಕೊಟ್ಟಿರುವುದು 1250 ಕೋಟಿ ರೂಪಾಯಿಗಳು, ಅದರ ಮುಂದಿನ ಸಾಲಿಗೆ 1155 ಕೋಟಿ ರೂಪಾಯಿಗಳಿಗೆ ಇಳಿಸಿತು. ಇದು ಪ್ರಗತಿ ಪರವಾದಂತಹ ಸರ್ಕಾರ, ಹಣಕಾಸು ಬಹಳ ಸೌಂಡ್ ಆಗಿದೆ, ಅದಕ್ಕೆ 1155 ಕೋಟಿ ರೂಪಾಯಿಗಳಿಗೆ ಇಳಿಸಿದರು. ಆದರೆ ಆಶ್ಚರ್ಯವೆಂದರೆ, ಮೊದಲನೆಯ ವರ್ಷ ಒಂದು ಸುತ್ತೋಲೆಯನ್ನು ವರ್ಷದ ಕೊನೆಯಲ್ಲಿ ಹೊರಡಿಸಿದರು, ಆದರೆ 2002–03ನೇ ಇಸವಿಯಲ್ಲಿ ಎರಡು ಸುತ್ತೋಲೆ ಒಂದು ಹಾಫ್ ಇಯರ್ ಬಜೆಟ್, 6 ತಿಂಗಳುಗಳ ಕಾಲ ಹಾಕಿರುವಂತಹ ಒಂದು ಬಜೆಟ್‌ನ್ನು ಒಂದು ಸರ್ಕ್ಯುಲರ್‌ನ್ನು ಕಳುಹಿಸಿ ಇಲಾಖೆಯಿಂದ 10 ಪರ್ಸೆಂಟ್‌ನ್ನು ಕಟ್ ಮಾಡಿದರು. ಕೊನೆಯ ಕ್ವಾರ್ಟರ್‌ನಲ್ಲಿ ಮತ್ತೊಂದು ಸುತ್ತೋಲೆಯನ್ನು ಹೊರಡಿಸಿ ಮತ್ತೇ 10 ಪರ್ಸೆಂಟ್‌ನ್ನು ಕಟ್ ಮಾಡಿದರು. ಅಂದರೆ 2002–03ನೇ ಸಾಲಿಗೆ 1155 ಕೋಟಿ ರೂಪಾಯಿಗಳಲ್ಲಿ, ಅದರಲ್ಲಿ ಸರ್ಕಾರವೇ ಖರ್ಚು ಮಾಡಿರುವಂತಹ ಹಣ 230 ಕೋಟಿ ರೂಪಾಯಿಗಳು, ಅದರಲ್ಲಿ ಅಕ್ಚ್ಯುಯಲ್ ಆಗಿ ಖರ್ಚಾಗಿರುವಂತಹ ಹಣ 925 ಕೋಟಿ ರೂಪಾಯಿಗಳು.

1.40 ಪಿಎಂ

ಇನ್ನು ಈ ವರ್ಷದ್ದು, ಏಕೆಂದರೆ ನಿನ್ನೆ ತಾನೇ ಮುಖ್ಯಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯಲ್ಲಿ ರಾಜ್ಯದ ಸ್ಥಿತಿಗತಿ ತುಂಬಾ ಚೆನ್ನಾಗಿದೆಯೆಂದು ಹೇಳಿದ್ದಾರೆ. ನಮಗೆ ವಿಜಯನಗರ ಆಸ್ಥಾನದಲ್ಲಿದ್ದ ಹಾಗೆ ಹಣಕಾಸು ಸ್ಥಿತಿ ಸಮೃದ್ಧಿಯಾಗಿದೆ, ವರ್ಲ್ಡ್‌ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಳ್ಳುವುದಿಲ್ಲವೆಂದು ತಿಳಿಸಿದ್ದಾರೆ, ಈ ವಿಚಾರದಲ್ಲಿ ಸಮಯ ಬಂದಾಗ ಹೇಳುತ್ತೇನೆ, ಆದರೆ ಈ ವರ್ಷ ಕೊಟ್ಟಿರುವ ಅಲೋಕೇಷನ್ 1039 ಕೋಟಿ ರೂಪಾಯಿಗಳು, ಅದೇ ರೀತಿಯಲ್ಲಿ ಈ ವರ್ಷ ಎರಡು ಸರ್ಕ್ಯುಲರ್ ಬಂದರೆ ಖರ್ಚು ಮಾಡುವಂತಹ ಹಣ ಎಷ್ಟೆಂದರೆ 839 ಕೋಟಿ ರಾಪಾಯಿಗಳು. ಇದು ಆರೋಗ್ಯ ಇಲಾಖೆಗೆ ಸರ್ಕಾರವು ಕೊಡುತ್ತಿರುವ ಆದ್ಯತೆ, ಅದೇ ಕೇಂದ್ರದ ಬಜೆಟ್‌ನಲ್ಲಿ ನೋಡಿದಾಗ 4 ವರ್ಷಗಳ ಕಾಲದಿಂದ ಪ್ರತಿ ವರ್ಷವೂ. ಮೊದಲನೆಯ ವರ್ಷ ಶೇಕಡ ಎರಡ ರಷ್ಟು, 2002–03ರಲ್ಲಿ ಶೇಕಡ 5 ರಷ್ಟು ಜಾಸ್ತಿ ಮಾಡಿದರು, ಈ ವರ್ಷ ಆರೋಗ್ಯ ಇಲಾಖೆಯಲ್ಲಿ ಶೇಕಡ 6ರಷ್ಟು ಜಾಸ್ತಿ ಮಾಡಿದ್ದಾರೆ. ಯಾವುದು ಆರೋಗ್ಯಕರವಾದ ಬಜೆಟ್? ಆರೋಗ್ಯ ಇಲಾಖೆಗೆ ನೀಡಿರುವ ಹಣವನ್ನು ಆರೋಗ್ಯಕರ ಬಜೆಟ್ ಎಂದು ಹೇಳಲಿಕ್ಕೆ ಹೇಗೆ ಸಾಧ್ಯ? ಈ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇನ್ನು ಮುಂದೆ ನಾವು ವರ್ಲ್ಡ್ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಳ್ಳುವುದಿಲ್ಲವೆಂದು, ನಾವು ಸಮೃದ್ಧಿಯಾಗಿದ್ದೇವೆಂದು ನಿನ್ನೆ ಹೇಳಿದರು. ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಲು ಇಷ್ಟಪಡುವುದೇನೆಂದರೆ ನಮ್ಮ ರಾಜ್ಯದ ವ್ಯವಸ್ಥೆಗಳು ಸರಿಯಾಗಿವೆಯೆನ್ನುವುದಾದರೆ ತಾವು ಪವರ್ ಸೆಕ್ಟರ್‌ಗೋಸ್ಕರ 13500 ಕೋಟಿ ರೂಪಾಯಿಗಳನ್ನು

ಸಾಲ ಕೇಳಿದ್ದೀರಲ್ಲಾ, ಅದರಲ್ಲಿ ಎರಡು ಕನ್‌ಸೈನ್‌ಮೆಂಟ್ ಹಣ ನಿಮಗೆ ಬಂದಿದೆ, ಶಾಲಾಕಟ್ಟಡಗಳಿಗಾಗಿ ಇನ್ನೂ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸಾಲ ಕೇಳಿದ್ದೀರಲ್ಲಾ, ಹೀಗೆ ಬೇರೆ ಬೇರೆ ಇಲಾಖೆಗಳಿಗಾಗಿ ವರ್ಲ್ಡ್‌ಬ್ಯಾಂಕ್‌ನಲ್ಲಿ ತಾವು ಕೇಳಿರುವ ಸಾಲವೆಷ್ಟು? ಈ ವರ್ಷದ ಹಣಕಾಸಿನ ಸ್ಥಿತಿಯನ್ನು ನೋಡಿ, ಕಳೆದ ಎರಡು ತಿಂಗಳ ಹಿಂದೆ ವರ್ಲ್ಡ್‌ಬ್ಯಾಂಕ್‌ಟೀವ್‌ನವರು ರಾಜ್ಯಕ್ಕೆ ಬಂದಾಗ ನೀವು ನೀಡಿದ ವರದಿಯನ್ನು ಸದನದಲ್ಲಿಡಿ. ರಾಜ್ಯದ ಹಣಕಾಸಿನ ಸ್ಥಿತಿಯು ಪೂರ್ಣವಾಗಿ ಹಾಳಾಗಿದೆ, ಆದ್ದರಿಂದ ಮುಂದೆ ಯಾವುದೇ ಸಾಲವನ್ನು ವರ್ಲ್ಡ್‌ಬ್ಯಾಂಕ್‌ನವರು ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ, ಅದರ ಆಧಾರದ ಮೇಲೆ ಕರ್ನಾಟಕ ಸರ್ಕಾರವು ಹೊಸ ಸಾಲಕ್ಕಾಗಿ ಅರ್ಜಿ ಹಾಕಬಾರದೆಂದು ಕೇಂದ್ರ ಸರ್ಕಾರವು ವಿಚಾರ ಮಾಡಿದ್ದಾರೆ. ಆದರೆ ಇದನ್ನೆಲ್ಲಾ ಮುಚ್ಚಿಟ್ಟು ರಾಜ್ಯದ ಅರ್ಥವ್ಯವಸ್ಥೆ ಚೆನ್ನಾಗಿದೆಯೆಂದು ಹೇಳುವುದಾದರೆ ದಯಮಾಡಿ ಶ್ವೇತಪತ್ರವನ್ನು ಹೊರಡಿಸಿ, ತುಂಬಾ ಚೆನ್ನಾಗಿದ್ದರೆ, ಅದನ್ನು ಸ್ವಾಗತಿಸುತ್ತೇವೆ; ಆದರೆ ತಮ್ಮ ಸರ್ಕಾರ ಬಂದ ನಂತರ ಮಂಡನೆಯಾಗಿರುವ ನಾಲ್ಕು ಬಜೆಟ್‌ಗಳೂ ಕೂಡ, ಸೋಷಿಯಲ್ ಸೆಕ್ಟರ್‌ಗೆ ಆರೋಗ್ಯ ಇಲಾಖೆಗೆ ಎಲ್ಲಕ್ಕೂ ಕೂಡ ಹಣಕಾಸಿನ ವ್ಯವಸ್ಥೆಯನ್ನು ವರ್ಷೇವರ್ಷೇ ಕಡಿಮೆ ಮಾಡುತ್ತಿರುವುದರಿಂದ, ಖರ್ಚಾಗುತ್ತಿರುವ ಹಣವೂ ಕೂಡ ಕಡಿಮೆಯಾಗುತ್ತಿರುವ ಕಾರಣ ಆರೋಗ್ಯಕರ ಬಜೆಟ್ ಎಂದು ಹೇಗೆ ಕರೆಯಲಿಕ್ಕೆ ಸಾಧ್ಯವಾಗುತ್ತದೆ? ಇದನ್ನು ನನಗಿರುವಂತಹ ಜ್ಞಾನದಲ್ಲಿ ಹೇಳಿದ್ದೇನೆ, ಅರ್ಥಮಂತ್ರಿಗಳು ಬಹಳಷ್ಟು ವಿಚಾರವನ್ನು ತಿಳಿದಂತಹವರು ಅದನ್ನು ರಾಜ್ಯದ ಮುಂದೆ ಇಡಬೇಕೆಂದು ಬಯಸುತ್ತೇನೆ. ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇವೆರಡೂ ಕೂಡ ಸಮಗ್ರವಾದ ಅಭಿವೃದ್ಧಿಯ ದಾರಿಗೆ ಹೋಗುತ್ತದೆಯೆಂದು ನಾನು ಅಂದು ಕೊಂಡಿದ್ದೆ. ಆದರೆ ಆ ವೈದ್ಯಕೀಯ ಶಿಕ್ಷಣ ವ್ಯಾಪಾರೀಕರಣಕ್ಕೋಸ್ಕರ ನಿಂತಿದೆ, ವ್ಯಾಪಾರೀಕರಣವನ್ನು ಬಿಟ್ಟು ಬೇರೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವಂತಹ ವಾತಾವರಣ ನಿರ್ಮಾಣವಾಗಿರುವಂತಹ ಪರಿಸ್ಥಿತಿಯಲ್ಲಿ ಒಳ್ಳೆಯ ಅನುಭವಿ ಮಂತ್ರಿಗಳು ಆ ಇಲಾಖೆಯ ಮಂತ್ರಿಗಳಾಗಿದ್ದಾಗ್ಯೂ ಸಹ ರಾಜಕ್ಕೆ ಇಂತಹ ದುಸ್ಥಿತಿ ಬರಯತ್ತದೆ, ಆಡಳಿತ ವ್ಯವಸ್ಥೆ ಹೀಗಾದರೆ ಎಲ್ಲಿಗೆ ನಾವು ಹೋಗುತ್ತೇವೆ? ಕಳೆದ ಎರಡು ವರ್ಷಗಳ ಹಿಂದೆ ಮಾರಿಷಸ್‌ನ ಪ್ರಧಾನಮಂತ್ರಿಗಳಾದ ಮ್ಯಾಥ್ಯೂಸ್ ಮಹಮ್ಮದ್ ಇಲ್ಲಿಗೆ ಬಂದಂತಹ ಸಂದರ್ಭದಲ್ಲಿ ಅವರ 125 ವಿದ್ಯಾರ್ಥಿಗಳನ್ನು ಸರ್ಕಾರದ ಹಾಗೂ ವಿಶ್ವವಿದ್ಯಾನಿಲಯ ಅಲ್ಲದೆ ಎಂ.ಸಿ.ಐ.ನ ಅನುಮತಿಯಿಲ್ಲದೆ ಎಕ್ಸ್‌ಸ್ ಅಡ್ಮಿಷನ್ ಮಾಡಿದ್ದರು. ಅಷ್ಟೂ ಜನ ವಿದ್ಯಾರ್ಥಿಗಳನ್ನು ಅವರು ಹಿಂದಕ್ಕೆ ಕರೆದುಕೊಂಡು ಹೋಗಿದ್ದಾರೆ, ಹಾಗೆ ಹೋಗುವಾಗ ಒಂದು ಮಾತನ್ನು ಹೇಳಿದರು, Karnataka is producing more doctors than good doctors. ಅದನ್ನು ಓದಿದಾಗಲೆಲ್ಲಾ ನನ್ನ ಮನಸ್ಸಿಗೆ ಬಹಳಷ್ಟು ನೋವಾಗುತ್ತದೆ. ನಾವು ಒಳ್ಳೆಯ ವೈದ್ಯರನ್ನು ಕೊಡುವಂತಹ ವ್ಯವಸ್ಥೆಗಿಂತ, ನಾಯಿಕೊಡೆಗಳ ರೀತಿಯಲ್ಲಿರುವ ಕಾಲೇಜುಗಳಿಂದ ಎಂತಹ ವೈದ್ಯರನ್ನು, ನರ್ಸ್‌ಗಳನ್ನು ಕೊಡುತ್ತಿದ್ದೇವೆ ಎನ್ನುವ ಚಿಂತನೆಯನ್ನು ನಾವೆಲ್ಲರೂ ಕೂಡ ಮಾಡಬೇಕಿದೆ. ಆಗಾಗ ನಾವು ಅಂದುಕೊಳ್ಳುತ್ತಿದ್ದೆವು, ಈ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್ ಕರ್ನಾಟಕದಲ್ಲಿ ಹಾಳಾಗಿ ಹೋಯಿತು, ಅದರ ವ್ಯವಸ್ಥೆಗಳು ಹೋಯಿತು ಎಂದು ಚಿಂತನೆ ಮಾಡುತ್ತಿದ್ದೆವು, ಆದರೆ ಇವತ್ತು ವಿಶೇಷವಾಗಿ ವೆಸ್ಟರ್ನ್ ಕಂಟ್ರೀಸ್‌ಗಳಲ್ಲಿ ಅಮೇರಿಕ ಮತ್ತು ಇಂಗ್ಲೇಂಡ್‌ಗಳಲ್ಲಿ ಆಯುರ್ವೇದಿಕ್ ವೈದ್ಯರಿಗೆ ಹೆಚ್ಚು ಬೇಡಿಕೆ ಬಂದಿದೆ, ಹಾಗಾಗಿ ದೇಶದಲ್ಲಿರುವ ಆಯುರ್ವೇದಿಕ್ ವೈದ್ಯರಿಗೆ ಇದೊಂದು ಒಳ್ಳೆಯ ಕೋರ್ಸ್ ಎಂದು ಚಿಂತನೆ

ಮಾಡುವ ವ್ಯವಸ್ಥೆ ಬಂದಿದೆ. ಈ ವಿಷಯ ಆ ವೈದ್ಯರಿಗೆ ಸಂತೋಷದ ವಿಚಾರವೇ, ಆದರೆ ಕರ್ನಾಟಕ ಸರ್ಕಾರಕ್ಕಂತೂ ಬಹಳ ಸಂತೋಷವಾಯಿತು, ಇತಿಹಾಸದಲ್ಲಿ ಯಾರೂ ಕೊಡದೇ ಇರುವಷ್ಟು ಆಯುರ್ವೇದಿಕ್ ಕಾಲೇಜುಗಳನ್ನು ಕೊಟ್ಟಿದ್ದೀರಿ. ಹಾಗೆಯೇ ನರ್ಸಿಂಗ್, ಯಾವ ಅಮೆರಿಕಾದಲ್ಲಿ ಎರಡು ಟವರ್‌ಗಳು ಬಿದ್ದು ಹೋದ ತಕ್ಷಣವೇ ಅಮೆರಿಕಾ ಮತ್ತು ಇಂಗ್ಲೇಂಡ್‌ಗಳಲ್ಲಿ ವಿಶೇಷವಾಗಿ ಬೇರೆ ಬೇರೆ ದೇಶಗಳಲ್ಲಿ ಇದ್ದಂತಹ ಪ್ಯಾರಾ ಮೆಡಿಕಲ್ ಹಾಗೂ ಮೆಡಿಕಲ್ ಸರ್ವೀಸ್‌ನಲ್ಲಿದ್ದಂತಹ ವೈದ್ಯರನ್ನು ತೆಗೆದು ಹಾಕಿದರು, ಭಾರತದಲ್ಲಿದ್ದಂತಹವರಿಗೆ ಹೆಚ್ಚಿನ ಮಾನ್ಯತೆಯನ್ನು ಕೊಡುವಂತಹ ಕೆಲಸ ಆರಂಭವಾಯಿತು. ಆ ದೃಷ್ಟಿಯಲ್ಲಿ ನರ್ಸಿಂಗ್ ಶಾಲಾ ಕಾಲೇಜುಗಳು ಹೆಚ್ಚಾಗಿ ಪ್ರಾರಂಭವಾದವು. ಕರ್ನಾಟದಲ್ಲಿ 60 ನರ್ಸಿಂಗ್ ಕಾಲೇಜುಗಳಿವೆ, ಆ 60 ನರ್ಸಿಂಗ್ ಕಾಲೇಜುಗಳಲ್ಲಿ ಇಂಟೇಕ್ 2925. ಅದರಲ್ಲಿ ಬಿ.ಎಸ್‌ಸಿ ನರ್ಸಿಂಗ್ ಹಾಗೂ ಎಂ.ಎಸ್‌ಸಿ ನಸಿಂಗ್ ಎಲ್ಲವೂ ಇದೆ, ಆದರೆ ಸುಸಜ್ಜಿತವಾಗಿರುವ, ಇನ್‌ಫ್ರಾಸ್ಟ್ರಕ್ಚರ್ ಇವೆಲ್ಲವನ್ನೂ ಹೊಂದಿರುವಂತಹದು ಕೇವಲ 40 ಕಾಲೇಜುಗಳು ಮಾತ್ರ. ಆದರೆ ಈ ವರ್ಷ ಯೂನಿವರ್ಸಿಟಿಗೆ ನರ್ಸಿಂಗ್ ಕಾಲೇಜುಗಳಿಗೆ ಅರ್ಜಿಗಳು, ಬಂತು, ಅದರಲ್ಲಿ ಎಲ್.ಐ.ಸಿ. ಕಮಿಟಿ ಮಾಡಿ ಆಯಾಯ ಕಾಲೇಜುಗಳಿಗೆ ಕಳುಹಿಸಿ, ಎಲ್ಲಿ ಕಟ್ಟಡವಿದೆ, ಎಲ್ಲಿ ಟೀಚಿಂಗ್ ಸ್ಟಾಫ್ ಇದೆ, ಎಲ್ಲಿ ಅದಕ್ಕೆ ಬೇಕಾಗಿರುವಂತಹ ಇನ್‌ಫ್ರಾಸ್ಟಕ್ಚರ್ ಇದೆ, ಎಲ್ಲಿ ಹಾಸ್ಪಿಟಲ್ ಫೆಸಿಲಿಟಿ ಇದೆ ಎಂದು ಹೇಳಿ ಒಂದು ಪಟ್ಟಿಯನ್ನು ಮಾಡಿದರು. ಅದರ ಪ್ರಕಾರ ಸುಮಾರು 16 ಹೊಸ ನರ್ಸಿಂಗ್ ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟರು. ಅದು ರಾಜ್ಯಸರ್ಕಾರದ ಮುಂದೆ ಬಂದಿತು, ರಾಜ್ಯ ಸರ್ಕಾರ ಯಾರಿಗೆ ಇನ್‌ಫ್ರಾಸ್ಟಕ್ಚರ್ ಇದೆಯೇ ಅನ್ನುವುದನ್ನು ಚಿಂತನೆ ಮಾಡಿಕೊಡಬೇಕಾಗಿತ್ತೋ, ಹಾಗೆ ಮಾಡದೆ ವಿಚಾರ ಮಾಡದೆ ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಅರ್ಜಿಗಳು ಬಂದಿವೆಯೋ ಅಷ್ಟನ್ನು ಕಳುಹಿಸಿಕೊಡಬೇಕು ಎಂದು ತಿಳಿಸಿದೆ, ಎಲ್ಲೆಲ್ಲಿ ಕಟ್ಟಡ, ಇನ್‌ಫ್ರಾಸ್ಟಕ್ಚರ್ ಇದೆಯೇ ಎಂದು ತಿಳಿಯದೆ, ಯಾರ್‍ಯಾರು ಕಟ್ಟಡವಿಲ್ಲ ಎಂದು ಬರೆದಿದ್ದಾರೋ ಅದನ್ನೆಲ್ಲಾ ತಿದ್ದಿಸುವಂತಹ ಕೆಲಸ ಆಗಿದೆಯೆಂದು ನಾನು ಈ ಸದನದಲ್ಲಿ ಬಹಳ ಜವಾಬ್ದಾರಿಯುತನಾಗಿ ಹೇಳುತ್ತಿದ್ದೇನೆ. ಯಾವ ಯಾವ ಕಾಲೇಜಿಗೆ ಕಟ್ಟಡ ಇಲ್ಲ, ಆಸ್ಪತ್ರೆಗಳಿಲ್ಲ, ನರ್ಸಿಂಗ್ ಸ್ಟಾಫ್ ಇಲ್ಲವೆನ್ನುವ ಪ್ರಕರಣಗಳಲ್ಲಿ ಯೂ ಕೂಡ ಅಷ್ಟೂ ಅರ್ಜಿಗಳನ್ನು ತರಿಸಿಕೊಂಡು ಅವರಿಗೆ ಕಿಕ್‌ಬ್ಯಾಕ್ ಯಾರು ಯಾರಿಗೆ ಕೊಡಲಿಕ್ಕೆ ಸಾಧ್ಯವಾಗಿದೆಯೋ, ಅವರಿಗೆಲ್ಲಾ. ನರ್ಸಿಂಗ್ ಕಾಲೇಜು ಪ್ರಾರಂಭಿಸಲು ಅನುಮತಿ ನೀಡಿರುವಂತಹ ವ್ಯವಸ್ಥೆಯಾಗಿದೆ, ಹೀಗಾದರೆ, ಯಾವ ಸೀಮೆ ಅದಂಥ ನರ್ಸ್‌ಗಳನ್ನು ನೀವು ಪ್ರೊಡ್ಯೂಸ್ ಮಾಡುತ್ತಿದ್ದೀರಿ?

ಡಾ: ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):- ನಾನೇ ಆ ಖಾತೆಯನ್ನು ನಿರ್ವಹಣೆ ಮಾಡುತ್ತಿದ್ದೆ, ಸರ್ಕಾರದಿಂದ ಬಂದಷ್ಟು ಅರ್ಜಿಗಳನ್ನು ಕಳುಹಿಸಿ ಕೊಡಲು ವಿಶ್ವವಿದ್ಯಾನಿಲಯಕ್ಕೆ ಸೂಚನೆಯನ್ನು ಕಳುಹಿಸಿಲ್ಲ, ಓರಲ್ ಆಗಿ ಅಥವಾ ರೈಟಿಂಗ್‌ನಲ್ಲಿ ಅವರಿಗೆ ಸೂಚನೆ ಹೋಗಿಲ್ಲ. ನಾವು ಎಷ್ಟು ಅರ್ಜಿಗಳು ಬಂದಿವೆ ಅಷ್ಟು ಅರ್ಜಿಗಳನ್ನು ಕಳುಹಿಸಿಕೊಡಿ ಎಂದು ನಾವು ಹೇಳಿಲ್ಲ.

ಶ್ರೀ ಎ.ರಾಮದಾಸ್:- ಈ ಸರ್ಕಾರದಲ್ಲಿ ಯಾರು ಈ ಖಾತೆಯನ್ನು ನೋಡಿಕೊಳ್ಳುತ್ತಿದ್ದಾರೋ ಅವರೇ ಆ ಖಾತೆಯನ್ನು ನೋಡಿಕೊಳ್ಳಬೇಕೆಂದು ಏನೂ ಇಲ್ಲ, ಆ ರೀತಿ ವ್ಯವಸ್ಥೆಯಿದೆ, ಡಾ: ಮಾಲಕರೆಡ್ಡಿಯವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ನಿಮ್ಮಲ್ಲಿರುವ ಕ್ಯಾಬಿನೆಟ್‌ನಲ್ಲಿ ಇರುವವರೇ ಅಲ್ಲಿರುವ ಎಲ್ಲಾ ಅರ್ಜಿಗಳನ್ನು ತರಿಸಿದ್ದಾರೆ. ಇದನ್ನು

ನಾನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ದಯವಿಟ್ಟು ಒಬ್ಬ ಅಧಿಕಾರಿಯನ್ನು ನೇಮಿಸಿ ಒಂದು ಎನ್‌ಕ್ವೈರಿಯನ್ನು ಮಾಡಿಸಿ, ಯಾವ್ಯಾವ ಕಾಲೇಜುಗಳಲ್ಲಿ ಏನೇನಾಗಿದೆ ಎನ್ನುವುದನ್ನು ಹೇಳುತ್ತೇನೆ, ಸ್ವತ: ಗುಲ್ಬರ್ಗದಲ್ಲಿ, ನರ್ಸಿಂಗ್ ಶಾಲಾ ಕಾಲೇಜುಗಳನ್ನು ಕೊಟ್ಟಿದ್ದೀರಿ, ಗುಲ್ಬರ್ಗದ ಬಸ್‌ಸ್ಟಾಂಡ್‌ನ ಎದುರಿಗಿರುವ ಕ್ಯಾಂಟೀನ್‌ನ ವಿಳಾಸವನ್ನು ಕೊಟ್ಟು ಒಂದು ಶಾಲೆಯನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಎಲ್ಲಾ ಡಾಕ್ಯುಮೆಂಟ್ಸ್ ಅನ್ನು ನಾನು ಕೊಡುತ್ತೇನೆ, ದಯಮಾಡಿ ಒಂದು ಎನ್‌ಕ್ವೈರಿ ಮಾಡಿ.

ಡಾ: ಎ. ಬಿ. ಮಾಲಕರೆಡ್ಡಿ:- ಎರಡು ತಿಂಗಳ ಹಿಂದೆಯೇ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಿ ಆದೇಶಿಸಿದ್ದೇನೆ. ಅವರು ಎಲ್ಲಾ ಜಿಲ್ಲೆಗಳಿಗೂ ಭೇಟಿ ಮಾಡುತ್ತಿದ್ದಾರೆ, ವರದಿಯನ್ನು ಕೊಡುತ್ತಿದ್ದಾರೆ.

ಶ್ರೀ ಎ. ರಾಮದಾಸ್:- ಇದು ಶಾಲೆಗಳಿಗೆ ಸಂಬಂಧಪಟ್ಟ ಹಾಗೆ; ವಿಶ್ವವಿದ್ಯಾನಿಲಯಗಳು ರೆಕ್‌ಮೆಂಡ್ ಮಾಡದಿರುವಂತಹ ಕಾಲೇಜುಗಳಿಗೆ ಮಾನ್ಯತೆ ಕೊಡುವಂತಹ ಕೆಲಸ ಸರ್ಕಾರದಿಂದ ಹೇಗೆ ಆಯಿತು? ಸರ್ಕಾರಕ್ಕೆ ಒಂದು ಆದೇಶ ಇದೆ. ಅದೇನೆಂದರೆ ಒಂದು ಸುಪ್ರೀಂ ಪವರ್ ಇದೆ. ಅಂದರೆ ಯಾವುದಾದರೂ ಹಣಕಾಸಿನ ವ್ಯವಸ್ಥೆಯೊಳಗಡೆ ಹಣ ದುರುಪಯೋಗ ಆಗಿದ್ದರೆ, ವಿಶ್ವವಿದ್ಯಾಲಯದಲ್ಲಿ ಯಾವುದಾದರೂ ಕೂಡ ಆ ರೀತಿಯಾದಂಥ ಸಮಸ್ಯೆಗಳು ಆಗಿದ್ದರೆ, ತಾವು ಆ ಸೆಕ್ಷನ್ 41ರ ಅಡಿಯಲ್ಲಿ ಮತ್ತು ಸೆಕ್ಷನ್ 10(4)ರ ಅಡಿಯಲ್ಲಿ ಬೇಕಾಗಿರತಕ್ಕಂಥ ಅಧಿಕಾರವನ್ನು ಚಲಾಯಿಸಿ ಅದರ ಪ್ರಕಾರ ತಾವು ಎಲ್ಲವನ್ನೂ ತರಿಸಿಕೊಳ್ಳಬಹುದು. ಆದರೆ ನೀವು ಆ ಅಧಿಕಾರವನ್ನು ಉಪಯೋಗಿಸಿ ಎಲ್ಲೆಲ್ಲಿ ಏನೇನೂ ರಿಪೋರ್ಟ್ಸ್ ಇಲ್ಲ, ಎಲ್.ಐ.ಸಿ. ರಿಪೋರ್ಟ್ ಇಲ್ಲ, ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲ, ಅಂಥಾದ್ದಕ್ಕೂ ಕೂಡ ಗ್ರಾಂಟ್ ಮಾಡುವಂಥ ವ್ಯವಸ್ಥೆಯನ್ನು ನೀವು ಮಾಡುತ್ತೀರಿ ಎಂದರೆ ಇಲ್ಲಿ ಏನು ನಡೆಯುತ್ತಿದೆ? ಚುನಾವಣೆ ಹತ್ತಿರ ಬರುತ್ತಿದೆ ಎಂದು ಹೇಳಿ ಎಲ್ಲೆಲ್ಲಿ ಕಾಲೇಜು ಬೇಕು ಎಂದು ಕೇಳುತ್ತಾರೆ, ಅಲ್ಲಿ ಎಲ್ಲವನ್ನೂ ಕೊಡತಕ್ಕಂಥ ಕೆಲಸಗಳು ಆಗುತ್ತಿವೆಯಾ? ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಸನ್ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದ್ದರು. ನನಗೆ ಇನ್ನೂ ಕೂಡ ನೆನಪಿದೆ. ಹಿಂದಿನ ಸರ್ಕಾರ ಬಂದಾಗ ಇನ್ನೇನು ಸರ್ಕಾರ ಹೋಗುತ್ತದೆ ಎಂದು ಅನ್ನಿಸಿದ ತಕ್ಷಣದಲ್ಲೇ ಹದಿನಾಲ್ಕು ಮೆಡಿಕಲ್ ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟರು. ಅದನ್ನು ಕೊಟ್ಟಂಥ ಸಂದರ್ಭದಲ್ಲಿ ಇದೇ ಸದನದಲ್ಲಿ ಅವರು ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲದೆ ರಾಜ್ಯದಲ್ಲಿ ಇದೆಲ್ಲಾ ಆಗಬಾರದು ಎಂದು ಹೇಳಿ ಗಲಾಟೆ ಮಾಡಿ ಕೊನೆಗೆ ಅಷ್ಟೂ ಕಾಲೇಜುಗಳು ನಿಂತವು. ತಾವು ಬಂದಾಗ ಕೂಡ ಅದನ್ನೇ ಹೇಳಿದಿರಿ; ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲದಂಥ ಕಾಲೇಜನ್ನು ಕೊಡುವುದಿಲ್ಲ ಎಂದು ಹೇಳಿ. ಆದರೆ ಕಾಲ ಕ್ರಮೇಣ ಒಂದೊಂದಾಗಿ ಕೊಡುತ್ತಾ ಬಂದಿರಿ. ಅದು ಬೇರೆ ಪ್ರಶ್ನೆ. ಅಂದರೆ ಯಾವುದಾದರೂ ಕೂಡ ....

Dr. A.B. MALAKA REDDY:- I must put the records straight, Mr. Vice Chairman. All the colleges that have been sanctioned by this Government, not only they are fit enough for under graduation courses, but they are fit enough for not only post graduation. but even super speciality. I myself inaugurated A.G.Shetty Medical College, which this Government has sanctioned. ಎಷ್ಟು ಚೆನ್ನಾಗಿದೆ ಎಂದರೆ ರಾಮದಾಸ್‌ರವರೇ,

ತಾವು ದಯಮಾಡಿ ಹೋಗಿ ನೋಡಬೇಕು. ಈಗ ಹೆಗಡೆ ಮತ್ತು ವೈದೇಹಿ ಕಾಲೇಜ್ ಇಂತಹವರು ಅದ್ಭುತವಾಗಿ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಇವರು 20–25 ವರ್ಷಗಳಿಂದಿರುವ ಕಾಲೇಜುಗಳಿಗಿಂತಲೂ ಉತ್ತಮವಾಗಿ ಏನು ನಡೆಸಿದ್ದಾರೆ ಅಂತಹವರಿಗೆ ಮಾತ್ರ ಸರ್ಕಾರ ಕೊಟ್ಟಿದೆ. ಇಷ್ಟು ಮಾತ್ರ ನಾನು ಹೇಳಬಹುದು. ಬೇಕಾದರೆ ನಿಮ್ಮ ಜತೆ ಬರಲಿಕ್ಕೆ ನಾನು ತಯಾರು ಇದ್ದೇನೆ. ಇನ್‌ಸ್ಪೆಕ್ಷನ್ ಮಾಡಿ ಬರೋಣ. ಅಂತಹ ಅದ್ಭುತವಾದಂಥ ಇನ್‌ಫ್ರಾಸ್ಟ್ರಕ್ಚರ್‌ನ್ನು ಅವರು ಮಾಡಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್:– ನೀವು ಕಾಲೇಜು ಕೊಡುವುದಕ್ಕೆ ನಮ್ಮ ತಕರಾರು ಇಲ್ಲ. ಆದರೆ ಬಡವರ ಮಕ್ಕಳು ಹೋಗದ ಹಾಗೆ ಮಾಡಿಬಿಟ್ಟಿದ್ದೀರಲ್ಲಾ? ಎಲ್ಲಾ ಮಕ್ಕಳು, ಅದರಲ್ಲೂ ಹಳ್ಳಿಯ ಮಕ್ಕಳು ಈ ಫೀಸ್‌ನ್ನು ತುಂಬಿ ಕಲಿಯುವುದಕ್ಕೆ ಸಾಧ್ಯವಾಗುತ್ತಿದೆಯಾ? ಸುಮ್ಮನೆ ಕಾಲೇಜನ್ನು ಕೊಡುವುದಲ್ಲ. ಶ್ರೀಮಂತ ಮಕ್ಕಳು, ದೊಡ್ಡವರ ಮಕ್ಕಳು ಯಾರು ಇದ್ದಾರೆ ಅವರಿಗಷ್ಟೇ ಇದು ಅನುಕೂಲವಾಗುತ್ತದೆ. ಹಳ್ಳಿಯ ರೈತರ ಮಕ್ಕಳು ಯಾರೂ ಇದನ್ನು ಕಲಿಯುವುದಕ್ಕೆ ಸಾಧ್ಯವೇ ಇಲ್ಲ. ಎರಡು–ಮೂರು ಲಕ್ಷ ರೂಪಾಯಿಗಳನ್ನು ಅವರು ಎಲ್ಲಿಂದ ಕೊಡುತ್ತಾರೆ? ದಿನಗೂಲಿಯೇ ಅವರಿಗೆ ಸರಿಯಾಗಿ ಸಿಗುತ್ತಿಲ್ಲ. ಅವರು ಬದುಕುವುದು ಕಷ್ಟವಾಗಿ ಊರುಬಿಟ್ಟು ಹೋಗುತ್ತಿದ್ದಾರೆ. ಬಡವರ ಮಕ್ಕಳು, ಹರಿಜನ ಮಕ್ಕಳು, ರೈತರ, ಹಳ್ಳಿಯ ಮಕ್ಕಳು ಕೂಡ ಹೋಗಿ ಕಲಿಯುವ ಹಾಗೆ ವ್ಯವಸ್ಥೆ ಮಾಡಿ.

ಡಾ: ಎ.ಬಿ. ಮಾಲಕರೆಡ್ಡಿ:– ಸುಮ್ಮನೆ ಸರ್ಕಾರಕ್ಕೆ ಬಯ್ಯಬೇಡಿ. 1993ನೇ ಇಸವಿಯಿಂದ ಉನ್ನಿಕೃಷ್ಣನ್ ಜಡ್ಜಮೆಂಟ್ ಬಂದಮೇಲೆ ಸರ್ಕಾರದ ಕೈಯಲ್ಲಿ ಯಾವ ನೀತಿಯೂ ಇಲ್ಲ. ಕಾಲಕಾಲಕ್ಕೆ ಸುಪ್ರೀಂ ಕೋರ್ಟ್ ಏನು ಆರ್ಡರ್ ಪಾಸ್ ಮಾಡುತ್ತದೆಯೋ ಅದಕ್ಕೆ ಅನುಗುಣವಾಗಿ ನಾವು ಅಡ್ಮಿಶನ್ ಮಾಡುತ್ತಿದ್ದೇವೆ. 1993ಕ್ಕಿಂತ ಹಿಂದೆ ಏನು ಆಗಿದೆ ಎಂದು ನಾನು ಹೇಳುವುದಿಲ್ಲ. ಆದರೆ 1993ನೇ ಇಸವಿಯಿಂದ ಇಲ್ಲಿಯವರೆಗೆ ಕಾಲಕಾಲಕ್ಕೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಏನು ಆದೇಶ ನೀಡುತ್ತಾರೋ ಅದಕ್ಕೆ ಅನುಗುಣವಾದ ಸೀಟ್ ಮ್ಯಾಟ್ರಿಕ್ಸ್‌ನ್ನು ನಾವು ಮಾಡುತ್ತಿದ್ದೇವೆ. ಪೋಸ್ಟ್ ಗ್ರಾಜ್ಯುಯೇಟ್, ಅಂಡರ್ ಗ್ರಾಜ್ಯುಯೇಟ್‌ಗೂ ಹಾಗೇ ಇದೆ. ಸುಮ್ಮನೆ ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ಅರ್ಥ ಇಲ್ಲ.

ಶ್ರೀ ಎ. ರಾಮದಾಸ್:– ಸನ್ಮಾನ್ಯ ಉಪಾಧ್ಯಕ್ಷರೇ, ಅದು ನಾನು ಮೆಡಿಕಲ್‌ಗೆ ಬಂದಾಗ ಹೇಳುತ್ತೇನೆ. ನರ್ಸಿಂಗ್ ಬಗ್ಗೆ ಮೊದಲು ಹೇಳಿ ಮುಗಿಸುತ್ತೇನೆ. ತಾವು ಹೇಳಿದಾಗ ನಾನು ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಎಲ್ಲವನ್ನೂ ಹೇಳುವುದು ಬೇಡ. ಏಕೆಂದರೆ ನಾನು ಈಗಾಗಲೇ ಹೇಳಿದ್ದೇನೆ. ನೀವು ಒನ್‌ಮ್ಯಾನ್ ಕಮಿಷನ್‌ನ್ನು ದಯವಿಟ್ಟು ನೇಮಕ ಮಾಡಿ. ಅದಕ್ಕೆ ಎಲ್ಲಾ ದಾಖಲೆಗಳನ್ನು ಕೊಟ್ಟು ಅಷ್ಟಕ್ಕೂ ಅಬೈಡ್ ಆಗಿ ಏನೇನು ಅನ್ಯಾಯಗಳು ಇವೆ, ಅದನ್ನು ಸಾಬೀತು ಮಾಡಿದರೆ ನಾನು ಈ ಜಾಗದಲ್ಲಿ ಇರುತ್ತೇನೆ. ಇಲ್ಲದಿದ್ದರೆ ಜಾಗ ಬಿಟ್ಟು ಹೋಗುವುದಕ್ಕೆ ನಾನು ಸಿದ್ಧನಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಬಂದಾಗ ನಾನು ಹೇಳುತ್ತೇನೆ.

ಡಾ: ಎ.ಬಿ. ಮಾಲಕರೆಡ್ಡಿ:– ನ್ಯೂನತೆಗಳಿದ್ದರೆ ಖಂಡಿತ ತಿಳಿಸಿ. ಫೋನ್ ಮಾಡಿ ಕೂಡ ತಾವು ಹೇಳಿದ್ದೀರಿ.

ಶ್ರೀ ಎ. ರಾಮದಾಸ್:– ನಾನು ಈಗಾಗಲೇ ಹೇಳಿದಹಾಗೆ ಒನ್ ಮ್ಯಾನ್ ಕಮಿಷನ್‌ನ್ನು ಮಾಡಿದರೆ ಯಾವ್ಯಾವ ಕಾಲೇಜಿನಲ್ಲಿ ಏನೇನು ಆಗಿದೆ ಎಂಬುದು ಗೊತ್ತಾಗುತ್ತದೆ. ನನ್ನ ಹತ್ತಿರ ದಾಖಲೆ ಇದೆ. ಕ್ಯಾಂಟೀನ್ ಅಡ್ರೆಸ್‌ನಲ್ಲಿ ಒಂದು ನರ್ಸಿಂಗ್ ಸ್ಕೂಲ್ ತೆಗೆದುಕೊಳ್ಳಬಹುದು

ಎಂದು ಆದರೆ, ಕಾಲೇಜುಗಳಿಗೆ ಹೇಗೆ ಸ್ಯಾಂಕ್ಷನ್ ತೆಗೆದುಕೊಂಡಿದ್ದಾರೆ, ಎನ್ನುವುದನ್ನೂ ಕೂಡ ನಾನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಇದರ ಜತೆಯಲ್ಲಿ ಈಗ ಬಂದಿರುವಂತಹ ನಲ್ವತ್ತು ಸರ್ಜಿಗಳು ವಿಶ್ವವಿದ್ಯಾನಿಲಯಕ್ಕೆ ಬಂದವು. ವಿಶ್ವವಿದ್ಯಾನಿಲಯದಲ್ಲಿ ನಲ್ವತ್ತು ಅರ್ಜಿಗಳ ಬಗ್ಗೆ ಆಗುವುದಿಲ್ಲ ಎಂದು ಹೇಳಿ ತೆಗೆದಿಟ್ಟಂಥಾದ್ದು ಸರ್ಕಾರಕ್ಕೆ ಬರುತ್ತದೆ ಎನ್ನುವುದಾದರೆ ಇದು ಯಾರ ಇನ್‌ಫ್ಲೂಯನ್ಸ್‌ನಿಂದ ಆಯಿತು? ಇದು ಒಂದು ಭಾಗ. ಎರಡನೇಯದು, ಇದಕ್ಕೆ ಒಂದು ರೀತಿ ನೀತಿ ಇದೆ. ಈಗ ಇರುವಂತಹ 60 ಕಾಲೇಜುಗಳಲ್ಲಿ 2610 ಬಿ.ಎಸ್‌ಸಿ ನರ್ಸಿಂಗ್ ಇದೆ. ಇಷ್ಟು ಜನಕ್ಕೆ ಶಿಕ್ಷಣಕೊಡಬೇಕಾದರೆ ಕೊನೆಪಕ್ಷ 149 ಜನ ಎಂ.ಎಸ್ಸಿ (ನರ್ಸಿಂಗ್) ಮಾಡಿದಂಥ ಡಾಕ್ಟರ್‌ಗಳು ಬೇಕು. ಆದರೆ ಆಶ್ಚರ್ಯವೆಂದರೆ, ಇಡೀ ನಮ್ಮ ರಾಜ್ಯದಲ್ಲಿ ಇರುವಂತಹವರು 164 ಜನ ಮಾತ್ರ. ನನಗೆ ರಿಜಿಸ್ಟ್ರಾರ್, ಕರ್ನಾಟಕ ಸ್ಟೇಟ್ ನರ್ಸಿಂಗ್ ಕೌನ್ಸಿಲ್‌ನಿಂದ ಒಂದು ಪತ್ರ ಬಂದಿದೆ. ಕರ್ನಾಟಕದಲ್ಲಿ ಲೆಕ್ಚರರ್ಸ್ ಆಗಿ ಕೆಲಸ ಮಾಡುವುದಕ್ಕೋಸ್ಕರ ಎನ್‌ರೋಲ್ ಮಾಡಿರತಕ್ಕಂಥವರು ಕೇವಲ 32 ಜನ ಮಾತ್ರ. ಇವರು ಎಂ.ಎಸ್ಸಿ (ನರ್ಸಿಂಗ್) ಆಗಿರತಕ್ಕಂಥವರು. ಹೀಗೆ ಇರುವಾಗ ಎನ್‌ರೋಲ್‌ಮೆಂಟ್‌ನಲ್ಲಿ 149 ಜನರು ಹೇಗೆ ಬಂದರು? ಯಾರೋ ಮೈಸೂರಿನಲ್ಲಿದ್ದವರನ್ನು ಬಳ್ಳಾರಿಗೆ ಹಾಕುವುದು, ಬಳ್ಳಾರಿಯಲ್ಲಿ ಇದ್ದವರನ್ನು ಮೈಸೂರು ಮುಂತಾದ ಕಡೆ ಹಾಕುವುದು ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳೇ, ದಯವಿಟ್ಟು ತಾವು ಒಂದು ಕೆಲಸ ಮಾಡಿ. ಎಲ್ಲಿಯಾದರೂ ಮೆಡಿಕಲ್ ಕಾಲೇಜು ಮತ್ತು ನರ್ಸಿಂಗ್ ಕಾಲೇಜು, ಆಯುರ್ವೇದ ಕಾಲೇಜುಗಳಲ್ಲಿ ಕೆಲಸ ಮಾಡುವಂತಹ ಪ್ರೊಫೆಸರ್‌ಗಳು ಮತ್ತು ಲೆಕ್ಚರರ್ಸ್ ಇದ್ದಾರಲ್ಲಾ, ಇವರೆಲ್ಲರ ಇನ್‌ಕಮ್ ಟ್ಯಾಕ್ಸ್ ಅಸೆಸ್‌ಮೆಂಟ್‌ನ್ನು ತರಿಸಿ. ಈಗ ಒಂದು ಕಡೆ ಮಾತ್ರ ಇನ್‌ಕಮ್‌ಟ್ಯಾಕ್ಸ್ ಅಸೆಸ್‌ಮೆಂಟ್ ಆಗುವುದಕ್ಕೆ ಸಾಧ್ಯಹೊರತು ಎಲ್ಲಾ ಕಡೆಯಲ್ಲೂ ಇದು ಆಗುವುದಕ್ಕೆ ಸಾಧ್ಯವಿಲ್ಲ. ಇಂತಹ ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ ಕಾಲೇಜುಗಳನ್ನು ನಡೆಸಬಹುದು ಎನ್ನುವುದಾದರೆ ಸರ್ಕಾರ ಏತಕ್ಕಾಗಿ ಹೀಗೆ ಕಣ್ಣುಮುಚ್ಚಿಕೊಂಡು ಕೂತಿದೆ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಈ ದೃಷ್ಟಿಯಲ್ಲಿ ನಾನು ಕೈಮುಗಿದು ಕೇಳುತ್ತಿದ್ದೇನೆ. ನರ್ಸ್‌ಗಳು ಎಂದರೆ ನಾವು ಅವರನ್ನು ದೇವರ ರೀತಿಯಲ್ಲಿ ನೋಡಿಕೊಳ್ಳುತ್ತೇವೆ. ಅವರು ಅಷ್ಟು ಸೇವಾ ಮನೋಭಾವನೆ ಇರುವಂತಹವರು. ಆದರೆ ನಾಯಿಕೊಡೆಗಳ ರೀತಿಯಲ್ಲಿ ಬಂದಂತಹ ಕಾಲೇಜುಗಳಿಗೆ, ಐದು ಲಕ್ಷ, ಹತ್ತು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಒಂದೊಂದು ಕಾಲೇಜನ್ನು ಕೊಡುವುದಾದರೆ ಅವರೂ ಕೂಡ ದುಡ್ಡು ಮಾಡುವುದಕ್ಕೋಸ್ಕರ ಹೊರಡುತ್ತಾರೆ. ಇಂತಹ ವ್ಯವಸ್ಥೆಗೆ ದಯವಿಟ್ಟು ಅವಕಾಶವನ್ನು ಕೊಡಬೇಡಿ. ಈಗ ಇರುವುದರ ಬಗ್ಗೆ ಒಂದು ಎನ್‌ಕ್ವೈರಿ ಕಮಿಷನ್ ಮಾಡಬೇಕು ಎನ್ನುವಂಥಾದ್ದು ಒಂದು. ಎರಡನೇಯದು, ನಾವೇನೋ ಕೆಲವು ಕಡೆ ಅನಧಿಕೃತವಾಗಿ ಕೆಲವು ಕಾಲೇಜುಗಳನ್ನು ಮಾಡುವುದನ್ನು ನೋಡಿದ್ದೇವೆ. ಆದರೆ ವಿಶ್ವವಿದ್ಯಾನಿಲಯಕ್ಕೆ ಏನಾಗಿದೆ? ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಪ್ರಾರಂಭವಾದದ್ದು 1996–97ರಲ್ಲಿ. ಆದರೆ ಈ ಒಂದು ವಿಶ್ವವಿದ್ಯಾನಿಲಯದಲ್ಲಿ 1996–97ರಿಂದ ಪ್ರತಿವರ್ಷ 1500 ಜನ ಆಯುರ್ವೇದ ವಿದ್ಯಾರ್ಥಿಗಳು ಅಡ್ಮಿಶನ್ ಆಗುತ್ತಿದ್ದರು. ಯಾರ ಮೂಲಕ ಎಂದರೆ ಸಿ.ಇ.ಟಿ. ಮೂಲಕ ಮತ್ತು ಅದರ ಮ್ಯಾನೇಜ್‌ಮೆಂಟ್ ಮೂಲಕ 1996ರಿಂದ ಇಲ್ಲಿಯವರೆಗೆ ಅಂದರೆ ಐದೂವರೆ ವರ್ಷದಲ್ಲಿ ಈ ಕೋರ್ಸ್‌ನ್ನು ಮುಗಿಸಿ ಎರಡು ಬ್ಯಾಚ್‌ಗಳಲ್ಲಿ ಅಂದರೆ ಮೂರು ಸಾವಿರ ಜನ ಡಾಕ್ಟರ್ಸ್‌ಗಳು ಕರ್ನಾಟಕದಲ್ಲಿ ಹೊರಗಡೆಗೆ ಬಂದಿದ್ದಾರೆ. ಆದರೆ ಇವತ್ತು ಅವರು ಡಾಕ್ಟರ್ಸ್‌ಗಳು ಅಲ್ಲ. ಯಾರ ಪ್ರಕಾರ? ಕರ್ನಾಟಕ ರಾಜ್ಯದ ಸರ್ಕಾರದ ಪ್ರಕಾರವೇ ಅವರು ಇವತ್ತು

ಡಾಕ್ಟರ್‌ಗಳು ಅಲ್ಲ. They are not eligible for any appointment. ಏಕೆ ಏಕೆಂದರೆ ಯಾವತ್ತು ಇವರು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ಈ ಕೋರ್ಸ್‌ಗಳನ್ನು ಅಂದರೆ ಬಿ.ಎ.ಎಂ.ಎಸ್ ಮತ್ತು ಬಿ. ಯು.ಎಂ.ಎಸ್. ಪದವಿಗಳನ್ನು ಪ್ರಾರಂಭ ಮಾಡಿದರೋ ಆವತ್ತಿನಿಂದ ಇವತ್ತಿನವರೆಗೂ ಇವರು ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನೇ ಹಾಕಿಲ್ಲ. ಈವರೆಗೂ ಅರ್ಜಿ ಹಾಕದೆ ಈಗ ಹಾಕಿದ್ದಾರೆ. ಅರ್ಜಿಯನ್ನು ಹಾಕಿಲ್ಲದೇನೇ ಈಗಾಗಲೇ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿ ವೈದ್ಯರಾಗಿ ಹೊರಗಡೆಗೆ ಬಂದರು. ಅವರುಗಳಿಗೆ ಡಿಗ್ರಿ ಸರ್ಟಿಫಿಕೇಟ್‌ಗಳನ್ನು ಏನು ಇವತ್ತು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದವರು ಕೊಟ್ಟಿದ್ದಾರೆ, ಈ ಸರ್ಟಿಫಿಕೇಟ್‌ಗಳು ಸಿಂಧು ಅಲ್ಲ ಎಂದು ಹೇಳಿ ಈಗಾಗಲೇ ಕೇಂದ್ರಸರ್ಕಾರ ತಿರಸ್ಕರಿಸಿದೆ. ಏಕೆಂದರೆ ನಮ್ಮ ಹತ್ತಿರ ಇದು ರಿಜಿಸ್ಟ್ರೇಶನ್ ಆಗಿಲ್ಲ ಎಂದು. ಇದಕ್ಕೆ ಕಾರಣ ಏನು? ಹಾಗಾದರೆ ವಿಶ್ವವಿದ್ಯಾನಿಲಯದವರು ಏನು ಮಾಡುತ್ತಿದ್ದಾರೆ? ಕಾನೂನು ಪ್ರಕಾರ ಯಾವ ವಿದ್ಯಾರ್ಥಿಗಳು ಒಂದು ಬ್ಯಾಚ್‌ನಲ್ಲಿ ಬರುತ್ತಾರೆ ಅವರು ಕೊನೆಯ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ರಾಜ್ಯಸರ್ಕಾರ ಮತ್ತು ವಿಶ್ವವಿದ್ಯಾನಿಲಯ ಎರಡೂ ಜಂಟಿಯಾಗಿ ಕೇಂದ್ರಕ್ಕೆ ಅಂತಿಮ ವರ್ಷದ ಪರೀಕ್ಷೆಗೆ ಹೋಗುತ್ತಾ ಇರುವಂತಹ ನಮ್ಮ ಎಕ್ಸಾಮಿನೇಶನ್ ಸಿಸ್ಟಮ್ ಹೇಗಿದೆ, ನಮ್ಮ ವ್ಯವಸ್ಥೆಯಲ್ಲಿ ಸಿಲೆಬಸ್ ಏನಿದೆ, ನಾವು ಪರೀಕ್ಷೆಯನ್ನು ಹೇಗೆ ಕಂಡಕ್ಟ್ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ವಿಚಾರಗಳನ್ನು ಕೊಡಬೇಕು. ಆಗ ಅಲ್ಲಿಯ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ಸ್‌ನವರು ಒಂದು ಸಮಿತಿಯನ್ನು ಏನು ಕಳುಹಿಸುತ್ತಾರೆ, ಅವರು ಬಂದು ನೋಡಿ ಅದಕ್ಕೆ ಅಪ್ರೂವಲ್‌ನ್ನು ಕೊಡುತ್ತಾರೆ. ಆದರೆ ಇವತ್ತಿನವರೆಗೂ ಅದನ್ನು ಅಪ್ರೂವ್ ಮಾಡಿಲ್ಲ ಈಗ ಆಯುರ್ವೇದ ಮತ್ತು ಯುನಾನಿ ಡಾಕ್ಟರುಗಳನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ಸರ್ಕಾರದವರು ಒಂದು ನೋಟಿಫಿಕೇಶನ್‌ನ್ನು ಹೊರಡಿಸಿದ್ದಾರೆ. ಅದು ಏನೆಂದರೆ ಯಾವ ವಿದ್ಯಾರ್ಥಿಗಳು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ಫಸ್ಟ್ ರ್‍ಯಾಂಕ್ ಪಡೆದುಕೊಂಡಿದ್ದಾರೆ, ಅವರು ಈ ಉದ್ಯೋಗಕ್ಕೆ ಅರ್ಹರಲ್ಲ. ಇದು ಯಾರು ಹೇಳಿದ್ದಾರೆ ಎಂದರೆ, ರಾಜ್ಯ ಸರ್ಕಾರವೇ ಹೇಳಿದೆ. ಆಯುರ್ವೇದ ಹಾಗೂ ಯುನಾನಿಗೆ ಸಂಬಂಧಪಟ್ಟಹಾಗೆ ಒಂದು ಡಾಕ್ಟರ್‌ಗಳ ಲಿಸ್ಟ್‌ನ್ನು ಅನೌನ್ಸ್ ಮಾಡಿದ್ದಾರೆ ಅದರಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದಿಂದ ತೇರ್ಗಡೆಯಾಗಿರುವ ಯಾವುದೇ ವಿದ್ಯಾರ್ಥಿಗಳಿಗೆ ಕೆಲಸ ಕೊಡುವುದಿಲ್ಲ ಎಂದು ಘೋಷಣೆ ಮಾಡಲಾಗಿದೆ. ಅಂದರೆ ಏನರ್ಥ? ಯಾರ ತಪ್ಪಿಗೋಸ್ಕರ ಹೀಗೆ ಮಾಡಿದ್ದಾರೆ? ರಾಜ್ಯಸರ್ಕಾರ ಒಂದು ಇಲಾಖೆಯನ್ನು ಇಟ್ಟುಕೊಂಡು ಕೇಂದ್ರ ಸರ್ಕಾರದ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಿ ಅಪ್ರೂವಲ್‌ನ್ನು ತೆಗೆದುಕೊಂಡು ಇವತ್ತು ಅವರನ್ನು ಡಾಕ್ಟರ್ಸ್ ಎಂದು ಹೇಳಿ ರಿಜಿಸ್ಟ್ರೇಶನ್ ಮಾಡಲಿಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡದೆ ಮೂರು ಸಾವಿರ ವಿದ್ಯಾರ್ಥಿಗಳನ್ನು ಅಂದರೆ ಡಾಕ್ಟರ್‌ಗಳನ್ನು ಇವತ್ತು ಬೀದಿಗೆ ತಂದು ನಿಲ್ಲಿಸುವಂತಹ ವ್ಯವಸ್ಥೆಯಾಗಿದೆಯಲ್ಲಾ, ಇದಕ್ಕೆ ಏನು ಹೇಳುಬೇಕು?

ಡಾ: ಎ.ಬಿ. ಮಾಲಕರೆಡ್ಡಿ:– ಮಾನ್ಯ ಸದಸ್ಯರು ಬಹಳ ಗಂಭೀರ ಸ್ವರೂಪದ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅಕಾಡೆಮಿಕ್ ವಿಷಯದಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡುವುದಿಲ್ಲ. ಸರ್ಕಾರಕ್ಕೆ ಇದು ಗೊತ್ತಾಗುವುದಿಲ್ಲ. Unless the aggrieved party comes and appeals to the Government ಇದುವರೆಗೂ ನನ್ನಲ್ಲಿ ಯಾರೂ ಬಂದಿಲ್ಲ. ಇದು ಅಕಾಡೆಮಿಕ್ ಮ್ಯಾಟರ್. ಸರ್ಕಾರ ಅಕಾಡೆಮಿಕ್ ಮ್ಯಾಟರ್ಸ್‌ನಲ್ಲಿ ಇಂಟರ್‌ಫಿಯರ್

ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದ ಗಮನ ಸೆಳೆದಾಗ ಮಾತ್ರ ಇದು ಗೊತ್ತಾಗುತ್ತದೆ. ಈಗ ನನ್ನ ಗಮನ ಸೆಳೆದಿದ್ದಾರೆ ನಾನು ಇದರ ಬಗ್ಗೆ ಗಂಭೀರವಾಗಿ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಬಂದಿರತಕ್ಕಂಥ ಒಂದು ಪತ್ರವನ್ನು ನಾನು ಓದುತ್ತೇನೆ. ಅದು ಯಾವುದು ಎಂದು ಹೇಳುತ್ತೇನೆ. ದಿನಾಂಕ 18-10-2002. ಶ್ರೀ ಪಿ ಆರ್ ಶರ್ಮ, ಸೆಕ್ರೆಟರಿ, ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸನ್ಸ್, ಇಂಡಸ್ಟ್ರಿಯಲ್ ಏರಿಯಾ, ಜನಕಪುರಿ, ಡೆಲ್ಲಿ. ಇವರು ಒಂದು ಪತ್ರವನ್ನು ರಾಜ್ಯ ಸರ್ಕಾರದ ಕಾರ್ಯದರ್ಶಿಗಳಿಗೆ ಬರೆದಿದ್ದಾರೆ. ಅಂದರೆ ಸರ್ಕಾರ ಅಂದರೆ ಯಾರು? ಮಂತ್ರಿಗಳೇ ಅಥವಾ ಸಂಬಂಧಪಟ್ಟ ಕಾರ್ಯದರ್ಶಿಗಳೇ? ಅಂದರೆ ನೀವು ಅರ್ಜಿಯನ್ನು ಕೊಟ್ಟಿದ್ದು 2002ರಲ್ಲಿ. ವಿದ್ಯಾರ್ಥಿಗಳು ಹೊರಗಡೆ ಬಂದಿದ್ದು 2001ರಲ್ಲಿ. ಆ ನಂತರ 2002ರಿಂದ ಅವರಿಗೆ ಬೇಕಾದಂತಹ ಮಾಹಿತಿಗಳನ್ನೂ ಸಹ ಕೊಡಲಿಕ್ಕೆ ಅಗದೇ ಅವರು ಸುಮಾರು ಮೂರು ಕ್ಲಾರಿಫಿಕೇಶನ್ಸ್ ಅನ್ನು ಕೇಳಿದ್ದಾರೆ ಕೇಂದ್ರ ಸರ್ಕಾರದಿಂದ, ಯಾರನ್ನು? ನಿಮ್ಮ ಕಾರ್ಯದರ್ಶಿಗಳನ್ನು. ಕಾರ್ಯದರ್ಶಿ ಅಂದರೆ ಸರ್ಕಾರ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಏನಾದರೂ ಎರಡು ಭಾಗ ಆಗಿದೆಯೋ ಏನೋ ನನಗೆ ಗೊತ್ತಿಲ್ಲ. ಅಧಿಕಾರಿಗಳದ್ದೇ ಒಂದು, ಸರ್ಕಾರ ಮಂತ್ರಿಗಳದ್ದೇ ಒಂದು ಸರ್ಕಾರ ಇದೆಯೋ ಏನೋ ನನಗೆ ಗೊತ್ತಿಲ್ಲ. ಹಾಗಂತ ಅಂದುಕೊಂಡಿದ್ದೇನೆ ನಾನು ಇವತ್ತಿನವರೆಗೂ ಕೂಡ. ಕೇಂದ್ರದಿಂದ ಇವತ್ತು ಅದಕ್ಕೆ ಬೇಕಾಗಿರತಕ್ಕಂಥ ಕ್ಲಾರಿಪಿಕೇಶನ್ಸ್ ಅನ್ನು ಕೇಳಿದರೂ ಕೂಡ ಏನೋ ಒಂದು ಕ್ಲಾರಿಫಿಕೇಶನ್ ಕೊಡುವಂಥದ್ದರ ಮುಖಾಂತರದಲ್ಲಿ ಮೂರು ಸಾವಿರ ಜನ ಡಾಕ್ಟರ್ಸ್ ಯಾರು ಹೊರಗಡೆ ಬಂದಿದ್ದಾರೆ ಅವರು ಪ್ರಾಕ್ಟೀಸ್ ಮಾಡುವುದಕ್ಕೆ ಆಗುವುದಿಲ್ಲ, ಅಂತ ಯಾರು ಹೇಳುತ್ತಿರುವುದು? ನಿಮ್ಮ ಡೈರೆಕ್ಟರ್‌ರವರೇ ನಾನು ಹೇಳುತ್ತಿಲ್ಲ. ನಿಮ್ಮ ಆಯುರ್ವೇದಿಕ್ ನಿರ್ದೇಶಕರು ಯಾರು ಇದ್ದಾರೆ ಅವರೇ ಇವತ್ತು ಒಂದು ನೋಟಿಫಿಕೇಶನ್ ಅನ್ನು ಹೊರಡಿಸಿದ್ದಾರೆ. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದಿಂದ ಪಾಸಾಗಿರುವಂತಹವರು ಯಾರನ್ನೂಕೂಡ ಇವತ್ತು ನೇಮಕಾತಿ ಮಾಡುವುದಿಲ್ಲ ಎಂದು ಹಾಗಾದರೆ ಇದಕ್ಕೆ ಯಾರು ಜವಾಬ್ದಾರಿ? ಆ ವಿದ್ಯಾರ್ಥಿಗಳು ಭವಿಷ್ಯ ಏನು? ಎರಡು ವರ್ಷಗಳ ಕಾಲದಿಂದ ರ್‍ಯಾಂಕ್ ಪಡೆದಂತಹ ವಿದ್ಯಾರ್ಥಿಗೆ ಅವಕಾಶ ಇಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಯಾರ್‍ಯಾರು ಡಿಗ್ರಿ ತೆಗೆದುಕೊಂಡಿದ್ದರು ಅಂತಹವರಿಗೆ ಮಾತ್ರ ಇವತ್ತು ಕೊಡುವಂತಹ ವ್ಯವಸ್ಥೆ ಇದೆ ಅಂದರೆ, ಇದರ ಅರ್ಥ ಏನು? ಇದಕ್ಕೆ ಸರ್ಕಾರದ ಹೊಣೆ, ಭಾಗಿತ್ವ ಏಷ್ಟು ಇದೆ? ಅದರಲ್ಲಿ ಲ್ಯಾಫ್ಸ್ ಎಲ್ಲಿ ಆಗಿದೆ. ಇದು ಬಹಳ ನೋವಿನ ಸಂಗತಿ. ಇಲ್ಲಿ ಇರುವಂತಹ ಬಿ ಎ ಎಂ ಎಸ್ ಮತ್ತು ಬಿ ಯು ಎಂ ಎಸ್...

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮುಂದೆ ಉತ್ತರ ಏನು ಬರುತ್ತದೆ ಎನ್ನುವುದು ನಮಗೆ ಗುರುತು ಇದೆ. ಈ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಈಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳುವುದು ಒಳ್ಳೆಯದು. ನೋಡ್ರಿ ಅವರು ಹೇಳತಕ್ಕಂಥಾದ್ದು ಎಂತಹ ಮಹತ್ವದ ವಿಷಯ ಇದೆ.

ಡಾ: ಎ. ಬಿ.ಮಾಲಕರೆಡ್ಡಿ:- ಮಾನ್ಯ ಅಧ್ಯಕ್ಷರೇ, ಅನೇಕ ವಿಚಾರಗಳಲ್ಲಿ ಮಾನ್ಯ ವಿದ್ಯಾರ್ಥಿಗಳು ನನ್ನನ್ನು ಬಂದು ಭೇಟಿ ಮಾಡಿದ್ದಾರೆ. ಆದರೆ ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಅನೇಕ ವಿಚಾರವಾಗಿ ವಿದ್ಯಾರ್ಥಿಗಳು ಕಾಲ ಕಾಲಕ್ಕೆ ಬಂದು ನನಗೆ ಮನವಿಗಳನ್ನು ಕೊಡುತ್ತಾರೆ.

ಆದರೆ ಈ ವಿಷಯದಲ್ಲಿ ಮಾತ್ರ ನನ್ನ ಗಮನಕ್ಕೆ ತಂದಿಲ್ಲ. ನಿಜವಾಗಿಯೂ ಸಹ ಇದು ಬಹಳ ಗಂಭೀರವಾದ ವಿಷಯ. ಆದರೆ ನನಗೆ ಒಂದೂ ಮನವಿಯನ್ನು ವಿದ್ಯಾರ್ಥಿಗಳು ಕೊಟ್ಟಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಒಂದು ಆದೇಶ ಮಂತ್ರಿಗಳ ಗಮನಕ್ಕೆ ಬರದಿದ್ದರೆ ಹೇಗೆ? ಆದೇಶ ಹೊರಟಿದೆ ಎಂದು ನಮ್ಮ ಶಾಸಕರು ಹೇಳುತ್ತಿದ್ದಾರೆ. ಮಂತ್ರಿಗಳಿಗೆ ಇದು ಗೊತ್ತಿಲ್ಲ ಅಂದರೆ? ಇದು ವಿಚಿತ್ರ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ನನಗನ್ನಿಸುವುದು ಏನೆಂದರೆ ಮೆಡಿಕಲ್ ಎಜ್ಯುಕೇಶನ್ ಮಿನಿಸ್ಟರ್ ಗಮನಕ್ಕೆ ಬಾರದೇ ಇರುವ ಅನೇಕ ಅಂಶಗಳನ್ನು ಮಾನ್ಯ ರಾಮದಾಸ್‌ರವರು ಹೇಳುತ್ತಿದ್ದಾರೆ. ಎಲ್ಲೋ ವಿದ್ಯಾರ್ಥಿಗಳಿಗೆ ಅನಿಸಿದೆ, ಸರ್ಕಾರದ ಮೆಡಿಕಲ್ ಎಜ್ಯುಕೇಶನ್ ಮಿನಿಸ್ಟರ್ ಹತ್ತಿರ ಹೇಳುವುದಕ್ಕಿಂತ ಈ ಶಾಡೋ ಮೆಡಿಕಲ್ ಎಜ್ಯುಕೇಶನ್ ಮಿನಿಸ್ಟರ್ ಹತ್ತಿರ ಹೇಳುವುದು ಒಳ್ಳೆಯದು ಎಂದು ಅವರಿಗೆ ಮಾಹಿತಿಯನ್ನು ತಂದು ಕೊಟ್ಟಿದ್ದಾರೆಂದು ಕಾಣುತ್ತದೆ.

ಡಾ|| ಎ.ಬಿ. ಮಾಲಕ ರೆಡ್ಡಿ:- ಸಮಸ್ಯೆ ಬಗೆಹರಿಯಬೇಕಲ್ಲಾ. ಅವರು ನನ್ನ ಗಮನಕ್ಕೆ ತಂದಿದ್ದು ಒಳ್ಳೆಯದಾಯಿತು.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ದಯಮಾಡಿ ನೋಡಬೇಕು. ವಿದ್ಯಾರ್ಥಿಗಳು ತಮಗೂ ಕೂಡ ಕೊಟ್ಟಿರುವಂತಾದ್ದು. ದಿನಾಂಕ 25-5-2003. ಇದಕ್ಕೆ ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ರಿಜಿಸ್ಟ್ರಾರ್ ಮತ್ತು ಸಂಬಂಧಪಟ್ಟ ಸಚಿವರು ಅಂದರೆ ಮೇಡಮ್‌ಗೆ ಬರುತ್ತದೆಂದು ನಾನು ಅಂದುಕೊಂಡಿದ್ದೇನೆ. ಅಯರ್‌ವೇದ ಹಾಗಾಗಿ ಇವರಿಗೂ ಕೂಡ ಪತ್ರ ಹೋಗಿದೆ. ಸುಮಾರು 56 ವಿದ್ಯಾರ್ಥಿಗಳು ಸಹಿ ಮಾಡಿರುವಂತಹ ಒಂದು ಮನವಿ ಪತ್ರ ನನ್ನ ಮುಂದೆ ಇದೆ. ಇದು ಸರ್ಕಾರದಲ್ಲಿ ಉಪ ಕುಲಪತಿಗಳು, ರಿಜಿಸ್ಟ್ರಾರ್ ಮತ್ತು ಸಂಬಂಧಪಟ್ಟ ಮಂತ್ರಿಗಳು ಮತ್ತು ಕಾರ್ಯದರ್ಶಿಗಳು. ಇಷ್ಟು ಜನರಿಗೂ ಕೂಡ ದಿನಾಂಕ 25-5-03ರಲ್ಲಿ ಕೊಟ್ಟಿರುವಂತಹ ಮನವಿ ಪ್ರತಿ ಸಹ ನನ್ನ ಹತ್ತಿರ ಇದೆ. ಅಂದರೆ ನಿಮ್ಮ ಸರ್ಕಾರ ನಾನು ಆಗಲೇ ಹೇಳಿದ ಹಾಗೆ ಡೆಲ್ಲಿಗೆ ಕಳುಹಿಸಿರುವಂಥದ್ದು, ನಮ್ಮ ಸಭಾಪತಿಯವರು ಹೇಳುತ್ತಿದ್ದರು ನಮ್ಮ ಸರ್ಕಾರ ಅಂದರೆ ಗೌರ್ನೆನ್ಸ್ ಕುಳಿತ ಜಾಗದಲ್ಲಿಯೇ, ಆನ್ ಸ್ಪಾಟ್ ಟಚ್ ಮಾಡಿದ ತಕ್ಷಣವೇ ವ್ಯವಸ್ಥೆಗಳೆಲ್ಲಾ ಆಗುತ್ತದೆ, ಆದರೆ ಕಳೆದ 6 ವರ್ಷಗಳ ಕಾಲದಿಂದ ಯುನಿವರ್ಸಿಟಿ ಆದ ತಮ್ಮ ಸರ್ಕಾರ ಬಂದು ಮೂರೂವರೆ ವರ್ಷಗಳ ಕಾಲ ಆಗಿದೆ, ಇವತ್ತಿನವರೆಗೂ ಕೂಡ ಸರ್ಕಾರದ ಮುಂದೆ, ಕೇಂದ್ರ ಸರ್ಕಾರದ ಮುಂದೆ ಇದನ್ನು ಅಪ್ರೂವಲ್‌ಗೆ ಇಡಬೇಕು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚಿಂತನೆ ಇಲ್ಲ ಎನ್ನುವುದಾದರೆ, ಇನ್ನೊಂದು ತಾವು ಎಂ.ಡಿ. ಸರ್ಟಿಫಿಕೇಟ್ಸ್ ಕೊಟ್ಟಿದ್ದೀರಲ್ಲಾ ಈಗಾಗಲೇ 3 ಬ್ಯಾಚ್ ಆಗಿ ಹೋಯಿತು, ಅವರಿಗೆ ತಾವು ಸರ್ಟಿಫಿಕೇಟ್ ಕೊಟ್ಟಿದ್ದೀರಲ್ಲಾ ಅವರ ಭವಿಷ್ಯ ಏನು? ಯಾರಿಗೆ ಈಗ ಪೋಸ್ಟ್ ಗ್ರ್ಯಾಜುಯೇಶನ್ ಸರ್ಟಿಫಿಕೇಟ್ ಆಯರ್ವೇದದಲ್ಲಿ ಇಶ್ಯೂ ಮಾಡಿದ್ದಿರಲ್ಲಾ ಅವರ ಭವಿಷ್ಯವೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಅದು ಏನಾಗಿದೆ ಅಂದರೆ ಅವರು ಕಂಪ್ಯೂಟರ್‌ಗೆ ಫೀಡ್ ಮಾಡಿದ್ದಾರೆ. ಇನ್ನು ಆಕ್ಷನ್ ತೆಗೆದುಕೊಳ್ಳುವುದಕ್ಕೆ ಶುರು ಮಾಡಬೇಕು. ಇದುವರೆಗೂ ಫೀಡ್ ಆಗಿದೆ ಅದು.

ಶ್ರೀ ಎಸ್.ಎಸ್. ಪಾಟೀಲ್:- ಈಗ ನಾವು ಮಾತನಾಡುತ್ತಿದ್ದೇವೆ. ಈ ಪ್ರಶ್ನೆಗೆ ಉತ್ತರ ಕೊಡುವ ಮಂತ್ರಿಗಳೂ ಇದ್ದಾರೆ. ಮಂತ್ರಿಗಳು ಇಲ್ಲೇ ಕುಳಿತಿದ್ದಾರೆ. ನಾನು ಸಚಿವರು ಸದನದಲ್ಲಿ ಇಲ್ಲವೆಂದು ಅಂದುಕೊಂಡಿದ್ದೆ. ಇನ್ನೊಂದು 10 ಇಲಾಖೆ ಮಾಡಿ ಇನ್ನೊಂದು 10-20 ಮಂತ್ರಿ

ಮಾಡಿಬಿಡಿ. ಯಾರು ಯಾವ ಖಾತೆ ಎಂದು ಗುರುತಾಗುವುದಿಲ್ಲ. ನೋಡಿ ಆ ಮೇಡಂಗೆ ಗಮನವೇ ಇಲ್ಲ. ಶ್ರೀ ಡಿ ಕೆ ಶಿವಕುಮಾರ್ ಅವರು ಎಲ್ಲೋ ಅಲ್ಲಿ ಹೋಗಿ ಕುಳಿತುಬಿಟ್ಟಿದ್ದಾರೆ ಇಲ್ಲಿ ಆ ಮಂತ್ರಿಗಳ ಖಾತೆಯ ಮೇಲೆ ಚರ್ಚೆ ನಡೆಯುತ್ತಿದೆ. ಇಬ್ಬರೂ ಮಂತ್ರಿಗಳು ಹೋಗಿ ಅಲ್ಲಿ ಮಾತನಾಡುತ್ತಾ ಕುಳಿತಿದ್ದಾರೆ.

ಉಪಾಧ್ಯಕ್ಷರು:– ಪಾಟೀಲರೇ, ನೀವು ಮೊದಲು ಮಂತ್ರಿ ಇಲ್ಲ ಎಂದು ಹೇಳುತ್ತಿದ್ದಿರಿ. ಈಗ ಮಂತ್ರಿಗಳು ಇದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್:– ಅವರಿಗೆ ಗಂಭೀರತೆ ಇಲ್ಲ. ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಆ ಇಲಾಖೆ ಬಗ್ಗೆ ಚರ್ಚೆ ನಡೆಯುತ್ತಿದೆ. ಮಾನ್ಯ ಡಿ.ಕೆ.ಶಿವಕುಮಾರ್ ಅವರು ಹಿರಿಯ ಸಚಿವರು. ಅವರು ಅವರ ಜಾಗದಲ್ಲಿ ಇರಬೇಕು, ಅವರ ವಿಷಯ, ಅವರು ಇಲ್ಲಿ ಬಂದು ಉತ್ತರ ಹೇಳಬೇಕಾಗಿತ್ತು. ಉತ್ತರ ಹೇಳುವವರು ಅಲ್ಲಿ ಮಾತನಾಡುತ್ತಾ ಕುಳಿತಿದ್ದಾರೆ.

ಶ್ರೀಮತಿ ನಫೀಜಾ ಫಜಲ್:– ಮಾನ್ಯ ಅಧ್ಯಕ್ಷರೇ, ಆ ಖಾತೆ ನನಗೆ ಬರುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೇ, ಅವರ ನಿರ್ದೇಶಕರೇ ಈ ಆರ್ಡರ್ ಹೊರಡಿಸಿರುವುದು. ನಿಮ್ಮ ಡೈರೆಕ್ಟರ್ ಆ ಆದೇಶ ಹೊರಡಿಸಿದ್ದು. ಅದು ನಿಮ್ಮ ಸಹಿ ಮೇಲೆ ಹೊರಡಿಸುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):– ಮಾನ್ಯ ಸದಸ್ಯರು ಡಿಮ್ಯಾಂಡ್ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತೃಪ್ತಿಕರವಾದ ಉತ್ತರ ಕೊಡಲಿಲ್ಲ ಅಂದರೆ ಆಗ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್:– ನಿಮ್ಮ ತೃಪ್ತಿಕರ ಉತ್ತರವನ್ನು ನಾವು ನೋಡಿದ್ದೇವೆ. ನಾಳೆ ಬಂದು ಅರ್ಧ ಗಂಟೆಯಲ್ಲಿ ಉತ್ತರ ಮುಗಿಯಿತು. ಬರಗಾಲದ ಬಗ್ಗೆ ಮೊನ್ನೆ ಅಷ್ಟು ಕಚ್ಚಾಡಿದೆವು. ರಾಜ್ಯದಲ್ಲಿ ಹತ್ತಿ ಉರಿಯುತ್ತಿದೆ, ಉತ್ತರ ಏನು ನಿಮ್ಮದು? ಇಲ್ಲೇ ನಮ್ಮ ಹಿರಿಯ ಸಚಿವರು ಕುಳಿತಿದ್ದಾರೆ. ಅವರ ಉತ್ತರದಲ್ಲೇನಾದರೂ ಇತ್ತೇ? ಅವರು ಬಹಳ ಮಹತ್ವದ ವಿಷಯ ತೆಗೆದಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ಇದು ಪ್ರಶ್ನೆ ಇರುವುದು ತಾವು ಕೇಳಲಿಲ್ಲ ಅಷ್ಟೇ.

ಶ್ರೀಮತಿ ನಫೀಜಾ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):– ವಿದ್ಯಾರ್ಥಿಗಳಿಗೂ ನನ್ನ ಖಾತೆಗೂ ಏನೂ ಸಂಬಂಧವಿಲ್ಲ. ಮಾನ್ಯ ಅಧ್ಯಕ್ಷರೇ, ಇವರು ತಪ್ಪು ತಿಳಿದುಕೊಳ್ಳುತ್ತಾರೆ. ಆ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಡಾ॥ ಮಾಲಕರೆಡ್ಡಿಯವರು. ಅವರನ್ನು ತಾವು ಕೇಳಿ. ನನ್ನನ್ನು ಏಕೆ ಕೇಳುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್:– ಅವರು ಸತ್ಯವಾದ ಮಾತು ಹೇಳುತ್ತಿದ್ದಾರೆ. ಯಾರಿಗೂ ಏನೂ ಗೊತ್ತು ಇಲ್ಲ ಇದು.

ಶ್ರೀ ಯು.ಆರ್.ಸಭಾಪತಿ:– ಮಾನ್ಯ ಪಾಟೀಲರೇ, ತಾವೇಕೆ ಹಾದಿ ತಪ್ಪಿಸುತ್ತಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್:– ಇಲ್ಲಿ ಸರ್ಕಾರವೇ ಇಲ್ಲ ಅಧ್ಯಕ್ಷರೇ. ಇದು ಸ್ಪಷ್ಟವಾದ ಚಿತ್ರ.

ಶ್ರೀಮತಿ ನಫೀಜ ಫಜಲ್:– ಮಾನ್ಯ ಮಾಲಕ ರೆಡ್ಡಿಯವರು ತಮಗೆ ಉತ್ತರ ಕೊಡುತ್ತಿದ್ದಾರೆ. ಮತ್ತೇನು ತೊಂದರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಪಾಟೀಲರೇ, ಅವರು ಹೇಳುತ್ತಿದ್ದಾರೆ. ಆ ಖಾತೆಯನ್ನು ಮಾನ್ಯ ಮಾಲಕರೆಡ್ಡಿಯವರು ನೋಡುತ್ತಿದ್ದಾರೆ. ಅವರೇ ಇಲ್ಲಿ ಇದ್ದಾರೆ ನಿಮಗೆ ಏನು ಉತ್ತರ ಬೇಕು ಅದನ್ನು ತೆಗೆದುಕೊಳ್ಳಿ ಎಂದು ಹೇಳಿದರು.

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ಸಚಿವೆಯರಾದ ನಫೀಜ ಫಜಲ್ ಅವರು ಹೇಳಿದ್ದು ವಿದ್ಯಾರ್ಥಿಗಳ ಜೊತೆ ನನ್ನದೇನೂ ಸಂಬಂಧ ಇಲ್ಲ. ನನ್ನ ದೇನಿದ್ದರೂ ಸಂಬಂಧ ರೋಗಿಗಳ ಜೊತೆ ಎಂದು.

ಶ್ರೀಮತಿ ನಫೀಜಲ್ ಫಜಲ್:- ಅವರು ಮಾತನಾಡುತ್ತಿರುವುದು ವಿದ್ಯಾರ್ಥಿಗಳ ಬಗ್ಗೆ ತಾವು ಅಯುರ್ವೇದಿಕ್ ಡಿಗ್ರಿ ಬಗ್ಗೆ ಕೇಳಿದಿರಿ. ಅದಕ್ಕೆ ಸಂಬಂಧಪಟ್ಟ ವಿಷಯ ಮಾನ್ಯ ಮಾಲಕ ರೆಡ್ಡಿಯವರಿಗೆ ಬರುತ್ತದೆ. ತಯವಿಟ್ಟು ಅವರನ್ನು ಕೇಳಿ. ನನ್ನನ್ನು ಕೇಳಬೇಡಿ.

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಸಚಿವರು):- ಮಾನ್ಯ ಪಾಟೀಲರೇ, ಅವರ ಜೊತೆ ಜಗಳ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ? ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎನ್.ಯೋಗಿಶ್ ಭಟ್:- ಮಾನ್ಯ ಸಭಾಪತಿಯವರು ಮಾತನಾಡುತ್ತಾ ಪಾಟೀಲರೇ ನೀವು ದಾರಿ ತಪ್ಪಿಸಬೇಡಿ ಎಂದು ಹೇಳಿದರು. ಹಾದಿ ತಪ್ಪಿಸುವಂಥಾದ್ದು. ಆರೋಗ್ಯ ಇಲಾಖೆ ಹಾದಿ ತಪ್ಪಿ ಕೆಲವು ವರ್ಷಗಳೇ ಆಗಿದೆ.

ಶ್ರೀ ಯು.ಆರ್. ಸಭಾಪತಿ:- ಒಳ್ಳೆಯ ರೀತಿಯಲ್ಲಿ ಚರ್ಚೆ ನಡೆಯುತ್ತಿದೆ ಅದಕ್ಕೆ ಮಾನ್ಯ ಮಾಲಕ ರೆಡ್ಡಿಯವರು ಸಮರ್ಪಕವಾಗಿ ಉತ್ತರ ಕೊಡುತ್ತಿದ್ದಾರೆ.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ, ನನಗೆ ಬಹಳ ನೋವಾಗುವಂಥಾದ್ದು ನಾನು ಆಗಲೇ ಹೇಳಿದೆ 3 ಸಾವಿರ ಜನ ಡಾಕ್ಟರ್ಸ್‌ಗಳು ಆಯುರ್ವೇದ ಮತ್ತು ಯುನಾನಿಯಲ್ಲಿ ಈಗಾಗಲೇ ಪದವಿಯನ್ನು ಪಡೆದು ಹೊರಗೆ ಬಂದಿದ್ದಾರೆ.

2.10 ಪಿಎಂ

ಸುಮಾರು 320 ಜನ ಎಂ.ಡಿ. ಎಂ.ಎಸ್. ಡಿಗ್ರಿಯನ್ನು ಪಡೆದಿದ್ದಾರೆ. ಇದು ಡಿಗ್ರಿ ಸರ್ಟಿಫಿಕೇಟ್. ವಿಶ್ವವಿದ್ಯಾನಿಲಯದವರು ಕೊಟ್ಟಿರುವಂಥ ಸರ್ಟಿಫಿಕೇಟ್. ಈ ಡಿಗ್ರಿ ಸರ್ಟಿಫಿಕೇಟ್‌ಗೆ ವ್ಯಾಲ್ಯೂ ಇಲ್ಲವೆಂದು ಹೇಳಿ, ಈ ಸರಕಾರದ ನಿರ್ದೇಶಕರೇ ಹೇಳಿ ಅವರನ್ನು ಪರಿಗಣನೆ ಮಾಡದೇನೆ ಇವೊತ್ತು, ಹಿಂದೆ ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಧಾರವಾಡ ವಿಶ್ವವಿದ್ಯಾನಿಲಯ, ಇವುಗಳಲ್ಲಿದ್ದಂಥ ಹಳೆಯ ಡಾಕ್ಟರ್ಸ್ ಯಾರಿದ್ದಾರೆ ಅವರನ್ನು ಮಾತ್ರ ನೇಮಕ ಮಾಡುವಂಥ ಕೆಲಸವಾಗಿದೆಯಲ್ಲಾ, ಇದು ವ್ಯವಸ್ಥೆ ಏನು? ಅಮೇರಿಕಕ್ಕೆ ಹೋದಾಗ, ಬಂದಾಗ, ರೆಕಾಗ್ನೇಶನ್ ಬಗ್ಗೆ ಆ ಮೇಲೆ ಚಿಂತನೆ ಮಾಡೋಣ. ಇದೇ ನಿಮ್ಮ ಸರಕಾರ ಕೊಟ್ಟಂಥ ಡಿಗ್ರಿ ತಾವೇ ಸಹಿ ಮಾಡಿಕೊಟ್ಟಿರುವಂಥ ಡಿಗ್ರಿ ಸರ್ಟಿಫಿಕೇಟ್‌ಗಳಿಗೆ ಬೆಲೆ ಇಲ್ಲವೆಂದು ನಿಮ್ಮ ಸರಕಾರವೇ ಹೇಳುವುದಾದರೆ, ಪರಿಸ್ಥಿತಿ ಏನು? ಇದು ಚಿಂತನಾರ್ಹವಾದುದು. ಆ ದೃಷ್ಟಿಯಲ್ಲಿ ಅವರ ಭವಿಷ್ಯವನ್ನು ನಿರ್ಮಾಣ ಮಾಡುವವರು ಯಾರು? ಎಲ್ಲಿ ಲ್ಯಾಪ್ಸ್ ಆಗಿವೆ.

ಡಾ: ಎ.ಬಿ. ಮಾಲಕರೆಡ್ಡಿ:- ಇದು ಯುನಿವರ್ಸಿಟಿಗೆ ಸಂಬಂಧಪಟ್ಟ ವಿಚಾರವಾದುದರಿಂದ ಅವರ ಅಚಾತುರ್ಯದಿಂದ ಈ ರೀತಿಯಾಗಿದೆ ವಿನಹ ಇದು ಸರಕಾರ ಡೀಲ್ ಮಾಡತಕ್ಕಂಥ ವಿಚಾರವಲ್ಲ. ಯುನಿವರ್ಸಿಟಿಯವರು ಮುಂಜಾಗ್ರತೆ ವಹಿಸಿ, ಕೇಂದ್ರಸರಕಾರ ಅಥವಾ ಸೆಂಟ್ರಲ್

ಕೌನ್ಸಿಲ್‌ಗೆ ಕಮ್ಯೂನಿಕೇಶನ್ ಮಾಡಿ, ಸರಿಪಡಿಸಿಕೊಳ್ಳ ಬೇಕಾಗಿತ್ತು. ಅದನ್ನು ಅವರು ಮಾಡಿಲ್ಲ. I will discuss with the Vice-Chancellor and give a proper report.

ಶ್ರೀ ಎ.ರಾಮದಾಸ್:- ಮಾನ್ಯ ಅಧ್ಯಕ್ಷರೇ, ರೆಕಾರ್ಡ್‌ಗೆ ವಿಚಾರ ಸರಿಯಾಗಿ ಹೋಗಬೇಕು. ವಿಶ್ವವಿದ್ಯಾನಿಲಯ ನೇರವಾದಂಥ ವ್ಯವಸ್ಥೆಗಳನ್ನು ಕೇವಲ ಅಲ್ಲಿಯ ಆಯುರ್ವೇದ ಕೌನ್ಸಿಲ್‌ರವರ ಜೂತೆಗೆ ಮಾತ್ರ ಮಾತನಾಡುತ್ತಾರೆ. ಆದರೆ ಎಲ್ಲಾ ಕಾಲೇಜಿನ ಇಂಟೇಕ್, ಮ್ಯಾಟ್ರೀಕ್ಸ್ ಫ್ರೀಸೀಟ್ಸ್ ಎಲ್ಲವೂ ಕೂಡ ಆಗುವಂಥಾದ್ದು ಕೇಂದ್ರ ಸರಕಾರದಿಂದ ಅದರ ಅಪ್ರೂವಲ್ ಆಗುತ್ತದೆ. ಕೇಂದ್ರ ಸರಕಾರದ ಜೊತೆಯಲ್ಲಿ ರಾಜ್ಯ ಸರಕಾರದವರು ಮಾಡಿದಂಥ ಕರೆಸ್ಪಾಂಡೆನ್ಸ್ ಕೂಡ ನನ್ನ ಹತ್ತಿರವಿದೆ. ಇದರಲ್ಲಿ ಯಾವ ಆಪಾದನೆ ಮಾಡುವುದಲ್ಲ. ದಯಮಾಡಿ ಇವುಗಳನ್ನು ಸರಿಮಾಡಿ. ಸಂಬಂಧಪಟ್ಟಂಥ ದಾಖಲೆಗಳನ್ನು ನಾನು ಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಮೊದಲು ಆ ವಿದ್ಯಾರ್ಥಿಗಳ ಭವಿಷ್ಯ ನೋಡಿ. ಈಗ ನೀವೇನು ಯುನಾನಿ ಲಿಸ್ಟ್ ಹಾಕಿದ್ದೀಲ್ಲಾ, ಅದನ್ನು ವಿಥ್‌ಡ್ರಾ ಮಾಡಿ. ಈ ಹೊಸ ವಿದ್ಯಾರ್ಥಿಗಳು ಯಾರು ರ್‍ಯಾಂಕ್ ಹೋಲ್ಡರ್ಸ್ ಇದ್ದಾರೆ ಅವರಿಗೆ ನೇಮಕಾತಿಯನ್ನು ಮಾಡುವಂಥ ಕೆಲಸವನ್ನು ಮಾಡಿ. ಮೆರಿಟನ್ ಆಧಾರದ ಮೇಲೆ ಕೊಡುವಾಗ ಎರಡು ವರ್ಷಗಳ ಹಿಂದೆ ಹೊರಗೆ ಹೋಗಿದ್ದರಲ್ಲಾ, ಅವರಿಗೂ ನ್ಯಾಯ ಒದಗಿಸಿಕೊಡಿ ಎಂದು ಹೇಳಬಯಸುತ್ತೇನೆ.

Dr. A.B. Malaka Reddy:- You are the part of the University administration. ತಾವುಗಳೂ ಕೂಡ ಸೆನೆಟ್ ಮೆಂಬರ್ ಆಗಿದ್ದೀರಿ. ಇದು ಯುನಿವರ್ಸಿಟಿಗೆ ಸಂಬಂಧಪಟ್ಟಂಥದ್ದು. ಅಲ್ಲಿ ತಾವು ಕೂಡ ಚರ್ಚೆ ಮಾಡಬಹುದಾಗಿತ್ತು. ಅಥವಾ ನನ್ನ ಜೊತೆಗೆ ಚರ್ಚೆ ಮಾಡಬಹುದಾಗಿತ್ತು. ಇದನ್ನು ಸರಿಪಡಿಸೋಣ...

ಶ್ರೀ ಎ.ರಾಮದಾಸ್:- ಅಲ್ಲಿಯ ಸೆನೆಟ್‌ನಲ್ಲಿ ಈ ವಿಚಾರವನ್ನು ತೆಗೆದ ನಂತರವೇ ಅಲ್ಲಿನ ವಿಚಾರ ನನಗೆ ಗೊತ್ತಾಗಿರುವುದು, ಅಲ್ಲಿಯೇ ನನಗೆ ಡಾಕ್ಯುಮೆಂಟ್ ಕೊಟ್ಟಿರುವುದು. ರಾಜ್ಯ ಸರಕಾರದಲ್ಲಿ ಈ ಕೆಲಸಗಳು ಆಗಿಲ್ಲ... ಇದು ಒಂದು ಭಾಗ. ಜೊತೆಗೆ ನಮ್ಮಲ್ಲಿ ಎಂ.ಡಿ. ಎಂ.ಎಸ್. ಯಾರು ಆಯುರ್ವೇದದಲ್ಲಿ ಮಾಡಿದ್ದಾರೆ, ಅವರ ಭವಿಷ್ಯದ ಬಗ್ಗೆ. ಯೋಚನೆ ಮಾಡಬೇಕಾಗಿದೆ ಅವರಿಗೆ ಈಗಾಗಲೇ ಮೂರು ವರ್ಷಗಳಿಂದ ಡಿಗ್ರಿ ಸರ್ಟಿಫಿಕೇಟ್‌ನ್ನು ಕೊಡುತ್ತಾ ಇದ್ದೀರಿ. ಹೊರ ದೇಶಗಳಲ್ಲಿ ಕೆಲಸ ಮಾಡಲು ಹೋಗಿರುವಂಥವರು ಯಾರಿದ್ದಾರೆ, ಅವರ ಭವಿಷ್ಯ ಕೂಡ ಇದರಲ್ಲಿ ಇದೆ. ಆ ದೃಷ್ಟಿಯಲ್ಲಿ ಸರಕಾರದವರು ಚಿಂತನೆ ಮಾಡಬೇಕು. ಸನ್ಮಾನ್ಯ ಮಲಕಾರೆಡ್ಡಿಯವರು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳಿದರು. ನಾನು ಇರುವಂಥಾದ್ದನ್ನು ಸ್ವಾಗತ ಮಾಡುತ್ತೇನೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಅದರ ಜೊತೆಯಲ್ಲಿಯೇ, ಅದು ಮಾನ್ಯ ಮಲಕಾರೆಡ್ಡಿಯವರಿಗೆ ಗೊತ್ತಿರಬೇಕು, ಬೆಂಗಳೂರು ಹತ್ತಿರವೇ ಇರುವಂಥ ಎಂ.ವಿ.ಜೆ. ಕಾಲೇಜು, ಇದರ ವಿವರಗಳನ್ನು ನಾನು ಕೊಟ್ಟಿದ್ದಲ್ಲ. ಅದು ಸರಕಾರ ಕೊಟ್ಟಿದ್ದು. ಸರಕಾರ ಇಶ್ಯೂ ಮಾಡಿರುವಂಥದ್ದು. List of Government and Private Medical Colleges in Karnataka, along with their in-take for the year 2002-2003 Sl.No.30, M.V.J Medical College, Bangalore, No admission. ಸರಕಾರ ಆಜ್ಞೆ ಹೊರಡಿಸಿದರು. ಅಡ್ಮಿಶನ್ ಆಗಲಿಲ್ಲ ಜೊತೆಗೆ ಅವರು ಕೇಂದ್ರ ಸರಕಾರದವರ ಮುಂದೆ ಒಂದು ಮನವಿ ಮಾಡಿದರು. ಅವರು ಮನವಿ ಮಾಡುವಂಥ ಸಂದರ್ಭದಲ್ಲಿ ಒಂದು

ಪತ್ರವನ್ನು ಕರ್ನಾಟಕ ಸರಕಾರದ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಅದರ ಪ್ರಕಾರದಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಅದೇನೆಂದರೆ, "The Ministry and retreated their earlier stand not to renew the permission for the admission of second batch students for the academic year 2002-2003, as the deficiency still persisting in the college. Accordingly, it has been decided with the approval of the Competent Authority, not to renew the permission for the admission for second batch of the students M.V.J college, Bangalore, unless the college creates necessary infrastructure as per the norms of the Medical Council." ಉಪಾಧ್ಯಕ್ಷರೆ, ಬಹಳ ನೋವಾಗುತ್ತದೆ. ತಾವು ಎನ್‌ಕ್ವಾಯರಿ ಮಾಡಿಸಿ. ನಮ್ಮ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ಬ್ಲಾಕ್‌ನಲ್ಲಿದ್ದಂಥ ಹೆಣಗಳನ್ನು ಅಲ್ಲಿದ್ದಂಥ ಸ್ಕೆಲಿಟನ್‌ನ್ನು ರಾತ್ರಿ ತೆಗೆದುಕೊಂಡು ಹೋಗಿ ಎಂ.ವಿ.ಜೆ. ಕಾಲೇಜಿನಲ್ಲಿ ಬೆಳಿಗ್ಗೆ ಫೋಟೋ ತೆಗೆಸಿಕೊಂಡು ಇಲ್ಲಿಗೆ ಹಿಂದಕ್ಕೆ ತೆಗೆದುಕೊಂಡು ಇಟ್ಟು ಹೋದವರು ಯಾರು ಎಂದು ಹೇಳಲು ನಾನು ಸಿದ್ಧವಾಗಿದ್ದೇನೆ. ಆದಾದರೂ ಎಂ.ವಿ.ಜೆ. ಕಾಲೇಜಿಗೆ ಸಿಗಲಿಲ್ಲ. ಅಡ್ಮಿಶನ್ ಆಗಲಿಲ್ಲ. ಇದು ಆಶ್ಚರ್ಯವಾಗುತ್ತದೆ. ಈಗ ಸಿ.ಇ.ಟಿ.ಗೆ ಸಂಬಂಧಪಟ್ಟ ಹಾಗೆ 75.25 ಪರ್‌ಸೆಂಟ್ ಎಂದು ಮಾಡಿ ಒಂದು ಒಳ್ಳೆಯ ಡಿಸಿಶನ್ ತೆಗೆದುಕೊಂಡಿದ್ದಾರೆ. ಫೀಸ್‌ಸ್ಟ್ರಕ್ಚರ್ ಬಗ್ಗೆ ಮೇಲೆ ಹೇಳುತ್ತೇನೆ. ಯಾವ ವರ್ಷಕ್ಕೆ? ಈ ವರ್ಷಕ್ಕೆ ಆದರೆ ಎಂ.ವಿ.ಜೆ. ಕಾಲೇಜಿನವರು ಒಂದು ನೋಟಿಫಿಕೇಶನ್ ಹೊರಡಿಸಿದ್ದಾರೆ. ಅದು ಇವರ ಗಮನಕ್ಕೆ ಬಂದಿದೆಯೋ, ಏನೋ ಗೊತ್ತಿಲ್ಲ. ಯಾವ ತಿಂಗಳಲ್ಲಿ? ಕಳೆದ ಏಪ್ರಿಲ್ ತಿಂಗಳಲ್ಲಿ ಒಂದು ನೋಟಿಫಿಕೇಶನ್ ಹೊರಡಿಸಿದ್ದಾರೆ. 2002 ಮತ್ತು 2003ನೇ ಸಾಲಿಗೆ ಸಂಬಂಧಪಟ್ಟ ಹಾಗೆ 100 ಜನ ವಿದ್ಯಾರ್ಥಿಗಳನ್ನು ಅಡ್ಮಿಶನ್ ಮಾಡುವುದಕ್ಕೋಸ್ಕರವಾಗಿ ನಾವು ಇವೊತ್ತು ನೋಟಿಫಿಕೇಶನ್ ಮಾಡುತ್ತಾ ಇದ್ದೇವೆ ಎಂದು ಹೇಳಿ ನೇರವಾಗಿ ಬಂದು ಅಡ್ಮಿಶನ್ ಆಗಬಹುದು ಎಂದು ಬರೆದಿದ್ದಾರೆ. ಅಡ್ಮಿಶನ್ ಮಾಡಿ ಆಯಿತು. 50 ಜನ ವಿದ್ಯಾರ್ಥಿಗಳನ್ನು ಅಡ್ಮಿಶನ್ ಮಾಡಿ ಆಯಿತು. ಇವರಿಗೆ ಯಾರು ಪರ್ಮಿಟ್ ಮಾಡಿದರು? ನ್ಯಾಯಾಲಯದಲ್ಲಿ ವೆಕೇಶನ್ ಜಡ್ಜ್ ಮುಂದೆ ಹೋದಂಥ ಸಂದರ್ಭದಲ್ಲಿ ರಾಜ್ಯ ಸರಕಾರದ ನಿಮ್ಮ ಅಡ್ವೋಕೇಟ್ ಜನರಲ್ ಮತ್ತು ನಿಮ್ಮ ಅಡ್ವೋಕೇಟ್ ಜನರಲ್ ಏನು ಮಾಡುತ್ತಾ ಇದ್ದರು? ಒಂದೂ ಕೂಡ ಫೈಲ್ ಮಾಡಿಲ್ಲ. ಸುಮ್ಮನೆ ಎತ್ತಿಕೊಂಡು ಬಂದಿದ್ದಾರೆ. ಹಾಗಾದರೆ ಹ್ಯಾಂಡ್ ಇನ್ ಗ್ಲೋವ್ ಎನ್ನುವುದೇ? ಯಾಕೆ? ಒಂದು ಸೀಟಿಗೆ 20 ಲಕ್ಷ ರೂಪಾಯಿಗಳು ಅಂದರೆ 50 ಸೀಟಿಗೆ ಎಷ್ಟಾಯಿತು? ಈ ಟ್ರಾನ್‌ಸೆಕ್ಷನ್‌ಗಳ ಮೂಲಕ ಹಗಲು ದರೋಡೆಯಾಗುತ್ತಿರುವುದನ್ನು ತಪ್ಪಿಸಿ. ಕಾಲೇಜ್ ಬಿಲ್ಡಿಂಗ್ ಇಲ್ಲ. ಅಲ್ಲಿ ಡಾಕ್ಟರ್‌ಗಳಿಲ್ಲ, ಪಿ.ಜಿ.ಓದಿರುವಂಥ ಡಾಕ್ಟರ್‌ಗಳಿಲ್ಲ, ಹಾಸ್ಪಿಟಲ್ ಇಲ್ಲ, ಇಂಥ ಎಂ.ವಿ.ಜೆ. ಕಾಲೇಜಿಗೆ ಮತ್ತೆ ನೂರು ಅಡ್ಮಿಶನ್ ಕಳೆದ ವರ್ಷಕ್ಕೆ. ಆದರೆ ಒಂದು ತಿಳಿದುಕೊಳ್ಳಿ. ಇದರ ಆಧಾರದ ಮೇಲೆ, ಸುಪ್ರೀಮ್‌ಕೋರ್ಟಿನ ಜಡ್ಜ್‌ಮೆಂಟ್ ಏನಿದೆ, ಅದರ ವಿರುದ್ಧವಾಗಿ ಮಾಡಿದ್ದೀರಿ. ನಿಮ್ಮ ಸರಕಾರವನ್ನು sue ಮಾಡಲಿಕ್ಕೋಸ್ಕರವಾಗಿ ಇಷ್ಟೇ ಸಾಕು. ನಾನು ಸುಪ್ರೀಮ್‌ಕೋರ್ಟ್ ಜಡ್ಜ್‌ಮೆಂಟ್‌ನ್ನು ಓದುತ್ತೇನೆ. "The Hon'ble Supreme Court of India in SLP, No.14919/2000 filed by MCI v/s Madhu Singh

and others. ಇದರಲ್ಲಿ ಎಲ್ಲಾ ರಾಜ್ಯ ಸರಕಾರಗಳಿಗೆ ಒಂದು ಆದೇಶವನ್ನು ಕೊಟ್ಟಿದೆ. ಅದರ ಪ್ರಕಾರದಲ್ಲಿ "There is no scope for admitting students mid-term, as that would be against the very spirit of the status governing of the medical education. (2) Even, if seats are unfilled, that cannot be a ground for making mid-session admissions. There cannot be telescoping of unfilled seats of one year with permitted seats for the subsequent year. ಯಾವಾಗ ಅಡ್ಮಿಶನ್ ಮಾಡಿದರು? ಏಪ್ರಿಲ್ ತಿಂಗಳಲ್ಲಿ ಅಡ್ಮಿಶನ್ ಮಾಡಿದರು. ಇವರು ಎಕ್ಸಾಮ್ ಯಾವಾಗ ತೆಗೆದುಕೊಳ್ಳುತ್ತಾರೆ ಗೊತ್ತೇ? ಯಾರು ಮೊನ್ನೆ ಅಡ್ಮಿಶನ್ ಆಗಿದ್ದಾರಲ್ಲಾ ಅವರಿಗೆ ಮುಂದಿನ ತಿಂಗಳು ಎಕ್ಸಾಮಿನೇಶನ್. ಯಾರು ಅವರಿಗೆ ಪಾಠ ಮಾಡಿದರು? ಹೇಗೆ ಅವರು ಎಕ್ಸಾಮಿನೇಶನ್‌ಗೆ ಹೋಗುತ್ತಾರೆ..?

ಡಾ. ಎ.ಬಿ. ಮಾಲಕರೆಡ್ಡಿ:- ಮಾನ್ಯ ಸದಸ್ಯರು ಅರ್ಧಂಭರ್ದ ಹೇಳುತ್ತಾ ಇದ್ದಾರೆ. ನಾನು ನೋಡಿದ್ದೇನೆ. I have seen that file. ಅದು ಹೈಕೋರ್ಟ್ ಆರ್ಡರ್ ಮಾಡಿರಬೇಕು. ಅದೇ ಹೈಕೋರ್ಟ್ ಆರ್ಡರ್‌ನಲ್ಲಿಯೇ ಕ್ಲೀಯರ್ ಆಗಿ ಮೆನ್‌ಶನ್ ಮಾಡಿದ್ದಾರೆ. They should complete two terms. Unless and until they complete two terms, they cannot take the examination ಎಂದು ಹೈಕೋರ್ಟ್ ಆರ್ಡರ್‌ನಲ್ಲಿಯೇ ಇದೆ. ಹೀಗಿರುವಾಗ ಮುಂದಿನ ಎಕ್ಸಾಮಿನೇಶನ್ ತೆಗೆದುಕೊಳ್ಳುವುದು ಹೇಗೆ?

ಶ್ರೀ ಎ.ರಾಮದಾಸ್:- ಇಲ್ಲಿ ಸಮಸ್ಯೆ ಏನು ಬಂದಿವೆ ಅಂದರೆ, ಯಾವುದೇ ಬ್ಯಾಚ್‌ನಲ್ಲಿ ಎರಡೂ ವರ್ಷದ ವಿದ್ಯಾರ್ಥಿಗಳು ಒಟ್ಟಿಗೆ ಎಕ್ಸಾಮಿನೇಶನ್‌ಗೆ ಹೋಗಲು ಅಲ್ಲಿ infrastructure ಗಳಿಲ್ಲದಿದ್ದರೆ ಅವರಿಗೆ ಅಲೋ ಮಾಡುವುದಿಲ್ಲ. ನನ್ನ ಪ್ರಶ್ನೆ ಇಷ್ಟೆ. ತಾವು ನ್ಯಾಯಾಲಯದ ಮುಂದೆ ತಮ್ಮ ಅಡ್ವೋಕೇಟ್ ಜನರಲ್‌ರವರು ಮತ್ತು ತಮ್ಮ ಇಲಾಖೆಯವರು ಅಪೀಯರ್ ಆದರಲ್ಲಾ, ಆಗ ಕೇಂದ್ರ ಸರಕಾರದಿಂದ ತಮಗೆ ಬಂದಿರುವ ಪತ್ರ. ಸುಪ್ರೀಮ್‌ಕೋರ್ಟ್‌ನ ಆರ್ಡರ್ ಇವುಗಳೆಲ್ಲವನ್ನೂ ಯಾಕೆ ಪ್ಲೇಸ್ ಮಾಡಿಲ್ಲ? ಎಂ.ವಿ.ಜೆ.ಕಾಲೇಜಿಗೆ ಅಲ್ಲಿ ಏನೂ infrastructure ಇಲ್ಲದಿದ್ದರೂ ಕೂಡ ಹ್ಯಾಂಡ್ ಇನ್ ಗ್ಲೋವ್ ಮಾಡಿಕೊಂಡು ಇವೊತ್ತು ಅಲ್ಲಿಗೆ 50 ಸೀಟುಗಳನ್ನು ಕೊಟ್ಟಿದ್ದಾರೆ. ಇನ್ನು 50 ಮೆರಿಟ್ ಸೀಟುಗಳು ಏನು? ಯಾವ ವರ್ಷದಲ್ಲಿ ಮಾಡಲಿಕ್ಕೆ ಆಗುತ್ತದೆ? ಇದರ ವ್ಯವಹಾರದ ಹಿಂದೆ ಇರುವಂಥವರು ಯಾರು? ಏನು ಎನ್ನುವುದರ ಬಗ್ಗೆ ಒಂದು ತನಿಖೆಯಾಗಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಧೈರ್ಯವಿದ್ದರೆ ದಯವಿಟ್ಟು ಮಾಡಿ. ಸರಕಾರದವರು ಯಾವ ತಪ್ಪೂ ಇಲ್ಲವೆಂದರೆ ದಯವಿಟ್ಟು ಒಂದು ಎನ್‌ಕ್ವಾಯರಿ ಕಮಿಶನ್ ಮಾಡಿ. ಇದು ಒಂದು ಭಾಗವಾದರೆ, ಇನ್ನೊಂದು ಬಹಳ ದುರ್ದೈವದ ಸಂಗತಿ, ನಾವು ಮತ್ತು ನೀವು ಯೋಚನೆ ಮಾಡಬೇಕಾಗುತ್ತದೆ. ಇಲ್ಲಿ ಟ್ರಾನ್ಸ್‌ಫರೆನ್ಸಿ ಆಕ್ಟ್ ಬಗ್ಗೆ ಹೇಳುತ್ತಾ ಇದ್ದರು. ನಾನು ವಿಶ್ವವಿದ್ಯಾನಿಲಯಕ್ಕೆ ಒಂದು ಪತ್ರವನ್ನು ಬರೆದಿದ್ದೆ. ಅಲ್ಲಿನ ರಿಜಿಸ್ಟ್ರಾರ್‌ರವರಿಗೆ ಕಾಗದ ಬರೆದು ತಮ್ಮಲ್ಲಿ marks tampering enquiry conducted by Veerabhadrappa and eligibility disparity enquiry conducted by Kopad ಇವೆರಡೂ ಕಮಿಷನ್‌ಗಳ ವರದಿಯನ್ನು ಕೊಡಿ ಎಂದು ಕೇಳಿದೆ. ನಿಮ್ಮ Transparency Act ಎಲ್ಲಿ ಹೋಯಿತು? Right to information ಎಲ್ಲಿ ಹೋಯಿತು? ಇವತ್ತಿನವರೆಗೂ ಕೂಡ ಕೊಡಲು ಆಗಿಲ್ಲ.

ಅಲ್ಲಿಯ Vice-Chancellor ಇವತ್ತಿನವರೆಗೂ ಉತ್ತರ ಕೊಡುವುದಕ್ಕೆ ಆಗಿಲ್ಲ. ಯಾಕೆ ಗೊತ್ತಾಯ್ತಾ ಉಪಾಧ್ಯಕ್ಷರೇ? ಅವರು ವರದಿ ಕೊಡದೇ ಹೋದರೂ ಪರವಾಗಿಲ್ಲ ಇವತ್ತು ನನ್ನ ಹತ್ತಿರ ವರದಿ ಇದೆ. ಒಂದಲ್ಲ ಬಹಳ ಪ್ರಮುಖ ಉದಾಹರಣೆಗಳೇ ನನ್ನ ಹತ್ತಿರ ಸುಮಾರು 54 ಇವೆ, ಅದರಲ್ಲಿ ರಾಜ್ಯದಲ್ಲಿ ಬಹಳ ಪ್ರಮುಖ ವ್ಯಕ್ತಿಗಳ 6 ಹೆಸರು ಸಂಬಂಧಪಟ್ಟ ರಿಜಿಸ್ಟರ್ ನಂ. ನನ್ನ ಹತ್ತಿರ ಇದೆ. ಇವರಲ್ಲಿ ಪಾಸಾಗಿಲ್ಲದಿರುವವರನ್ನು ಪಾಸ್ ಅಂತ ಯಾರು ಮಾಡಿದರು? ನಾನು ಪತ್ರ ಬರೆದೆ ವಿಶ್ವವಿದ್ಯಾಲಯಕ್ಕೆ ಈ ತರಹದ್ದು ನಡೆದಿದೆ, ತನಿಖೆ ಮಾಡಿ ಎಂದು ತನಿಖೆ ಆಯಿತು? ವೀರಭದ್ರಪ್ಪ ಮತ್ತು ಡಾ: ಆರ್ ಎಂ ಹೆಬ್ಬಳ್ಳಿ ನೇತೃತ್ವದ ಸಮಿತಿ, ಇವರ ಸಮಿತಿಯ ವರದಿ ಬಂದಿದೆ, ಅದರ ಪ್ರಕಾರ 46 ಅಂಕ ಇದ್ದುದ್ದನ್ನು 48 ಎಂದು ಮಾಡಿದ್ದಾರೆ, 36 ಇದ್ದುದ್ದನ್ನು 56 ಮಾಡಿದ್ದಾರೆ, ಪಾಸಾಗಿದ್ದವರನ್ನು ಫೇಲ್ ಎಂದು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ವರದಿ ನನ್ನ ಮುಂದಿದೆ, ಇದನ್ನು ಓದುತ್ತಾ ಹೋದರೆ ಸಮಯ ಇಲ್ಲ, ಈ document ನನ್ನ ಮುಂದಿದೆ, ಅಂದರೆ ವಿಶ್ವವಿದ್ಯಾನಿಲಯದಲ್ಲಿ ಇವತ್ತು ಯಾರು ಎಂತಹುದೇ ಟ್ಯಾಂಪರಿಂಗ್ ಮಾಡುವ ವ್ಯವಸ್ಥೆ ಆದರೂ ಇದನ್ನು ನೋಡುವಂತಹ ವ್ಯವಸ್ಥೆಗಳು ಯಾರು? ಇದು ಒಂದು ಭಾಗ. ಇನ್ನೊಂದು ನಾನು ಆಗಲೇ ಹೇಳಿದೆ, medical ಅಂದ ತಕ್ಷಣವೇ ಹಿಂದೆ, ನಾನು ಮೊದಲು ಇಲ್ಲಿಗೆ ಶಾಸಕನಾಗಿ ಬಂದ ತಕ್ಷಣವೇ ಎಲ್ಲರೂ ಹೇಳುತ್ತಿದ್ದುದು liquor lobby liquor lobby ಎಂದು ಈಗ ನನಗೆ ಕಾಣುತ್ತಿರುವುದು medical lobby ಗಿಂತ ಬೇರೆ lobby ನೇ ಇಲ್ಲ ಯಾಕೆ? ಒಂದು eligibility ಮಾಡಿದ್ದೀರಿ ನೀವು, 50% minimum ಇರಬೇಕು. ಅಂಥವರನ್ನು management seat ನಲ್ಲಿ ತೆಗೆದುಕೊಳ್ಳಬಹುದೆಂದು. ಆದರೆ ಯಾರೋ ಒಬ್ಬ ವಿದ್ಯಾರ್ಥಿ 49% ಇದೆ, ಅಂದರೆ ಅವನಿಗೆ 6 number ಕೊಡಬೇಕು, 7 number ಕೊಡಬೇಕು, ಅವನು 50% ಗೆ ಬರಬೇಕಾದರೆ, ಅಂತಹ ವಿದ್ಯಾರ್ಥಿಗಳಿಗೆ ಯಾರು ಖಾಸಗಿ ಮ್ಯಾನೇಜ್‌ಮೆಂಟ್ admission ಕೊಡಬೇಕೆಂದು ಆಸೆ ಪಟ್ಟಿದ್ದಾರೋ ಅವರಿಗೆ ಈ 50% eligibility ಯಾರಿಗಿಲ್ಲ ಅವರೆಲ್ಲರಿಗೂ eligibility ತಂದುಕೊಟ್ಟಿದ್ದೀರಿ. ನನ್ನ ಹತ್ತಿರ ಕಾಲೇಜುಗಳು ಎಂದು ಇದೆ, ಯಾವ್ಯಾವ Medical Colleges ನಲ್ಲಿ eligibility ಇಲ್ಲದಿದ್ದ ವಿದ್ಯಾರ್ಥಿಗಳಿಗೆ Eligibility Certificates issue ಮಾಡಿದ್ದೀರಿ....

Dr. A.B. Maalaka Reddy:- With all the humility, I am asking you, he is part and parcel of University Authority. Senate, the Academic Council, they are University Authorities. You could have pulled up then and there itself. You have got a forum there. There is a Senate there, there is an Academic Council there, he is part of University authority. He could have taken up the cause, I do not think this House can give immediate relief.

ಶ್ರೀ ಎ ರಾಮದಾಸ್:- ನಾನು ಸೆನೆಟಿನ findings ಅನ್ನು ನಿಮಗೆ ಕೊಡುತ್ತೇನೆ. ತಾ:21-10-2002, ಇದು ನಾನೇ ರೇಸ್ Inquiry Commission ನಾನೇ ಮಾಡಿಸಿದೆ, minute ನಲ್ಲಿ ನನ್ನ ವಿಚಾರವೇ ಇದೆ, ಅಂತಹ Inquiry Commission report ಕೊಡುವುದಿಲ್ಲ ಎಂದರೆ ನಾನು ಉಪಾಧ್ಯಕ್ಷರನ್ನು ಕೇಳದೆ ಇನ್ಯಾರನ್ನು ಕೇಳಲಿ? ಯಾವ enquiry commission

constitute ಆಯಿತು ಕೊಡಿ ಎಂದು ಪತ್ರ ಬರೆದಿದ್ದೇನೆ, ಪತ್ರದ ದಿನಾಂಕ ಓದಿದ್ದೇನೆ, ಇವತ್ತಿನವರೆಗೂ ವರದಿ ಕೊಡುವುದಿಲ್ಲ, ಈ forum ನಲ್ಲಿ ಅಲ್ಲದೆ ಇನ್ನಾವ forum ನಲ್ಲಿ raise ಮಾಡಲಿ ಉಪಾಧ್ಯಕ್ಷರೇ? Yes, ಅವರು ವರದಿ ಕೊಡದಿದ್ದರೂ ನನ್ನಲ್ಲಿ ಯಾರ‍್ಯಾರಿಗೆ 95.5%, ಇದ್ದವರಿಗೆ, 48%, 49% ಇದ್ದವರಿಗೆ – ಹೀಗೆ 20 ಬೇರೆ ಬೇರೆ ವಿದ್ಯಾರ್ಥಿಗಳಿಗೆ ಬೇರೆ ಖಾಸಗಿ ಕಾಲೇಜುಗಳಲ್ಲಿ eligibility certificates issue ಆಗಿದೆ. ಎಷ್ಟು ವರ್ಷಕ್ಕೆ? ಒಂದು ವರ್ಷಕ್ಕೆ ಆದರೆ ಉಪಾಧ್ಯಕ್ಷರೇ, ಆಶ್ಚರ್ಯವಾಯಿತು ನಾನು ವಿಶ್ವವಿದ್ಯಾನಿಲಯ ಪ್ರಾರಂಭವಾದ ದಿವಸದಿಂದ ಕೇಳಿದರೆ documents ಇಲ್ಲ ಎಲ್ಲಾ ಸುಟ್ಟುಹಾಕಿಬಿಟ್ಟಿದ್ದೇವೆ, ಎಂದು ಹೇಳುತ್ತಾರೆ ಇದು ಉತ್ತರ. ಕಳೆದ ವರ್ಷದ್ದು ಮಾತ್ರ ನಮ್ಮಲ್ಲಿದೆ. ಅದರ ಹಿಂದಿನ ವರ್ಷಗಳದ್ದು ಇಲ್ಲ, ಎಂದು ಹೇಳುತ್ತಾರೆ ಇದು ವಿಶ್ವವಿದ್ಯಾಲಯ ನಡೆಸುವಂತಹ ವ್ಯವಸ್ಥೆಗಳು, ಸರ್ಕಾರಿ ವ್ಯವಸ್ಥೆಗಳು ಹೇಗೆ ಅದರೊಳಗೆ ತೂರುತ್ತಿದೆ ಎಂಬುದು ನನ್ನಲ್ಲಿರುವ ನೋವು. ಯಾರಿಗೆ eligibility ಇಲ್ಲ ಅಂಥವರಿಗೆ ಡಾಕ್ಟರ್‌ಗಳನ್ನಾಗಿ ಮಾಡಿ ಕಳಿಸುವುದು, ಇದಕ್ಕೆ ಕೇಳಿದರೆ ವಿಶ್ವವಿದ್ಯಾಲಯ ಒಂದು ಉತ್ತರ ಕೊಟ್ಟಿದೆ, ಯಾರ‍್ಯಾರು ಈ ರೀತಿ admission ಪಡೆದಿದ್ದಾರೆ ಅವರು ಯಾರ ಡಿಗ್ರಿಯನ್ನೂ ಕೂಡ approval ಮಾಡುವುದಿಲ್ಲ ಎಂದು. ಅಂದರೆ ನಾಳೆ ಅವರು ನ್ಯಾಯಾಲಯಕ್ಕೆ ಹೋಗಿ approval ತರಲಿ ಎಂಬುದು ಒಂದು ಭಾಗ, ಹಿಂಬಾಗಿಲಿನಿಂದ enter ಆಗುವಂತಹದು. ಈ ರೀತಿ ಮಾಡಿದವರು ಯಾರು? ಅದರಲ್ಲಿ ಸಂಬಂಧಪಟ್ಟವರು ಯಾರು? ಯಾರ‍್ಯಾರ involvement ಇದೆ? ಇದರ ಬಗ್ಗೆ ಆದರೂ ಸರ್ಕಾರ ಇವತ್ತು ಗಮನಹರಿಸಬೇಕಲ್ಲಾ? Ineligible ವ್ಯಕ್ತಿಗಳಿಗೆ eligibility certificate issue ಮಾಡಿ ಡಾಕ್ಟರ್‌ಗಳನ್ನಾಗಿ ಮಾಡುತ್ತೇವೆ ಎಂದಾದರೆ ಇದರಲ್ಲಿ ಅರ್ಥ ನನಗೇನೂ ಕಾಣುತ್ತಾ ಇಲ್ಲ. ನಾನು Healthಗೆ ಹೋಗುವುದಿಲ್ಲ, medical educationನಲ್ಲೇ ಮುಗಿಸುವೆನು. ಇನ್ನೊಂದು ಇಲ್ಲಿ ಆಶ್ಚರ್ಯ ಮತ್ತು ನೋವು ತರುವಂತಹದು, ಖರ್ಗೆಯವರಿದ್ದಾರೆ, ಅವರಿಗೂ ಸಂಬಂಧಿಸಿದ್ದು. ನಾನು ಕಳೆದ ವರ್ಷ ಮಾಧ್ಯಮದವರನ್ನೆಲ್ಲಾ ಕರೆದುಕೊಂಡು Swapni Medical Science College ಎಂದು ಇದೆ, ಈ ಕಾಲೇಜಿನಲ್ಲಿ admissionಗಾಗಿ notification ಬಂದಿತ್ತು. ನಾನು ವಿಶ್ವವಿದ್ಯಾನಿಲಯದವರನ್ನೂ ಕರೆದುಕೊಂಡು ಅಲ್ಲಿಗೆ ಹಠಾತ್ ಭೇಟಿ ಕೊಟ್ಟೆ. ಆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದವರಿಗೆ ನಾವು ಹೇಳಿದೆವು, case register ಮಾಡಿ, ಅದು unauthorised ಆಗಿರುವಂತಹದು, ಯಾವುದೇ permission ರಾಜ್ಯಸರ್ಕಾರದಿಂದ ಪಡೆದಿಲ್ಲ ಎಂದು. Paper notification ಬಂದಿದೆ, 76 ವಿದ್ಯಾರ್ಥಿಗಳು MBBSಗೆ admission ಆಗಿದ್ದಾರೆ. ಅವರು ಕೊಟ್ಟು ಹಣದ ದಾಖಲಾತಿಗಳನ್ನೆಲ್ಲಾ ಕೊಟ್ಟರು. ಆನಂತರ ಹೇಳಿದರೆ ಅವರು ಗಲಾಟೆ ಮಾಡುತ್ತಾರೆ, ಇದು ಪಕ್ಷದ ಪ್ರಶ್ನೆಯಲ್ಲ, ಕಾಂಗ್ರೆಸ್ ಪಕ್ಷದ ಒಬ್ಬ ಕಾರ್ಯಕರ್ತೆ ಎಂದು ಗುತ್ತಾಯಿತು. ಅವರು ನನ್ನನ್ನು ಫೋನ್ ಮೂಲಕ ಆಗಿರುವುದು ಹೌದು ತಪ್ಪಾಗಿದೆ ದಯವಿಟ್ಟು ಅದರ ಬಗ್ಗೆ criminal case ಮಾಡಬೇಡಿ ಎಂದು. ನಾನು ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದೆ, ಮಾಧ್ಯಮಗಳಲ್ಲಿ ಬಂತು, ಏನಾಯಿತೋ ಇವತ್ತಿನವರೆಗೂ ಗೊತ್ತಿಲ್ಲ. ಒಂದು ಭಾಗವಾಯಿತಲ್ಲಾ, ಈಗ ನಾನು ತಮಗೊಂದು ಈ ವರ್ಷದ ರಸೀತಿ ಕಳಿಸಿಕೊಡುತ್ತಿದ್ದೇನೆ ಉಪಾಧ್ಯಕ್ಷರೇ, 16–6–2003, ರಾಜೀವಗಾಂಧಿ Health ವಿಶ್ವವಿದ್ಯಾನಿಲಯ ಮತ್ತು education ಎಂದು ಹೇಳಿ ವಿಶ್ವವಿದ್ಯಾನಿಲಯದ emblem ಹಾಕಿ MD MSಗೆ admission ಆಗಿದೆ. ರಸೀತಿ issue ಆಗಿದೆ, DD No. ಇದೆ, Received with thanks, Sl.No.2144, 16-6-2003, from Dr. Ankur Mittal, a sum of

Rs.5 lakhs. ಎಂದು, ಇದು part payment. MDS, Oral Surgery, DD No.014395, 5 ಲಕ್ಷ ರೂಪಾಯಿಗಳು, ಇವತ್ತು ಹೀಗೆ ಸುಮಾರು 26 ಜನ MD MSಗೆ ವಿಶ್ವವಿದ್ಯಾನಿಲಯದಿಂದ ರಸೀತಿ ಮುಖಾಂತರ ಹಣವನ್ನು ಕೊಟ್ಟಿದ್ದಾರೆ. ಯಾರು? ಯಾವ ಸ್ವಪ್ನಿ Medical college ಎಂದು ಮಾಡಿ close ಮಾಡಿದರೋ ಅವರೇ ಇದನ್ನು issue ಮಾಡುವುದು ಇವತ್ತು Rajiv Gandhi University ಹೆಸರಿನಲ್ಲಿ ಹಣ ಸಂಗ್ರಹಿಸುತ್ತಿದ್ದಾರೆ ಎಂದರೆ ಇದರ ಹಿಂದಿರುವ ವ್ಯವಸ್ಥೆಗಳೇನು? ಪೋಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ಕೇಳಿದರೆ ಅವರು ಹೇಳುತ್ತಾರೆ ಯಾರ್‍ಯಾರಿಂದಲೋ ದೂರವಾಣಿ ಬರುತ್ತಿದೆ ಅವರನ್ನು ಅರೆಸ್ಟ್ ಮಾಡಲು ಆಗುವುದಿಲ್ಲ. ಇದು ಬೆಂಗಳೂರು ನಗರದ ರಾಜಾಜಿನಗರದಲ್ಲೇ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು):- ಆ ಹೆಸರು ಕೊಟ್ಟರೆ ಯಾವ police station ನವರೋ ಕರೆಸಿ ಹೇಳೋಣ, ನೀವು ಸುಮ್ಮನೆ ಯಾವ್ಯಾವುದೇ Police Station ಗೆ ಯಾರ್‍ಯಾರೋ ಬರುತ್ತಾರೆ ಅಂದರೆ, ಇಂತಹ Police Station, ಇಂತಹ case ಎಂದರೆ definitely ಸಂಬಂಧಪಟ್ಟ DCPಗೆ ಅಥವಾ Police Commissionerಗೆ ಹೇಳೋಣ, ಯಾವ Medical College ಅಂಥದಿದೆ, Medical Council of India ಹೇಗೆ permission ಕೊಟ್ಟಿದೆ ಅಥವಾ ರಾಜೀವಗಾಂಧಿ ವಿಶ್ವವಿದ್ಯಾಲಯದವರು ಕೊಟ್ಟಿದ್ದಾರೋ enquiry ಮಾಡಿಸಲು ಅವಕಾಶವಾಗುತ್ತದೆ.

ಶ್ರೀ ಎ.ರಾಮದಾಸ್:- ಖಂಡಿತ, ಅವಕಾಶವಾಗಲಿ ಎಂದೇ ನಾನಿಲ್ಲಿ ಎತ್ತುತ್ತಿರುವುದು. ಕೇವಲ ಒಬ್ಬರದ್ದು ಮಾತ್ರ ನನ್ನ ಹತ್ತಿರ ಇಲ್ಲ, ಡಾ: ಅಭಾಜ್ಯೈ, 5 ಲಕ್ಷ ರೂಪಾಯಿಗಳು, MDS Ortho, ಇದಕ್ಕೆ 5 ಲಕ್ಷ ರೂಪಾಯಿ ಡಿಡಿಯನ್ನು part ಎಂದು ಪಡೆದುಕೊಂಡಿದ್ದಾರೆ, ಇದು Indian Overseas Bank DD, DD encashment ಆಗಿದೆ, ಇದು ಯಾರದ್ದು? ವಿಶ್ವವಿದ್ಯಾನಿಲಯದ emblem ಹಾಕಿ ರಸೀತಿ issue ಮಾಡಿರುವುದು, ಇವತ್ತು ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ಒಂದು ಕಾಲೇಜನ್ನು ರನ್ ಮಾಡುವಂತಹದು ಅವರು ಯಾರೂ ಅಲ್ಲ ಪ್ರಿಯಾ ರೆಡ್ಡಿ.

ಡಾ|| ಎ.ಬಿ. ಮಾಲಕರೆಡ್ಡಿ:- ಈ Institution ವಿರುದ್ಧ ತಾವು ಹೇಳಿದ ಒಂದೇ ಅಲ್ಲ, ಒಟ್ಟು 4 ಇವೆ, ಈಗಾಗಲೇ ನಾನು ಮೇಲ್ಮನೆ ಸದನದಲ್ಲಿ ಉತ್ತರ ಕೊಟ್ಟಿದ್ದೇನೆ, 4 ಸಂಸ್ಥೆಗಳ ವಿರುದ್ಧವೂ ಕೇಸ್ register ಆಗಿದೆ, ಪ್ರಿಯಾರೆಡ್ಡಿ ವಿರುದ್ಧ prosecution ಗೂ ಕೂಡ initiate ಆಗಿದೆ, ಮತ್ತು ಒಂದು ಸಂಸ್ಥೆಯ ಬಗ್ಗೆ ಸಹ ಎಂದು ಆಗಿದೆ, ಪೋಲೀಸರು ಹೇಳಿದ್ದಾರೆ ನಾವು investigate ಮಾಡಿದಾಗ ಅಂತಹ ಸಂಸ್ಥೆ ಯಾವುದೂ ಇಲ್ಲ, ಆದರೆ ಮೂರರಲ್ಲಿ ಅವರ building, documents ಎಲ್ಲಾ ಸಿಕ್ಕಿದ್ದಾವೆ. ಪೋಲೀಸರು ರಿಜಿಸ್ಟರ್ ಮಾಡಿದ್ದಾರೆ. ಕೇಸ್ ನಡೆದಿದೆ. ಒಂದು ಸಂಸ್ಥೆ ವಿರುದ್ಧ ಪ್ರಾಸಿಕ್ಯೂಷನ್ ಪ್ರೊಸೀಡಿಂಗ್ಸ್ ಕೂಡ ನಡೆದಿದೆ.

ಶ್ರೀ ಎ. ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ಕಳೆದ ವರ್ಷ ಕೂಡ ಇಂಥದ್ದೇ ಒಂದು ಕ್ರಿಮಿನಲ್ ಕೇಸ್ ಆಯಿತು. ಇದನ್ನು ನಾವು ರೇಸ್ ಮಾಡಿದೆವು. ಅಂಥವರ ಬಗ್ಗೆ ಮಾಧ್ಯಮಗಳಲ್ಲೆಲ್ಲಾ ಬಂತು. ಆ ನಂತರದಲ್ಲಿ ಕೇಸ್ ರಿಜಿಸ್ಟರ್ ಆದಂಥವರೇ ಇವತ್ತು ಐದೈದು ಲಕ್ಷ ರೂಪಾಯಿಗಳಿಗೆ. ರಸೀತಿಯನ್ನು ಇಶ್ಯೂ ಮಾಡಿದ್ದಾರೆ. ನಮ್ಮ ಹತ್ತಿರ ಎರಡು ರಸೀತಿಗಳಿವೆ. ಹತ್ತು ಲಕ್ಷ ರೂಪಾಯಿಗಳ ಡಿಡಿ.ಯನ್ನು ತೆಗೆದುಕೊಂಡಿದ್ದಾರೆ ಎಂ.ಡಿ.ಎಂ.ಎಸ್. ಸೀಟುಗಳನ್ನು ಕೊಟ್ಟು. ಇದರ ವ್ಯವಸ್ಥೆಯೇನು?

ನಮಗೆ ಸಮಯ ಇಲ್ಲ. ಸಿಸಿಲಿ ವಿಶ್ವವಿದ್ಯಾನಿಲಯದ ಬಗ್ಗೆ. ಆಮೇಲೆ ಅದನ್ನು ನಾನು ಹೇಳುತ್ತೇನೆ.

ಡಾ|| ಎ.ಬಿ. ಮಾಲಕರೆಡ್ಡಿ:- ದೊಡ್ಡ ಎನ್‌ಕ್ವೈರಿಯೇ ನಡೆದಿದೆ. ಪ್ರಾಸಿಕ್ಯೂಷನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಆಗಿದೆ.

ಶ್ರೀ ಎ. ರಾಮದಾಸ್:- ಇನ್ನೂ ಕಂಟಿನ್ಯೂ ಆಗಿದೆ ಎಂದು ತಾನೇ ಅರ್ಥ? ಇದು ವಿಶ್ವವಿದ್ಯಾನಿಲಯದ ವ್ಯವಸ್ಥೆಗಳು. ತಾವು ಸಮಯ ಜಾಸ್ತಿ ಕೊಡುವುದಿಲ್ಲ. ಹಾಗಾಗಿ ನಾನು ಹೆಲ್ತ್‌ಗೆ ಸಂಬಂಧಪಟ್ಟಹಾಗೆ ಬಿಟ್ಟು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಾವು ಸಮಯಕೊಟ್ಟರೆ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು:- ಮುಗಿಸಿ.

ಶ್ರೀ ಎನ್.ಸಂಪಂಗಿ:- ರಾಮದಾಸ್‌ರವರು ಜೆರಾಕ್ಸ್ ಕಾಪಿಗಳನ್ನು ಕೊಡುತ್ತಿದ್ದಾರೆ. ಒರಿಜಿನಲ್ಸ್ ಆದರೂ ಸ್ವಲ್ಪ ಎಲ್ಲಿದೆ ಎಂದು ಹೇಳಿದರೆ ನಮಗೆ ಒಳ್ಳೆಯದಾಗುತ್ತದೆ.

ಶ್ರೀ ಎ.ರಾಮದಾಸ್:- ಒರಿಜಿನಲ್ಸ್ ಡಾಕ್ಟರ್ ಹತ್ತಿರ ಇರುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಡಿಡಿ ನಂಬರ್ ಇದ್ದರೆ ಬ್ಯಾಂಕಿಗೆ ಹೋಗಿ ತೆಗೆದುಕೊಳ್ಳಬಹುದಲ್ಲಾ.

ಶ್ರೀ ಎನ್.ಸಂಪಂಗಿ:- ಜೆರಾಕ್ಸ್‌ನ್ನೇ ಎಲ್ಲಾ ತೋರಿಸುತ್ತಿರಬಹುದಲ್ಲಾ. ಅದಕ್ಕೆ ಹೇಳಿದ್ದು.

ಶ್ರೀ ಎ.ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ನನ್ನ ಭಾಷಣವನ್ನು ಕಂಟಿನ್ಯೂ ಮಾಡುವುದಾ? ಅಥವಾ ಆಮೇಲೆ ಮುಂದುವರೆಸುವುದಾ? ತಾವು ಏನು ಹೇಳುತ್ತೀರಿ?

ಉಪಾಧ್ಯಕ್ಷರು:- ತಾವು ಮುಗಿಸಿಬಿಡಿ. ಇನ್ನು ಐದು ನಿಮಿಷದಲ್ಲಿ ಮುಗಿಸಿಬಿಡಿ. ಆ ನಂತರ ಊಟಕ್ಕೆ ಅಡ್ಜರ್ನ್ ಮಾಡೋಣ.

ಶ್ರೀ ಎ.ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ನಾನು ವಿಶೇಷವಾಗಿ ಸಿಇಟಿ ಜವಾಬ್ದಾರಿಯನ್ನು ತೆಗೆದುಕೊಂಡಿರತಕ್ಕ ಡಾ|| ಪರಮೇಶ್ವರ್ ಅವರಿಗೆ ನಾನು ಆಗಾಗ್ಗೆ ಹೇಳುತ್ತಿರುತ್ತೇನೆ. ಒಂದು, ಈಗಲೇ ಮೆರಿಟ್ ವಿದ್ಯಾರ್ಥಿಗಳಿಗೆ ಸೀಟ್ ಕೊಟ್ಟು ಯಾವುದೇ ಹಣದ ಖರ್ಚು ಇಲ್ಲದೇ ಇದ್ದಂಥ ಸಮಯದಲ್ಲೇ ಸೇವಾ ಮನೋಭಾವನೆ ಡಾಕ್ಟರ್ಸ್‌ಗಳಿಗೆ ಇಷ್ಟಿದೆ, ಇನ್ನು ಹೀಗಿರುವಂಥ ಸಂದರ್ಭದಲ್ಲಿ ಇನ್ನು ಲಕ್ಷಾಂತರ ರೂಪಾಯಿ ಹಣವನ್ನು ಕೊಟ್ಟು ಡಾಕ್ಟರ್ಸ್‌ಗಳಾಗಿ ಹೊರಗಡೆ ಬಂದಮೇಲೆ ಇನ್ನು ಯಾವ ಮನೋಭಾವನೆ ಇರುತ್ತೆ? ಇದರ ಬಗ್ಗೆ ನಾವೆಲ್ಲರೂ ಕೂಡ ಚಿಂತನೆ ಮಾಡಬೇಕಾದಂಥ ಅವಶ್ಯಕತೆ ಇದೆ ಎನ್ನುವುದನ್ನು ಆಗಾಗ್ಗೆ ಚರ್ಚೆ ಮಾಡುವಂಥ ಸಮಯದಲ್ಲಿ ಬಹಳಷ್ಟು ಒಳ್ಳೆಯ ವಿಚಾರವನ್ನು ಹೇಳುತ್ತಿರುತ್ತಾರೆ. ಇಲ್ಲಿ ಇವತ್ತು ವೈದ್ಯಕೀಯ ಕಾಲೇಜುಗಳು, ಮೈಸೂರು ಮೆಡಿಕಲ್ ಕಾಲೇಜು ಹಿಂದೆ 205 ಸೀಟುಗಳಿತ್ತು. ಇವತ್ತು ಅದರ ಸಂಖ್ಯೆ 100 ಸೀಟುಗಳಿಗೆ ಇಳಿದಿದೆ. ಅಂದರೆ ಏನು? ಬೆಡ್ ಸ್ಟ್ರೆಂಗ್ತ್ ಇವತ್ತು 1050 ಬೆಡ್‌ಗಳಿವೆ. ಬೇಕಾಗಿರುವಂಥ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ಸ್ ಇದೆ. ಬಿಲ್ಡಿಂಗ್ ಇದೆ. ಆದರೆ ಸರ್ಕಾರಕ್ಕೆ ಮೆರಿಟ್ ವಿದ್ಯಾರ್ಥಿಗಳಿಗೆ ಸಹಾಯವಾಗುವಂಥ ರೀತಿಯಲ್ಲಿ ಬೇಕಾಗಿರುವಂಥ ಲೆಕ್ಚರರ್ಸ್, ಪ್ರೊಫೆಸರ್ಸ್, ಇವರುಗಳನ್ನು ನೇಮಕ ಮಾಡಿ ಮತ್ತೆ 205 ಸೀಟುಗಳಿಗೆ ಜಾಸ್ತಿ ಮಾಡುವಂಥ ಕಾಳಜಿ ಸರ್ಕಾರಕ್ಕೆ ಎಲ್ಲಿದೆ? ಬೆಡ್ ಫೆಸಿಲಿಟೀಸ್ ಈಗಲೂ ಇದೆ. Even today. As per the MCI. ಇಲ್ಲ. ಖಾಸಗಿ ಕಾಲೇಜುಗಳನ್ನು ಹೆಚ್ಚುಹೆಚ್ಚು ಮಾಡುವಂಥದ್ದು. ಇರುವಂಥ ಸರ್ಕಾರಿ ಕಾಲೇಜುಗಳಲ್ಲಿರುವಂಥ ಸೀಟುಗಳನ್ನು ಜಾಸ್ತಿ ಪ್ರಾವಿಷನ್ನು ಮಾಡದೇ ಇರುವುದು ಸರ್ಕಾರದ ನೀತಿಯೇ? ಇದು ಒಂದು ಭಾಗ. ನಾನು ಆಗಲೇ ಹೇಳಿದೆ.

ಅಲ್ಲಿಯ ಡಾಕ್ಟರ್‌ಗಳ ವ್ಯವಸ್ಥೆಗಳೇನಾಗಿದೆ ಎಂದು. ಸನ್ಮಾನ್ಯ ಶಂಕರಲಿಂಗೇಗೌಡರು ಇಲ್ಲಿ ಇಲ್ಲ. ಮೈಸೂರಿನಲ್ಲಿ ಸಂಬಂಧಪಟ್ಟ ಹಾಗೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಒಂದು ಸ್ಕ್ಯಾಮ್ ಆಯಿತು. ಅದು ಅಲ್ಲಿರುವಂಥ ಒಂದು ಡೆಡ್ ಬಾಡಿಯನ್ನು ಬೇರೆ ಕಡೆಗೆ ಸಾಗಿಸುವಂಥ ವ್ಯವಸ್ಥೆಗಳಾಗಿದೆ ಎಂದು ಹೇಳಿ ಒಂದು ಕೇಸ್ ಕೂಡ ರಿಜಿಸ್ಟರ್ ಆಯಿತು. ನನ್ನ ಮುಂದೆ ಒಂದು ನಿನ್ನೆ ತಾನೆ ಅಲ್ಲಿಯ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಒಂದು ಪ್ರೆಸ್ ಕಾನ್‌ಫರೆನ್ಸ್‌ನ್ನು ಮಾಡಿದ್ದಾರೆ. ಬಹಳ ಸ್ವಾರಸ್ಯ ಇದೆ. ಅಲ್ಲಿ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೋಸ್ಕರವಾಗಿ ಹೋದರು. ಆದರೆ ಆ ಪತ್ರಿಕಾ ಮಿತ್ರರು ಹಾಕಿದಂಥ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಿಕ್ಕಾಗದೆ ಏನು ಹೇಳಿದ್ದಾರೆಂದರೆ "ಕೇವಲ ಶವ ಸಾಗಾಣಿಕೆಯ ಅಕ್ರಮದಲ್ಲಿ ನಾನೊಬ್ಬನೇ ಅಲ್ಲ. ಶೆಣೈ ಕೂಡ ಇದ್ದಾರೆ. ರವಿಚಂದ್ರ ಇದ್ದಾರೆ ಎಂದು ಅವರು ಹೀಗೆ ಹೇಳಿಕೊಂಡು ಬರುತ್ತಾರೆ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಬಹಳ ಒಳ್ಳಯ ಪ್ರಿನ್ಸಿಪಲ್ ಇದ್ದಾರೆ. ಬಹಳ ಒಳ್ಳೆಯ ಕೆಲಸ ಮಾಡುವಂಥವರು. ಆದರೆ ಅಲ್ಲಿ ರವಿಚಂದ್ರ ಎನ್ನುವಂಥವರು ಒಂದು ಹೆಣವನ್ನು ಬೇರೆ ಕಡೆಗೆ ಮಾರಿದರು, ಅಡ್ವಾನ್ಸ್ 30 ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದರು. ಇವೆಲ್ಲವೂ ಕೂಡ ಬಂತು ಆ ನಂತರದಲ್ಲಿ ನಿನ್ನೆಯ ದಿವಸ ಪತ್ರಿಕಾಗೋಷ್ಠಿಯಲ್ಲಿ ಅವರು ವಿಚಾರವನ್ನು ಹೇಳುತ್ತಾರೆ. ಇದು ಕೇವಲ ಇವತ್ತಿನದು ಮಾತ್ರವಲ್ಲ. ಡಾ॥ ಶೆಣೈ ಕೂಡ ಇದರಲ್ಲಿ ಭಾಗಿಯಾಗಿದ್ದಾರೆ. ಇವತ್ತು ನಾವು ಎಂದು ಹೆಣವನ್ನು ಕೊಟ್ಟಿದ್ದೇವೆ. ಒಂದು ಹೇಳಿ ಒಂದು ಬಾರಿ ನಾಲ್ಕು ಹೆಣಗಳನ್ನು ಇದೇ ರೀತಿಯಲ್ಲಿ ಕೊಟ್ಟಿದ್ದೇವೆ, ಅದರ ಹಿಂದೆ ಮೂರು ಹೆಣಗಳನ್ನು ಇದೇ ರೀತಿಯಲ್ಲಿ ಬೇರೆ ಕಡೆಗೆ ಮಾರಾಟ ಮಾಡಿದ್ದೇವೆ. ಅನ್ನುವಂಥ...

ಡಾ॥ ಎ.ಬಿ. ಮಾಲಕರೆಡ್ಡಿ:- ಮಾರಾಟ ಮಾಡಿದ್ದೇವೆ ಎಂದು ಹೇಳಿದ್ದಾರೋ ಶವವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೋ ನೋಡಿ. ತಾವು ಹೇಳುತ್ತಿದ್ದೀರಿ, How dare he can say that we have sold the dead body? ಅಂದರೆ ಶವವನ್ನು ಕೊಟ್ಟಿದ್ದೇವೆ ಎಂದು ಹೇಳಿರಬಹುದು. Under Government Rules it is permissible, because the dead bodies are used for study purpose. 1985 ರಲ್ಲಿಯೇ ಸರ್ಕಾರದವರು ಒಂದು ಜಿ.ಓ.ವನ್ನು ಇಷ್ಯೂ ಮಾಡಿ ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿಗೆ ಕಾಲೇಜುಗಳಿಗೆ ಬೇಕಾಗಿರುವಂಥ ಶವಗಳನ್ನು ಕೊಡಬಹುದು ಎಂದು ಹೇಳಿ ಸರ್ಕ್ಯುಲರ್ ಇದೆ. ಅದರ ಪ್ರಕಾರ ಕೊಟ್ಟಿರಬಹುದು. ಅವರು ಮಾರಾಟ ಮಾಡಿದ್ದೇವೆ ಎಂದು ಹೇಳಿದ್ದಾರೋ ಕೊಟ್ಟಿದ್ದೇವೆ ಎಂದು ಹೇಳಿದ್ದಾರೋ ಅದನ್ನು ನೋಡಿ.

ಶ್ರೀ ಎ.ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ನಾನು ಅದನ್ನು ಓದಿದ್ದೇನೆ. ಅದನ್ನು ಓದಿಯೇ ನಾನು ಆ ವಿಚಾರವನ್ನು ಹೇಳುತ್ತಿದ್ದೇನೆ. ಪರ್ಮಿಷನ್ ಇಲ್ಲದೆಯೇ ವಿತ್‌ಔಟ್ ಪರ್ಮಿಷನ್ ಅಲ್ಲಿಯ ಪೋಲೀಸ್ ಅಧಿಕಾರಿಗಳಾದ ಬಿಪಿನ್ ಗೋಪಾಲಕೃಷ್ಣ ಅವರು ಕೂಡ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ನಾವು ಪ್ರಿಲಿಮಿನರಿ ಎನ್‌ಕ್ವೈರಿ ಮಾಡಿದ ಪ್ರಕಾರದಲ್ಲಿ ಇವತ್ತು ಹೆಣವನ್ನು ಸಾಗಿಸುವುದಕ್ಕೋಸ್ಕರವಾಗಿ ಯಾವುದೇ ಪರ್ಮಿಷನ್ ಇರಲಿಲ್ಲ. ಯಾವುದೇ ಕಾಲೇಜಿಗೆ ಅಥವಾ ಇನ್ನೊಂದು ಕಡೆಗೆ ಕೊಡುವಂಥ ವ್ಯವಸ್ಥೆಗಳು ಇರಲಿಲ್ಲ. ವಿತ್‌ಔಟ್ ಪರ್ಮಿಷನ್ ತೆಗೆದುಕೊಂಡು ಹೋಗಿರುವಂಥದ್ದು ಎಂದು ಅದಲ್ಲದೇ ರವಿಚಂದ್ರ ಹೇಳಿರುವುದು ಇದೇ ರೀತಿಯಲ್ಲಿ ವಿತ್‌ಔಟ್ ಪರ್ಮಿಷನ್ ಬೇರೆ ಬೇರೆಯಾಗಿ ಯಾವ ಕಾಲೇಜುಗಳಿಗೋಸ್ಕರವಾಗಿ ನಾವು

ಕಳುಹಿಸಿಕೊಟ್ಟಿದ್ದೇವೆ ಅನ್ನುವಂಥದ್ದನ್ನು ಖಾಸಗಿ ಕಾಲೇಜುಗಳಿಗೆ ನಾವು ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ ನನ್ನೊಬ್ಬನ ಭಾಗಿತ್ವ ಇಲ್ಲ. ಡಾ॥ ಶೆಣೈ ಅವರ ಭಾಗಿತ್ವವೂ ಕೊಡ ಇದೆ ಎನ್ನುವುದಾದರೆ ಒಂದು ಮೆಡಿಕಲ್ ಕಾಲೇಜಿನಲ್ಲಿ ಆ ರೀತಿಯಾದರೆ ಬೇರೆ ಬೇರೆ ಮೆಡಿಕಲ್ ಕಾಲೇಜುಗಳಲ್ಲಿ ರಾಜ್ಯದಲ್ಲಿರುವಂಥದ್ದರ ಬಗ್ಗೆ ಏಕೆ ಒಂದು ತನಿಖೆಯನ್ನು ತಾವು ಇವತ್ತಿನವರೆಗೂ ಮಾಡಿಲ್ಲ. ಮೈಸೂರಿನಲ್ಲಿ ಪ್ರಕರಣ ಬಂತು. ಇಂಥ ವ್ಯವಸ್ಥೆಗಳು ಎಲ್ಲಾ ಮೆಡಿಕಲ್ ಕಾಲೇಜುಗಳಲ್ಲೂ ಸಿಗುತ್ತದಲ್ಲಾ. ಪರ್ಮಿಷನ್ ಇರುವುಂಥದ್ದು ಯಾವುದು, ಪರ್ಮಿಷನ್ ಇಲ್ಲದೇ ಇರುವಂಥದ್ದು ಯಾವುದು ಎಂದು ಹೇಳಿ ಸ್ಕೆಲಿಟನ್ ಸಿಗುತ್ತದೆ. ಪರ್ಮಿಷನ್ ಇಲ್ಲದೇ ಇರುವಂಥ ರೀತಿಯಲ್ಲಿ ಸ್ಕೆಲಿಟನ್‌ಗಳಿವೆ ಎಂದು ಇವತ್ತಿನವರೆಗೂ ನೋಡುವಂಥ ಕೆಲಸವನ್ನು ಏಕೆ ಮಾಡಿಲ್ಲ? ಅಂದರೆ ಇವತ್ತು ಜನಗಳ ವಿಶ್ವಾಸ, ನಂಬಿಕೆ ಇವತ್ತೆಲ್ಲೋ ತೆಗೆಯುವಂಥ ವ್ಯವಸ್ಥೆಗಳಾಗುತ್ತಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ...

ಡಾ॥ ಎ.ಬಿ. ಮಾಲಕರೆಡ್ಡಿ:- ಮಾನ್ಯ ಉಪಾಧ್ಯಕ್ಷರೇ, ಬಹಳ ಚತುರತೆಯಿಂದ ಮಾತನಾಡುತ್ತಾರೆ. It is legally permissible to transport dead bodies from one College to the other, under the Circular of Government 1985 only. Because the dead bosdies are very scarce, but under the Indian Medical Council Rules, the students have to learn how to disect, how to identify the organs. Unless the body is transported illegally. That is the reason why that Ravichandran ಈಗ a thorough enquiry is going on. Already we have ordered the enquiry. ಡಾ॥ ಶೆಣೈ ಎಂದು ಹೇಳಿದರಲ್ಲಾ, already Show-Cause notice has been served on them. Already enquiry is going on. There is no anxiety.

ಶ್ರೀ ಎ.ರಾಮದಾಸ್:- ಮಾನ್ಯ ಮಂತ್ರಿಗಳೇ, ನನ್ನ ಮನಸ್ಸಿನ ಕಾಳಜಿ ಏನು ಎಂದರೆ ಪತ್ರಿಕೆಗಳಲ್ಲಿ ಇದು ಬರುತ್ತದೆ. ನಾಳೆ ಇನ್ನೇನೋ ಪ್ರೆಸ್‌ಕಾನ್‌ಫೆರೆನ್ಸ್‌ಗಳನ್ನು ಮಾಡಿದ್ದಾರೆ. ಈ ವಿಚಾರಗಳನ್ನೆಲ್ಲಾ ಹೇಳಿದಾಗ ಜನಸಾಮಾನ್ಯರ ಮನಸ್ಸಿನಲ್ಲಿ ನಾನು ಎಲ್ಲವನ್ನೂ ಕೊಟ್ಟಿರುವಂಥ ನಾಲ್ಕು ಪ್ರಕರಣ ಮಾತ್ರ ಅವರು ಹೇಳಿರುವುದು ಇಲ್ಲೀಗಲ್ ಆಗಿ ಹೋಗಿದೆ ಎಂದು. ನನ್ನ ಕಾಳಜಿ ಏನೆಂದರೆ ಈ ರೀತಿಯಲ್ಲಿ ಇಲ್ಲೀಗಲ್ ಆಗಿ ಬರುವಂಥ ಬಾಡಿಗಳು ಅಲ್ಲಿಂದ ಹೋಗುತ್ತದೆ ಎನ್ನುವಂಥದ್ದು ಆ ಮೆಸೇಜ್ ರಾಜ್ಯದಲ್ಲಿ ಹೋದಾಗ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಅವರಿಗೆ ಆಘಾತ ಎಷ್ಟಾಗಬಹುದು? ಇದರ ಬಗ್ಗೆ ನಾನು ನೀವೂ ಕೂಡ ಚಿಂತನೆ ಮಾಡಬೇಕಾದಂಥ ಅವಶ್ಯಕತೆ ಇದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಥರೋ ಎನ್‌ಕ್ವೈರಿಯಾಗಬೇಕು ಎನ್ನುವ ಅವಶ್ಯಕತೆ ಇದೆ ಎನ್ನುವಂಥದ್ದನ್ನು ತಮ್ಮ ಮುಂದೆ ಹೇಳುತ್ತಿರುವ ಮಾತು. ಇಷ್ಟನ್ನು ಹೇಳುತ್ತಾ ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿ ಇಲ್ಲ. ಹಿಂದಿನ ಸರ್ಕಾರದಲ್ಲಿ ನಾನು ಮಾನ್ಯ ಮಹದೇವಪ್ಪನವರು ಪ್ರತಿ ವರ್ಷ ಬಜೆಟ್ ಬಂದಾಗ ಯಾವುದನ್ನೂ ತಪ್ಪಿಸದೆ ಒಂದು ಮಾತನ್ನು ಹೇಳುತ್ತಿದ್ದರು. ನಾವು ರಾಜ್ಯದಲ್ಲಿ ನರ್ಸಿಂಗ್ ಹೋಂಗಳು ಜನಗಳನ್ನು ಲೂಟಿ ಮಾಡುತ್ತಿವೆ. ಆದ್ದರಿಂದ ನರ್ಸಿಂಗ್ ಹೋಂ ಬಿಲ್‌ನ್ನು ತರುತ್ತೇವೆ, ನಾನು ಮೊನ್ನೆ ನೋಡುತ್ತಾ ಬಂದೆ. ಹಿಂದಿನ ಭಾಷಣಗಳಲ್ಲಿ, ಪ್ರತಿ ವರ್ಷವೂ ಹೇಳಿದ್ದಾರೆ. ಈಗ ಕಳೆದ ವರ್ಷ ಕೂಡ ಮಾನ್ಯ ಕಾಗೋಡು ತಿಮ್ಮಪ್ಪನವರು ಭಾಷಣ ಮಾಡುವಂಥ ಸಂರ್ಭದಲ್ಲಿ ಅದನ್ನೇ ಹೇಳಿದ್ದಾರೆ. ನಾವು ಈಗ ನರ್ಸಿಂಗ್ ಹೋಂಗಳನ್ನು ಕಂಟ್ರೋಲ್‌ನಲ್ಲಿ

ಇಟ್ಟುಕೊಳ್ಳುವುದಕ್ಕೋಸ್ಕರವಾಗಿ ನರ್ಸಿಂಗ್ ಹೋಂ ಬಿಲ್‌ನ್ನುತರುತ್ತೇವೆ. ಹಾಗೆಂದು ಹೇಳುತ್ತಾರೆ. ಆ ನರ್ಸಿಂಗ್ ಹೋಂ ಅಸೋಸಿಯೇಷನ್ ಎಲ್ಲಾ ಸೇರುತ್ತೆ ಅವರು ಬಂದು ಸರ್ಕಾರವನ್ನು ಭೇಟಿ ಮಾಡುತ್ತಾರೆ. ಇವತ್ತು ಅದು ಸ್ಟಾಪ್ ಆಗುತ್ತದೆ. ಎಂಟು ವರ್ಷಗಳ ಕಾಲದಿಂದಲೂ ಕೂಡ ಒಬ್ಬ ಶಾಸಕನಾಗಿ ಅದೇ ಕತೆಯನ್ನೇ ಕೇಳುತ್ತಿದ್ದೇನೆ. ಆದರೆ ಇವತ್ತು 27ನೇ ಜನವರಿ 2003ರಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒಂದು ಪತ್ರ ಬಂದಿದೆ. ಪ್ರತಿಯೊಂದು ರಾಜ್ಯಸರ್ಕಾರಗಳಿಗೂ ಒಂದು ಪತ್ರವನ್ನು ಬರೆದು ಅವರು ಕೇವಲ ಪತ್ರವನ್ನು ಬರೆದಿಲ್ಲ. ಅವರೂಕೂಡ Model Citizens charter for public Hospitals and Private Hospitals ಎಂದು ಹೇಳಿ ಸರ್ಕಾರದಲ್ಲಿ ಒಂದು ಕಾನೂನನ್ನು ಮಾಡಿ ಇದಕ್ಕೆ ಸಂಬಂಧಪಟ್ಟ ಹಾಗೆ ಒಬ್ಬರು ಖಾಸಗಿ ನರ್ಸಿಂಗ್ ಹೋಂಗೆ ಹೋದರೆ ಅವರಿಗೆ ಕ್ಲಿನಿಕಲ್ ಫೆಸಿಲಿಟಿಗೆ ಎಷ್ಟು ದುಡ್ಡು? ಬೆಡ್ ಛಾರ್ಜ್‌ಗೆ ಎಷ್ಟು? ಅಲ್ಲಿರತಕ್ಕ ಫೆಸಿಲಿಟೀಸ್ ಏನು? ಯಾವ ಯಾವ ಡಾಕ್ಟರ್ಸ್‌ಗಳಿಗೆ ಛಾರ್ಜಸ್ ಎಷ್ಟು? ಏನು ಸರ್ವೀಸನ್ನು ಕೊಡುತ್ತಾರೆ, ಈ ಎಲ್ಲದರ ಅಂಶದ ಆಧಾರದ ಮೇಲೆ ಸಿಟಿಜನ್ ಚಾರ್ಟರ್‌ನ್ನು ಹಾಕಬೇಕೆಂದು ಇದೆ. ಆದರೆ ಇವತ್ತಿನವರೆಗೆ ಈ ಪ್ರಶ್ನೆ ಬಂದಾಗಲೆಲ್ಲಾ ಸರ್ಕಾರ ಹೇಳುತ್ತದೆ, ಆದರೆ ಆ ನಂತರ ಅದನ್ನು ನಿಲ್ಲಿಸುವುದೇಕೆ? ದಯವಿಟ್ಟು ಸಾರ್ವಜನಿಕರ ಹಿತದೃಷ್ಟಿಯಿಂದ, ಆರೋಗ್ಯದ ಹಿತದೃಷ್ಟಿಯಿಂದ ಈ ಸಿಟಿಜನ್ಸ್ ಚಾರ್ಟರ್‌ನ್ನು ತರುವಂಥ ಕೆಲಸವಾಗಬೇಕು ಎನ್ನುವ ವಿಚಾರವನ್ನು ಸರ್ಕಾರದ ಮುಂದೆ ಹೇಳುತ್ತ, ನನಗೆ ಅವಕಾಶವನ್ನು ಕೊಟ್ಟಂಥ ತಮಗೆ ವಂದಿಸಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ, ಅದೇನೆಂದರೆ, ಸರ್ಕಾರಿ ವೈಮಾನಿಕ ಹಾರಾಟ ಮತ್ತು ತರಬೇತಿಯದ್ದು. ಇದರ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ವಿಶೇಷವಾಗಿ ಏಕೆ ಈ ಮಾತನ್ನು ಒತ್ತಿ ಹೇಳಬೇಕಾಗಿದೆಯೆಂದರೆ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒಂದು ಪತ್ರ ಬಂದಿದೆ. ಮೈಸೂರಿನಲ್ಲಿ ಏರ್‌ಪೋರ್ಟ್‌ಗೋಸ್ಕರವಾಗಿ ಏನು 350 ಎಕರೆ ಭೂಮಿ ಇದೆ ಅದರ ಜೊತೆಯಲ್ಲೆ 54 ಎಕರೆ ಭೂಮಿ ಇದೆ ಅದನ್ನು ರಾಜ್ಯ ಸರ್ಕಾರಕ್ಕೆ ನಾವು ಬಿಟ್ಟುಕೊಡುತ್ತೇವೆ, ಏಕೆಂದರೆ, ಅಲ್ಲಿ ಏರ್‌ಸ್ಟ್ರಿಪ್‌ನ್ನು ಮಾಡುವುದರ ಜೊತೆಯಲ್ಲಿ ಅಲ್ಲಿ ಸರ್ಕಾರದ ಏವಿಯೇಷನ್ ಟ್ರೈನಿಂಗ್ ಸೆಂಟರ್‌ನ್ನು ಮಾಡಲು ಪ್ರಪೋಸಲ್ ಏನಿತ್ತು ಅದಕ್ಕೋಸ್ಕರವಾಗಿ ರಾಜ್ಯ ಸರ್ಕಾರಕ್ಕೆ ಬಿಟ್ಟುಕೊಡುತ್ತೇವೆಂದು ಪತ್ರ ಬಂದಿದೆ. ಅಪ್ಪಚ್ಚುರಂಜನ್‌ರವರ ಸಮಿತಿಯ ವರದಿಯಲ್ಲೂ ಇದು ಬಂದಿದೆ. ಇಲ್ಲಿರುವಂಥ ಹಣ 1.66 ಕೋಟಿ ರೂ ಮಾತ್ರ. ಆದ್ದರಿಂದ, ಇದರ ಅಲೋಕೇಷನ್‌ನಲ್ಲಿ ಸ್ವಲ್ಪ ಜಾಸ್ತಿ ಹಣವನ್ನು ಮಾಡಿ, ಮೈಸೂರಿನಲ್ಲಿ ಈಗಾಗಲೇ ಕೇಂದ್ರ ತೆಗೆದುಕೊಂಡಿರುವ ಪೂರ್ತಿಯಾದ ಜಮೀನನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು ಕೊಡುತ್ತಿರುವಾಗ ಅಲ್ಲಿ ಏರ್‌ಪೋರ್ಟ್ ಮತ್ತು ಏವಿಯೇಷನ್ ತರಬೇತಿ ಕೇಂದ್ರವನ್ನು ಮಾಡಲು ಅನುಕೂಲ ಒದಗಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸುತ್ತಾ, ದಯಮಾಡಿ ಸರ್ಕಾರಕ್ಕೆ ಒಂದು ವಿಚಾರವನ್ನು ಹೇಳುತ್ತಿದ್ದೇನೆ, ಈ ಎಲ್ಲದರ ಅಂಶವನ್ನು ಕೇವಲ ರೆಕಾರ್ಡ್‌ಗೆ ಹೋಯಿತು ಎಂದಲ್ಲ, ಇಲ್ಲಿರುವಂಥ ನ್ಯೂನತೆಗಳನ್ನು ಸರ್ಕಾರ ಸವಾಲಾಗಿ ಸ್ವೀಕಾರ ಮಾಡುವುದಾದರೆ ನಾನೂ ಸಹ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಕೊಡಲು ಸಿದ್ಧನಾಗಿದ್ದೇನೆ, ದಯವಿಟ್ಟು ಒಂದು ಎನ್‌ಕ್ವೈರಿ ಕಮಿಷನ್‌ನನ್ನು ಮಾಡುವಂಥ ಕೆಲಸವನ್ನು ಮಾಡಿ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮೂರೂಮುಕ್ಕಾಲು ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 42 ನಿಮಿಷಕ್ಕೆ ಮುಂಡೂಲ್ಪಟ್ಟು ಮತ್ತೆ 3 ಗಂಟೆ 45 ನಿಮಿಷಕ್ಕೆ ಸೇರಲು ನಿರ್ಧರಿಸಿತು)

(ಸದನವು ಪುನ: 3 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್ ತಹಸೀಲ್ದಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಉಪಾಧ್ಯಕ್ಷರು:- ಮಾನ್ಯ ಜಯಪ್ರಕಾಶ್ ಹೆಗಡೆಯವರೇ, ತಾವು ಮಾತನಾಡಿ.

+ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ್):- ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆ ಮಾನ್ಯ ಚೆನ್ನಿಗಪ್ಪನವರು ಮಾತನಾಡುವಾಗ ನಾನು ಅದಕ್ಕೆ ಹೇಳಿದೆ, ನಾವು ಕಳೆದ ನಾಲ್ಕು ವರ್ಷಗಳಿಂದ ಮಾತನಾಡಿದ್ದು ಕೇವಲ ರೆಕಾರ್ಡ್‌ಗೆ ಹೋಗಿದೆ ಎಂಬುದನ್ನು ಬಿಟ್ಟರೆ ನಮಗೆ ಉತ್ತರ ಎಷ್ಟು ಪರ್‌ಸೆಂಟ್ ಸಿಕ್ಕಿದೆ ಎಂದು ಕೇಳಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪುನ: ಹೇಳುತ್ತಿದ್ದೇನೆ, ಕೇವಲ ರೆಕಾರ್ಡ್‌ಗೆ ಹೋಗಲಿ ಎಂದು ನಾವು ಮಾತನಾಡಬೇಕೆಂದರೆ ನಾನು ಮಾತನಾಡುತ್ತೇನೆ, ಅದಕ್ಕೇನೂ ತೊಂದರೆ ಇಲ್ಲ, ಏಕೆಂದರೆ ಉತ್ತರ ಹೇಗೂ ಸಿಗುವುದಿಲ್ಲವೆಂಬುದು ನನಗೆ ಗೊತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್:- ಯಾರೂ ಇಲ್ಲದಿದ್ದಾಗ ಮಾತನಾಡಿದರೆ ಏನಾಗುತ್ತದೆ? ಯಾವ ಮಂತ್ರಿಗಳೂ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):- ಇಲ್ಲಿ ಇದ್ದೇವಲಾ?

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ರಂಗನಾಥ್‌ಜಿಯವರು ಇಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:- ನಾನು ಆಗಲೇ ಬಂದಿದ್ದೇನೆ, ತಾವು ಈಗ ಬಂದಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಹೇಗೊ ಇಂಥ ಸಂದರ್ಭದಲ್ಲಿ ಮಾತನಾಡಬೇಕೆಂದು ಮಾತನಾಡುತ್ತಿದ್ದೇನೆ ಅಷ್ಟೆಯೇ ಹೊರತು, ತಾವು ತಪ್ಪು ತಿಳಿದುಕೊಳ್ಳಬಾರದು, ನ್ಯಾಯಾಲಯದಲ್ಲಿ ವಕೀಲರು ಆರ್ಗ್ಯೂಮೆಂಟ್ ಮಾಡುವಾಗ ಹೇಳುತ್ತಾರೆ. ತಮಗೆ ಅರ್ಥವಾಗಲಿಲ್ಲವೆಂದು ಹೇಳುವುದರ ಬದಲು.. Let me make myself clear ಎಂದು ಹೇಳುವಂಥದ್ದು ಇದೆ, ಅದು ತಮಗೆ ಗೊತ್ತಿದೆ, ಅದೇ ರೀತಿ let me make myself clear ಎಂದು ನಾನು ಮಾತನಾಡಲು ಪ್ರಾರಂಭ ಮಾಡುತ್ತೇನೆ. ನಾನು ಹೇಳಿದ್ದನ್ನು ನನಗೇ ಕ್ಲಾರಿಫಿಕೇಷನ್, ಸರ್ಕಾರಕ್ಕಲ್ಲ.

SRI K.H. RANGANATH:- Let me make clear ಅನ್ನುವುದು in respect of what?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಏನು ಸದನದಲ್ಲಿ ಬೇಡಿಕೆಯ ಮೇಲೆ ಮಾತನಾಡಲು ಅವಕಾಶ ಕೊಟ್ಟಾಗ ನಾನೇನು ಹೇಳುತ್ತೇನೆ ಅದನ್ನು ನನಗೋಸ್ಕರ ನಾನು ಮಾತನಾಡುತ್ತೇನೆಯೇ ಹೊರತು ಸರ್ಕಾರಕ್ಕೋಸ್ಕರವಲ್ಲ.

ಉಪಾಧ್ಯಕ್ಷರು:- ಹೇಗಾದರೂ ಮಾತನಾಡಿ. ತಮಗೋಸ್ಕರವಾದರೂ ಮಾತನಾಡಿ, ಸರ್ಕಾರಕ್ಕೋಸ್ಕರವಾದರೂ ಮಾತನಾಡಿ. ಒಟ್ಟಾರೆ ಮಾತನಾಡಿ. ನೀವು ಎಸ್.ಎಸ್. ಪಾಟೀಲರಿಗೆ ಮತ್ತೆ ಮತ್ತೆ ಎದ್ದು ಮಾತನಾಡಲು ಅವಕಾಶ ಕೊಡಬೇಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾತನಾಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ರಾಗ ಯಾವುದು ಎಂದು ಗೊತ್ತಾದ ಮೇಲೆ ನಮ್ಮದು ಲೆಕ್ಕಾಚಾರ. ರಾಗವೇ ಗೊತ್ತಾಗದೆ ನಾವೇನು ಹೇಳುವುದು? ಕ್ಲಾರಿಫಿಕೇಷನ್ ಏನು? ಉತ್ತರವೇನು? ಯಾವುದು? ಏನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಸಮಸ್ಯೆ ಇಷ್ಟೇ. ಪ್ರಶ್ನೆಗಳನ್ನು ಕೇಳಿದಾಗ ಉತ್ತರ ಬರುವುದಿಲ್ಲ, ಉತ್ತರ ಬಂದರೂ ಹೆಚ್ಚು ಹೊತ್ತು ಚರ್ಚೆಗೆ ಬಿಡದೆ ಬೇಡಿಕೆಗಳ ಬಗ್ಗೆ ಮಾತನಾಡಿ ಎಂದು ಹೇಳುತ್ತೀರಿ, ಬೇಡಿಕೆಗಳ ಮೇಲೆ ಮಾತನಾಡುವಾಗ ಸಮಯಾವಕಾಶ ಕಡಿಮೆ ಇರುವಾಗ ಅದನ್ನು ಕೇಳಲೂ ಯಾರು ಇಲ್ಲ, ಉತ್ತರವನು ಕೊಡಲೂ ಯಾರೂ ಇಲ್ಲ. ಇದನ್ನು ತಾವು ತಪ್ಪು ತಿಳಿದುಕೊಳ್ಳದಿದ್ದರೆ, ತಾವು ಮತ್ತು ಅಧ್ಯಕ್ಷರು ಸ್ವಲ್ಪ ಬಿಗಿ ಹಿಡಿದಿದ್ದರೆ ಇದು ಸರಿಯಾಗುತ್ತಿತ್ತು ಎಂದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು:– ಏನು ಬಿಗಿಹಿಡಿಯುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಆವತ್ತು ತಾವು ಪಟ್ಟಿಯನ್ನು ತರಿಸಿಕೊಳ್ಳುತ್ತೇನೆ, ಈ ಸದನದಲ್ಲಿ ಯಾರ್ಯಾರು ಮಂತ್ರಿಗಳು ಇರಬೇಕು ಅವರನ್ನು ಕೂರಿಸಿಕೊಳ್ಳುತ್ತೇನೆಂದು ಹೇಳಿದ್ದಿರಿ. ಅದು ಆಗಲಿಲ್ಲ. ಅದನ್ನು ಪ್ರಾಯಶ: ಈ ಸದನ ಮುಗಿಯುತ್ತಾ ಬಂತು, ಮುಂದೆ ಸದನ ನಡೆಯುತ್ತದೆಯೋ ಇಲ್ಲವೋ, ಅಥವಾ ಚುನಾವಣೆಗೆ ಹೋಗುತ್ತೇವೋ ಇಲ್ಲವೋ ನಮಗಂತೂ ಗೊತ್ತಿಲ್ಲ.

ಮಾನ್ಯ ಸದಸ್ಯರು:– ಮಂತ್ರಿಗಳಿಗೆ Viral Fever.

ಶ್ರೀ ಕೆ.ಹೆಚ್. ರಂಗಾನಾಥ್:– ಮಾನ್ಯ ಉಪಾಧ್ಯಕ್ಷರೆ, ಇದು ಜನರಲ್ ಡಿಸ್‌ಕಷನ್ ಆಗಿರುವುದರಿಂದ ನಾವೆಲ್ಲರೂ ಇಲ್ಲಿ ಇರಬೇಕಾದುದು ನಮ್ಮ ಕರ್ತವ್ಯ, ಧರ್ಮ, ಕಾರಣಾಂತರದಿಂದ ಹೀಗಾಗಿದೆ. ಅವರು ಪ್ರಾರಂಭ ಮಾಡಲಿ, ನಾವು ನೋಟ್ ಮಾಡಿಕೊಳ್ಳುತ್ತೇವೆ, ಯಾವ್ಯಾವ ಇಲಾಖೆಗೆ ಸಂಬಂಧಪಟ್ಟವರು ಬಂದಮೇಲೆ ತಕ್ಷಣವೇ ತಿಳಿಸುತ್ತೇವೆ, ಮತ್ತು ತಾವೂ ಹೇಳಿಕಳಿಸಿ ಬರಮಾಡಿಕೊಳ್ಳಬಹುದು.

ಶ್ರೀ ಎಸ್.ಎಸ್. ಪಾಟೀಲ್:– ಇದು ದಿನನಿತ್ಯವಾಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್:– ದಿನನಿತ್ಯವಾಗುತ್ತಿಲ್ಲ. ಮೊನ್ನೆ ತಮ್ಮದೇ ಸಿಂಧ್ಯಾರವರು ಪತ್ರಿಕೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾವು ಮಾಡಿದ್ದೇ?

ಉಪಾಧ್ಯಕ್ಷರು:– ಅವರು ಹೇಳುವುದರಲ್ಲೂ ಸತ್ಯಾಂಶವಿದೆ. ನಾವು ಇಲ್ಲಿ ಪದೇ ಪದೇ ಹೇಳಿದಾಗಲೂ ಕೂಡ...

ಶ್ರೀ ಕೆ.ಹೆಚ್. ರಂಗನಾಥ್:– ಸರ್ಕಾರದ ವತಿಯಿಂದ ಕೂಡ ನಾನು ಇಲ್ಲ ಎಂದು ಹೇಳಲಿಲ್ಲ. ಜನರಲ್ ಡಿಸ್‌ಕಷನ್ ಆಗಬೇಕಾದರೆ ನಾವೆಲ್ಲರೂ ಇರಬೇಕಾಗುತ್ತದೆ, ಅದು ನಮ್ಮ ಕರ್ತವ್ಯ it is our duty to be here. ಬೇಡಿಕೆ ಬರುವಾಗ ಆಯಾಯ ಇಲಾಖೆ ಮಂತ್ರಿಗಳು ಇರತಕ್ಕದ್ದು ಅವಶ್ಯಕ, ಜನರಲ್ ಡಿಸ್‌ಕಷನ್ ಆಗುವಾಗ ಎಲ್ಲರೂ ಇರತಕ್ಕದ್ದು ಅವಶ್ಯಕ. ಅದನ್ನು ನಾನು ಒಪ್ಪಿದ್ದೇನೆ.

ಉಪಾಧ್ಯಕ್ಷರು:– ಮಂತ್ರಿಗಳು ಬರುತ್ತಾರೆ ಎಂದು ಅನ್ನುವುದಾದರೂ, ಫ್ರಂಟ್‌ಲೈನ್‌ನಲ್ಲಿರುವ ಅಧಿಕಾರಿಗಳಿಗೂ ಕೊರತೆಯೇ? ಅವರಿಗೇನಾಗಿದೆ? ಅಧಿಕಾರಿಗಳಿಗೆ ನಾವಿಲ್ಲಿ ಎಷ್ಟು ಸಾರಿ

ಸೂಚನೆ ಕೊಟ್ಟಾಗಲೂ ಅವರು ಬರದಿದ್ದರೆ ನಿಜಕ್ಕೂ ವಿಷಾದವನ್ನು ವ್ಯಕ್ತಪಡಿಸಬೇಕು, ಅಷ್ಟೇ ಅಲ್ಲ ನಾನಂತು ಇವತ್ತು ವಾರ್ನಿಂಗ್ ಕೊಡುತ್ತಿದ್ದೇನೆ, ನಾಳೆಯಿಂದ ಅವರು ಸರಿಯಾದ ರೀತಿಯಲ್ಲಿ ಅಧಿಕಾರಿಗಳು ಇಲ್ಲದಿದ್ದರೆ ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾನಂತೂ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಧನ್ಯವಾದಗಳು.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ್:- ಸರ್ಕಾರದ ಆಡಳಿತಕ್ಕೆ ನಾವು ಚೀಮಾರಿ ಹಾಕಬೇಕು.

ಶ್ರೀ ಕೆ.ಹೆಚ್. ರಂಗನಾಥ್:- ಜನರಲ್ ಡಿಸ್‌ಕಷನ್ ಆಗಬೇಕಾದರೆ ಇರಬೇಕಾಗುತ್ತದೆ. ಆ ಇಲಾಖೆ ಬಂದಾಗ ಇಲಾಖೆಯ ಮುಖ್ಯ ಅಧಿಕಾರಿಗಳು ಇರುತ್ತಾರೆ. ಎಲ್ಲರೂ ಇರಬೇಕಾಗಿಲ್ಲ. ಆದ್ದರಿಂದ ತಾವು ಮುಖ್ಯಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆದರೆ ಸಾಕು.

ಶ್ರೀ ಶಿವಾನಂದ ಎಸ್. ಪಾಟೀಲ್:- 25 ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಇದೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:- ಮೊನ್ನೆ ಬೇಡಿಕೆಯ ಬಗ್ಗೆ ತೆಗೆದುಕೊಂಡಾಗ ತಾವು ಎಲ್ಲಿದ್ದಿರಿ? ಶುಕ್ರವಾರ ಎಲ್ಲಿದ್ದಿರಿ? ತಮ್ಮದು ನಾಟಕ ನಡೆಯಿತಲ್ಲಾ ಇಲ್ಲೇ ನಡೆಯಿತು.

ಶ್ರೀ ಎಸ್.ಎಸ್. ಪಾಟೀಲ್:- ಇದರಲ್ಲಿ ಅವರೊಬ್ಬರದ್ದೇ ನಾಟಕವಲ್ಲ, ಇಬ್ಬರದ್ದೂ ಇದೆ. ಅದನ್ನು ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಇಲ್ಲಿ ನಾಟಕ ನಡೆದಿದ್ದನ್ನು ಪತ್ರಿಕೆಯಲ್ಲಿ ಓದಲಿಲ್ಲವೇ? ತಾವು ಅದರ ಬಗ್ಗೆ ಸಿಂಧ್ಯಾರವರ ರಿಯಾಕ್ಷನ್‌ನ್ನು ನೋಡಲಿಲ್ಲವೆ?

ಶ್ರೀ ಎಸ್.ಎಸ್. ಪಾಟೀಲ್:- ಇದರಲ್ಲಿ ಇಬ್ಬರದ್ದೂ ನಾಟಕ ಇದೆ.

ಶ್ರೀ ಕೆ.ಹೆಚ್. ರಂಗನಾಥ್:- ಹೀಗೆ ಮಾತನಾಡಿಯೇ ಕೆಟ್ಟುಹೋಗುತ್ತಿರುವುದು. ನೀವು ತಪ್ಪು ಮಾಡಿದ್ದೀರೆಂದು ನಾವು ಮಾಡುವುದು, ನಾವು ತಪ್ಪು ಮಾಡಿದ್ದೇವೆಂದು ನೀವು ಮಾಡುವುದು. ನಾವು ತಪ್ಪು ಮಾಡಿದ್ದೇವೆಂದು ನೀವು ಮಾಡಬೇಕೆಂದಿದೆಯೇ?

ಶ್ರೀ ಎಸ್.ಎಸ್. ಪಾಟೀಲ್:- ನಾನು ಮಾತನಾಡುತ್ತೇನೆ. ನಾನು ಮಾತನಾಡುವ ಮುನ್ನ ತಾವು ಹೇಳುವುದಿಲ್ಲ. ಇನ್ನೂ ಏನೇನಿದೆ ಹೇಳಿ.

ಉಪಾಧ್ಯಕ್ಷರು:- ಮಾನ್ಯ ಪಾಟೀಲರೆ, ನೀವೇನು ಹೇಳಬೇಕಾಗಿದೆಯೋ ಅದನ್ನು ನಾನು ಹೇಳಿದ್ದೇನೆ, ತಾವು ಮತ್ತೆ ಏಕೆ ಪದೆ ಪದೇ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್:- ಅತ್ಯಂತ ವಿನಯದಿಂದ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ಸದಸ್ಯರು ತಪ್ಪು ಮಾಡಿದ್ದಾರೆಂದು ನಾವು ತಪ್ಪು ಮಾಡಬೇಕಾಗಿಲ್ಲ, ನಾವು ತಪ್ಪು ಮಾಡಿದ್ದೇವೆಂದು ನೀವೂ ತಪ್ಪು ಮಾಡಬೇಕಾಗಿಲ್ಲ ರೋಲ್ಸ್ ಆಫ್ ಪ್ರೊಸೀಜರ್ ಪ್ರಕಾರ ತಾವು ಏನು ಪ್ರಸ್ತಾಪ ಮಾಡಬೇಕೋ ಅದನ್ನೂ ಪ್ರಸ್ತಾಪ ಮಾಡಿದರೆ ಸಾಕು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಮಾನ್ಯ ಉಪಾಧ್ಯಕ್ಷರೇ, ವಿಷಯಗಳ ಸಮಿತಿಗಳ ಬಗ್ಗೆ ಬೆಳಿಗ್ಗೆ ಮಾನ್ಯ ಸದಸ್ಯರಾದ ಸಭಾಪತಿಯವರು ಇಲ್ಲಿ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ನನ್ನದೊಂದು ಸಲಹೆ ಇದೆ. ವಿಷಯ ಸಮಿತಿಗಳಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಬಹಳ ಕಡಿಮೆ ಇದೆ. ಏಕೆಂದರೆ, ಇದ್ದ ವಿಷಯವನ್ನೇ ಅಲ್ಲಿ ಚರ್ಚೆ ಮಾಡಲಿಕ್ಕಾಗುತ್ತಿಲ್ಲ. ಪ್ರಯಶ: ಒಂದು ತಿಂಗಳುಗಳ ಕಾಲ ಬೇರೆ ಯಾವ ವಿಷಯವನ್ನೂ ಸಹ ತೆಗೆದುಕೊಳ್ಳದೇ ಕೇವಲ ಬೇಡಿಕೆಗಳ ಮೇಲೆಯೇ ಒಂದೊಂದೇ

ವಿಷಯವನ್ನು ತೆಗೆದುಕೊಂಡು ಚರ್ಚೆ ಮಾಡುತ್ತಾ ಹೋದರೆ ನಂತರ ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡಲಿಕ್ಕೆ ಹೆಚ್ಚಿನ ಕಾಲಾವಕಾಶ ಸಿಗುತ್ತದೆ. ಪ್ರತಿಯೊಬ್ಬ ಮಂತ್ರಿಗಳು ಅವರ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರವನ್ನು ಇಲ್ಲಿ ಕೊಡದಿದ್ದಾಗ ಚರ್ಚೆಗೆ ಇಲ್ಲಿ ಅವಕಾಶವೇ ಇರುವುದಿಲ್ಲ. ಯಾವ ಇಲಾಖೆಯಲ್ಲಿ ಏನಾಗಿದೆ ಎಂಬ ಬಗ್ಗೆ ನಾವು ಇಲ್ಲಿ ಪ್ರಶ್ನೆಯನ್ನು ಕೇಳುತ್ತೇವೆ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಿ, ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಟ್ಟಾಗ ಅವರು ಸದನಕ್ಕೂ ಹೆಚ್ಚು ವಿಷಯಗಳನ್ನು ತಿಳಿಸಿದಂತಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಭಾಪತಿಯವರು ಇದೊಂದು ಜನರಲ್ ಡಿಸ್ಕಷನ್ ಆಗಿರುವುದರಿಂದ ಎಲ್ಲಾ ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಜನರಲ್ ಡಿಸ್ಕಷನ್, ಅದಕ್ಕಿಂತ ಹೆಚ್ಚಾಗಿ ಬಜೆಟ್ ಪ್ರಪೋಸಲ್ಸ್ ಬಗ್ಗೆ ಹೆಚ್ಚು ವಿಚಾರ ಮಾತನಾಡುವಂತಹ ಅವಶ್ಯಕತೆ ಇದೆ. ಆದಾಗ್ಯೂ ಕೂಡ ಹಾಗೆ ಮಾಡುವಾಗ ಬೇರೆ ಬೇರೆ ಇಲಾಖೆಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಬೇಕಾಗುತ್ತದೆ. ಬೆಳಿಗ್ಗೆ ಮಾನ್ಯ ರಾಮದಾಸ್‌ರವರು ಆರೋಗ್ಯ ಇಲಾಖೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಾ, ಆ ಇಲಾಖೆಗೆ ಗ್ರಾಂಟ್ ಕಡಿಮೆಯಾಗಿದೆ. ಇತ್ಯಾದಿ ವಗೈರೆಗಳ ಬಗ್ಗೆ ಮಾತನಾಡಿದರು. ಹಾಗಾದರೆ ಏನಾದರೂ ಆಗುತ್ತಿತ್ತು. ಆದ್ದರಿಂದ ಮಾನ್ಯ ಸದಸ್ಯರಾಗಿರತಕ್ಕಂಥ ಸಭಾಪತಿಯವರು ಪ್ರಸ್ತಾಪ ಮಾಡಿರತಕ್ಕಂಥದ್ದಲ್ಲಿ ಏನೂ ತಪ್ಪಿಲ್ಲ. ಆದರೆ ಜನರಲ್ ಡಿಸ್ಕಷನ್ ಆಗುವಾಗ ಎಲ್ಲಾ ವಿಚಾರಗಳನ್ನೂ ಕೂಡ ಇಲ್ಲಿ ಮಾತನಾಡಲಿಕ್ಕೆ ಅವಕಾಶ ಇದೆ. ಇಲಾಖೆಯ ಡಿಮ್ಯಾಂಡ್ಸ್ ಬಂದಾಗ, ಆಯಾ ಇಲಾಖೆಯ ಡಿಮ್ಯಾಂಡ್ಸ್‌ಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಮಾತನಾಡಬೇಕಾಗುತ್ತದೆ, ದೀರ್ಘವಾಗಿ ಪ್ರಸ್ತಾಪ ಮಾಡಬೇಕಾಗುತ್ತದೆ. Subject Committees ಸಹ ಇರುವುದರಿಂದ ಅಲ್ಲಿ ಏನು ಪ್ರಸ್ತಾಪವಾಯಿತು ಎಂಬುದರ ಬಗ್ಗೆ ಕೂಡ ಇಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ. ಸಂಬಂಧಪಟ್ಟಂತಹ Principal Secretary ಯವರು ಮತ್ತು ನಾವು ಅಂದರೆ ಮಂತ್ರಿಗಳು ಎಲ್ಲರೂ ಕೂಡ ಆ ಸಮಯದಲ್ಲಿ ಹಾಜರಿದ್ದು, ನಡೆದ ಚರ್ಚೆಗೆ ಉತ್ತರ ಕೊಡತಕ್ಕಂಥದ್ದು ಇದೆ. ಡಿಮ್ಯಾಂಡ್ಸ್ ಮೇಲಿನ ಚರ್ಚೆಗೆ ಮಾನ್ಯ ಮಂತ್ರಿಗಳೇ ಉತ್ತರಗಳನ್ನು ಹೇಳಬೇಕಾಗುತ್ತದೆ. ಅದನ್ನು ಬೇರೆಯವರು ಹೇಳಲಿಕ್ಕೆ ಬರುವುದಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಗಳಿಂದಾಗಿ ಮಾನ್ಯ ಮಂತ್ರಿಗಳು ಇಲ್ಲದೇ ಹೋದರೆ ಮಾತ್ರ ಬೇರೆಯವರು ಹೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರಾದ ಹೆಗ್ಡೆಯವರು ಮಾನ್ಯ ಸಭಾಪತಿಯವರಿಗೆ, 'ನೀವೆಲ್ಲಾ ವಿಚಾರಗಳನ್ನು ಚೆನ್ನಾಗಿ ಹೇಳಿದಿರಿ' ಎಂದು ಶಹಭಾಷ್‌ಗಿರಿ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಸ್ವಲ್ಪ ಟೀಕೆ ಮಾಡತಕ್ಕಂಥದ್ದು ಸರಿಯಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ನಾನು ಮಾನ್ಯ ಸಭಾಪತಿಯವರು ಬಗ್ಗೆ ಟೀಕೆ ಮಾಡಲಿಲ್ಲ. ಅವರು ಏನನ್ನು ಹೇಳಿದರೋ ಅದಕ್ಕೆ ಒತ್ತನ್ನು ಕೊಟ್ಟು ಮಾತ್ರ ನಾನು ಇಲ್ಲಿ ಮಾತನಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಹಾಗಾದರೆ ಆಗಬಹುದು. I thank the honourable Member. ಕ್ಷಮಿಸಿ, ತಾವು ಹೇಳಿದ್ದನ್ನು ನಾನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಮಾನ್ಯ ಉಪಾಧ್ಯಕ್ಷರೇ, ರೈತರ ಮುಖ್ಯ ಸಮಸ್ಯೆ ಎಂದರೆ ವಿದ್ಯುಚ್ಛಕ್ತಿಯ ಸಮಸ್ಯೆ ಆಗಿದೆ. ಕೃಷಿ ಪಂಪಿನ ದರದ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡು ಈಗ 15 ಮತ್ತು 16.12.2002ರಂದು ವಿಭಾಗೀಯ ವಿದ್ಯುತ್ ವಿತರಣಾ ಸಂಸ್ಥೆಗಳು ನೀಡಿದ ಪತ್ರಿಕಾ ಪ್ರಕಟಣೆಯಲ್ಲಿ ವಾರ್ಷಿಕ ಅಶ್ವಶಕ್ತಿಗೆ 300 ರೂಪಾಯಿಗಳಿಂದ 1200ರೂಪಾಯಿಗಳಿಗೆ, ಮತ್ತೆ ಕೆಲವನ್ನು

1500 ರೂಪಾಯಿಗಳವರೆಗೆ ಏರಿಸಿದ್ದನ್ನು ತಿಳಿಸಿದರು. ನಂತರ ಇವರುಗಳಿಗೆ ಯಾವುದು ಕಡಿಮೆಯೋ ಅದನ್ನು ಪಾವತಿಸುವ ಅವಕಾಶ ಒದಗಿಸಲಾಗಿದೆ ಎಂದೂ ಸಹ ತಿಳಿಸಿದರು. ಆದರೆ ಬಳಕೆದಾರರಲ್ಲಿ ಇನ್ನೂ ಹಲವರಿಗೆ ಮೀಟರ್ ಅನ್ನು ಅಳವಡಿಸಿಲ್ಲ. ಮೀಟರ್ ಅಳವಡಿಸುವವರೆಗೆ 40 ರೂಪಾಯಿಗಳು, ನಂತರ 20 ರೂಪಾಯಿಗಳಂತೆ ಎಂದು ತಿಳಿಸಿದರು. ಆದರೆ ಇನ್ನೂ ಮೀಟರ್ ಅಳವಡಿಸಿಲ್ಲ. ಮೀಟರ್ ಅಳವಡಿಸದೇ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ, ಆದಷ್ಟು ಬೇಗ ಎಲ್ಲಾ ಕಡೆಗಳಲ್ಲಿಯೂ ಮೀಟರ್ ಅನ್ನು ಅಳವಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಮೀಟರ್ ರೀಡಿಂಗ್‌ನ ನಂತರ ಬಿಲ್ ಮಾಡುವಾಗ ಮಾರ್ಚ್ 2003ರತನಕ ಪ್ರತಿ ಅಶ್ವಶಕ್ತಿಗೆ ಪ್ರತಿ ತಿಂಗಳು 40 ರೂಪಾಯಿಗಳು ಹಾಗೂ 2003ರಿಂದ 20 ರೂಪಾಯಿಗಳ ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗುತ್ತಿರುವುದನ್ನು ಒಂದೇ, on par, ಎಲ್ಲದನ್ನೂ 20 ರೂಪಾಯಿಗಳಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ಅಶ್ವಶಕ್ತಿಯಲ್ಲಿ ಎಲ್.ಟಿ. 4 ಮತ್ತು ಎಲ್.ಟಿ.4–ಬಿ ಎಂದು ವರ್ಗೀಕರಣ ಮಾಡಲಾಗಿದೆ. ರಾಜ್ಯದಲ್ಲಿ ಸುಮಾರು ನನ್ನ information ಪ್ರಕಾರ 15 ಲಕ್ಷ ವಿದ್ಯುತ್ ಪಂಪ್‌ಗಳಿದ್ದು, ಅವುಗಳಲ್ಲಿ ಒಟ್ಟು 40 ದಶ ಲಕ್ಷಗಳಷ್ಟು ಅಶ್ವಶಕ್ತಿ ಹೊಂದಿದ್ದು, ಬಳಸುವ ವಿದ್ಯುತ್ ಸುಮಾರು 150 ಕೋಟಿ ಯೂನಿಟ್‌ಗಳಷ್ಟು ಆಗುತ್ತದೆ. ಅದಕ್ಕೋಸ್ಕರ ಇಷ್ಟೆಲ್ಲಾ ಇರುವಾಗ, ಮೀಟರ್ ಅನ್ನು ಅಳವಡಿಸಿ, 2002ನೇ ಇಸವಿಯಿಂದ 25 ರೂಪಾಯಿಗಳಂತೆ ವಸೂಲು ಮಾಡುವ ಒಂದು ಸಲಹೆಯನ್ನು ರೈತ ಮುಖಂಡರ ಹತ್ತಿರ ಚರ್ಚೆ ಮಾಡಿದಾಗ ಅವರು ಹೇಳಿದರು. ಅದರಲ್ಲಿ ಈ 40 ರೂಪಾಯಿಗಳನ್ನು ಕಡಿಮೆ ಮಾಡುವಂಥಾದ್ದು ಆಗಬೇಕು. ಪ್ರತಿ ತಿಂಗಳೂ ಅಶ್ವಶಕ್ತಿಗೆ ಸರ್ಕಾರದ ಸಹಾಯಧನ ಕೊಡುವಂತಹ ವ್ಯವಸ್ಥೆ ಆಗಬೇಕು. ಅಂದರೆ 20 ರೂಪಾಯಿಗಳಲ್ಲಿ 10 ರೂಪಾಯಿಯನ್ನು ಸಹಾಯ ಧನ ಎಂದು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ಘೋಷಣಾ ಪತ್ರವನ್ನು ನೀಡುವವರು ಮತ್ತು ಎಲ್.ಟಿ.4ಬಿ ಎಂಬ ವರ್ಗೀಕರಣ ಮಾಡದೇ ಏಕ ರೂಪದ ದರ ವಿಧಿಸುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಎಂದು ನಾನು ಮಾನ್ಯ ವಿದ್ಯುತ್ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅವರು ಸದನದಲ್ಲಿ ಇಲ್ಲ ಆದಾಗ್ಯೂ ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಪ್ರಾಯಶ: ಅವರ ಮುಖಾಂತರ ಕೇಳಿಕೊಂಡರೆ ಉತ್ತರ ಸಿಗಬಹುದು ಎಂಬುದು ನನ್ನ ಆಸೆಯಾಗಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:-- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹೆಗ್ಡೆಯವರು ಕೇಳಿರತಕ್ಕ ಪ್ರಶ್ನೆಗೆ ಅನುಗುಣವಾಗಿ ನಾನೂ ಒಂದೆರೆಡು ವಿಚಾರಗಳನ್ನು ಹೇಳಬಯಸುತ್ತೇನೆ. KPTCL ನಲ್ಲಿ ಈಗ ಏನಾಗುತ್ತಿದೆ ಎಂದರೆ, domestic purpose ಸೇರಿದಂತೆ ಪ್ರತಿಯೊಬ್ಬ ಗ್ರಾಹಕರಿಗೂ ಕೂಡ ಅವರು minimum charges ಎಂದು ಹಾಕುತ್ತಿದ್ದಾರೆ. ರೈತ ಸಂಘದ ಅನೇಕ ಮುಖಂಡರುಗಳು ಮತ್ತು ರೈತರು ಅದರ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾರೆ. ಅದೇ ಹಿನ್ನೆಲೆಯಲ್ಲೇ ಇವತ್ತು ನಮ್ಮ ಕೊಪ್ಪಳ ತಾಲ್ಲೂಕಿನಲ್ಲಿ ಬಗನಾಳನಲ್ಲಿ ಹೋರಾಟ ನಡೆದಿದೆ. ಸರ್ಕಾರ ಅದಕ್ಕೆ ಸ್ಪಷ್ಟೀಕರಣ ಕೊಡಬೇಕು. Minimum charges ಎಂದೇನು ಹಾಕುತ್ತೀರಲ್ಲಾ, ಅದರ ಉದ್ದೇಶವೇನು ಎಂಬುದಕ್ಕೆ ಸಂಬಂಧಪಟ್ಟಂತೆ clarification ಅನ್ನು ಅವರು ಕೇಳುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಉಪಾಧ್ಯಕ್ಷರೇ, ಹಾಗೆಯೇ 2001–02ನಲ್ಲಿ 2390 ಕೋಟಿ ರೂಪಾಯಿಗಳ ಸಹಾಯ ಧನವನ್ನು ಸರ್ಕಾರ KPTCL ಗೆ ನೀಡಿತು. 2002–03ರಲ್ಲಿ ಅದನ್ನು 1250 ಕೋಟಿ ರೂಪಾಯಿಗಳಿಗೆ ಅದನ್ನು ಕಡಿತಗೊಳಿಸಿತು. ಇದನ್ನು ಕಡಿಮೆ

ಮಾಡಿ, ಪ್ರಾಯಶ: ಇದನ್ನೆಲ್ಲಾ ಬಳಕೆದಾರರ ಮೇಲೆ ಹೇರುವ ವ್ಯವಸ್ಥೆಯನ್ನು ಮಾಡಿದೆ ಎಂದು ಕಾಣುತ್ತಿದೆ. ಅದಕ್ಕೋಸ್ಕರ ಈ ಬರಗಾಲದ ಕಾರಣದಿಂದಾಗಿ ನಾನೇನು ಕೇಳುತ್ತಿದ್ದೇನೆ ಎಂದರೆ, ಎಷ್ಟು ಬಾಕಿ ಇದೆಯೋ ಅದನ್ನು ಮನ್ನಾ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಕೇವಲ ಬಡ್ಡಿಯನ್ನು ಮನ್ನಾ ಮಾಡುವ ಕಾರ್ಯಕ್ರಮ ಈಗ ಇದೆ. ನಮ್ಮ ESCOM ನವರು ನಮಗೊಂದು ಪತ್ರವನ್ನು ಕಳುಹಿಸಿದ್ದಾರೆ. ಬಿಲ್ ಬಡ್ಡಿ ಮನ್ನಾ ಮಾಡುವ ಯೋಜನೆ ದಿನಾಂಕ 1.4.2003ರಿಂದ ಜಾರಿಗೆ ಬಂದಿದೆ. ಇದು 31.7.2003ರವರೆಗೆ ಜಾರಿಯಲ್ಲಿದ್ದು ಈ ಅವಧಿಯಲ್ಲಿ ಪಾವತಿಸುವ ರೈತರ ಬಡ್ಡಿಯು ಮನ್ನಾ ಆಗಲಿದೆ ಎಂದು ಪತ್ರ ತಿಳಿಸುತ್ತದೆ. ವಿದ್ಯುಚ್ಛಕ್ತಿಯ ದರವನ್ನೇ ರೈತರು ಇವತ್ತು ಕಟ್ಟಲಿಕ್ಕಾಗುತ್ತಿಲ್ಲ. ಕೇವಲ ಬಡ್ಡಿ ಮನ್ನಾ ಮಾಡಿದರೆ ಎಷ್ಟು ಹಣವನ್ನು ಮನ್ನಾ ಮಾಡಲಿಕ್ಕೆ ಸಾಧ್ಯವಾಗುತ್ತದೆ? ಆ ಮೊತ್ತ ಬಹಳ ಕಡಿಮೆ. ಅದು ಲೆಕ್ಕಕ್ಕೇ ಬರುವುದಿಲ್ಲ, ಆದ್ದರಿಂದ ಈ ಬರದ ಕಾಲದಲ್ಲಿ ಕೇವಲ ಬಡ್ಡಿಯನ್ನು ಮಾತ್ರ ಮನ್ನಾ ಮಾಡಿದರೆ ಸಾಕಾಗಲಿಕ್ಕಿಲ್ಲ. ಅದಕ್ಕೋಸ್ಕರ ಸಂಪೂರ್ಣವಾಗಿ ಮನ್ನಾ ಮಾಡಲಿಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ. ಮಾನ್ಯ ಮೀನುಗಾರಿಕಾ ಸಚಿವರು ಸದನದಲ್ಲಿ ಇರುವುದರಿಂದ ಆ ವಿಷಯದ ಬಗ್ಗೆ ಈಗ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಭಾಪತಿಯವರು ಆ ವಿಚಾರದ ಬಗ್ಗೆ ಕೊನೆಯಲ್ಲಿ ಹೇಳಿದರು. ನಾನು ಆ ಬಗ್ಗೆ ಮೊದಲೇ ಹೇಳಿ ಬಿಡುತ್ತೇನೆ. ಈ ಮೀನುಗಾರಿಕಾ ಇಲಾಖೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡಿದೆ ಎಂದು ಹೇಳಿದರು. ನಾನು ಪತ್ರಿಕೆಗಳಲ್ಲಿ ಓದಿದ ಪ್ರಕಾರ ಕೇವಲ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ ಎಂದು ಅವರು ಹೇಳಿದ್ದಾರೆ. ನಿನ್ನೆ ದಿವಸ ಸಹ ಒಬ್ಬ ಸಚಿವರು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ ಎಂದು ಹೇಳಿದರು. ಯಾವ ಸರ್ಕಾರಕ್ಕೆ ಅವರು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ? ಅವರು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೋ ಅಥವಾ ಬೇರೆ ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೋ ಎಂಬುದು ನನಗೆ ಗೊತ್ತಾಗಲಿಲ್ಲ. ಮಂತ್ರಿಗಳೇ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದೇನೆ ಎಂದರೆ, ಅದು ಯಾವ ಸರ್ಕಾರ ಎಂದು ಅವರು ಹೇಳಬೇಕಾಗುತ್ತದೆ. ರಾಜ್ಯ ಸರ್ಕಾರ ಎಂದರೆ ಅವರೇ ಸರ್ಕಾರ. ಮಂತ್ರಿಗಳೇ ಸರ್ಕಾರ. ಅದನ್ನು ಇಲ್ಲಿ ಹೇಳಬಯಸುತ್ತೇನೆ. ಇನ್ನು ಮತ್ಸಾಶ್ರಯ ಯೋಜನೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ರೂಪಿಸಿದ ಕಾರ್ಯಕ್ರಮಗಳು ಪೆಂಡಿಂಗ್ ಇವೆ. ನಮ್ಮಲ್ಲಿ 30 ಮನೆಗಳ ನಿರ್ಮಾಣಕ್ಕೆ ಒಂದು ಆದೇಶವನ್ನು ಕೊಟ್ಟು ನಾಲ್ಕು ವರ್ಷಗಳಾಯಿತು. ಅದಕ್ಕೆ ಹುಡ್ಕೋದಿಂದ ಹಣ ಬರಲಿಲ್ಲ. Government guarantee ಅನ್ನು ಕೊಟ್ಟಿರಲಿಲ್ಲವಾದ್ದರಿಂದ ಹುಡ್ಕೋದಿಂದ ಹಣ ಬಂದಿರಲಿಲ್ಲ. ಇತ್ತೀಚೆಗೆ Government ಅದಕ್ಕೆ guarantee ಅನ್ನು ಕೊಟ್ಟಿದ್ದು, ಈಗ ಹಣ ಬಿಡುಗಡೆಯಾಗಿದೆ ಎಂದು ಮೊನ್ನೆ ಸಭೆಯಲ್ಲಿ ಹೇಳಿದರು. ಮೂರು ವರ್ಷಗಳ ಕಾಲ Government ಏಕೆ guarantee ಅನ್ನು ಕೊಡಲಿಕ್ಕಾಗಲಿಲ್ಲ? ಮೂರು ವರ್ಷದ ಕೆಳಗಿನ ಆದೇಶಕ್ಕೆ ಇವತ್ತು ಕೊಡುವುದಾದರೆ, ಈ ಅವಧಿಯಲ್ಲಿ ಎಷ್ಟು ಮನೆಗಳನ್ನು ಕೊಟ್ಟಿದ್ದಾರೆ ಎಂದು ನಾವೊಂದು ಲೆಕ್ಕ ಹಾಕಲಿಕ್ಕೆ ಸಾಧ್ಯವಾಗುತ್ತದೆ. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ನಮ್ಮ ಕಾಲದಲ್ಲಿ 13 ಕೋಟಿ ರೂಪಾಯಿಗಳು NCDC ಯಿಂದ ಸ್ಯಾಂಕ್ಷನ್ ಆಗಿದ್ದನ್ನು, ಇತ್ತೀಚೆಗೆ ಕ್ಯಾಬಿನೆಟ್ ಅನುಮೋದನೆ ಕೊಡಬೇಕಾದರೆ, ಇಷ್ಟು ವರ್ಷಗಳ ಕಾಲ ಏಕೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ನಾನು ಮಾನ್ಯ ಮೀನುಗಾರಿಕಾ ಸಚಿವರನ್ನು ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ಹೆಚ್ಚಿನ ನಬಾರ್ಡ್ ವರ್ಕ್ ಬಗ್ಗೆ ಮಾನ್ಯ ಸಭಾಪತಿಯವರು ಮೊನ್ನೆ ಪ್ರಶ್ನೆಯೊಂದನ್ನು ಕೇಳಿದಾಗ ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಟ್ಟರು. 1998-99ರಲ್ಲಿ ಸ್ಯಾಂಕ್ಷನ್ ಆದಂತಹ ನಬಾರ್ಡ್ ಯೋಜನೆಯ ಕಾಮಗಾರಿಗಳನ್ನು

ಇವತ್ತಿನವರೆಗೂ ಸಂಪೂರ್ಣಗೊಳಿಸಿಲ್ಲ. ಹಿಂದೆ ಸ್ಯಾಂಕ್ಷನ್ ಆದಂತಹ ಕಾಮಗಾರಿಗಳನ್ನು ತಡೆ ಹಿಡಿಯುವ ಸಲುವಾಗಿ ತಾವು ಇದನ್ನು ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ಅದನ್ನು ತಡೆಯಲಿಕ್ಕೋಸ್ಕರ, ಪ್ರಾಯಶ: ನನ್ನ ಕ್ಷೇತ್ರದಲ್ಲಿ ಇದ್ದುದ್ದನ್ನು ಕ್ಯಾನಲ್ಸ್ ಮಾಡಿಸಲಿಕ್ಕೋಸ್ಕರ ಉಳಿದೆಲ್ಲಾ ಕಾಮಗಾರಿಗಳಿಗೆ ತಡೆಯಾಗಿರಬಹುದು. ಹನ್ನೊಂದು ಕೋಟಿ ರೂಪಾಯಿ ಎಸ್ಕಲೇಷನ್ ಏಕೆ ಖರ್ಚಾಯಿತು ಎಂದು ಸದನಕ್ಕೆ ಹೇಳುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು. ತಂಗುದಾಣಗಳು ಸ್ಯಾಂಕ್ಷನ್ ಆಗಿ ಇಷ್ಟು ವರ್ಷಗಳಾದರೂ ಕೆಲವು ಪ್ರಾರಂಭದ ಹಂತದಲ್ಲಿವೆ, ಕೆಲವು ಇನ್ನು ಪ್ರಾರಂಭವೇ ಆಗಿಲ್ಲ. ಮೀನುಗಾರಿಕೆ ಇಲಾಖೆ ಏಕೆ ಸ್ವಲ್ಪ ನಿಧಾನ ಗತಿಯಲ್ಲಿ ಕೆಲಸ ಮಾಡುತ್ತಿದೆ? ಆದಷ್ಟು ಬೇಗ ಆ ಕೆಲಸಗಳನ್ನು ಏತಕ್ಕಾಗಿ ಮಾಡುವುದಕ್ಕಾಗುತ್ತಿಲ್ಲ? ಅದೇ ರೀತಿ ಆಂದಳ್ಳಿ ಕೆಲಸ ಪ್ರಾರಂಭ ಮಾಡಲಿಲ್ಲ, ಕಾರವಾರದ ಎಕ್ಸ್‌ಟೆನ್‌ಷನ್ ವರ್ಕ್, ಮಂಗಳೂರಿನ ವರ್ಕ್ ಈಗ ಪ್ರಾರಂಭವಾಗಿದೆ. ಹೆಜಮಾಡಿ ವರ್ಕ್ ಮುಕ್ತಾಯವಾಗಿದ್ದರೂ ಸಹ ಇನ್ನೂ ಅದರ ಉದ್ಘಾಟನೆಯಾಗಿಲ್ಲ. ಇದನ್ನೆಲ್ಲಾ ಅತಿ ಶೀಘ್ರದಲ್ಲಿ ಮಾಡಬೇಕೆಂದು ಹೇಳುತ್ತಾ, ಡೀಸಲ್ ಸಬ್ಸಿಡಿ ಬಗ್ಗೆ ನಾನು ಮತ್ತು ಮಾನ್ಯ ಸದಸ್ಯರಾದ ಸಭಾಪತಿಯವರು ತಮ್ಮ ಹತ್ತಿರ ಚರ್ಚೆ ಮಾಡಿದ್ದೇವೆ. ಪ್ರತಿ ವರ್ಷ ಅವರು ನಿಮ್ಮ ಬಳಿ ಬಂದು ಡೀಸಲ್ ಮೇಲಿನ ಎಕ್ಸೈಸ್ ಡ್ಯೂಟಿಯನ್ನು ಕಡಿಮೆ ಮಾಡಿ ಎಂದು ಕೇಳುವುದು ಮತ್ತು ನೀವು ಕೊಡುವುದು ಮಾಡಬೇಡಿ. ಇದೊಂದು ಶಾಶ್ವತವಾದ ಕಾರ್ಯಕ್ರಮವಾಗಿ ಮಾಡಿ. ಪ್ರತಿ ವರ್ಷ ಅವರು ಬಂದು ನಿಮ್ಮ ಬಳಿ ಬೇಡಿದಾಗ ಮಾಡುವುದು, ನೀವು ಅದಕ್ಕೆ ನಾವು ಕೊಟ್ಟಿದ್ದೇವೆಂದು ಹೇಳಿ, ಪತ್ರಿಕೆಗಳಲ್ಲಿ ಅಭಿನಂದನೆಗಳನ್ನು ಹಾಕಿಸುವಂತಹ ಕೆಲಸವನ್ನು ನಿಲ್ಲಿಸಿ. ಯಾವುದೇ ಕಾರ್ಯಕ್ರಮವನ್ನು ಮಾಡಿದರೂ ಶಾಶ್ವತವಾದ ಕಾರ್ಯಕ್ರಮವಾಗಿ ಮಾಡಿ. ಪ್ರತಿ ವರ್ಷ ಅವರು ತಮ್ಮ ಬಳಿ ಬಂದು ಬೇಡುವ ವ್ಯವಸ್ಥೆ ಮಾಡಬಾರದು ಎಂದು ಹೇಳುತ್ತಾ, ಸಮುದ್ರ ತಡೆಗೋಡೆ ಬಗ್ಗೆ ಬಹಳ ಚರ್ಚೆಯಾಗಿದೆ. ತಾವು ಫ್ರಾನ್ಸ್‌ಗೆ ಹೋಗಿ ಬಂದಿದ್ದೀರಿ. ಅದರ ಬಗ್ಗೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಆರ್ಟಿಕಲ್ ಬಂದಿದೆ. French connection can prove dearer for the State. ಇದರ ಬಗ್ಗೆ ತಾವು ಅಲ್ಲಿ ಏನು ನೋಡಿ ಬಂದಿದ್ದೀರಿ, ಅದರಿಂದ ಸಮುದ್ರ ಕೊರೆತ ನಿಲ್ಲಿಸಿವುದಕ್ಕೆ ಸಾಧ್ಯವಾಗುತ್ತಾ? ಅದರ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಎಷ್ಟು? ಈಗಿರುವಂತಹ ವ್ಯವಸ್ಥೆಯಲ್ಲಿ ಎಷ್ಟಾಗುತ್ತದೆ? ಇದರ ಬಗ್ಗೆ ಸ್ವಲ್ಪ ಚರ್ಚೆಯಾಗದೆ, ನೇರವಾಗಿ ನೀವು ಹೇಳುವುದು ಕೇವಲ ಒಂದು ಕಡೆಯಲ್ಲಿ ಒಂದು ಕಾಮಕಾರಿಯನ್ನು ಉಳ್ಳಾಲದಲ್ಲಿ ತೆಗೆದುಕೊಂಡಿರಿ, ನೀವು 139 ಕೋಟಿ ರೂ. ಕಾರ್ಯಕ್ರಮ ಎಂದು ಹೇಳುತ್ತೀರಿ, ಹಿಂದಿನ ಸಚಿವರು ಮತ್ತು ಸಂಸದರು ಒಬ್ಬರು ಸ್ಯಾಂಕ್ಷನ್ ಆಗಿದ್ದು 174 ಕೋಟಿ ರೂ.ಗೆ ಕೇಂದ್ರದ ಅನುಮೋದನೆ ಸಿಕ್ಕಿದೆ ಎಂದು ಹೇಳಿದರು, ಇನ್ನೊಬ್ಬರು ಅದರ ನಂತರ ಹೇಳಿಕೆ ಕೊಟ್ಟು ಪ್ರಸ್ತಾವನೆ ಕಳುಹಿಸಿದ್ದೇವೆಂದು ಹೇಳಿದರು. ಆದರೆ ಈಗ ಹೊಸ ಪ್ರಸ್ತಾವನೆ ಬಂದಿದೆ. ಪ್ರಸ್ತಾವನೆಗಳು ಬರುತ್ತಾ ಇರುತ್ತವೆಯೋ ಅಥವಾ ಏನಾದರೂ ಕೆಲಸ ಪ್ರಾರಂಭ ಆಗುತ್ತದೆಯೇ?

ಶ್ರೀ ವಸಂತ್ ವಿ. ಸಾಲಿಯಾನ್ (ಮೀನುಗಾರಿಕೆ ಸಚಿವರು):– ಸಮುದ್ರ ಕೊರತಕ್ಕೆ ಶಾಶ್ವತ ತಡೆಗೋಡೆ ನಿರ್ಮಾಣ ಮಾಡಲಿಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿ ಆರು ತಿಂಗಳು ಹಿಂದೆ ನಾನೇ ಕೇಂದ್ರ ಸರ್ಕಾರಕ್ಕೆ ಹೋಗಿ ನಮ್ಮ ಎಂಪಿಗಳು ಹಾಗೂ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮುಖೇನ ನಾವು ಸಲ್ಲಿಸಿದ್ದೇವೆ, ಅದಕ್ಕೆ ರಿಪ್ಲೈ ಸಹ ಬಂದಿದೆ. ಈ ಶಾಶ್ವತವಾದ ತಡೆಗೋಡೆ ಇದು ಒಂದು 136 ಕೋಟಿ ರೂಪಾಯಿ ಪ್ರಾಜೆಕ್ಟ್ ಅಷ್ಟೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಂತ್ರಿಗಳು ಹೇಳಿಕೆ ಕೊಟ್ಟರೆ ಪರವಾಗಿಲ್ಲ. ಮಂತ್ರಿಗಳ ಪರವಾಗಿ ಬೇರೆ ಜನ ಪ್ರತಿನಿಧಿಗಳೂ ಹೇಳಿಕೆ ಕೊಟ್ಟಾಗ ನಮಗೆ ತೊಂದರೆ ಯಾಗುತ್ತದೆ. ಅದಕ್ಕೋಸ್ಕರ ತಾವು ತಮ್ಮ ಉಳಿದ ಜನಪ್ರತಿನಿಧಿಗಳು ನಮ್ಮ ಜಿಲ್ಲೆಯವರು ಏನಿದ್ದಾರೆ, ಅವರಿಗೆ ನಿಮ್ಮ ಇಲಾಖೆಯ ಬಗ್ಗೆ ಕೇವಲ ನೀವು ಹೇಳಿಕೆ ಕೊಡಬೇಕು ಅಷ್ಟೇ ಹೊರತು ಬೇರೆಯವರು ಹೇಳಿಕೆ ಕೊಡುವ ವ್ಯವಸ್ಥೆ ಇರಬಾರದು. ಏಕೆಂದರೆ ನಮಗೆ ಕನ್‌ಫ್ಯೂಷನ್ ಪ್ರಾರಂಭವಾಗುತ್ತದೆ. ಲೋಕ ಸಭಾ ಸದಸ್ಯರು ರಾಜ್ಯ ಸರ್ಕಾರದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿಕೆ ಕೊಡುವುದು, ಜಿಲ್ಲಾ ಪಂಚಾಯಿತಿಯವರು ಹಾಗೂ ತಾಲ್ಲೂಕು ಪಂಚಾಯಿತಿಯವರು ಹೇಳಿಕೆ ಕೊಡುವಂಥದ್ದು ಆಗಬಾರದು. ತಾವು ನನಗೆ ಬಹಳ ಆತ್ಮೀಯರು ಆದರೆ ಮೊನ್ನೆ ನಡೆದ ಘಟನೆ ಬಗ್ಗೆ ನನಗೆ ಬಹಳ ಬೇಸರವಾಯಿತು. ತಾವೇ ನನಗೆ ಒಂದು ಪತ್ರವನ್ನು ಕಳಿಸಿದ್ದಿರಿ. 24ನೇ ತಾರೀಖು ತಾವು ನನ್ನ ಕ್ಷೇತ್ರದಲ್ಲಿ ವೀಕ್ಷಣೆಗೆ ಬರುತ್ತೇವೆಂದು ಹೇಳಿದ್ದಿರಿ, ನಾನು ಕಾಯುತ್ತಾ ಕೂತಿದ್ದೆ ಆದರೆ ನೀವು ನನಗೆ ಪತ್ರ ಕಳುಹಿಸಿದ ದಿನ ವೀಕ್ಷಣೆಗೆ ಹೋಗಲಿಲ್ಲ ಅದರ ನಂತರದ ದಿವಸ ಹೋಗಿದ್ದೀರಿ. ನಾನು ಬಂದ ದಿವಸ ನೀವು ಬರಲಿಲ್ಲ. ನಾನು ನಿಮಗೆ ಕಾಯುತ್ತಾ ಕುಳಿತುಕೊಳ್ಳುವುದು. ಏಕೆಂದರೆ ಸೌಜನ್ಯಕ್ಕಾದರೂ ಶಾಸಕರನ್ನು ಕರೆದುಕೊಂಡು ಹೋಗುವ ವ್ಯವಸ್ಥೆಯನ್ನು ಮಂತ್ರಿಗಳು ಮಾಡಬೇಕಾಗುತ್ತದೆ. ಅಲ್ಲಿ ಪಕ್ಷ ಸಂಘಟನೆ ಮಾಡುವುದು ಅಲ್ಲಿಯ ಬೇರೆ ಜನ ಪ್ರತಿನಿಧಿಗಳಿಗೆ ಕರೆದುಕೊಡು ಹೋಗುವ ವ್ಯವಸ್ಥೆಯನ್ನು ಇನ್ನು ಮುಂದಾದರೂ ನಿಲ್ಲಿಸಬೇಕೆಂದು ನಾನು ತಮ್ಮ ಹತ್ತಿರ ಕೇಳಿಕೊಳ್ಳುತ್ತೇನೆ, ಏಕೆಂದರೆ, ನಾವು ಜನರ ಮುಂದೆ ಉತ್ತರ ಹೇಳಬೇಕಾಗಿದೆ. ನೀವು ಹೋಗಿ ನಿಮ್ಮ ಶಾಸಕರು ಏನು ಮಾಡಿದ್ದರು, ಮಂತ್ರಿಗಳು ಏನು ಮಾಡಿದ್ದರು ಎಂದು ನೀವು ಪ್ರಶ್ನೆ ಕೇಳಿದಾಗ, ನಾವೇ ಸ್ವತ: ಅಲ್ಲಿದ್ದರೆ ಉತ್ತರ ಕೊಡಲಿಕ್ಕೆ ಸಾಧ್ಯವಾಗುತ್ತಿತ್ತು. ತಾವೂ ಸಹ ಎಲ್ಲಾ ಮಂತ್ರಿಗಳಿಗೆ ತಿಳಿಸಬೇಕು. ಯಾವುದೇ ಕ್ಷೇತ್ರಕ್ಕೆ ಹೋಗಿ ಶಾಸಕರಿಗೆ ವಿಷಯವನ್ನು ತಿಳಿಸಿ ಅವರನ್ನೂ ಕರೆದುಕೊಂಡು ಹೋಗುವ ವ್ಯವಸ್ಥೆ ಇರಬೇಕಾಗುತ್ತದೆ. ಇಲ್ಲದಿದ್ದರೆ ನಾವು ಹೋಗಿ ಒಂದು ಹೇಳಿಕೆ ಕೊಡುವುದು, ಮಂತ್ರಿಗಳು ಹೋದಾಗ ಬೇರೆ ಜನ ಪ್ರತಿನಿಧಿಗಳು ಒಂದು ಹೇಳಿಕೆ ಕೊಡುವುದು, ಈ ರೀತಿಯ ಗೊಂದಲ ನಿರ್ಮಾಣವಾಗುವ ಪರಿಸ್ಥಿತಿ ಉಂಟಾಗಬಾರದು. ಈ ಶಾಸಕರಿಗೆ ಈ ಸರ್ಕಾರ ಬೆಲೆಯೇ ಕೊಡುವುದಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಬಾರದು ಈಗಾಗಲೇ ಸ್ವಲ್ಪ ಗೊಂದಲ ಉಂಟಾಗಿದೆ. ಅದನ್ನು ಹೋಗಲಾಡಿಸುವ ಪ್ರಯತ್ನ ಮಾಡುವುದಕ್ಕೋಸ್ಕರ ತಮ್ಮ ಮುಖೇನ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಸಾಮಾನ್ಯವಾಗಿ ಮಂತ್ರಿಗಳು ಆ ಕ್ಷೇತ್ರ ಶಾಸಕರನ್ನು ಕರೆದುಕೊಂಡು ಹೋಗುವ ಪರಿಪಾಠ ಇದೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಉಪಾಧ್ಯಕ್ಷರೆ, ತಾವು ಹೇಳುವುದು ಸರಿ ಇದೆ. ಯಾರು ಆಡಳಿತ ಪಕ್ಷದ ಶಾಸಕರಿದ್ದಾರೆ ಅವರನ್ನು ಮಾತ್ರ ಕರೆದುಕೊಂಡು ಹೋಗುತ್ತಾರೆ. ಎಲ್ಲಿ ವಿರೋಧ ಪಕ್ಷದ ಶಾಸಕರಿದ್ದಾರೆ ಅಲ್ಲಿ ಅವರನ್ನು ಕರೆದುಕೊಂಡು ಹೋಗುವ ಸಂಪ್ರದಾಯ ಇಲ್ಲ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳ ಕಾಲದಲ್ಲಿ ಆ ಕಾಲದಲ್ಲಿದ್ದ ಯಾವುದೇ ಮಂತ್ರಿಗಳು ಬಂದಾಗ ನಮಗೆ ಪೂರ್ವನಿಯೋಜಿತವಾಗಿ ಫೋನ್ ಮುಖಾಂತರವಾದರೂ ತಿಳಿಸಿ ಆ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ನಮ್ಮನ್ನು ಕರೆದುಕೊಂಡು ಹೋಗುವಂತಹ ಕೆಲಸವನ್ನು ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಕಳೆದ ಮೂರು-ನಾಲ್ಕು ವರ್ಷಗಳ ಹಿಂದೆ ಯಾವುದೇ ಮಂತ್ರಿಗಳು

ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬರುವಾಗ ಕೂಡ ನಮ್ಮ ಗಮನಕ್ಕೆ ಬರದೆ ತಮ್ಮೆಲ್ಲಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಹೋಗುವುದು ರಾಜಾರೋಷವಾಗಿ ನಡೆಯುತ್ತಿದೆ. ಒಂದು ರೀತಿ ಕರ್ನಾಟಕ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ತನ್ನ ಆಡಳಿತ ವ್ಯವಸ್ಥೆಯನ್ನು ಕಾಂಗ್ರೆಸ್ಸೀಕರಣ ಮಾಡುವ ಎಲ್ಲಾ ಪ್ರಯತ್ನಗಳು ಎಲ್ಲಾ ವಿರೋಧ ಪಕ್ಷಗಳವರು ಇರುವ ಕ್ಷೇತ್ರಗಳಲ್ಲಿ ಖಂಡಿತ ನಡೆದಿದೆ ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ. ಅದು ಆಗಬಾರದು.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಎರಡು ತಿಂಗಳ ಹಿಂದೆ ಹೌಸಿಂಗ್ ಮಿನಿಸ್ಟರ್ ಆದ ಶ್ರೀ ಸಗೀರ್ ಅಹಮದ್‌ರವರು ಸರ್ಕಾರಿ ಕಾರ್ಯಕ್ರಮಕ್ಕೋಸ್ಕರ ಒಂದು ಸಭೆಗೆ ಬಂದರು. ಕನಿಷ್ಟ ನನ್ನ ಹೆಸರನ್ನೂ ಕೂಡ ಹಾಕಿಸದೆ ಅಲ್ಲಿ ಸಭೆ ಮಾಡಿಸಿದರು. ಅವರು ಹೇಳಿದ್ದರಿಂದ ನಾನು ಈ ಮಾತು ಹೇಳುತ್ತಿದ್ದೇನೆ. ಪ್ರೋಟೋಕಾಲ್‌ದಲ್ಲಿಯಾ ಕೂಡ ಆ ಶಾಸಕರು ಆಯಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷತೆ ವಹಿಸಬೇಕೆಂದು ಇದೆ. ಪ್ರೋಟೋಕಾಲ್ ಪ್ರಕಾರ ಸರ್ಕಾರದ ಒಂದು ಆಜ್ಞೆಯೇ ಇದೆ. ಆದರೆ ಮಂತ್ರಿಗಳು ಏನೂ ನೋಡುವುದಿಲ್ಲ. ಅಲ್ಲಿ ಒಂದು ಕಾಂಗ್ರೆಸ್ ಮೀಟಿಂಗ್ ಆಗುತ್ತದೆ ವಿನ: ಅದು ಒಂದು ಸಭೆ ಆಗುವುದಿಲ್ಲ. ಅದೂ ಒಂದು ವಕ್ಫ್ ಬೋರ್ಡ್ ಸಮಾರಂಭ. ಈ ತರಹ ಆದರೆ ಏನು ಹೇಳುವುದು? ನಮ್ಮ ಹೆಸರು ಹಾಕಲಿಲ್ಲ ಎಂದು ಹೇಳುವಂತಹ ಮಟ್ಟಕ್ಕೆ ನಾವಂತೂ ಹೋಗುವುದಿಲ್ಲ. ಅವರೂ ಕೂಡ ನಮ್ಮ ಇತಿ ಮಿತಿಯನ್ನೂ ಕೂಡ ಅರ್ಥ ಮಾಡಿಕೊಳ್ಳದೆ. ಮಂತ್ರಿಗಳು ಸಹ ಮಾಡುತ್ತಾರೆಂದರೆ ನಾವು ಇನ್ನೇನು ಹೇಳುವುದು? ಬಹಳ ನೊಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಹೆಸರು ಹಾಕಿಕೊಳ್ಳಿ, ನಾವು ಬರಬೇಕು, ಎನ್ನುವ ಇಚ್ಛೆ ನಮಗಿಲ್ಲ. ಆದರೆ ಈ ತರಹ ಸರ್ಕಾರದ ಆಜ್ಞೆ ಇದ್ದರೂ ಕೂಡ ಈ ಪರಿಸ್ಥಿತಿ ನಿರ್ಮಾಣ ಮಾಡಿದರೆ ಹೇಗೆ ಮಾಡುವುದು? ತಾವು ಸರ್ಕಾರಕ್ಕೆ ಒಂದು ಛೀಮಾರಿ ಆದರೂ ಹಾಕಬೇಕು.

ಶ್ರೀ ಡಿ.ವಿ. ಸದಾನಂದಗೌಡ:- ಶ್ರೀ ಶ್ರೀನಿವಾಸಗೌಡರ ಕೊರೆತ ಏನು ಇದೆ, ಅದು ಸಮುದ್ರ ಕೊರೆತದಷ್ಟೇ ಭೀಕರ. ಇದಕ್ಕೆ ತಡೆಗೋಡೆ ಮಾಡುವ ಹಾಗಿಲ್ಲ ಏನಿಲ್ಲ, ಸಮುದ್ರಕ್ಕೆ ಕಲ್ಲು ಹಾಕಿದ ಹಾಗೆ ಕೂಡ ತಮ್ಮ ಮುಂದೆ ಇಲ್ಲಿ ನಮ್ಮ ವೇದನೆ ಹೇಳಿಕೊಳ್ಳುವುದು. ಸರ್ಕಾರ ಕಳೆದ ಸಾರಿ ಸುತ್ತೋಲೆಗಳನ್ನು ಹೊರಡಿಸಿದೆ, ಈ ಸುತ್ತೋಲೆಯನ್ನು ಅನುಷ್ಠಾನ ಮಾಡುತ್ತೇವೆ ಎಂದೆಲ್ಲ ಹೇಳಿದ್ದಾರೆ. ಏಕೆ ಬೇಕು ಆ ಸುತ್ತೋಲೆಗಳು, ಆ ಸುತ್ತೋಲೆಗಳನ್ನು ಹರಿದು ಬಿಸಾಡಬೇಕು. ಸುತ್ತೋಲೆಗಳು ಕೇವಲ ಕಡತದಲ್ಲಿರುವುದು ಆಗಬಾರದು. ಈ ನಮ್ಮ ಕೊರೆತ ಏನಿದೇ ಅದು ಸಮುದ್ರದ ಕೊರೆತ ಇದ್ದ ಹಾಗೆ. ಕಲ್ಲು ಹಾಕಿದರೆ ಆ ಕಲ್ಲು ಎಲ್ಲುಂಟು ಹೇಗುಂಟು ಎಂದು ಗೊತ್ತಾಗದ ಪರಿಸ್ಥಿತಿ. ನಮ್ಮ ವೇದನೆಗಳೂ ಕೂಡ ಹಾಗೆ.

ಉಪಾಧ್ಯಕ್ಷರು:- ನಿಮ್ಮನ್ನು ಕರೆದು ಕೊಂಡು ಹೊಗುವ ವ್ಯವಸ್ಥೆ ಮಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಉಪಾಧ್ಯಕ್ಷರೆ, ಕೆಲವೊಮ್ಮೆ ಸಚಿವರ ಜೊತೆ ಹೋಗದೆ ಇರುವುದು ಆರೋಗ್ಯಕರವೆಂದು ನನಗನ್ನಿಸುತ್ತದೆ.

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ ಸಚಿವರು):- ಹೆಗಡೆಯವರೇ, ತಾವು ಕೂಡ ಸಚಿವರಾಗಿದ್ದವರು. ಕೆಲವರು ಸಚಿವರ ಜೊತೆ ಬರಬೇಕೆಂದರೆ ಸಂತೋಷಪಡುತ್ತಾರೆ. ನೀವು ಏಕೆ ಆ ರೀತಿ ಹೇಳುತ್ತೀರಿ? ನಾವು ಯಾರೂ ಆ ರೀತಿ ಮಾಡುತ್ತಿಲ್ಲ, ಮಂತ್ರಿಗಳಾಗಿರತಕ್ಕಂತಹವರು ಮುಂಚಿತವಾಗಿ ಎಲ್ಲರಿಗೂ ಪತ್ರ ಕಳುಹಿಸಿ ಹೋಗುತ್ತೇವೆ. ಎಲ್ಲೋ ಅಪ್ಪಿ ತಪ್ಪಿ ಬಿಟ್ಟು ಹೋಗಿದ್ದರೆ ಜವಾಬ್ದಾರಿ ಹೊರವುದಕ್ಕಾಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಉಪಾಧ್ಯಕ್ಷರೆ, ಇವರೇ ಉಸ್ತುವಾರಿ ಸಚಿವರಾಗಿದ್ದರು. ಕೆಲವೊಂದು ಕಡೆ ಬರುವಾಗ ಇವರು ನಮ್ಮನ್ನು ಬಿಟ್ಟು ಬಂದಿದ್ದಾರೆ. ಇಲ್ಲವೆಂದು ಅಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ಸಂದರ್ಭದಲ್ಲಿ ಅವರ ಕ್ಷೇತ್ರದ ಯಾವ ಕೆಲಸ ಉದ್ಘಾಟನೆ ಮಾಡಬೇಕಾದರೂ ಅವರನ್ನು ಕೇಳದೆ ಅವರ ಕ್ಷೇತ್ರಕ್ಕೇ ಹೋಗುತ್ತಿರಲಿಲ್ಲ. ಅವರಿಗೆ ಕೇಳಿದ ಮೇಲೆ ಹೋಗುತ್ತಿದೆ.

ಶ್ರೀ ಯು.ಆರ್. ಸಭಾಪತಿ:- ಸಭೆ ಸಮಾರಂಭದ ವಿಷಯಗಳ ಬಗ್ಗೆ ನಾನು ಹೇಳುತ್ತಿಲ್ಲ. ಕೆಲವೊಮ್ಮೆ ಮಂತ್ರಿಗಳು ಬರುವಾಗ ನಾವು ಇರುವುದಿಲ್ಲ, ಅಥವಾ ನೀವು ಇರುವುದಿಲ್ಲ, ಅಂತಹ ಕೆಲವೊಂದು ಸಂದರ್ಭಗಳು ಆಗುತ್ತವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಅವರು ಇರಲಿಲ್ಲವೆಂದರೆ ಐಬಿಗೆ ಹೋಗುತ್ತಿದ್ದೆ. ಒಳನಾಡು ಜಲ ಸಾರಿಗೆ ಬಗ್ಗೆ ಮಾನ್ಯ ಸಚಿವರು ಒಂದು ಹೇಳಿಕೆ ಕೊಟ್ಟಿದ್ದರು. ಅದರ ಅಭಿವೃದ್ಧಿಗೆ ಕೇಂದ್ರ ಸರ್ಕಾರಕ್ಕೆ 500 ಕೋಟಿ ರೂಪಾಯಿ ಪ್ರಸ್ತಾವನೆಯನ್ನು ಕೊಟ್ಟಿದ್ದೇನೆಂದು ಹೇಳಿದರು. ಪ್ರಾಯಶ: 500 ಕೋಟಿರೂಯಲ್ಲಿ ಎಷ್ಟಾದರೂ ಸಿಕ್ಕಿದೆಯಾ? ಏಕೆಂದರೆ, ಈಗಾಗಲೇ ಇದ್ದಂತಹ ವ್ಯವಸ್ಥೆಯಿಂದ ಗಲಾಟೆ ಪ್ರಾರಂಭವಾಗಿದೆ. ತಾವು ಇದ್ದಂತಹ ದರವನ್ನು ಹೆಚ್ಚು ಮಾಡಿದ್ದೀರಿ. ನಾವೆಯಲ್ಲಿ ದಾಟುವಂಥದ್ದು, ಈಗ ಹಂಗರಕಟ್ಟೆಯಿಂದ ಕೋಡಿಬಂಗೇರಿಯವರೆಗೆ ಹೋಗುವುದಕ್ಕೆ ಒಂದು ರೂಪಾಯಿ ಇದ್ದುದು ನಾಲ್ಕು ರೂಪಾಯಿ ಮಾಡಿದ್ದೀರಿ.

ಶ್ರೀ ವಸಂತ್ ವಿ. ಸಾಲಿಯಾನ:- ಅದನ್ನು ತಡೆ ಹಿಡಿದಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಅದನ್ನು ಪುನ: ಒಂದು ರೂಪಾಯಿಎಂದು ತಾತ್ಕಾಲಿಕವಾಗಿ ಕಡಿಮೆ ಮಾಡಿದ್ದೀರಿ. ಶಾಶ್ವತವಾಗಿ ಅದನ್ನು ಒಂದು ರೂಪಾಯಿಗೆ ಇಳಿಸಬೇಕು. ಏಕೆಂದರೆ, ಇದು ಲಾಭದಾಯಕವಾಗಿ ನಡೆಸುವಂತಹ ವ್ಯವಸ್ಥೆ ಅಲ್ಲ. ಅಲ್ಲಿ ಬಡವರು ಶಾಲಾ ಮಕ್ಕಳು ದಿನನಿತ್ಯ ಆಚ ಈಚೆ ಹೋಗುವಂತಹ ವ್ಯವಸ್ಥೆಗೋಸ್ಕರ ಇಟ್ಟಿರುವಂಥದ್ದು. ನೀವು ಇದನ್ನು ಶಾಶ್ವತವಾಗಿ ಒಂದು ರೂಪಾಯಿಗೆ ಇಳಿಸುವಂತಹ ವ್ಯವಸ್ಥೆ ಮಾಡಬೇಕು. ಹಸನ್ನುಖಿಯಲ್ಲಿಯೂ ಅದೇ ತರಹ ಇರಬೇಕು. ಹಿಂದೊಮ್ಮೆ ಮಾನ್ಯ ಕಾಗೋಡು ತಿಮ್ಮಪ್ಪನವರು ವಿರೋಧ ಪಕ್ಷದಲ್ಲಿದ್ದಾಗ ನನ್ನ ಬಳಿ ಬಂದು ಕೂತು ಚರ್ಚೆ ಮಾಡಿ ಜಾಸ್ತಿ ಮಾಡಬಾರದು ಎಂದು ನಾನು ತೀರ್ಮಾನ ತೆಗೆದುಕೊಂಡಿದ್ದೆವು. ಆದ್ದರಿಂದ ದಯವಿಟ್ಟು ಈ ನಾವೆಗಳ ದರವನ್ನು ಜಾಸ್ತಿ ಮಾಡಬಾರದು ಎಂದು ತಮ್ಮ ಹತ್ತಿರ ಕೇಳಿಕೊಳ್ಳುತ್ತಾ ಕೊಡೇ ಬಂಗೇರಿಗೆ ಹಿಂದೆ ಎಂಟು ಕೋಟಿ ರೂಪಾಯಿ ಪ್ರಸ್ತಾವನೆ ಇತ್ತು, ಅದನ್ನು ಈಗ ಕಡಿತ ಮಾಡಿ ಮೂರು ಕೋಟಿ ರೂಪಾಯಿಗೆ ಇಳಿಸಿದರು ಅದು ಸಾಕಾಗುತ್ತಾ? ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಅಲ್ಲಿ ನಾಡ ದೋಣಿಯವರಿಗೆ ಬೇಕಾಗುವಂಥದ್ದು ಒಂದೇ ಒಂದು ಬಂದರು ಕೊಡೇರಿ ಬಂದರು.

4.20 ಪಿಎಂ

ಏಕೆಂದರೆ ಅಷ್ಟು ಹಣ ಅದಕ್ಕೆ ಸಾಕಾಗುವುದಿಲ್ಲ. ಆದಕಾರಣ ಈ ಪ್ರಸ್ತಾವನೆ ಬಗ್ಗೆ ಆದಷ್ಟು ಬೇಗ ಪುನರ್ ಪರಿಶೀಲನೆಯನ್ನು ಮಾಡಬೇಕು. ಏಕೆಂದರೆ ಪ್ರಸ್ತಾವನೆಯನ್ನು ಬದಲಾವಣೆ ಮಾಡುತ್ತಾ ಹೋದರೆ ಕಾಮಗಾರಿ ತಡವಾಗುತ್ತದೆ. ಆದ್ದರಿಂದ ಅತಿ ಶೀಘ್ರದಲ್ಲಿ ಪುನರ್ ಪರಿಶೀಲನೆ ಮಾಡಬೇಕು. ಇದು ಒಂದು ವಿಚಾರ. ನಾನು ಈಗಾಗಲೇ ಹೇಳಿದ ಹಾಗೆ ಯಾವ ವರ್ಕ್ ಸ್ಯಾಂಕ್ಷನ್ ಆಗಿರುವುದನ್ನು ಕ್ಯಾನ್ಸಲ್ ಮಾಡಿ ಪುನ: ನೀವು ಸ್ಯಾಂಕ್ಷನ್ ಮಾಡಿದ ಹಾಗೆ ಮಾಡುವಂಥ

ಕೆಲಸವನ್ನು ಮಾಡುವುದಕ್ಕೆ ತಾವು ಕೈ ಹಾಕಬೇಡಿ. ಹಿಂದೆ ಏನಾಗಿದೆಯೋ ಆಗಲಿ. ಇನ್ನು ಮುಂದೆ ಆ ರೀತಿ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ತಾವು ಸದನದಲ್ಲಿ ಉತ್ತರವನ್ನು ಕೊಟ್ಟಿರುವಂಥದ್ದನ್ನು ನಾನು ನೋಡಿದೆ. ಒಟ್ಟು ಮೀನುಗಾರಿಕೆ ರಸ್ತೆಗಳು ಎಷ್ಟಿವೆ ಎನ್ನುವ ಬಗ್ಗೆ ಹೇಳಿದ್ದೀರಿ. ಆದರೆ ಮೀನುಗಾರಿಕೆ ರಸ್ತೆಗಳನ್ನು ಡಾಂಬರೀಕರಣ ಪ್ರತಿ ವರ್ಷ ಮಾಡಿ ದುರಸ್ತಿ ಮಾಡುವಂಥದ್ದರ ಬಗ್ಗೆ ಹೇಳುವುದೇನೆಂದರೆ ಆ ರಸ್ತೆಗಳಲ್ಲಿ ಮಳೆಗಾಲದಲ್ಲಿ ಕಲ್ಲು ತುಂಬಿನ ಲೋಡೆಡ್ ಲಾರಿಗಳು ಹೋಗಿ ಹಾಳಾಗುವಂಥದ್ದು ಹೆಚ್ಚಾಗಿರುತ್ತದೆ. ಆದ್ದರಿಂದ ಶಾಶ್ವತವಾಗಿ ಎಲ್ಲಿ ಪ್ರತಿ ವರ್ಷ ಮೀನುಗಾರಿಕೆ ರಸ್ತೆಗಳು ಹಾಳಾಗುತ್ತದೆಯೋ ಅಲ್ಲಿ ಕಾಂಕ್ರೀಟ್‌ಕರಣ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಕಳೆದ ಕೆಲವು ವರ್ಷದಿಂದ ಈ ರಸ್ತೆಗಳ ದುರಸ್ತಿಗೋಸ್ಕರ ಸ್ವಲ್ಪ ಹಣ ಬಂದಿರುವುದನ್ನು ಬಿಟ್ಟರೆ ಶಾಶ್ವತವಾಗಿ ರಸ್ತೆಯನ್ನು ಮಾಡುವುದಕ್ಕೆ ನಿಮ್ಮ ಮೀನುಗಾರಿಕಾ ಇಲಾಖೆಯಿಂದ ಹಣ ಬರಲಿಲ್ಲ. ಶಾಶ್ವತ ತಡೆಗೋಡೆಯನ್ನು ಮಾಡುವುದಕ್ಕೆ ನಾಲ್ಕು ವರ್ಷದಿಂದ ಒಂದು ವರ್ಕ್ ಕೂಡ ಸ್ಯಾಂಕ್ಷನ್ ಆಗಲಿಲ್ಲ. ಅದಕ್ಕೋಸ್ಕರ ನಾನು ಹೇಳುವುದೇನೆಂದರ ನೀವು ತಾತ್ಕಾಲಿಕ ಕೆಲಸವನ್ನು ಮಾಡುವುದಕ್ಕಿಂತ ಶಾಶ್ವತವಾದ ಕೆಲಸವನ್ನು ಆದಷ್ಟು ಹೆಚ್ಚಿಗೆ ಮಾಡಿಸುವ ಪ್ರಯತ್ನವನ್ನು ಮಾಡಬೇಕು.

ಶ್ರೀ ವಸಂತ ವಿ. ಸಾಲಿಯಾನ:- ಮಾನ್ಯ ಉಪಾಧ್ಯಕ್ಷರೆ, ಮೀನುಗಾರಿಕಾ ರಸ್ತೆಗಳ ಬಗ್ಗೆ ಮಾನ್ಯ ಸಭಾಪತಿಯವರಿಗೆ ಉತ್ತರವನ್ನು ಕೊಟ್ಟಿದ್ದೆ. ಇವೊತ್ತು ರಾಜ್ಯದಲ್ಲಿ ಸುಮಾರು 7 ಕೋಟಿ ರೂಪಾಯಿಗಳ ಮೀನುಗಾರಿಕಾ ರಸ್ತೆಗಳ ಕೆಲಸವನ್ನು ಮಾಡಿಸುತ್ತಿದ್ದೇವೆ. ಸುಮಾರು ಶೇಕಡ 80 ರಷ್ಟು ಕಾಮಗಾರಿ ಕೆಲಸ ಈಗಾಗಲೇ ಮುಗಿದಿದೆ. ಬ್ರಿಡ್ಜ್‌ಸ್ ಇರಬಹುದು ನಬಾರ್ಡ್‌ನಿಂದ, ನಂಬರ್ 5, ನಂಬರ್ 6, ನಂಬರ್ 7 ಮತ್ತು ನಂಬರ್ 8, ಈಗಾಗಲೇ ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿ ಮೀನುಗಾರಿಕೆ ರಸ್ತೆಗೆ ಏಳು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ರಿಪೇರಿ ಬಗ್ಗೆ ನಾನು ಹೇಳಬಯಸುವುದೇನೆಂದರೆ ಈಗೇನು ತಾವು ಹೇಳಿದಿರೋ ಅದು ನಿಜ. ರಿಪೇರಿ ಬಗ್ಗೆ ಈಗಾಗಲೇ ಮೊನ್ನೆ ನಾನು ಮುಖ್ಯಮಂತ್ರಿಗಳಿಗೆ ಮೂರು ಕೋಟಿ ರೂಪಾಯಿಗಳ ಮೀನುಗಾರಿಕಾ ರಸ್ತೆಗಳ ರಿಪೇರಿಗೋಸ್ಕರ ಒಂದು ಲಿಸ್ಟ್‌ನ್ನು ಕರ್ನಾಟಕ ರಾಜ್ಯದ ಮೂರು ಕರಾವಳಿ ಜಿಲ್ಲೆಯಲ್ಲಿ ರಿಪೇರಿಗೋಸ್ಕರವೇ ನಾನು ಈಗಾಗಲೇ ಒಂದು ರಿಪೋರ್ಟ್‌ನ್ನು ಮಾಡಿಕೊಟ್ಟಿದ್ದೇನೆ. ಅದರಲ್ಲಿ ಎಲ್ಲಾ ಮೀನುಗಾರಿಕಾ ರಸ್ತೆಗಳು ಇವೆ, ಈಗ ತಮಗೆ ತಿಳಿದ ಹಾಗೆ 1993 ನೇ ಇಸವಿಯಿಂದ ಇಲ್ಲಿಯವರೆವಿಗೆ ಮೀನುಗಾರಿಕಾ ರಸ್ತೆಗಳಿಗಾಗಿ ಹಣ ಬಿಡುಗಡೆ ಆಗಿರಲಿಲ್ಲ. ತಾವು ಮಂತ್ರಿಗಳಾಗಿದ್ದಾಗ ಮುಖ್ಯಮಂತ್ರಿಗಳನ್ನು ಕೇಳಿ ತಾವು ಬಿಡುಗಡೆ ಮಾಡುತ್ತೀರಿ, ಅಥವಾ ರಮಾನಾಥ್ ರೈ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಕೇಳಿ ಸ್ವಲ್ಪ ಹಣ ಬಿಡುಗಡೆ ಮಾಡುವಂಥದ್ದು, ನಾನು ಈಗ ಮುಖ್ಯಮಂತ್ರಿಗಳನ್ನು ಬೇಡಿ ಕಾಡಿ ಸ್ವಲ್ಪ ಹಣ ಬಿಡುಗಡೆ ಮಾಡುವಂಥದ್ದು. ಆದರೆ ಯಾವ ರೀತಿಯಾಗಿ ಪಿ.ಡಬ್ಲ್ಯೂಡಿ. ರಸ್ತೆಗೆ ಅಥವಾ ಜಿಲ್ಲಾ ಪಂಚಾಯತಿ ರಸ್ತೆಗೆ ರಿಪೇರಿ ಮಾಡುವುದಕ್ಕೆ ಶಾಶ್ವತವಾಗಿ ಹಣವನ್ನು ಇಡುತ್ತೇವೆಯೋ ಅದೇ ರೀತಿಯಾಗಿ ಮೀನುಗಾರಿಕೆ ರಸ್ತೆಗೂ ಸಹ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾವು ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ಹಿಂದೆ ನಬಾರ್ಡ್‌ನಲ್ಲಿ ಆದಂಥದ್ದನ್ನು ಬಿಡಿ. ಈಗ ಏನನ್ನು ಮಾಡಬೇಕು ಎಂದು ಆಲೋಚನೆಯನ್ನು ಮಾಡಿ. ಏಕೆಂದರೆ ಹಿಂದೆ ಆದದ್ದನ್ನೆಲ್ಲಾ ಲೆಕ್ಕ

ತೆಗೆದುಕೊಳ್ಳುತ್ತಾ ಹೋದರೆ ಬರೆ ಕೋಟಿಗಟ್ಟಲೆ ಆಗಿದೆ ಮಾತ್ರ ಹೇಳುವುದನ್ನು ಬಿಟ್ಟರೆ ಕೆಲಸ ಆಗುವುದಿಲ್ಲ. ಆದಕಾರಣ ಇವೊತ್ತು ನಮಗೇನು ಬೇಕಾಗಿದೆ ಅದರ ಬಗ್ಗೆ ಕಾರ್ಯ ಆಗಬೇಕು. ಪಿ.ಡಬ್ಲ್ಯೂ.ಡಿ. ರಸ್ತೆಗೆ ಹೇಗೆ ಹಣವನ್ನು ಇಡುತ್ತಾರೆ ಅದೇ ರೀತಿಯಲ್ಲಿ ಮೀನುಗಾರಿಕಾ ರಸ್ತೆಗೆ ವರ್ಷಕ್ಕೆ ಎಷ್ಟು ಹಣ ಬೇಕಾಗುತ್ತದೋ ಅಷ್ಟು ಅನುದಾನವನ್ನು ತೆಗೆಸಿಡುವುದಕ್ಕೆ ಶಾಶ್ವತ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇನ್ನು ಈ ಮೀನುಗಾರಿಕಾ ರಸ್ತೆಯನ್ನು ಮರಳಿನ ಮೇಲೆ ಮಾಡುವುದರಿಂದ ಅದನ್ನು ಉಳಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಅದಕ್ಕೆ ಅಲ್ಲಿ ಆದಷ್ಟು ಹೆಚ್ಚು ಕಾಂಕ್ರೀಟ್‌ನ್ನು ಮಾಡಿಸುವಂಥ ವ್ಯವಸ್ಥೆ ಮಾಡಬೇಕಾಗುತ್ತದೆ.

ಇನ್ನು ಸಕ್ಕರೆ ಬಗ್ಗೆ ಹೇಳುವುದೇನೆಂದರೆ, ಈಗ ಇಲ್ಲಿ ಸಕ್ಕರೆ ಸಚಿವರು ಇಲ್ಲಿಯೇ ಇದ್ದಾರೆ. ಈಗ 1400 ಕೋಟಿ ರೂಪಾಯಿಗಳಷ್ಟು ಸಕ್ಕರೆ ದಾಸ್ತಾನು ಇದೆಯೆಂದು ಮೊನ್ನೆ ತಾವು ಹೇಳಿದ್ದೀರಿ. ತಾವು ಹೇಳಿಕೆ ಕೊಡುವಾಗ ಗೋಡೌನ್‌ನ್ನು ಆಕ್ಷನ್ ಮಾಡುತ್ತೇವೆ ಎಂದಿರಿ. ಗೋಡೌನ್‌ನ್ನು ಆಕ್ಷನ್ನು ಮಾಡಿದರೆ ಸಕ್ಕರೆ ಸಿಕ್ಕುವುದಿಲ್ಲ. ಏಕೆಂದರೆ ಇದೆಲ್ಲಾ ಪ್ಲೆಡ್ಜ್ ಆದ ಸಕ್ಕರೆ. ಅದೆಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳು ಮತ್ತು ಬೇರೆ ಬೇರೆ ಸಹಕಾರಿ ಸಂಘಗಳಿಗೆ ಹೋಗುತ್ತದೆ. ಆದ್ದರಿಂದ ನೀವು ಗೋದಾಮಿನಲ್ಲಿದ್ದ ಸಕ್ಕರೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ. ಬೇರೆ ವ್ಯವಸ್ಥೆಯನ್ನು ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಗೆ, ರೈತರಿಗೆ ಕೊಡಬೇಕಾದ ಬಾಕಿ ಹಣಕ್ಕೆ ಮಾಡಬೇಕಾಗುತ್ತದೆ. ಏನು ವ್ಯವಸ್ಥೆಯನ್ನು ಮಾಡುತ್ತೀರಿ? ಏಕೆಂದರೆ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ 1 ಕೋಟಿ 92 ಲಕ್ಷ ರೂಪಾಯಿಗಳನ್ನು ರೈತರಿಗೆ ಕೊಡಬೇಕಾದ ಬಾಕಿ ಹಣಕ್ಕೆ ಎಂದು ನೀವು ಕೊಟ್ಟಿರಿ. ಅದನ್ನು ಕಬ್ಬು ನುರಿಯುವುದಕ್ಕೂ ಸ್ವಲ್ಪ ಖರ್ಚಿನ ವ್ಯವಸ್ಥೆಯನ್ನು ಮಾಡಿದ್ದೀರಿ. ಆದರೆ ಉಳಿದ ಹಣವನ್ನು ಯಾವ ರೀತಿಯಲ್ಲಿ ಕೊಡುವುದಕ್ಕೆ ಆಗುತ್ತದೆ? ಇದು ಕೇವಲ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಪ್ರಶ್ನೆಯಲ್ಲ. ಇಡೀ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ಇದೆ. ಈ ಬಗ್ಗೆ ತಾವು ಒಂದು ಸಮಿತಿಯನ್ನು ಮಾಡಿದ್ದೀರಿ. ಆ ಸಮಿತಿ ಮುಖಾಂತರ ಸಮಸ್ಯೆ ಪರಿಹಾರ ಮಾಡಬೇಕು. ಇದಕ್ಕೆ ವರ್ಷಗಟ್ಟಲೆ ಸಮಯ ತೆಗೆದುಕೊಂಡರೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಏಕೆಂದರೆ ಮುಂದೆ ಕಬ್ಬು ಅರಿಯುವ ಸಮಯ ಬರುತ್ತದೆ. ಸಮಯ ಬಂದಾಗ ಪುನ: ಅದನ್ನು ದುರಸ್ತಿಗೊಳಿಸಲು ಹಣ ಕೊಡುವಂಥ ವ್ಯವಸ್ಥೆಯಾಗುತ್ತದೆ. ಏಕೆಂದರೆ ದುರಸ್ತಿ ಮಾಡದಿದ್ದರೆ ಕಬ್ಬು ಅರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಅರೆಯದೇ ಇದ್ದರೆ ರೈತರ ಕಬ್ಬು ಒಣಗಿಹೋಗುತ್ತದೆ. ಇದೆಲ್ಲವನ್ನೂ ಲೆಕ್ಕ ಹಾಕಿದಾಗ ತಕ್ಷಣದಲ್ಲಿಯೇ ಇದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಬೇಕಾದ ಅಗತ್ಯವಿದೆ. ಇವೊತ್ತು ಸಕ್ಕರೆಗೆ ರೇಟ್‌ಇಲ್ಲ. ಸಕ್ಕರೆಗೆ ರೇಟ್ ಇಲ್ಲದ ಕಾರಣ ಎಕ್ಸ್‌ಪೋರ್ಟ್‌ಗೆ ಎಂದು ತೆಗೆದುಕೊಂಡು ಲೋಕಲ್ ಮಾರ್ಕೆಟ್‌ನಲ್ಲಿ ತಂದು ಮಾರುವಂಥದ್ದು ಇವೊತ್ತು ನಡೆಯುತ್ತಿದೆ. ಅದರಿಂದಾಗಿ ಇವೊತ್ತು ಕೇಂದ್ರ ಸರ್ಕಾರ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳದೇ ಒಂದೇ ಬಾರಿ ಮಾರ್ಕೆಟ್‌ಗೆ ಬಿಟ್ಟರೂ ರೇಟ್ ಡೌನ್ ಆಗುತ್ತದೆ. ಮೊಲ್ಯಾಸಸ್‌ಗೆ ರೇಟ್ ಇಲ್ಲ. ಏಕೆಂದರೆ ರಾಜ್ಯ ಸರ್ಕಾರ ಪ್ರಾಯಶ: ಲಿಕ್ಕರ್ ಲಾಬಿಯವರ ಒತ್ತಡಕ್ಕೆ ಮಣಿದು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಹೋಗುತ್ತಿಲ್ಲ. ಒಂದು ಪವರ್ ಜನರೇಶನ್ ಮಾಡಬೇಕಾಗುತ್ತದೆ ಅಥವಾ ಸ್ಪಿರಿಟ್, ಡಿಸ್ಟಿಲರಿಯನ್ನು ಮಾಡಬೇಕಾಗುತ್ತದೆ. ಇವೆರಡನ್ನೂ ಮಾಡದೇ ಹೋದರೆ ಯಾವುದೇ ಒಂದು ಸಕ್ಕರೆ ಕಾರ್ಖಾನೆ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. Production of sugar is only secondary now. ಅದು ಪ್ರೈಮರಿ ಪ್ರಾಡ್‌ಕ್ಟ್ ಆಗುವುದಿಲ್ಲ. ಸೆಕೆಂಡರಿ ಪ್ರಾಡಕ್ಟ್ ಆಗುತ್ತದೆ.

ಶ್ರೀ ಎಂ. ಮಹದೇವು (ಸಕ್ಕರೆ ಮತ್ತು ಜವಳಿ ಸಚಿವರು):- ರೈತರ ಬಾಕಿ ಸುಮಾರು 160 ಕೋಟಿ ಇತ್ತು. ನಾವು 921 ಕೋಟಿ ರೂಪಾಯಿಗಳ ರೈತರು ಬಾಕಿಯನ್ನು ಚುಕ್ತಾ ಮಾಡಿದ್ದೇವೆ. ಇನ್ನೂ ಕಳೆದ ವರ್ಷ ಮತ್ತು ಈ ವರ್ಷದ್ದೂ ಸೇರಿಸಿದರೆ ಸುಮಾರು 45 ಕೋಟಿ ರೂಪಾಯಿಗಳ ಬಾಕಿ ಇದೆ. ಆ ಬಾಕಿಯನ್ನು ಚುಕ್ತಾ ಮಾಡುವುದಕ್ಕೂ ರೆವಿನ್ಯೂ ರೆಕವರಿಯನ್ನು ಎಲ್ಲಿ ಗೋದಾಮಿನಲ್ಲಿ ಸಕ್ಕರೆ ಸ್ಟಾಕ್ ಇಟ್ಟುಕೊಂಡು ರೈತರ ಬಾಕಿಯನ್ನು ಯಾವುದು ಕೊಟ್ಟಿಲ್ಲವೋ ಅಲ್ಲಿ ಕೊಡುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ತಾವು ಅಪ್ರೀಶಿಯೇಟ್ ಮಾಡಬೇಕು. ಇಷ್ಟು 1160 ಕೋಟಿ ರೂಪಾಯಿಗಳಷ್ಟು ಬಾಕಿ ಇದ್ದದ್ದನ್ನು ರಾಜ್ಯ ಸರ್ಕಾರ ಒಂಬೈನೂರು ಚಿಲ್ಲರೆ ಕೋಟಿ ರೂಪಾಯಿ ಮೇಲೆ ನಾವು ಚುಕ್ತಾ ಮಾಡಿದ್ದೇವೆ ಎನ್ನುವುದನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ಇದಲ್ಲದೇ ಇನ್ನೂ ಬಾಕಿ ಇರತಕ್ಕಂಥದ್ದರ ಬಗ್ಗೆ ರೆವಿನ್ಯೂ ರೆಕವರಿಯನ್ನು ಒಮ್ಮೆಲೆ ಬಾಕಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳ ಮೇಲೆ ಮಾಡಲು ಹಾಕಿಬಿಟ್ಟರೆ ಆ ಕಾರ್ಖಾನೆಗಳು ಬದುಕುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ಎಲ್ಲೆಲ್ಲಿ ಸಕ್ಕರೆ ಸ್ಟಾಕ್ ಜಾಸ್ತಿ ಇದೆ, ಬಾಕಿ ಎಲ್ಲಿದೆ, ಏಕೆಂದರೆ ರೈತರು ಕಾರ್ಖಾನೆಗೆ ಸರಬರಾಜು ಮಾಡಿದ ಹದಿನಾಲ್ಕು ದಿನಗಳೊಳಗೆ ಬಾಕಿಯನ್ನು ನಿಯಮದ ಪ್ರಕಾರ ಕ್ಲಿಯರ್ ಮಾಡಬೇಕು. ಆದರೂ ಕೂಡ ಸಕ್ಕರೆ ಕಾರ್ಖಾನೆಗಳು ಒಂದು ವರ್ಷ, ಒಂದೂವರೆ ವರ್ಷವಾದರೂ ಕೂಡ ರೈತರಿಗೆ ಕೊಡಬೇಕಾದ ಕಬ್ಬಿನ ಹಣದ ಬಾಕಿಯನ್ನು ಕ್ಲಿಯರ್ ಮಾಡಿಲ್ಲ. ಆದರೆ ಬ್ಯಾಂಕ್‌ನಲ್ಲಿ ವ್ಯವಹಾರ ಮಾಡಿಕೊಳ್ಳುತ್ತಾರೆ. ರೈತರಿಗೆ ತೊಂದರೆ ಪಡಿಸುವುದಕ್ಕೆ ಸರ್ಕಾರಕ್ಕೆ ಇಷ್ಟವಿಲ್ಲ. ರೈತರ ಹಿತವನ್ನು ನಾವು ಕಾಪಾಡಬೇಕಾಗುತ್ತದೆ. ರೈತರಿಗೆ ಬಾಕಿ ಹಣವನ್ನು ಒಂದು ವರ್ಷ, ಒಂದೂವರೆ ವರ್ಷವಾದರೂ ಕ್ಲಿಯರ್ ಮಾಡದೇ ಕಾರ್ಖಾನೆಯವರು ಇಟ್ಟುಕೊಂಡರೆ ಅದಕ್ಕೆ ಬಡ್ಡಿ ಕೊಡುವವರು ಯಾರು? ಈ ಒಂದು ದೃಷ್ಟಿಯಿಂದ ಬಾಕಿ ಹಣದ ಬಗ್ಗೆ ಕ್ರಮ ತೆಗೆದುಕೊಳ್ಳವೇಕಾಗುತ್ತದೆ. ಏಕೆಂದರೆ ರೈತ ಮತ್ತೆ ವ್ಯವಸಾಯ ಮಾಡಲು ಹೋಗಬೇಕಾಗುತ್ತದೆ. ಆದರೆ ಅವನ ಹತ್ತಿರ ಹಣವಿರುವುದಿಲ್ಲ. ಆ ದೃಷ್ಟಿಯಿಂದ ರೆವಿನ್ಯೂ ರೆಕವರಿಗೆ ನಾವು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಆದೇಶವನ್ನು ಕೊಟ್ಟು ರೆವಿನ್ಯೂ ರೆಕವರಿಯನ್ನು ಮಾಡಿಸಿ ರೈತರಿಗೆ ಬಾಕಿಯನ್ನು ನಾವು ಪಾವತಿಯನ್ನು ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ರೈತರ ಬಾಕಿಯನ್ನು ಪಾವತಿ ಮಾಡುವಾಗ ಅವರು ಏನು ಸಾಲವನ್ನು ಮಾಡಿರುತ್ತಾರೆ ಅದಕ್ಕೆ ಏನು ಬಡ್ಡಿಯನ್ನು ಕಟ್ಟುತ್ತಾರಲ್ಲಾ ಅದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಈಗ ಬೇರೆ ಕೃಷಿಗೆ ಸಾಲ ಮಾಡಿರುವುದಕ್ಕೆ ಆಗಿರುವ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ತಾವು ಹೇಗೆ ಹೊರಟಿದ್ದೀರೋ ಅದೇ ರೀತಿಯಲ್ಲಿ ಕಬ್ಬು ಬೆಳೆಯಲು ಮಾಡಿರುವ ಸಾಲಕ್ಕೆ ಆಗಿರುವ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಆಮೇಲೆ ಸಕ್ಕರೆ ಕಾರ್ಖಾನೆಗಳು ಪವರ್ ಜನರೇಶನ್ ಮಾಡಬೇಕೆಂದು ನಾವು ಹೇಳುತ್ತೇವೆ. ಅದಕ್ಕೆ ಪರ್ಮಿಶನ್‌ನ್ನೂ ಕೊಟ್ಟಿದ್ದೇವೆ. ಪರ್ಮಿಶನ್ ಕೊಟ್ಟು ಪಿ.ಪಿ.ಎ.ಗೆ ಸಹಿ ಮಾಡಿ ಪುನ: ಪಿ.ಪಿ.ಎ.ಯನ್ನು ಕ್ಯಾನ್ಸಲ್ ಮಾಡುತ್ತೀರಿ. ಕೋ-ಜನರೇಶನ್‌ಗೆ. ಪಿ.ಪಿ.ಎ.ಗೆ ಸೈನ್ ಮಾಡಿದ ಮೇಲೆ ಕ್ಯಾನ್ಸಲ್ ಮಾಡುವುದಕ್ಕೆ ಆಗುತ್ತದೆಯೇ? ಕಾನೂನು ರೀತಿಯಲ್ಲಿ ಇದಕ್ಕೆ ಅವಕಾಶವಿದೆಯೇ ಎಂಬ ಬಗ್ಗೆ ತಾವು ತಿಳಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಇವೊತ್ತು ಕೇಂದ್ರ ಸರ್ಕಾರದವರು ಮಾಡಿದಂಥದ್ದು. ಮೊನ್ನೆ ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಈ ವಿಷಯ ಮಾತನಾಡಿದಾಗ ನಾನು ಮಾತನಾಡಬೇಕು ಎಂದಿದ್ದೆ. ಅದಕ್ಕೆ ಅಧ್ಯಕ್ಷರು ಅದನ್ನು ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ ಎಂದರು. ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಈ ರಾಜ್ಯಕ್ಕೆ ತೋರಿಸಿದೆ. 600

ಕೋಟಿ ರೂಪಾಯಿಗಳನ್ನು ಎಸ್.ಡಿ.ಎಫ್. ಫಂಡ್‌ನಿಂದ ಕೊಟ್ಟಿರುವಂಥದ್ದು. ಏಕೆಂದರೆ ಎಸ್.ಡಿ.ಎಫ್. ಫಂಡ್ ಎಂದರೆ ಕಬ್ಬು ಅಭಿವೃದ್ಧಿಗೋಸ್ಕರ ಆ ಹಣ ಇರುವಂಥದ್ದು. ಕಬ್ಬು ಅಭಿವೃದ್ಧಿಯ ಹಣವನ್ನು ಮೂರು ರಾಜ್ಯಗಳಿಗೆ ಕೊಟ್ಟಿರುವಾಗ ಕರ್ನಾಟಕ ರಾಜ್ಯಕ್ಕೆ ಕೊಡುವುದಕ್ಕೆ ಏಕೆ ಸಾಧ್ಯವಾಗುವುದಿಲ್ಲ? ಇದು ತಪ್ಪಾಗುತ್ತದೆ. ಪ್ರಾಯಶ: ಕರ್ನಾಟಕದಲ್ಲಿ ಮುಂದೆ ಚುನಾವಣೆ ಬರುವಾಗ ಕೊಡುವುದಕ್ಕೆ ಪ್ರಯತ್ನವನ್ನು ಮಾಡಬಹುದು ಎಂದು ನನಗನ್ನಿಸುತ್ತಿದೆ. ಇದರಲ್ಲಿ ರಾಜಕೀಯ ಇರಬಾರದು. ರೈತರಿಗೆ ಕೊಡುವಂಥ ಹಣ ಉತ್ತರಾಂಚಲ ಆಗಲಿ, ಉತ್ತರ ಪ್ರದೇಶವಾಗಲಿ, ಹರಿಯಾಣವಾಗಲಿ, ಯಾವುದೇ ರಾಜ್ಯಕ್ಕಾದರೂ ರೈತರಿಗೆ ಕೊಡುವಂಥ ಹಣವನ್ನು ಕೇಂದ್ರದವರು ಕೊಡಲೇಬೇಕಾಗುತ್ತದೆ. ಆದ್ದರಿಂದ ಮೊನ್ನೆ ದಿನ ಮಾನ್ಯ ಮುದ್ದಹನುಮೇಗೌಡರು ಏನು ಪ್ರಸ್ತಾವವನ್ನು ಈ ಬಗ್ಗೆ ಎತ್ತಿದ್ದಾರೋ ಅದನ್ನು ನಾನು ಸಮರ್ಥನೆ ಮಾಡುತ್ತೇನೆ. ಆದಕಾರಣ ನಮ್ಮ ಸ್ನೇಹಿತರು ಇದರ ಬಗ್ಗೆ ಇಲ್ಲಿ ಚರ್ಚೆಯನ್ನು ಮಾಡುವುದಕ್ಕಿಂತ ದಯವಿಟ್ಟು ಅವರೂ ಕೂಡ ಕೇಂದ್ರದ ಮೇಲೆ ಒತ್ತಡವನ್ನು ಹಾಕಬಾಕಾಗುತ್ತದೆ. ಆ ಮೂಲಕ ರಾಜ್ಯದ ಕಬ್ಬು ಬೆಳೆದ ರೈತರಿಗೆ ಹಣವನ್ನು ಕೊಡಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೆ, ಆ ಬಗ್ಗೆ ನಮ್ಮ ಸರ್ಕಾರದವರು ಕೇಂದ್ರದವರನ್ನು ಕೇಳಬೇಕು. ನಮ್ಮ ರಾಜ್ಯದಿಂದ ಡೆಲಿಗೇಷನ್ ತೆಗೆದುಕೊಂಡು ಹೋಗಬೇಕು. ಅಥವಾ ಮಂತ್ರಿಗಳಾದರೂ ಹೋಗಿ ಕೇಂದ್ರ ಮಂತ್ರಿಗಳ ಜೊತೆ ಮಾತನಾಡಬೇಕು. ಇದು ಯಾವುದು ಮಾಡದೆ ಮಲತಾಯಿ ಧೋರಣೆ ತೋರಿಸಿದರು ಎಂದರೆ. ಅಲ್ಲಿ ಕಾಂಗ್ರೆಸ್ ರಾಜ್ಯಕ್ಕೂ ಕೊಟ್ಟಿದ್ದಾರೆ, ಬಿಜೆಪಿ ರಾಜ್ಯಕ್ಕೂ ಕೊಟ್ಟಿದ್ದಾರೆ. ಮಲತಾಯಿ ಧೋರಣೆ ಎಂದರೆ ಹೇಗೆ ಇದು? ನೀವು ಕೇಳಿದ್ದೆಷ್ಟು? ಇದು ಯಾವ ತರಹದ್ದು? ನಿಮಗೆ ಏನಾದರೂ ನೆವ ಸಿಕ್ಕರೆ ಸಾಕು. ಇವರು ಸಕ್ಕರೆ ನಿಧಿ ಸ್ಥಾಪನೆ ಮಾಡುತ್ತೇನೆ ಎಂದು ಹೇಳಿ ಎರಡು ವರ್ಷವಾಯಿತು. ಒಂದು ಪೈಸೆ ಹಾಕಿ ನಿಧಿ ಓಪನ್ ಮಾಡಲಿಲ್ಲ. ನೀವು ಕೇಂದ್ರಕ್ಕೆ ಕೇಳಬೇಕು.

ಶ್ರೀ ಎಂ.ಮಹದೇವ್:- ಮಾನ್ಯ ಉಪಾಧ್ಯಕ್ಷರೆ, ನಾಲ್ಕು ರಾಜ್ಯಕ್ಕೆ ಕೊಟ್ಟಿದೆ; ಅಲ್ಲಿಂದ ಯಾವ ಡೆಲಿಗೇಷನ್ ಹೋಗಿತ್ತು? ಈಗ ಉತ್ತರ ಪ್ರದೇಶ ಮತ್ತು ಹರಿಯಾಣ ಹಾಗೂ ಪಂಜಾಬ್ ಈ ಕಡೆ ಹೋಗಿದೆಯಾ ಆ ನಾಲ್ಕು ರಾಜ್ಯದ ಮುಖ್ಯಮಂತ್ರಿಗಳಾಗಲಿ ಅಥವಾ ಆ ನಿಯೋಗವಾಗಲಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಪತ್ರವನ್ನು ಬರೆದಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ:- ನಾವು ಕೇಳಿದ್ದೆವು, ಅವರು ಬಂದಿದ್ದರು, ಕೇಳಿದ್ದಾರೆ ಇಷ್ಟು ಒತ್ತಡ ಹಾಕಿದ್ದಾರೆ, ಹೀಗೆ ಇದೆ ಎನ್ನುವುದನ್ನು ಹೇಳಿದ್ದಾರೆ. ನಿಮ್ಮ ಸರ್ಕಾರದ ಕಡೆಯಿಂದ ಏನೂ ಬಾರದೆ ಇದ್ದರೆ ನಾವೇನು ಮಾಡುವುದು ಎಂದು ಹೇಳುತ್ತಾರೆ.

ಶ್ರೀ ಎಂ. ಮಹದೇವ್:- ಬರಗಾಲ ಪರಿಸ್ಥಿತಿ ಬಗ್ಗೆ ನಿಯೋಗ ಹೋಗಿದ್ದಾಗ ನಾವೂ ಸಹ ಅವರಿಗೆ ತಿಳಿಸಿದ್ದೇವೆ. ನೀವು ದಯವಿಟ್ಟು ಕೊಡಿ ಎಂದು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಹ ರಾಜ್ಯದಲ್ಲಿ ಈ ತರಹ ಪರಿಸ್ಥಿತಿಯಾಗುತ್ತಿದೆ, ದಯವಿಟ್ಟು ನೀವು ನಮ್ಮ ರಾಜ್ಯಕ್ಕೂ ಸಹ ಸಹಾಯ ಮಾಡಿ ಎಂದು ಕೇಳುತ್ತಿದ್ದಾರೆ. ಸಾಧ್ಯವಾದರೆ ನಾವೂ ಕೂಡ ನಿಯೋಗ ಹೋಗುತ್ತೇವೆ. ರೈತರ ಬಗ್ಗೆ ಏಕೆ ತಾರತಮ್ಯ ಮಾಡಬೇಕು. ಆದರೂ ಸಹ ಕರ್ನಾಟಕ ರಾಜ್ಯದ ರೈತರ ಹಿತವನ್ನು ನಮ್ಮ ಸರ್ಕಾರ ಕಾಪಾಡಿದೆ. ಈಗಾಗಲೇ ನಿಮಗೆ ಸ್ಟ್ಯಾಟಿಸ್ಟಿಕ್ಸ್ ಕೊಟ್ಟಿದ್ದೇವೆ. ಇಷ್ಟು ಬಾಕಿ ಇದೆ, ಇಷ್ಟು

ಕ್ಲಿಯರ್ ಮಾಡಿದ್ದೇವೆ ಎಂದು ಕೊಟ್ಟಿದ್ದೇವೆ. ನಮಗೆ ಎಷ್ಟೇ ತೊಂದರೆ ಆದರೂ ಕೂಡ ರೈತರ ಬಾಕಿಯನ್ನು ಇಟ್ಟುಕೊಳ್ಳುವುದಕ್ಕೆ ನಾವು ಅವಕಾಶ ಕೊಟ್ಟಿಲ್ಲ. ಫ್ಯಾಕ್ಟರಿ ವರಿಗೂ ಕೂಡ ನಾವು ಆದೇಶವನ್ನು ಕೊಟ್ಟಿದ್ದೇವೆ. ನಮ್ಮ ಆದೇಶವನ್ನು ಮೀರಿದರೆ ಏನೇನು ಕ್ರಮ ಗೆದುಕೊಳ್ಳಬೇಕೆಂದೂ ಸಹ ಹೇಳಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕುಡುವನಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಇವರು ಈ ಕಡೆಯಿಂದ ಬಿ.ಜೆ.ಪಿ. ಯವರು ನಮ್ಮ ಸರ್ಕಾರವನ್ನು ಏನೋ ಎಂದರು ಎಂದು ಹೇಳುತ್ತಾರೆ. ಕಾಂಗ್ರೆಸ್ಸ್‌ನವರೆಲ್ಲಾ ನಾವು ಹೀಗೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಈಗ ಇಲ್ಲಿ ಮಾತನಾಡುತ್ತಿರುವವರು ಮಾನ್ಯ ಜಯಪ್ರಕಾಶ್ ಹೆಗಡೆ. ಅವರು ವಾಸ್ತವಾಂಶ ಹೇಳುತ್ತಾರೆ. ಅದಕ್ಕೆ ನಿಮ್ಮಿಬ್ಬರಿಗೂ ಏಕೆ ಸ್ವಾಮಿ ತೊಂದರೆ? ಅವರು ಇರುವಂತಹ ವಾಸ್ತವಾಂಶವನ್ನು ಹೇಳುತ್ತಿದ್ದಾರೆ. ಅವರು ನಿಮ್ಮ ಎರಡು ಪಕ್ಷಕ್ಕೂ ಸೇರಿದವರಲ್ಲ. ಆದುದರಿಂದ ಅದನ್ನು ನೀವು ಡಿಫೆಂಡ್ ಮಾಡಿಕೊಳ್ಳುವ ಹಾಗೆ ಇಲ್ಲ, ಇವರು ಅದನ್ನು ವಿರೋಧ ಮಾಡುವ ಹಾಗೆ ಇಲ್ಲ.

ಮಾನ್ಯ ಸದಸ್ಯರು:- ಕಬ್ಬು ಬೆಳೆಗಾರರಿಗೆ ಯಾವ ಪಕ್ಷ ಕೂಡ ಇಲ್ಲ.

ಶ್ರೀ ಎಂ.ಮಹದೇವ್:- ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಏನು ಪ್ರಸ್ತಾಪ ಮಾಡಿದರು, ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ಬಾಕಿಯನ್ನು ಎಷ್ಟು ಇಟ್ಟುಕೊಂಡಿದ್ದೇವೆ? ರೈತರ ಬಾಕಿ ಎಷ್ಟಿದೆ? ಎಷ್ಟು ಕ್ಲಿಯರ್ ಮಾಡಿದ್ದೇವೆ? ಇನ್ನು ಎಷ್ಟು ಕೊಡಬೇಕಾಗಿದೆ? ಅದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದು ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ವಿವಾದಕ್ಕೆ ಹೋಗಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರ ಏನು ಮೂರು ರಾಜ್ಯಗಳಿಗೆ ಏಕಕಾಲಿಕ ನೆರವನ್ನು ಕೊಟ್ಟಿದೆಯಲ್ಲಾ ಅದನ್ನು ಕೊಟ್ಟಿರುವುದು ಸಕ್ಕರೆ ಅಭಿವೃದ್ಧಿ ನಿಧಿಯಿಂದ. ಆ ಸಕ್ಕರೆ ಅಭಿವೃದ್ಧಿ ನಿಧಿಗೆ ಈ ಕರ್ನಾಟಕ ರಾಜ್ಯದ ಬಡ ಕಬ್ಬು ಬೆಳೆಗಾರರೂ ಕೂಡ ವಂತಿಗೆಯನ್ನು ಕೊಟ್ಟಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರದವರು ಇಡೀ ರಾಷ್ಟ್ರದಲ್ಲಿ ಎಲ್ಲೆಲ್ಲಿ ಕಬ್ಬು ಬೆಳೆಗಾರರು ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ ಅವರಿಗೆ ನೇರವಾಗಿ ನೆರವು ನೀಡಬೇಕೇ ವಿನ: ಅರ್ಜಿ ಹಾಕಿಕೊಂಡು ಏನೂ ಹೋಗಬೇಕಾಗಿಲ್ಲ. ಆದುದರಿಂದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಅವರಿಗೆ ಏನು ನೆರವು ಕೊಟ್ಟಿದ್ದಾರೆ ಅದಕ್ಕೆ ಕರ್ನಾಟಕ ರಾಜ್ಯದ ಕಬ್ಬು ಬೆಳೆಗಾರರೂ ಕೂಡ ವಂತಿಗೆಯನ್ನು ಕೊಟ್ಟಿದ್ದಾರೆ ಎನ್ನುವುದು ದಯಮಾಡಿ ನೆನಪಿರಲಿ.

ಶ್ರೀ ಶಿವಾನಂದ ಎಸ್ ಪಾಟೀಲ್:- ಮುದ್ದಹನುಮೇಗೌಡರೆ, ಎಸ್‌ಡಿಎಫ್ ಫಂಡ್ ಹಿಂದಿನ ಸರ್ಕಾರಗಳು ಇದ್ದಾಗ ಪ್ರೈವೇಟ್ ಫ್ಯಾಕ್ಟರಿಗೂ ಕೊಟ್ಟಿದೆ. ಅದು ನಿಮಗೆ ಗೊತ್ತಿದೆಯಾ? ಇವರು ಬಂದಮೇಲಾದರೂ ರೈತರಿಗೆ ಕೊಟ್ಟಿದ್ದಾರೆ. ಅದನ್ನಾದರೂ ಸ್ವಲ್ಪ ಶ್ಲಾಘನೆ ಮಾಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಕೊಟ್ಟಿದ್ದಾರೆ ಎಂದರೆ ಯಾರಿಗೆ ಕೊಡುತ್ತಾರೆ? ಏನೋ ದೊಡ್ಡದಾಗಿ ಕೇಂದ್ರ ಸರ್ಕಾರದವರು ಏನೇನೋ ಸಹಾಯ ಮಾಡುತ್ತಾರೆ ಎಂದು ಹೇಳಬೇಡಿ. See, It is their bounden duty to come to the resuce of the farmers ಏನೋ ಒಂದು ದೊಡ್ಡ ಉಪಕಾರ ಕೇಂದ್ರ ಸರ್ಕಾರದಿಂದ ಆಗಿಹೋಗಿಬಿಟ್ಟಿದೆ ಎಂದು ಹೇಳಬೇಡಿ. ಯಾವುದಾದರೂ ರಾಜ್ಯದ ರೈತರ ನೆರವಿಗೆ ಬಂದರೆ ಅದು ದೊಡ್ಡ ಉಪಕಾರ ಎಂದು ಹೇಳಬೇಡಿ. ಅದು ಅವರ ಕರ್ತವ್ಯ ಇದೆ.

ಶ್ರೀ ಶಿವಾನಂದ ಎಸ್.ಪಾಟೀಲ್:- ಪ್ರೈವೇಟ್ ಫ್ಯಾಕ್ಟರಿಗೂ ಕೊಟ್ಟಿದ್ದಾರೆ, ಅದರ ಬಗ್ಗೆ ಉದಾಹರಣೆ ಇದೆ ನಾನು ತೋರಿಸಲಾ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರ ತಾರತಮ್ಯ ಮಾಡಿದೆ. ಕರ್ನಾಟಕ ಕಬ್ಬು ಬೆಳೆಗಾರರೂ ಕೂಡ ಬೇರೆ ರಾಜ್ಯದ ರೈತರ ಹಾಗೆ ಸಂಕಷ್ಟದಲ್ಲಿ ಇದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ ಅನೇಕ ಕಬ್ಬು ಬೆಳೆಗಾರರಿಗೆ ಕೋಟ್ಯಾಂತರ ರೂಪಾಯಿ ಬಾಕಿ ಬರಬೇಕಾದ್ದು ಇದೆ. ನಮಗೂ ಕೂಡ ಕೊಟ್ಟರೆ ಕಬ್ಬು ಬೆಳೆಗಾರರಿಗೆ ಸಹಾಯಕ್ಕೆ ಬರುತ್ತದೆ ಎಂದು ನಾನು ಹಾಗೂ ಅನೇಕರು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ರಾಜ್ಯಸರ್ಕಾರವನ್ನು ಸಮನಾಗಿ ನೋಡಬೇಕು ಎನ್ನುವುದು ನಮ್ಮ ಆಶಯ ವಿನಂತಿ ಎಂದು ಹೇಳಿದ್ದೇವೆ. ಆದುದರಿಂದ ಕಬ್ಬು ಬೆಳೇಗಾರರ ಪರವಾಗಿ ಕೊಡಬೇಕು ಎಂದು ಅವರ ಪರವಾಗಿ ಆಗ್ರಹಪಡಿಸಿದ್ದೇವೆ. ಬೆಳೆಗಾರ ಬೆಳೆಗಾರನೇ ಹೊರತು ಅವರಿಗೆ ಬಾಕಿ ಕೊಡಬೇಕಾದದ್ದು ಎಲ್ಲರಿಗೂ ಆಶಯ ಇದೆ. ಆದುದರಿಂದ ಮಾನ್ಯ ಸಚಿವರು ಸರ್ಕಾರದ ಮೂಲಕ ಪ್ರಯತ್ನ ಪಡಬೇಕೆಂದು ಹೇಳಿದ್ದೇವೆಯೇ ಹೊರತು ತಾರತಮ್ಯ ಆಗಿರುವುದು ಕನ್ನಡಿ ಹಿಡಿದಷ್ಟೇ ಸತ್ಯವಾಗಿದೆ.

ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿರುವಂತಹ ಒಂದು ದ್ವಂಧ್ವ ನೀತಿಯನ್ನು ನಾವು ಖಂಡಿತವಾಗಿ ಖಂಡನೆ ಮಾಡಲೇಬೇಕು. ಕರ್ನಾಟಕ ಸರ್ಕಾರ ಯಾವುದಾದರೂ ಬೆಳೀಗಾರರಿಗೆ ಏನಾದರೂ ಕೊಡುವುದು ಬಂದರೆ, ಅದು ಭಾರೀ ದೊಡ್ಡ ಕೆಲಸ ಅವರು ಮಾಡಿದ್ದು. ಆದರೆ ಕೇಂದ್ರ ವಿಚಾರ ಆದಕೂಡಲೆ It is the bounden duty of the Central Government. ಈ ದ್ವಂಧ್ವ ನೀತಿಯನ್ನು ಮಾನ್ಯ ಮುದ್ದಹನುಮೇಗೌಡರು ಹೇಳುವುದು ಅಷ್ಟು ಸಮಂಜಸವಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಅಲ್ಲವೇ? ಹೋಗಲಿ....

ಶ್ರೀ ಎಂ.ಎಸ್. ಆತ್ಮಾನಂದ:- ಬೇರೆ ರಾಜ್ಯಗಳಿಗೆ ಕೊಟ್ಟಹಾಗೆ ನಮಗೂ ಕೊಡೀ ಎಂದು ಕೇಳ್ಳುತ್ತೇವೆ.

ಶ್ರೀ ಯು.ಆರ್. ಸಭಾಪತಿ:- ಇವರು ರಾಜ್ಯದ ರೈತರ ವಿರೋಧಿಗಳೆಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಹದೇವ್:- ನಾವು ಹೋಗಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಮನವರಿಕೆ ಪತ್ರ ಬರೆದಿದ್ದಾರೆ. ಇನ್ನು ಏನು ಮಾಡಬೇಕು?

ಶ್ರೀ ಕೆ. ಶ್ರೀನಿವಾಸ್ ಗೌಡ ಕಾಡುವನಹಳ್ಳಿ:- ಸ್ವಾಮಿ ಸದಾನಂದ ಗೌಡರೆ ಕೇಂದ್ರ ಸರ್ಕಾರ ವೆಂದರೆ, ಕರ್ನಾಟಕವು ಸೇರಿ ಕೇಂದ್ರ ಸರ್ಕಾರ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಉಪಾಧ್ಯಕ್ಷರೆ, ಸಮಸ್ಯೆ ಇಷ್ಟೆ. ನಮ್ಮ ಬಿಜೆಪಿ ಸದಸ್ಯರು ಏನು ಹೇಳುತ್ತಾರೆ ಎಂದರೆ ರಾಜ್ಯಸರ್ಕಾರದವರು ಒಂದು ಪ್ರಸ್ತಾವನೆಯನ್ನು ಕಳುಹಿಸಲಿ. ಈಗಲಾದರೂ ರಾಜ್ಯಸರ್ಕಾರದವರು ಒಂದು ಪ್ರಸ್ತಾವನೆಯನ್ನು ಕಳುಹಿಸದೆ ಇದ್ದಲ್ಲಿ ಕಳುಹಿಸಿ. ಕೇಂದ್ರ ಸರ್ಕಾರದವರು ಎಷ್ಟು ಕೊಡುತ್ತಾರೆ ನೋಡೋಣ. ನಮ್ಮಲ್ಲಿ ಸಮಸ್ಯೆ ಏನಾಗಿದೆ ಎಂದರೆ ನಮ್ಮ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಸ್ಥಳೀಯ ಸಹಕಾರ ಸಂಘಗಳು ಠೇವಣಿ ಮುಖಾಂತರ ಹಣವನ್ನು ಕೊಟ್ಟಿದೆ. ಒಂದು ವೇಳೆ ಹಣವನ್ನು ಸಕ್ಕರೆ ಕಾರ್ಖಾನೆ ವಾಪಸ್ಸು ಕೊಡದೆ ಇದ್ದರೆ ಅಲ್ಲಿರುವಂತಹ ಎಲ್ಲಾ ಸಹಕಾರಿ ಸಂಸ್ಥೆಗಳು ಸಿಕ್ ಆಗಿ ಹೋಗುತ್ತವೆ. ಅವು ಉಳಿಯುವುದಿಲ್ಲ.

ಅದಕ್ಕೋಸ್ಕರ ಅದನ್ನು ಭರ್ತಿ ಮಾಡುವುದಕ್ಕೆ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾನ್ಯ ಸಕ್ಕರೆ ಸಚಿವರು ಮಾಡಬೇಕು. ಇಲ್ಲದೆ ಇದ್ದರೆ ಸ್ಥಳೀಯ ಸಕ್ಕರೆ ಸಂಘಗಳೆಲ್ಲಾ ಸಮಸ್ಯೆಗೆ ಸಿಕ್ಕಿಕೊಳ್ಳುತ್ತವೆ ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಸಂಸದರ ನಿಧಿಯನ್ನು, ಎಂಎಲ್ಎ ಗಳ ಫಂಡ್ ರೀತಿಯಲ್ಲಿ ಅವರಿಗೆ ಯಾವುದಕ್ಕೆ ಕೊಡಬೇಕು, ಯಾವುದಕ್ಕೆ ಕೊಡಬಾರದು ಎಂದಿದೆ, ಅವರ ಹಣವನ್ನು ಖಾಸಗಿ ಸಂಸ್ಥೆಗಳಿಗೆ ಕೊಡುವುದಕ್ಕೆ ಸಾಧ್ಯವಿದ್ದರೆ ಇಂತಹ ಸಮಸ್ಯೆಗಳು ಬಂದಾಗ ಏಕೆ ಅವರು ದುಡ್ಡು ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಅವರನ್ನು ತಾವು ಕರೆದು ಕೇಳಬೇಕಾಗುತ್ತದೆ. ಖಾಸಗಿ ಸಂಸ್ಥೆಗಳಿಗೆ ಸಂಸದರ ನಿಧಿಯಿಂದ ಹಣವನ್ನು ಕೊಡುತ್ತಾರೆ. ಆದರೆ ಸಹಕಾರ ಸಂಘಗಳಿಗೆ ಏಕೆ ಕೊಡುವುದಕ್ಕಾಗುವುದಿಲ್ಲ? ಈ ಸಕ್ಕರೆ ಕಾರ್ಖಾನೆಗಳನ್ನು ಉಳಿಸುವುದಕ್ಕೆ, ಬರ ಕಾಮಗಾರಿ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಏಕೆ ಎರಡು ಕೋಟಿ ರೂಪಾಯಿ ಹಣವನ್ನು ಉಪಯೋಗ ಮಾಡುವುದಕ್ಕೆ ಆಗಿಲ್ಲ. ಅದನ್ನು ಅವರ ಹತ್ತಿರ ಕೇಳಿ ಪಡೆದುಕೊಳ್ಳಬೇಕು. ತಾವು ರಾಜ್ಯಸರ್ಕಾರ ಅವರಿಗೆ ಸವಲತ್ತುಗಳನ್ನು ಕೊಟ್ಟಿದ್ದೀರಿ. ರಾಜ್ಯಸರ್ಕಾರ, ಅವರು ತಂದಂತಹ ಹಣವನ್ನು ಸೂಪರ್‌ವೈಜ್ ಮಾಡುವುದಕ್ಕೆ ಸವಲತ್ತನ್ನು ಕೊಟ್ಟಿದ್ದೇವೆ ಎಂದು. ಹಾಗಿದ್ದಾಗ ಅವರು ಆ ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಿದರೂ ಕೊಡುವುದಕ್ಕೆ ಆಗದೆ ಇದ್ದರೆ ನಾಳೆ ಅವರು ಯಾವುದಕ್ಕೆ ಉಪಯೋಗ ಮಾಡುತ್ತಾರೆ ಎನ್ನುವ ಪಟ್ಟಿಯನ್ನು ತರಿಸಿ ನೋಡಿ. ಅದು ತಪ್ಪಾಗುತ್ತದೆ. ರಾಜ್ಯಸರ್ಕಾರ ಸಹಾಯ ಮಾಡಿದ ಮೇಲೆ ಅವರು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರದೊಡನೆ ಇವರು ಸ್ಪರ್ಧೆ ಮಾಡುವುದಕ್ಕಿಂತ ಒಂದು ಪ್ರಸ್ತಾವನೆಯನ್ನು ಕಳುಹಿಸಲಿ, ಅವರು ಎಷ್ಟು ಕೊಡುತ್ತಾರೆ ಎಂದು ನೋಡೋಣ. ಕೊಡದೆ ಇದ್ದರೆ ಪುನ: ಅದರ ಬಗ್ಗೆ ಚರ್ಚೆಯನ್ನು ಈ ಸದನ ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಬಹಳಷ್ಟು ಕೆಲಸಗಳಾಗಬೇಕಾಗಿದ್ದು, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮಪಂಚಾಯತ್‌ನಲ್ಲಿ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮಲ್ಲಿ There is absolutely no co-ordination ಶಾಸಕರಿಗೆ, ಜಿಲ್ಲಾ ಪಂಚಾಯತ್ ಮೆಂಬರ್‌ಗೆ, ತಾಲ್ಲೂಕು ಪಂಚಾಯತ್ ಮೆಂಬರ್‌ಗೆ ಹಾಗೂ ಗ್ರಾಮ ಪಂಚಾಯತ್ ಮೆಂಬರ್‌ಗೆ ಒಂದು ರೀತಿಯಲ್ಲಿ ಅಸಹಕಾರ ಪ್ರಾರಂಭವಾಗಿದೆ. ಅವರು ನಾವು ಏನಾದರೂ ಹೇಳಿದರು ಅವರು ಮಾಡುವುದಿಲ್ಲ. ಜಿಲ್ಲಾಪಂಚಾಯತ್‌ನವರಿಗೆ ಹೇಳಿದರೆ ತಾಲ್ಲೂಕು ಪಂಚಾಯತ್ ಕೇಳುವುದಿಲ್ಲ, ತಾಲ್ಲೂಕು ಪಂಚಾಯತ್‌ಗೆ ಹೇಳಿದರೆ ಗ್ರಾಮ ಪಂಚಾಯತ್‌ನವರು ಕೇಳುವುದಿಲ್ಲ. ಸಂಪೂರ್ಣ ವಿಕೇಂದ್ರೀಕರಣ ಆಗಿ ಅವರವರ ಕೆಲಸವನ್ನು ಅವರವರೆ ಮಾಡುವುದು, ಶಾಸಕರು ಅಲ್ಲಿಗೆ ಹೋಗಬಾರದು ಎಂದು ಮಾಡಿದರು. ಅದು ಬಹಳ ಒಳ್ಳೆಯದು. ಇಲ್ಲದೆ ಇದ್ದರೆ ನಾವು ಅಲ್ಲಿ ಹೋಗಿ ಕುಳಿತುಕೊಳ್ಳುವುದು, ಚರ್ಚೆಯಲ್ಲಿ ಭಾಗವಹಿಸುವುದು ಅಥವಾ ಜಿಲ್ಲಾಪಂಚಾಯತ್‌ನಲ್ಲಿ, ತಾಲ್ಲೂಕು ಪಂಚಾಯತ್‌ನಲ್ಲಿ ಅಥವಾ ಗ್ರಾಮ ಪಂಚಾಯತ್‌ನಲ್ಲಿ ಚರ್ಚೆ ಮಾಡಿ ಹೆಚ್ಚಿನ ಸಮಯ ನಾವು ತೆಗೆದುಕೊಳ್ಳುವುದಕ್ಕಿಂತ ಅವರವರೆ ತೆಗೆದುಕೊಳ್ಳಲಿ. ಆದರೆ ಇವತ್ತು ಕಾಮಗಾರಿ ಯಾವ ರೀತಿಯಾಗುತ್ತಿದೆ ಎಂದು ನೋಡಬೇಕಾಗುತ್ತದೆ. ಜನಪ್ರತಿನಿಧಿಗಳು ಗುತ್ತಿಗೆ ಕೆಲಸವನ್ನು ವಹಿಸಿಕೊಂಡು ಮಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾದಾಗ ನಾವು ಕಂಪ್ಲೇಂಟ್ ಕೊಟ್ಟೂ ಸಹ ರಾಜ್ಯಸರ್ಕಾರ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಇದ್ದಂತಹ ಪರಿಸ್ಥಿತಿ ನಿರ್ಮಾಣವಾದಾಗ ಏನಾಗುತ್ತದೆ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ನಾವು ಅನೇಕ ಕಂಪ್ಲೇಂಟ್

ಕೊಟ್ಟಿದ್ದೇನೆ. ತನಿಖೆ ಮಾಡುವುದಕ್ಕೆ ಹೇಳಿದ್ದೇನೆ. ನಾನು ತನಿಖೆ ಮಾಡುವುದಕ್ಕೆ ಹೇಳಿದ್ದಕ್ಕೋಸ್ಕರ ಅಲ್ಲಿಯ ತಾಲ್ಲೂಕು ಪಂಚಾಯತ್ ಮೆಂಬರ್ ಪತ್ರಿಕಾ ಗೋಷ್ಠಿ ಮಾಡಿ ನನ್ನ ಮೇಲೆ ದೂಷಣೆ ಮಾಡುತ್ತಾರೆ. ಅಲ್ಲಿ ಮಹಿಳಾ ಸದಸ್ಯರಿದ್ದರೆ ಅವರ ಗಂಡ ಕೆಲಸ ಮಾಡುವುದು. ಜಿಲ್ಲಾ ಪಂಚಾಯತ್ ಮೆಂಬರ್ ಬೇರೆ ರೀತಿಯಲ್ಲಿ ಕೆಲಸ ಮಾಡುವುದು, ತಾಲ್ಲೂಕು ಪಂಚಾಯತ್‌ನವರು ಅದೇ ರೀತಿ ಮಾಡುವುದು. ಮೊನ್ನೆ ಕೆರೆಗಳ ಹೂಳು ಎತ್ತುವಂತಹ ಕೆಲಸವನ್ನು ಮಾಡಿದರು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಈ ಮೂಲಕ ಪಂಚಾಯತ್‌ಗಳು ಜಂಟಿಯಾಗಿ ಕಾರ್ಯಕ್ರಮವನ್ನು ಹಾಕಿ, ಗ್ರಾಮ ಪಂಚಾಯತ್ ಮುಖಾಂತರ ಹಣವನ್ನು ಬಿಡುಗಡೆ ಮಾಡಿ, ಕೆಲಸವನ್ನು ಪ್ರಾರಂಭ ಮಾಡಿದರು, ಆಗ ಜೆಸಿಬಿ ಓನರ್ ಒಬ್ಬರು ನನ್ನ ಹತ್ತಿರ ಏನು ಹೇಳಿದರೆಂದರೆ ಒಬ್ಬ ಜಿಲ್ಲಾಪಂಚಾಯತ್ ಸದಸ್ಯರು ಒಂದೇ ದಿವಸ ನಾಲ್ಕು ಕೆರೆಗಳ ಹೂಳು ಎತ್ತುವಂತಹ ಕೆಲಸವನ್ನು ಮಾಡಿದ್ದೇನೆ, ಎನ್ನುವ ಮಾತನ್ನು ಹೇಳಿದರಂತೆ, ಅಂದರೆ ಯಾವ ರೀತಿಯಲ್ಲಿ ಕೆಲಸ ಮಾಡಿರಬಹುದೆಂಬ ಬಗ್ಗೆ, ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ, ಇದರ ಬಗ್ಗೆ ತನಿಖೆಯನ್ನು ಮಾಡಿಸಬೇಕೇಕಾಗುತ್ತದೆ. ಇನ್ನು ಮತ್ತೊಂದು ವಿಚಾರ ಕುಡಿಯುವ ನೀರು ಯೋಜನೆಯಲ್ಲಿ, ಗ್ರಾಮ ಪಂಚಾಯತ್‌ನದು, ಇದು ಬಿಳಿಯ ಹಾಳೆಯ ಮೇಲೆ ರಸೀದಿಯನ್ನು ಕೊಟ್ಟಿದ್ದಾರೆ, ಇಂಥವರಿಂದ ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ 500 ರೂಪಾಯಿಗಳನ್ನು ವಸೂಲು ಮಾಡಲಾಗಿದೆ ಎಂದು ಅಧ್ಯಕ್ಷರು ಸೀಲ್ ಹಾಕಿ, ರುಜು ಮಾಡಿ, ಕೊಟ್ಟಿದ್ದಾರೆ ಪಂಚಾಯತಿ ರಶೀತಿಯಲ್ಲಿ ನಾನು ಇದನ್ನು ತನಿಖೆ ಮಾಡಿ ಎಂದು ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ, ಇಂಥಾದ್ದು ಪ್ರಾರಂಭವಾದಾಗ ಅದನ್ನು ತನಿಖೆ ಮಾಡಿ, ಇಲ್ಲಿ ಒಂದು ವೇಳೆ ಪಂಚಾಯತ್‌ನವರು ತಪ್ಪು ಮಾಡಿದ್ದು ಆದರೆ, ಪಂಚಾಯತ್ ಅನ್ನು ಸೂಪರ್‌ಸೀಡ್ ಮಾಡುವುಂತಹ ವ್ಯವಸ್ಥೆ ಆಗಬೇಕಾಗುತ್ತದೆ, ಈ ಎಲ್ಲಾ ವ್ಯವಸ್ಥೆಗಳ ಬಗ್ಗೆ ತನಿಖೆ ಮಾಡಿಸುವಂತಹ ಕೆಲಸವಾಗಬೇಕಾಗುತ್ತದೆ. ಇನ್ನು ನನ್ನ ಜಿಲ್ಲೆಯ ಬಗ್ಗೆ, ಉಡುಪಿ ಜಿಲ್ಲೆ ಮತ್ತು ದಕ್ಷಿಣ ಜಿಲ್ಲೆ, ಇಲ್ಲಿ ಏನಾಗಿದೆ ಎಂದರೆ ಇದರ ಬಗ್ಗೆ ನಾನು ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರ ಬಳಿ ಕೇಳಿಕೊಂಡೆ, ಬರದ ಬಗ್ಗೆ ಚರ್ಚೆಯಾದಂತಹ ಸಂದರ್ಭದಲ್ಲಿ ಕಳೆದ ಬಾರಿ "ಶಾಸಕರ ನಿಧಿ" ಯನ್ನು ಬರ ಪರಿಹಾರಕ್ಕೋಸ್ಕರ ತೆಗೆದುಕೊಂಡರು. ಆದರೆ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಹಾಗೂ ಮಡಿಕೇರಿ, ಭಾಗಕ್ಕೆ ಬರ ಕಾಮಗಾರಿಯ ಸೌಲಭ್ಯ ಸಿಗಲಿಲ್ಲ, ಮತ್ತೆ ಚಿಕ್ಕಮಗಳೂರು ಭಾಗಕ್ಕೆ ಸಿಗಲಿಲ್ಲ, ಅದಕ್ಕೋಸ್ಕರ ನಮಗೆ ಶಾಸಕರ ನಿಧಿಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ, ಮತ್ತೆ ಈ ಬರ ಕಾಮಗಾರಿಯಲ್ಲಿ ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಜಾಸ್ತಿಯಾಗಿದೆ, ನಾನು ಇಲ್ಲಿ ಬರದ ಬಗ್ಗೆ ಚರ್ಚೆಯಾದಂತೆ ಸಂದರ್ಭದಲ್ಲಿ, ಮಾನ್ಯ ಬಿ.ಎನ್.ಬಚ್ಚೇಗೌಡರು ಪ್ರಶ್ನೆಯನ್ನು ಕೇಳಿದಂತಹ ಸಂದರ್ಭದಲ್ಲಿ, ನಾನು ಸಹ ಒಂದು ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ಮಾನ್ಯ ಕೋಳಿವಾಡ್‌ರವರು ಉತ್ತರವನ್ನು ಕೊಟ್ಟರು, ಅದನ್ನು ನಾನು ಓದಿ ಹೇಳುತ್ತೇನೆ, "ಯಾವುದೇ ಸದಸ್ಯರು ನನಗೆ ಇಂತಹ ಸ್ಥಳಗಳಲ್ಲಿ ತೊಂದರೆ ಇದೆಯೆಂದು ಫೋನ್ ಮಾಡಿ ತಿಳಿಸಿದರೆ, ನಾವು 24ಗಂಟೆಯೊಳಗೆ ತೊಂದರೆ ಸಾಲ್ವ್ ಮಾಡುತ್ತೇವೆ," ಯಾರಾದರೂ ಹೇಳಿದ್ದೀರಾ ಎಂದು ಕೇಳಿದರು. ಅದಕ್ಕೆ ನಾನು ತಕ್ಷಣ ಪತ್ರವನ್ನು ಬರೆದೆ, ಮತ್ತೆ ದೂರವಾಣಿಯ ಮುಖಾಂತರ ಸಂಪರ್ಕಿಸಿದೆ, ಅವರು ನನ್ನ ಪತ್ರವನ್ನು ಜಿಲ್ಲಾ ಪಂಚಾಯತ್‌ನ ಚೇಫ್ ಎಕ್ಸಿಕ್ಯುಟೀವ್ ಆಫೀಸರ್‌ಗೆ ಕಳುಹಿಸಿಕೊಟ್ಟರು, ಇಲ್ಲಿ ಜಿಲ್ಲಾ ಪಂಚಾಯತ್‌ಗೆ ಎಕ್ಸಿಕ್ಯುಟೀವ್ ಆಫೀಸರ್ ಇದ್ದ ಹಣದಲ್ಲಿ ಮಾಡಿಸುವುದಾದರೆ ನಾನೇ ಹೋಗಿ ಮಾಡಿಸುತ್ತಿದ್ದೆ, ಆದರೆ ಅದನ್ನು

ನಾನೇ ಹೋಗಿ ಅವರ ಕೈಯಲ್ಲಿ ಮಾಡಿಸುತ್ತಿದ್ದೆ, ಅವರು ಮಾಡುತ್ತಿದ್ದರು. ಇವರು ಹೇಳಿದ್ದು, ನಾನೇ ಸಾಲ್ವ್ ಮಾಡುತ್ತೇನೆ, ಹಣವನ್ನು ಒದಗಿಸುತ್ತೇನೆಂದು ಇದೇ ಸದನದಲ್ಲಿ ಹೇಳಿದ್ದರು, ಆದರೆ ಆ ರೀತಿ ಅವರು ಮಾಡಲಿಲ್ಲ, ಇಲ್ಲಿ ಏನಾದರೂ ರಾಜಕೀಯ ಮಾಡಿದ್ದಾರಾ ಎಂಬ ಪ್ರಶ್ನೆ ಉದ್ಭವವಾಗಿದೆ.

ಉಪಾಧ್ಯಕ್ಷರು:– ಇನ್ನೂ ಬಹಳ ಜನರು ಮಾತನಾಡುವವರು ಇದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಸಚಿವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದರಲ್ಲಿ ದಿನಾಂಕ:5.4.2003 ರಲ್ಲಿ ಸ್ಥಳೀಯ ಸಂಸ್ಥೆಗಳ ಸಮಾವೇಶವನ್ನು ಮಾಡುವ ಬಗ್ಗೆ, ಒಂದು ಸಭೆಯನ್ನು ಕರೆದರು, ಇದನ್ನು ಕರೆದು ಚೀಫ್ ಸೆಕ್ರೆಟರಿಯವರಿಗೆ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ, ಮಾನ್ಯ ಸಚಿವರು ಪತ್ರವನ್ನು ಬರೆಯುತ್ತಾರೆ, ನಾನು ಈ ಪತ್ರವನ್ನು ಸಭೆಯಲ್ಲಿ ಓದಲು ಅವಕಾಶವನ್ನು ತಾವು ಮಾಡಿಕೊಡಬೇಕು. ಅದು ಈ ರೀತಿ ಇದೆ ಕರ್ನಾಟಕ ರಾಜ್ಯ ಮುಖ್ಯಮಂತ್ರಿಯವರು ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ಆದೇಶದಂತೆ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಿನಾಂಕ:5.4.03 ಶನಿವಾರದಂದು ಕರ್ನಾಟಕ ಸ್ಥಾನೀಯ ಸಂಸ್ಥೆಗಳ ಸಮ್ಮೇಳನವನ್ನು ನಿರ್ಧರಿಸಿದ್ದು, ಅದಕ್ಕೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಶ್ರೀ ಮಣಿಶಂಕರ ಅಯ್ಯರ್‌ರವರು ಆಗಮಿಸಲಿದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುವವರು ಇದ್ದಾರೆ, ತಾವು ತಮ್ಮ ಜಿಲ್ಲೆಯಿಂದ ಈ ಕಳೆಕಂಡ ಜನಪ್ರತಿನಿಧಿಗಳನ್ನು ಕರೆದುಕೊಂಡು ಬರುವುದು, ಹಾಗೂ ಅವರನ್ನು ಪುನ: ಕಳುಹಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಎರಡನೆಯದಾಗಿ ತಮ್ಮ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಇವರು ಒಂದು ವೇಳೆ ಕಾಂಗ್ರೆಸ್ ಪಕ್ಷದವರು ಆಗದೇ ಇದ್ದರೆ, "ಈ ಪತ್ರವನ್ನು ಮಾನ್ಯ ಸಚಿವರು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯವರಿಗೆ ಬರೆದಂತಹ ಪತ್ರವಾಗಿದೆ.," ಇವರು ಒಂದು ವೇಳೆ ಕಾಂಗ್ರೆಸ್ ಪಕ್ಷದವರು ಆಗದೇ ಇದ್ದರೆ, ಜಿಲ್ಲೆಯಿಂದ ಜಿಲ್ಲಾಪಂಚಾಯತ್‌ನಲ್ಲಿ ವಿರೋಧಪಕ್ಷದ ನಾಯಕರು ಮತ್ತು ಉಪ ನಾಯಕರನ್ನು ಕರೆದುಕೊಂಡು ಬರತಕ್ಕದ್ದು, "ಅಂದರೆ ಇಲ್ಲಿ ಕಾಂಗ್ರೆಸ್ ಪಕ್ಷದವರು ಅಧ್ಯಕ್ಷರು, ಉಪಾಧ್ಯಕ್ಷರು ಆಗಿದ್ದರೆ, ಅವರನ್ನೇ ಕರೆದುಕೊಂಡು ಬನ್ನಿ, ಇಲ್ಲದೇ ಹೋದರೆ ಕಾಂಗ್ರೆಸ್ ಪಕ್ಷದವರು ವಿರೋಧಪಕ್ಷದಲ್ಲಿರುತ್ತಾರೆ, ಆ ಅಧ್ಯಕ್ಷರು, ಉಪಾಧ್ಯಕ್ಷರು, ಅವರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತಾರೆ, ಅದೇ ರೀತಿಯಲ್ಲಿ ಮುಂದೆ ಇವರು, ತಮ್ಮ ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ಉಪಾಧ್ಯಕರು, ಹಾಗೂ ವಿರೋಧಪಕ್ಷದ ನಾಯಕರು ಹಾಗೂ ಉಪನಾಯಕರು, ಹಾಗೂ ತಮ್ಮ ಜಿಲ್ಲೆಯಲ್ಲಿರುವ ನಗರ ಸಭೆಯ, ಪುರಸಭೆಗಳ, ಪಟ್ಟಣ ಪಂಚಾಯತ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಇವರೆಲ್ಲರನ್ನು ಕರೆದುಕೊಂಡು ಬರುವಂಥಾದ್ದು, ಪ್ರತಿಯೊಂದು ತಾಲ್ಲೂಕಿನಲ್ಲಿ, ತಾಲ್ಲೂಕಿಗೆ ಒಬ್ಬರಂತೆ, ಕಾಂಗ್ರೆಸ್ ಪಕ್ಷದ ಪಂಚಾಯತ್ ಅಧ್ಯಕ್ಷರನ್ನು ಕರೆದುಕೊಂಡು ಬರುವಂಥಾದ್ದು", ಅಂದರೆ ಇಲ್ಲಿ ನಾವು ಏನು ತಪ್ಪನ್ನು ಮಾಡಿದ್ದೇವೆ? ಇಲ್ಲಿ ಮಾನ್ಯ ಸಚಿವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಿಗೆ, ಪತ್ರವನ್ನು ಬರೆದಿದ್ದರೆ ನಾನು ಇದನ್ನು ವಿರೋಧ ಮಾಡುತ್ತಿರಲಿಲ್ಲ. ಆದರೆ ಇಲ್ಲಿ ಮಾನ್ಯ ಸಚಿವರು ಪತ್ರವನ್ನು ಬರೆದಿರುವಂಥಾದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ, ಅಂದರೆ ಇವರು ನಾವು

ಹೇಳಿದಂತಹ ಕೆಲಸವನ್ನು ಮಾಡಿಕೊಡುತ್ತಾರಾ? ಇದನ್ನು ಸದನದಲ್ಲಿ ಕೇವಲ ನಾಟಕಕ್ಕೋಸ್ಕರ ಉತ್ತರವನ್ನು ಕೊಟ್ಟಿದ್ದಾರಾ? ಇದನ್ನು ತಮ್ಮ ಮುಖೇನಾ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ, ಇನ್ನು ಮುಂದೆ ಈ ರೀತಿಯ ಪತ್ರವನ್ನು ಬರೆಯಬಾರದು, ಪಕ್ಷದ ಕಾರ್ಯಕ್ರಮ ಇದ್ದರೆ, ಪಕ್ಷದ ಮುಖಂಡರಿಗೆ ಪತ್ರವನ್ನು ಬರೆಯಲಿ. ಇದನ್ನು ಮಾನ್ಯ ಕೋಳಿವಾಡ್‌ರವರು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಬರೆದಿರುವಂಥದ್ದು, ಇಡೀ ರಾಜ್ಯದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಬರೆದಿರುವಂಥಾದ್ದು ಪತ್ರದ ಕೊನೆಯಲ್ಲಿ ಇವರು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಎಂದು ಬರೆದಿದ್ದಾರೆ,

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಪಕ್ಷದ ಕಾರ್ಯಕರ್ತರು ಎನ್ನುವ ರೀತಿಯಲ್ಲಿ ಪತ್ರವನ್ನು ಬರೆದರೆ, ಇದು ಬಹಳ ಅಪಚಾರವಾಗಿದೆ, ಇದು ಅವರು ಮಾಡುವ ಕರ್ತವ್ಯನಾ? ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಇದ್ದಾರೆ, ಇದರ ಬಗ್ಗೆ ಅವರು ವಿವರಣೆಯನ್ನು ಕೊಡಲಿ, ಇದು ಸರಿಯಲ್ಲ, ಮಾನ್ಯ ಸದಸ್ಯರು ಸಭೆಯಲ್ಲಿ ಓದಿ ಹೇಳಿದ್ದಾರೆ, ಇದರ ಬಗ್ಗೆ ಎನ್‌ಕ್ವಾಯರಿ ಮಾಡಬೇಕಾಗುತ್ತದೆ, ಇದು ಯಾವ ಕಾಲದಲ್ಲೂ ನಡೆಯದೇ, ಇರುವಂಥಾದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಮಾನ್ಯ ಉಪಾಧ್ಯಕ್ಷರೇ, ಈ ಪತ್ರದ ಜೆರಾಕ್ಸ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಅರಗಜ್ಞಾನೇಂದ್ರ:- ಇಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಯಾವ ರೀತಿಯಾಗಿ ವೆಹಿಕಲ್ ಖರ್ಚುಗಳನ್ನು ಹಾಕಿದ್ದಾರೆ, ಅದನ್ನು ವಸೂಲಿ ಮಾಡಬೇಕಾಗುತ್ತದೆ, ಇದರ ಅರ್ಥ ಏನು?

ಶ್ರೀ ಹಂಪನಗೌಡ ಬಾದರ್ಲಿ:- ಮಾನ್ಯ ಉಪಾಧ್ಯಕ್ಷರೇ, ಈ ರೀತಿಯಾಗಿ ಮಂತ್ರಿಗಳ ಕಚೇರಿಗಳು ಪಕ್ಷದ ಕಚೇರಿಗಳಾದರೆ ಪರಿಸ್ಥಿತಿ ಏನು ಆಗುತ್ತದೆ?

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಗುರುತರವಾದಂತಹ ಅಪಾದನೆಯನ್ನು ಮಾಡಿದ್ದಾರೆ, ಇದರ ಬಗ್ಗೆ ಎನ್‌ಕ್ವಾಯರಿಯಾಗ ಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಮಾನ್ಯ ಉಪಾಧ್ಯಕ್ಷರೇ, ಈ ರೀತಿಯ ಪತ್ರಗಳು ಹೋಗಿರುವ ಕಾರಣದಿಂದಲೇ, ವಿರೋಧಿಪಕ್ಷದ ಶಾಸಕರುಗಳು, ಸರ್ಕಾರದ ಅಧಿಕಾರಿಗಳಿಗೆ ಪತ್ರಗಳನ್ನು ಕೊಟ್ಟು ಇಂತಹ ಕಾಮಗಾರಿಗಳು ಆಗಬೇಕೆಂದು, ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದು ಹೇಳಿದರೆ, ಯಾವುದೂ ಮಾಡುವುದಿಲ್ಲ. ಅದು ನೇರವಾಗಿ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಮಾಡಿ, ಎಂದು ಮಾನ್ಯ ಮಂತ್ರಿಗಳಿಂದ ಪತ್ರ ಹೋಗುತ್ತಾ ಇದ್ದರೆ, ವಿರೋಧ ಪಕ್ಷದ ಶಾಸಕರ ಕೆಲಸಗಳನ್ನು ಏನು ಮಾಡುತ್ತಾರೆ? ಈ ಅಧಿಕಾರಿ ವರ್ಗ ಕಾಂಗ್ರೆಸ್ ಪಕ್ಷದ್ದೋ ಅಥವಾ ಈ ರಾಜ್ಯದ ಜನತೆಗೆ ಸಂಬಂಧಪಟ್ಟದ್ದೋ? ಕಾಂಗ್ರೆಸ್ ಪಕ್ಷ ಈ ರೀತಿಯಾಗಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರುವಂಥಾದ್ದಕ್ಕೆ ಇದಕ್ಕಿಂತ ಹೆಚ್ಚು ಸ್ಪಷ್ಟವಾದಂತಹ ಉದಾಹರಣೆ ಯಾವುದು ಬೇಕು?

ಶ್ರೀ ಬಿ.ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೇ, ಕಾಂಗ್ರೆಸೀಕರಣಕ್ಕೆ ಇದಕ್ಕಿಂತ ಬೇರೆ ಇನ್ನೊಂದು ನಿದರ್ಶನವಿಲ್ಲ, ಯಾವುದಾದರೂ ಒಂದು ಆಡಳಿತದ ಸರ್ಕಾರ, ಆಡಳಿತ ಪಕ್ಷ, ಪಕ್ಷದ ಕಾರ್ಯಕರ್ತರನ್ನು, ನಾವು ಎಷ್ಟೊ ಸಲ ನಾವು ನೋಡಿದ್ದೇವೆ, ಸರ್ಕಾರಿ ಸಮಾರಂಭಗಳಲ್ಲಿ, ಪಕ್ಷದ ಅಧ್ಯಕ್ಷರುಗಳನ್ನು ಕೂರಿಸಿಕೊಂಡು, ಅಧಿಕಾರಿಗಳು ಪಕ್ಷದ ಅಧ್ಯಕ್ಷರುಗಳ ಹೆಸರುಗಳನ್ನು

ಹೇಳತಕ್ಕಂಥಾದ್ದು, ಕಾಂಗ್ರೆಸ್‌ನ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರುಗಳನ್ನು ಜೊತೆಗೆ ಕರೆದುಕೊಂಡು ಹೋಗಬೇಕೆಂದು ಹೇಳುವಂಥಾದ್ದು, ಯಾವ ನೀತಿ ನಿಮ್ಮ ಸರ್ಕಾರದ್ದು? ಇದು ನಾಚಿಕೆಗೇಡು ಆಗುವಂಥಾದ್ದು.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಉಪಾಧ್ಯಕ್ಷರೇ, ಅವರು ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಕಾಂಗ್ರೆಸ್ ಪಕ್ಷದ ಮೆಂಬರ್ ಆಗಿದ್ದರೋ, ಏನೋ, ಅದನ್ನು ಮರೆತುಬಿಟ್ಟು ಬರೆದಿರಬೇಕು, ಅದನ್ನೇ ದೊಡ್ಡದು ಮಾಡಿ....

ಶ್ರೀ ಬಿ. ಸೋಮಶೇಖರ್:- ನಾನು ಹುಟ್ಟಿದಾಗಲಿಂದಲೂ ಕಾಂಗ್ರೆಸ್ ಅಲ್ಲವೇ ಅಲ್ಲ, ನಾವು ಜನತಾದಳವಾಗಲೀ, ಬಿಜೆಪಿಯಾಗಲೀ, ಈ ರೀತಿ ಮಾಡುವುಂಥಾದ್ದು ಸರಿಯಲ್ಲ. ಎಂಎಲ್ಎ, ಎಂಎಲ್‌ಸಿ, ಎಂಪಿಗಳು, ಹೇಳಿದಂಥವರನ್ನು ವರ್ಗಾವಣೆ ಮಾಡುವಂಥಾದ್ದು, ಇನ್ನೊಂದು ಕಾಂಗ್ರೆಸ್‌ನ ಅಧ್ಯಕ್ಷರುಗಳನ್ನು ಕರೆದು ಟೂರ್‌ಗೆ ಕರೆದುಕೊಂಡು ಹೋಗಿ, ಎಂದು ಹೇಳುವಂಥಾದ್ದು, ಇದು ಯಾವ ನೀತಿ ನಿಮ್ಮ ಸರ್ಕಾರದ್ದು, ಏನಾದರೂ ರಾಜ್ಯಾಂಗ ಬದ್ಧರಾಗಿ ಕೆಲಸವನ್ನು ಮಾಡುತ್ತಿದ್ದಿರಾ ಅಥವಾ ಪಕ್ಷದ ಸಿದ್ಧಾಂತದ ರೀತಿಯಲ್ಲಿ ಕೆಲಸವನ್ನು ಮಾಡಿತ್ತಿದ್ದಿರಾ? ಚುನಾವಣೆಗಳಲ್ಲಿ ಪಕ್ಷಗಳು ಮಾಡಬೇಕು, ಆದರೆ ಸರ್ಕಾರ ಬಂದ ತಕ್ಷಣ ಕಾನ್ಸ್ಟಿಟ್ಯೂಶನ್ ಬರಬೇಕು, ಇಲ್ಲಿ ಯಾರು ಎಲೆಕ್ಟೆಡ್ ಮೆಂಬರ್ಸ್ ಇರುತ್ತಾರೆ, ಅವರು ಯಾವ ಪಕ್ಷದವರೇ ಆಗಲಿ, ಅದನ್ನು ಬಿಟ್ಟು ಇದು ಏನು ಕಾಂಗ್ರೆಸ್ಸೀಕರಣ ಮಾಡುತ್ತಿರುವಂಥಾದ್ದು? ಈ ರೀತಿ ಒಂದಲ್ಲ, ಎರಡಲ್ಲ, ಅನೇಕ ಘಟನೆಗಳನ್ನು ಹೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಮಾನ್ಯ ಉಪಾಧ್ಯಕ್ಷರೇ, ಇದು ಅಧಿಕಾರದ ದುರುಪಯೋಗದ ಸ್ಪಷ್ಟ ಉದಾಹರಣೆಯಾಗಿದೆ, ಇದು ರಾಜ್ಯದಾದ್ಯಂತ ನಡೆದಿದೆ, ಇದು ಒಂದು ಕಡೆಯಲ್ಲ, ಇದು ಒಂದು ಪತ್ರ ಸಿಕ್ಕಿರುವಂಥಾದ್ದು ಮಾನ್ಯ ಸದಸ್ಯರು ಸಭೆಯಲ್ಲಿ ಹೇಳಿದ್ದಾರೆ, ಇದು ದೊಡ್ಡ ವಿಷಯ, ಮಾನ್ಯ ಉಪಾಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು.

ಉಪಾಧ್ಯಕ್ಷರು:- ಈ ವಿಚಾರ ಈಗ ಸರ್ಕಾರದ ಗಮನಕ್ಕೆ ಬಂದಿದೆ, ತಾವು ಏಕೆ ಮತ್ತೊಮ್ಮೆ ಹೇಳುವುದು? ನಾನು ಆ ಪತ್ರವನ್ನು ಅವರಿಗೆ ಕಳುಹಿಸಿಕೊಡುತ್ತೇನೆ, ಅವರು ಅದನ್ನು ಕಳುಹಿಸಿಕೊಡಲಿ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಈ ರೀತಿ ಅಧಿಕಾರದ ದುರುಪಯೋಗ ಮಾಡಿಕೊಂಡು, ಅಧಿಕಾರಿಗಳಿಗೆ ವಿರೋಧಿ ಪಕ್ಷದ ಶಾಸಕರು ಹೇಳಿದಂತಹ ಕೆಲಸಗಳನ್ನು ಮಾಡದೇ, ಇರುವಂಥ ನಿದರ್ಶನಗಳನ್ನು ಕೊಟ್ಟಿರುವಂಥಾದ್ದು ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಸರ್ಕಾರ ಇದರ ಬಗ್ಗೆ ಸದನದಲ್ಲಿ ಹೇಳಿಕೆಯನ್ನು ಮಾಡಬೇಕಾಗುತ್ತದೆ. ಬರಿ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಸಾಕಾಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಜೆರಾಕ್ಸ್ ಪತ್ರದ ಮೇಲೆ ಇಲ್ಲಿ ಚರ್ಚೆ ಮಾಡುತ್ತಿದ್ದಾರೆ, ಅದು ಮೂಲ ಪತ್ರ ಅದಲ್ಲ, Xerox can be manipulated.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಅಧ್ಯಕ್ಷರೇ, ಆ ಪತ್ರವನ್ನು ವಾಪಸ್ ತೆಗೆದುಕೊಳ್ಳಲಿ.

ಶ್ರೀ ಆರಗ ಜ್ಞಾನೇಂದ್ರ:- ಆ ಪತ್ರವನ್ನು ವಾಪಸ್ ತೆಗೆದುಕೊಳ್ಳಲಿ, ಇಲ್ಲದಿದ್ದರೆ ಮಾನ್ಯ ಸದಸ್ಯರು ಹೇಳಿದ್ದು ತಪ್ಪೆಂದು ಹೇಳಲಿ. ಬಹಳ ಗುರುತರವಾದ ಆಪಾದನೆ ಇರುವಾಗ ಸರ್ಕಾರದ ಪ್ರತಿಕ್ರಿಯೆ ಏನು?

ಉಪಾಧ್ಯಕ್ಷರು:- ಉತ್ತರ ಕೊಡುವಾಗ ಹೇಳುತ್ತಾರೆ : ಕಾಗದ ಕಳುಹಿಸಿಕೊಡಿ.

ಶ್ರೀ ಬಿ. ಸೋಮಶೇಖರ್:- ಮಂತ್ರಿಗಳ ಪತ್ರದಲ್ಲಿ ಕಾಂಗ್ರೆಸ್ ಎಂದಾಗಲಿ, ಜನತಾದಳ ಎನ್ನುವ ಶಬ್ದಗಳೇ ಬರಬಾರದು.

4.50 ಪಿಎಂ

ಶ್ರೀ. ಆರಗ ಜ್ಞಾನೇಂದ್ರ:- ಸರ್ಕಾರ ಸರ್ಕಾರಿ ನೌಕರರನ್ನು ಕಾಂಗ್ರೆಸಿಗರೆಂದು ಭಾವಿಸಿದಂತಿದೆ, ಒಬ್ಬ ಸಿಇಒಗೆ ಮಂತ್ರಿಗಳು ಪಕ್ಷದ ಕಾರ್ಯಕ್ರಮವೆಂದು ಭಾವಿಸಿ ಪತ್ರ ಬರೆಯುವುದಾದರೆ ಸಂವಿಧಾನಾತ್ಮಕವಾಗಿ ಸರ್ಕಾರ ನಡೆಸುವುದಾದರೂ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮಂತ್ರಿಗಳಾದ ಕೋಳಿವಾಡ್‌ರವರು ಜೆಡ್‌ಪಿಯ ಸಿಇಒಗೆ ಕಾಂಗ್ರೆಸ್ ಅಲ್ಲದವರನ್ನು ಸಮಾರಂಭಕ್ಕೆ ಕರೆದುಕೊಂಡು ಬರಬೇಡಿ ಎಂದು ಸ್ಪಷ್ಟವಾಗಿ ಪತ್ರದಲ್ಲಿ ಹೇಳಿರುವುದನ್ನು ಮಾನ್ಯ ಸದಸ್ಯರು ಹೇಳುತ್ತಿರುವಾಗ, ಸರ್ಕಾರಕ್ಕೆ ಇದಕ್ಕಿಂತ ಮತ್ತೊಂದು ಸಾಕ್ಷಿ ಏನು ಬೇಕಾಗಿದೆ? ಮಂತ್ರಿಗಳು ಮಾಡಿರುವ ಕೆಲಸ ಸರಿ ಇದೆಯೊ ಇಲ್ಲವೊ ಎನ್ನುವುದನ್ನು ಸರ್ಕಾರ ಹೇಳಬೇಕು, ಇದು ಸಂವಿಧಾನಕ್ಕೆ ಬಾಹೀರವಾಗಿ ಒಬ್ಬ ಮಂತ್ರಿಗಳು ಪಕ್ಷದ ಕಾರ್ಯಕರ್ತರಿಗೆ ಬರೆಯುವಂತೆ ಸಿಇಒಗೆ ಪತ್ರ ಬರೆದಿದ್ದಾರೆ, ಸರ್ಕಾರ ತಪ್ಪೆಸಗಿರುವುದು ಸ್ಪಷ್ಟವಾಗಿರುವಾಗ ಕ್ಷಮೆ ಯಾಚಿಸಬೇಕು.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಜಯಪ್ರಕಾಶ ಹೆಗ್ಡೆಯವರು, ಆ ಪತ್ರವನ್ನು ನನಗೆ ಕಳುಹಿಸಿಕೊಡಿ. ಅದನ್ನು ಪರಿಶೀಲನೆ ಮಾಡಲಾಗುವುದು.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):- ಮಾನ್ಯ ಉಪಾದ್ಯಕ್ಷರೆ, ಒಂದು ಪತ್ರ ಈ ರೀತಿಯಾಗಿ ಮಂತ್ರಿಗಳು ಬರೆದಿದ್ದಾರೆಂದು ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ, ಪತ್ರ ಬರೆದ ಮಂತ್ರಿಗಳು ಸದನದಲ್ಲಿ ಪ್ರಸ್ತುತ ಇಲ್ಲ, ಪತ್ರವನ್ನು ಕಳುಹಿಸಿಕೊಡಲಿ, ಅದರ ಸಥ್ಯಾಸತ್ಯತೆಯನ್ನು ಪರಿಶೀಲಿಸಿ ಸರ್ಕಾರ ತನ್ನ ಉತ್ತರ ಕೊಡುವುದು, ಯಾವುದಕ್ಕೂ ಸಮಯ ಬೇಕಲ್ಲವೇ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಸಗೀರ್‌ರವರೆ, ಇವತ್ತು ಸಚಿವರಾದ ಕೋಳಿವಾಡ್‌ರವರು ಮಾಡಿದ್ದಾರೆ, ನಾಳೆ ನೀವು ಮಾಡಬಹುದು, ಆ ರೀತಿ ಮಾಡುವುದು ಬೇಡ ಕ್ಷಮೆ ಯಾಚಿಸಿ ಎಂದು ಹೇಳುತ್ತಿರುವುದು, ಮಂತ್ರಿಗಳು ಬರಬೇಕೆಂದೇನೂ ಇಲ್ಲ, ಈ ವಿಚಾರಗಳು ತಮಗೆ ಗೊತ್ತಿರುವಂಥದ್ದೇ.

(ಗೊಂದಲ)

ಶ್ರೀ ಬಿ. ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೆ, ಸಂವಿಧಾನಾತ್ಮಕವಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ಮಂತ್ರಿಗಳು ಪಕ್ಷದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಜಿಲ್ಲೆಯ ಸಿಇಒರವರಿಗೆ ಕಾಂಗ್ರೆಸಿಗರನ್ನೇ ಕರೆತನ್ನಿ ಎಂದು ಬರೆದಿರುವ ಪತ್ರವನ್ನು ಮಾನ್ಯ ಸದಸ್ಯರು ಸ್ಪಷ್ಟವಾಗಿ ಈ ಸದನದ ಗಮನಕ್ಕೆ ತಂದಿದ್ದಾರೆ. ಮಂತ್ರಿಯೊಬ್ಬರು ಈ ರೀತಿ ಮಾಡಿದ್ದಾರಲ್ಲಾ ಎನ್ನುವ ಬಗ್ಗೆ ನಿಷ್ಪಕ್ಷಪಾತದಿಂದ ಸರಿಯಿಲ್ಲವೆಂದು ಸರ್ಕಾರ ಏತಕ್ಕೆ ಒಪ್ಪಿಕೊಳ್ಳಬಾರದು, ಕ್ಷಮೆ ಏತಕ್ಕೆ ಕೇಳಬಾರದು ಇದರಲ್ಲಿ ಹಿಂದುಮುಂದು ನೋಡುವ ಪ್ರಶ್ನೆ ಏನಿದೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಆ ಪತ್ರದ ಕಂಟೆಂಟ್ ಏನೆಂಬುದು ಗೊತ್ತಿಲ್ಲ. ಮಾನ್ಯ ಉಪಾಧ್ಯಕ್ಷರು ಕಳುಹಿಸಿಕೊಡಿ ಎಂದು ಹೇಳಿದ್ದಾರೆ, ಕಳುಹಿಸಿಕೊಡಲು, ಸಂಬಂಧಿಸಿದ ಮಂತ್ರಿಗಳು ಸದನದಲಿಲ್ಲ, ಈ ಬಗ್ಗೆ ಪರಿಶೀಲಿಸಿ ಸರ್ಕಾರ ಉತ್ತರವನ್ನು ಕೊಡುತ್ತದೆ, ಇದರಲ್ಲಿ ಹಿಂದು ಮುಂದು ನೋಡುವ ಪ್ರಶ್ನೆ ಇಲ್ಲವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್:– ಪತ್ರವನ್ನು ಕಳುಹಿಸಿಕೊಡಲಾಗಿದೆಯಲ್ಲಾ, ತಾವು ಕಾನೂನು ಸಂಸದೀಯ ಮಂತ್ರಿಯಾಗಿ, ಇದು ತಪ್ಪು ಎಂದು ಹೇಳುವುದಕ್ಕೆ ಮುಜುಗರವೇತಕ್ಕೆ ಅದನ್ನು ಹೇಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:– ನಾನು ಆಗಲೇ ಹೇಳಿದಂತೆ ಕಳುಹಿಸಿಕೊಡಲಾಗಿದೆ ಪರಿಶೀಲನೆ ಮಾಡುತ್ತೇವೆ, ಸರ್ಕಾರ ಉತ್ತರ ಕೊಡುತ್ತದೆ, ಆದರೆ ನೀವು ಉತ್ತರವನ್ನು ಈಗಲೇ ಕೊಡಿ ಎಂದು ಇನ್‌ಸಿಸ್ಟ್ ಮಾಡಲು ಬರುವುದಿಲ್ಲ.

(ಗೊಂದಲ)

ಶ್ರೀ ಬಿ. ಸೋಮಶೇಖರ್:– ಕಾನೂನು ಸಚಿವರಾಗಿ ತಮ್ಮಿಂದ ಈ ರೀತಿಯ ಉತ್ತರವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ....

(ಗೊಂದಲ)

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಈಗ ಪತ್ರವನ್ನು ತರಿಸಿಕೊಂಡು ತಾವೇನು ಮಾಡಬೇಕೆನ್ನುವ ಬಗ್ಗೆ ವಿಚಾರ ಮಾಡಿ, ನಂತರ ಕ್ರಮ ಕೈಗೊಳ್ಳಲಾಗುತ್ತದೆ, ಈಗ ಏಕಾಏಕಿ ಉತ್ತರ ಕೊಡಿ ಎಂದು ಹೇಳಿದರೆ ಎಲ್ಲಿ ಸಿದ್ಧವಾಗುತ್ತದೆ? ಆ ಪತ್ರವನ್ನು ತಾವು ತರಿಸಿಕೊಳ್ಳಿ.

ಉಪಾಧ್ಯಕ್ಷರು:– ಸಂಬಂಧಪಟ್ಟ ಮಂತ್ರಿಗಳ ಸಮಜಾಯಿಷಿಯನ್ನು ಕೇಳಿ ಉತ್ತರ ಕೊಡಬೇಕಾಗುತ್ತದೆ, ಈಗ ಸದನದಲ್ಲಿ ಮಾನ್ಯ ಕೋಳಿವಾಡ್‌ರವರು ಇದ್ದಾರೆಯೇ?

ಶ್ರೀ ಎಸ್. ಸುರೇಶ್ ಕುಮಾರ್:– ಸನ್ಮಾನ್ಯ ಕಾನೂನು ಸಚಿವರು ಸದನದಲ್ಲಿದ್ದಾರೆ. ಅವರು ಎಲ್ಲಾ ಪ್ರಕರಣದಲ್ಲೂ ವಕೀಲರು; ಸಮಜಾಯಿಷಿ ಉತ್ತರ ಕೊಡಲಿ.

ಶ್ರೀ ಬಿ.ಸೋಮಶೇಖರ್:– ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಸಂಸದೀಯ ವ್ಯವಹಾರಗಳ ಮಂತ್ರಿಗಳು ಇಲ್ಲೇ ಇದ್ದಾರೆ. ಆ ಪತ್ರವನ್ನು ನೋಡಿ ತಕ್ಷಣ ಪ್ರತಿಕ್ರಿಯೆ ಮಾಡಿದರೆ ತಮಗೆ ಗೌರವ ಉಳಿಯುತ್ತದೆ, ಇಲ್ಲದಿದ್ದರೆ, ಸುಮ್ಮನೆ ಕುಳಿತು react ಮಾಡಿದರೆ, it will give you adverse effect.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೇ, ಈ ಪತ್ರ ಬರೆದಿರತಕ್ಕಂಥದ್ದು ನಮ್ಮ ಪಕ್ಷದ ಚುನಾಯಿತ ಪ್ರತಿನಿಧಿಗಳ ಒಂದು ಸಭೆ ನಡೆಯುತ್ತದೆ, ಕಾಂಗ್ರೆಸ್ ಅಧ್ಯಕ್ಷರು ಬರುತ್ತಿದ್ದಾರೆ, ಮೇಲ್ಗಡೆಯಿಂದ ವರ್ಕಿಂಗ್ ಕಮಿಟಿಯ ಸದಸ್ಯರಾದ ಹಿರಿಯ ನಾಯಕರು ಬರುತ್ತಿದ್ದಾರೆ. ಆ ಸಭೆಗೆ ಕಾಂಗ್ರೆಸ್ಸಿನ ಮುಖಂಡರನ್ನು ಕರೆದುಕೊಂಡು ಬನ್ನಿ ಎಂದು ಸ್ಥಳೀಯವಾಗಿ ಕಾಂಗ್ರೆಸ್ಸಿನ ಚುನಾಯಿತ ಸದಸ್ಯರಿಗೆ ಬರೆದಿರತಕ್ಕಂಥ ಪತ್ರ. ಇವರಿಗೆ ಇದಕ್ಕಿಂತ ಹೆಚ್ಚೇನಾದರೂ ಮಾಹಿತಿ ಬೇಕಿದ್ದರೆ...

SRI B. SOMASHEKAR:- Addressed to whom? Addressed to CEO.

ಶ್ರೀ ಡಿ.ಬಿ. ಚಂದ್ರೇಗೌಡ:- ಜಿಲ್ಲಾ ಉಸ್ತುವಾರಿ ಸಚಿವರಿಗೆ.

ಶ್ರೀ ಎಸ್. ಸುರೇಶ್ ಕುಮಾರ್:- ತಮ್ಮ ಜಾಣತನಕ್ಕೂ ಒಂದು ಲಿಮಿಟ್ ಇರಬೇಕು. ಪತ್ರದ ಆ ಕಡೆ ನೋಡಿ.

ಶ್ರೀ ಯು.ಆರ್. ಸಭಾಪತಿ:- ಯಥಾಪ್ರತಿಯನ್ನು ಸಿ ಇ ಒ ಗೆ ಕೊಟ್ಟಿದ್ದಾರೆ. ನೇರವಾಗಿ ಅವರಿಗೆ ಬರೆದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಜಿಲ್ಲಾ ಉಸ್ತುವಾರಿ ಸಚಿವರಿಗೆ ಬರೆದ ಪತ್ರವಿದು.

ಶ್ರೀ ಎಸ್. ಸುರೇಶ್ ಕುಮಾರ್:- ಅಲ್ಲಿ ನೋಡಿ ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಕಾಪಿಯನ್ನು ಸಿ ಇ ಒ ಗೆ ಹಾಕಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:- ಅವರಿಗೆ ಕಾಪಿಯನ್ನು ಏಕೆ ಹಾಕಿದರು?

ಶ್ರೀ ಬಿ. ಸೋಮಶೇಖರ್:- ಅವರಿಗೆ ಕಾಪಿ ಹಾಕಲು ಅವರು ನಿಮ್ಮ ಪಕ್ಷದ ಜನರಲ್ ಸೆಕ್ರೆಟರಿಯೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಸಂಬಂಧಪಟ್ಟ ಸಚಿವರು ಬರಲಿ, ಕ್ಲಾರಿಫಿಕೇಷನ್ ಕೊಡಿಸುತ್ತೇವೆ.

ಶ್ರೀ ಬಿ. ಸೋಮಶೇಖರ್:- ಜಿಲ್ಲಾ ಮಂತ್ರಿಗಳಿಗೆ ಬರೆಯಲಿ ಒಪ್ಪಿಕೊಳ್ಳೋಣ. ಏಕೆಂದರೆ, he happens to be a Congress nominee. ಆದರೆ ಸಿ ಇ ಒ ಗೆ ಬರೆಯುವುದಾದರೆ, is he a General Secretary of the Congress Party?

ಶ್ರೀ ಡಿ.ಬಿ. ಚಂದ್ರೇಗೌಡ:- ಅವರಿಗೆ ಕಾಪಿಯನ್ನಷ್ಟೇ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಬಿ. ಸೋಮಶೇಖರ್:- ಕಾಪಿ ಏಕೆ ಕೊಡಬೇಕು? ಅವರೇನು ಕಾಂಗ್ರೆಸ್ ಜನರಲ್ ಸೆಕ್ರೆಟರಿಯೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಏಕೆ ಕಳುಹಿಸಬೇಕು ಎಂದರೆ ಬೇಕಾದಷ್ಟು ಸಭೆ, ಕಮಿಟಿ ಮೀಟಿಂಗ್‌ಗಳು, ಮತ್ತೊಂದು ಆಗುತ್ತಿರುತ್ತವೆ, ಇದು ಅವರಿಗೆ ಗೊತ್ತಿದ್ದರೆ...

(ಗೊಂದಲ)

SRI B. SOMASHEKAR:- You must graciously, magnanimously ತಪ್ಪಾಗಿದೆ ಎಂದು ಒಪ್ಪಿಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಸಂಬಂಧಪಟ್ಟ ಮಂತ್ರಿಗಳು ಬರಲಿ ಎಂದು ಹೇಳಿದೆ. ಬಂದ ಮೇಲೆ ಅವರು ಉತ್ತರ ಹೇಳುತ್ತಾರೆ ಎಂದೂ ಸಹ ಹೇಳಿದೆ.

ಶ್ರೀ ಬಿ. ಸೋಮಶೇಖರ್:- ನಿಮಗೆ ಇದು ಗೊತ್ತಾಗುತ್ತದೆ. ಕೈಯಲ್ಲಿರುವ ಹುಣ್ಣಿಗೆ ಕನ್ನಡಿ ಬೇಕೇ? ತಾವು ಇಲ್ಲಿ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದೀರಿ. ನಾವೂ ಮಂತ್ರಿಗಳಾಗಿದ್ದೆವು. ದಯವಿಟ್ಟು ಗ್ರೇಷಿಯಸ್‌ಆಗಿ ಆಕ್ಸೆಪ್ಟ್ ಮಾಡಿಕೊಳ್ಳಿ. Don't try to defend.

ಶ್ರೀ ಡಿ.ಬಿ. ಚಂದ್ರೇಗೌಡ:- ಇದರಲ್ಲಿ ಯಾವ ಅಪರಾಧವೂ ನಮಗೆ ಕಾಣುವಿವುದಿಲ್ಲ.

ಶ್ರೀ ಬಿ. ಸೋಮಶೇಖರ್:- ಹಾಗಾದರೆ ಆಕ್ಸೆಪ್ಟ್ ಮಾಡಿಕೊಳ್ಳಿ, ಅದರಲ್ಲೇನಿದೆ? ಅದನ್ನು ಬಿಟ್ಟು ಏಕೆ ಡಿಫೆಂಡ್ ಮಾಡಿಕೊಳ್ಳುತ್ತೀರಿ?

ಉಪಾಧ್ಯಕ್ಷರು:- ಇನ್ನು ಮುಂದೆ ಈ ರೀತಿಯ ಗೊಂದಲದ ವಾತಾವರಣ ನಿರ್ಮಾಣವಾಗದ ಹಾಗೆ ನೋಡಿಕೊಳ್ಳಿ.

SRI B. SOMASHEKAR:- Hon'ble Chief Minister, let him say this is not correct. You are a seasoned politician.

ಉಪಾಧ್ಯಕ್ಷರು:- ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಿ ಎಂದು ಹೇಳಿದೆನಲ್ಲಾ ಅಲ್ಲಿಗೆ ಈ ವಿಷಯ ಮುಗಿಯಿತು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮ್ಮದು ಬಹಳ ಲಿಮಿಟೆಡ್ ಕ್ವೆಶ್ಚನ್. ಪತ್ರದ ಕಾಪಿ ಸಿಇಒಗೆ ಏಕೆ ಹೋಯಿತು ಎನ್ನುವುದಷ್ಟೇ ನಿಮ್ಮ ಕ್ವೊಶ್ಚನ್. ಅದು ನಿಮಗೆ ತಪ್ಪು ಎಂದು ಕಂಡುಬಂದರೆ......

ಶ್ರೀ ಬಿ. ಸೋಮಶೇಖರ್:- ಅದು ತಪ್ಪು ಎಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದು ಬರೆದಿರುವಂಥಾದ್ದು ಜಿಲ್ಲಾ ಉಸ್ತುವಾರಿ ಸಚಿವರಿಗೆ. ನೇರವಾಗಿ ಸಿ ಇ ಒ ಗೆ ಅಲ್ಲ. ಕಾಪಿ ಮಾತ್ರ ಅವರಿಗೆ ಏಕಾಗಿ ಹಾಕಿದ್ದಾರೆ ಎಂದರೆ....

ಶ್ರೀ ಬಿ. ಸೋಮಶೇಖರ್:- ಅದು ತಪ್ಪೋ, ಸರಿಯೋ ಅಷ್ಟೇ ಹೇಳಿ ಸಾಕು. ಜಾಸ್ತಿ ಇನ್ನೇನೂ ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಹೇಳಿದ ಹಾಗೆ ಕೇಳುವುದಕ್ಕಾಗುವುದಿಲ್ಲ. ನೀವು ತಪ್ಪು ಎಂದು ಹೇಳಿ ಎಂದು ಹೇಳಿದ ತಕ್ಷಣ ನಾವು ಹಾಗೆ ಹೇಳಲು ಆಗುತ್ತದೆಯೇ?

(ಗೊಂದಲ)

ಶ್ರೀ ಬಿ. ಸೋಮಶೇಖರ್:- ನಿಮಗಿಷ್ಟ ಬಂದ ಹಾಗೆ ಮಾತನಾಡಲು ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳಬೇಕೇ? You have to defend the Constitution. Both of us have to defend the constitution.

SRI D.B. CHANDRE GOWDA:- That is a different matter, ನೀವು ತಪ್ಪು ಎಂದು ಹೇಳಿ ಅಂದರೆ ಇದೇನು ಕೋರ್ಟ್,? as if you are leading evidence?

ಶ್ರೀ ಬಿ. ಸೋಮಶೇಖರ್:- ನೀವು ಮಾಡುತ್ತಾ ಇರುವ ಕೃತ್ಯ ಸರಿಯೇ, you tell us whether it is right or wrong, you cannot threaten us the Opposition like this.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವೂ ಕೂಡ ಸ್ವಲ್ಪ ಗಂಭೀರವಾಗಿ ಮಾತನಾಡಿ. ಈ ಜೆಸ್ಚರ್ಸ್..... 'ನಾನು ಹೇಳುವುದು ಕೇಳಿ, ನಾನು ಹೇಳಿದ ಹಾಗೆ ಉತ್ತರ ಕೊಡಿ' ಎಂದರೆ ಆಗುವುದಿಲ್ಲ. ಈ ಸದನವನ್ನು ಗಂಭೀರವಾಗಿ ನಡೆಸೋಣ.

ಶ್ರೀ ಬಿ. ಸೋಮಶೇಖರ್:- ಸರ್ಕಾರದ ಈ ಧೋರಣೆಯನ್ನು ನಾವು ಸಹಿಸಿಕೊಳ್ಳಲು ಆಗುವುದಿಲ್ಲ. ವಿರೋಧ ಪಕ್ಷದವರನ್ನು, ಕುಳಿತುಕೊಳ್ಳಿರೀ, ನಾನು ಹೇಳುವುದನ್ನು ಕೇಳಿ ಎನ್ನುವುದು ಇದೆಯಲ್ಲಾ, ಇದನ್ನು ಸಹಿಸಿಕೊಳ್ಳಲು ಆಗುವುದಿಲ್ಲ. ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿರುವವರು ಚಪ್ರಾಸಿಗಳೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ, ಆಗಲೇ ತಾವು ಪತ್ರವನ್ನು ಕಳುಹಿಸಿಕೊಡಿ ಎಂದು ಹೇಳಿದಿರಿ. ಅದನ್ನು ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ನೋಡಿ ಸರ್ಕಾರದವರು ಕ್ಲಾರಿಫಿಕೇಷನ್ ಕೊಡಲಿ.

SRI D.B. CHANDRA GOWDA:- You cannot dictate terms.

SRI B. SOMASHEKHAR:- You cannot treat us like this.

ಉಪಾಧ್ಯಕ್ಷರು:- ನೀವು ವಿಷಯವನ್ನು ಅವರ ಗಮನಕ್ಕೆ ತಂದಿದ್ದೀರಿ. ನೀವು ಕೊಟ್ಟ ಕಾಗದವನ್ನು ಅವರಿಗೆ ಒಪ್ಪಿಸಿದ್ದೇವೆ. ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಿ ಎಂದೂ ಕೂಡ ಹೇಳಿದ್ದೇವೆ. ಆದರೂ ನೀವು, ತಪ್ಪು ಎಂದು ಒಪ್ಪಿಕೊಳ್ಳಿ, ಈಗಲೇ ಹೇಳಿ, ಎಂದು ಕೇಳುವುದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿದ್ದಾರೆ. ಅವರ ಕ್ಯಾಬಿನೆಟ್ ಮಿನಿಸ್ಟರ್ ಒಬ್ಬರು ಕಾಗದ ಬರೆದು, ಕಾಂಗ್ರೆಸ್ಸಿನ ಅಧ್ಯಕ್ಷರನ್ನು ಕರೆದುಕೊಂಡು ಬನ್ನಿ ಎಂದು ಸಿ ಇ ಒ ಅವರಿಗೆ ಹೇಳುತ್ತಾರೆಂದರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಚಂದ್ರೇಗೌಡರು ಕೂಡ ಹೇಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಕಾಂಗ್ರೆಸ್ಸಿನ ಚುನಾಯಿತ ಸದಸ್ಯರ ಸಮಾವೇಶವನ್ನು ಕರೆಯುವುದಕ್ಕಾಗಿ ಅವರು ಪತ್ರವನ್ನು ಕಳುಹಿಸಿದ್ದಾರೆ. ಆ ಕಾಗದ ಸಿ ಇ ಒ ಗೆ ಹೋಗಿದೆ ಎನ್ನುವುದು ನಿಮ್ಮ ಆಕ್ಷೇಪ. ಸಿ ಇ ಒ ಗೆ ಬರೀ ಇನ್‌ಫಾರ್ಮೇಷನ್‌ಗಾಗಿ ಕಳುಹಿಸಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ಇದರಲ್ಲಿ ನಿಮ್ಮದು ತಪ್ಪಿಲ್ಲವೇ? ಅಂದರೆ ನೀವು ಇದನ್ನು ಕಾಂಗ್ರೆಸ್ಸೀಕರಣಮಾಡುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ: ಆತನಿಗೆ ನಾವು ಮಾಡು ಎಂದು ಹೇಳಿಲ್ಲ. for information.

ಶ್ರೀ ಬಿ. ಸೋಮಶೇಖರ್:- ನಿಮ್ಮ ಪ್ರಕಾರ ಅದು ತಪ್ಪಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನೀವು ಎಲ್ಲಾ ಕಛೇರಿಗಳನ್ನು ಕಾಂಗ್ರೆಸ್ಸೀಕರಣ ಮಾಡುತ್ತಿದ್ದೀರಿ. ಪೋಲೀಸ್ ಕಛೇರಿಗಳು, ರೆವಿನ್ಯೂ ಕಛೇರಿಗಳು ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡುತ್ತಿವೆ. ಅದೇ ರೀತಿ ಝಡ್.ಪಿ. ಮತ್ತು ಇತರ ಎಲ್ಲವನ್ನೂ ಕಾಂಗ್ರೆಸ್ಸೀಕರಣ ಮಾಡುತ್ತಿದ್ದೀರಿ. ಕಾನೂನು ಸಚಿವರಾಗಿ ನೀವು ಇದನ್ನು ಒಪ್ಪುತ್ತಿದ್ದೀರಲ್ಲಾ. ನೀವು ಇದನ್ನು ಸರಿ ಎಂದು ಹೇಳುತ್ತಿದ್ದೀರಲ್ಲಾ, ನಿಮ್ಮ ಈ ಒಂದು ಧೋರಣೆ ಸರಿಯಲ್ಲ. ಹಾಗಾಗಿ ನಾವು ಇದನ್ನು ಪ್ರೊಟೆಸ್ಟ್ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ಬಿ ಜೆ ಪಿ ಯ ಸದಸ್ಯರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು:- ಎಲ್ಲರೂ ಹೀಗೆ ಮಾತನಾಡುತ್ತಿದ್ದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಪ್ರಸ್ತಾಪ ಮಾಡಿದವರು ಬೇರೆ, ಸಭಾತ್ಯಾಗ ಮಾಡಿದವರು ಬೇರೆ. ಇದನ್ನೇ ಹೇಳುವುದು, ಕದಡಿದ ನೀರಿನಲ್ಲಿ ಮೀನು ಹಿಡಿಯುವ ಕೆಲಸ ಎಂದು. ಇದಕ್ಕ ಮತ್ತೊಂದು ಉದಾಹರಣೆ ಎಂದರೆ ಇದೇ. ಪ್ರಸ್ತಾಪ ಮಾಡಿದವರು ಇನ್ನೂ ನಿಂತೇ ಇದ್ದಾರೆ. ಇದರ ರಾಜಕೀಯ ದುರುಪಯೋಗಪಡಿಸಿಕೊಳ್ಳುವುದಕ್ಕಾಗಿ ಬಿ ಜೆ ಪಿ ಯ ಮುಖಂಡರುಗಳು ಹೊರಗೆ ಹೋಗುತ್ತಾರೆ. ಸಂಬಂಧಪಟ್ಟ ಮಂತ್ರಿಗಳು ಬರಲಿ ಎಂದು ಹೇಳಿದ್ದು ಸಾಕಾಗಲಿಲ್ಲವೇ?

ಉಪಾಧ್ಯಕ್ಷರು: ಸೋಮಶೇಖರ್‌ರವರೇ, ಈ ವಿಚಾರ ಮುಗಿದಿದೆ. ನೀವು ದಯವಿಟ್ಟು ಕುಳಿತುಕೊಳ್ಳಿ. ಇದೇ ವಿಷಯವನ್ನು ಎಷ್ಟು ಹೊತ್ತು ಮಾತನಾಡುವುದು? ಈಗ ಮಾತನಾಡಿ ಆಗಿದೆಯಲ್ಲಾ, ಮತ್ಯಾಕೆ ಮಾತನಾಡುವುದು?

ಶ್ರೀ ಬಿ. ಸೋಮಶೇಖರ್:- ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಂತ್ರಿಗಳು ಈ ಒಂದು ಪತ್ರವನ್ನು ಕೇವಲ ಅವರ ಪಕ್ಷದ ಮುಖಂಡರುಗಳಿಗೆ ಬರೆದಿದ್ದರೆ ನಮ್ಮದೇನೂ ಅಭ್ಯಂತರವಿರಲಿಲ್ಲ.

ಉಪಾಧ್ಯಕ್ಷರು: ಪುನ: ಅದನ್ನೇ ಪ್ರಾರಂಭ ಮಾಡುತ್ತಿದ್ದೀರಲ್ಲಾ.

ಶ್ರೀ ಬಿ. ಸೋಮಶೇಖರ್:- ಅಂದರೆ ಸಿ ಇ ಒ ಅನ್ನು, ಸರ್ಕಾರಿ ಅಧಿಕಾರಿಗಳನ್ನು, ಕಾಂಗ್ರೆಸ್ಸಿನ ಸಭೆಗೆ ಜನರನ್ನು ಸೇರಿಸಿ ಎಂದು ಅವರನ್ನು ಉಪಯೋಗಿಸಿಕೊಂಡಿರತಕ್ಕಂಥಾದ್ದು ಅವರು ಸರಿ ಎಂದು ಪ್ರಸ್ತಾವನೆ ಮಾಡಿದ್ದಾರಲ್ಲಾ, ಇದು ಸರಿಯಲ್ಲ ಇದು ಕಾಂಗ್ರೆಸ್ಸೀಕರಣವಾಗುತ್ತಿದೆ. ಈ ಸರ್ಕಾರ ರಾಜ್ಯಾಂಗವನ್ನು ಉಲ್ಲಂಘನೆ ಮಾಡಿದೆ, the Government has violated all norms of democractic institutions ಕಾನೂನು ಮಂತ್ರಿಗಳೂ ಇದನ್ನು ಸಮರ್ಥನೆ ಮಾಡಿಕೊಂಡಿದ್ದಾರಲ್ಲಾ, ಇದಕ್ಕಿಂತ ದುರ್ದೈವದ ಸಂಗತಿ ಬೇರೊಂದಿಲ್ಲ. ಇದನ್ನು ಜನಗಳೇ ತೀರ್ಮಾನ ಮಾಡಲಿ. ಇದನ್ನು ನಾವು ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತಿದ್ದೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಉಪಾಧ್ಯಕ್ಷರೇ, ಈ ಪತ್ರದ ಜೆರಾಕ್ಸ್ ಕಾಪಿಯನ್ನು ನಮಗೆ ಕೊಟ್ಟಿದ್ದಾರೆ. ಇದು ಇದೆಯೋ, ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಇದರ ಒರಿಜಿನಲ್ ಎಲ್ಲಿದೆ?

(ಗೊಂದಲ)

(ಈ ಹಂತದಲ್ಲಿ ಅಖಿಲ ಭಾರತ ಪ್ರಗತಿಪರ ಜನತಾದಳದ ಶಾಸಕರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ನಾನು ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರಲ್ಲಿ ಏನು ಕೇಳುತ್ತೇನೆಂದರೆ, ಒಬ್ಬರು ಸಚಿವರು ಸಿ ಇ ಒ ಗೆ ಪತ್ರ ಬರೆಯದಿದ್ದರೂ, ಅವರಿಗೆ ಅದನ್ನು ಎಂಡಾರ್ಸ್ ಮಾಡಬಹುದೇ? ಇದು ಪಕ್ಷದ ಕಾರ್ಯಕ್ರಮ ಅಲ್ಲ. ಅದರ ಹಿಂದುಗಡೆ....

ಶ್ರೀ ವಸಂತ ಎ ಸಾಲಿಯಾನ (ಮೀನುಗಾರಿಕೆ ಸಚಿವರು):- ಜಿಲ್ಲಾ ಉಸ್ತುವಾರಿ ಸಚಿವರಿಗೆ ಬರೆದದ್ದು ಅದು. ಅದು ನೇರವಾಗಿ ಸಿ ಇ ಒ ಗೆ ಬರಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ನಾನು ಮಾತನಾಡಲಿಕ್ಕೆ ಅವಕಾಶ ಕೊಡಿ. ನಾನು ಮಾತನಾಡಿದ ಮೇಲೆ ನೀವು ಉತ್ತರ ಕೊಡಿ. ಒಂದು ನಿಮಿಷ, ನಾನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಮಾತನಾಡಿ, ತುಂಬಾ ಸಂತೋಷ. ಅದಕ್ಕೆ ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ನೀವು ಮಾತನಾಡತಕ್ಕಂಥ ವಿಚಾರವನ್ನು ನಮ್ಮ ಹಾಗೆ ಎಲ್ಲರೂ ಕೇಳಬೇಕಲ್ಲವೇ? ವಿಷಯದ ವಿಮರ್ಶೆಯಾಗಬೇಕು. ತಪ್ಪಾಗಿದ್ದರೆ ಸರಿಪಡಿಸಿಕೊಳ್ಳಬೇಕು, ತಪ್ಪಾಗದಿದ್ದರೆ ನಾವು ಅದನ್ನು ಡಿಫೆಂಡ್ ಮಾಡಿಕೊಳ್ಳಬೇಕಲ್ಲವೇ? ಅದನ್ನು ಬಿಟ್ಟು, ಇವರು ವಾಕೌಟ್ ಮಾಡುತ್ತಿರುವುದು, ನೀವು, ನಾನು ಹೇಳುವುದನ್ನು ಕೇಳಿ ಎಂದು ಹೇಳುತ್ತಲೇ ಇರುವುದು. ಇದ್ಯಾವ ಲೆಕ್ಕಾಚಾರ? ಇದನ್ನೇ ನಾನು ಹೇಳಿದ್ದು, fishing in the troubled waters ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ನಾವು ಇಂಥ ಇನ್ನೂ ಅನೇಕ ವಿಚಾರಗಳನ್ನು ಕಂಡಿದ್ದೇವೆ. ಮಾನ್ಯ ಕೆ.ಹೆಚ್. ಪಾಟೀಲ್‌ರವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಆಗ ಎಮರ್ಜೆನ್ಸಿ ಪರಿಸ್ಥಿತಿಯಿದ್ದು, ನಾವೆಲ್ಲಾ ಜೈಲಿನಲ್ಲಿದ್ದೇವು. ಅವರು ಏನು ಹೇಳಿದ್ದರು ಎಂದರೆ, ಕರ್ನಾಟಕ ಸರ್ಕಾರದಲ್ಲಿ ಕಾಂಗ್ರೆಸ್ಸಿನವರ ಮಕ್ಕಳಿಗೇ ಸರ್ಕಾರದ ಕೆಲಸ ಕೊಡುವುದು ಎಂದು ಹೇಳಿದ್ದರು. ನಂತರ ಕಾಂಗ್ರೆಸ್ಸೂ ಉಳಿಯಲಿಲ್ಲ ಎನ್ನುವುದು ನಿಮಗೆ ಗೊತ್ತಿದೆ. ಆದ್ದರಿಂದ, ಈಗ ನಿಮಗೆ ಉಳಿದಿರತಕ್ಕಂಥಾದ್ದು ಒಂದೇ ಮಾರ್ಗ. ನೀವು ಅದರ ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡಿ. ಯಾವ ಕಾಂಟೆಕ್ಸ್ಟ್‌ನಲ್ಲಿ ಅದನ್ನು ಬರೆದಿದ್ದಾರೆ ಎನ್ನುವುದನ್ನು ತಿಳಿದುಕೊಂಡು ಕ್ಲಾರಿಫಿಕೇಷನ್ ಕೊಡಿ. ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ಅವರು ನಾಲ್ಕು ಸಾರಿ ಗೆದ್ದಿದ್ದು, ಇಷ್ಟರಲ್ಲಿ ಅವರಿಗೆ ಇಂಥವುಗಳ ಬಗ್ಗೆ ಅನುಭವ ಬಂದಿರಬೇಕಾಗಿತ್ತು. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸದನದ ನಾಯಕರಾಗಿ ಮತ್ತು ಮಂತ್ರಿ ಮಂಡಲದ ಮುಖ್ಯಸ್ಥರಾಗಿ ಮಂತ್ರಿಗಳಿಗೆ ತಾಕೀತು ಮಾಡತಕ್ಕಂಥಾದ್ದು ಮತ್ತು ಮಂತ್ರಿಗಳು ಈ ರೀತಿಯ ಪತ್ರಗಳನ್ನು ಬರೆಯಬಾರದು ಎನ್ನುವ ಸತ್ಸಂಪ್ರದಾಯವನ್ನು, ಡೆಮಾಕ್ರೆಟಿಕ್ ಇನ್ಸ್‌ಟಿಟ್ಯೂಷನನ್ನು ಸ್ಟ್ರೆಂಗ್ತನ್ ಮಾಡಬೇಕು ಎಂದು ಹೇಳುವಂಥ ನೀವು ಅವರಿಗೆ ಅಡ್ವೈಸ್ ಮಾಡಬೇಕು ಎನ್ನುವುದು ನನ್ನ ಒತ್ತಾಯ. ಆದರೆ ಈ ಪತ್ರದಲ್ಲಿ ನಿಜಾಂಶವಿದ್ದರೆ ಅದನ್ನು ಇಡೀ ಸಭೆ ಖಂಡಿಸಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯವರು ಏನು ಹೇಳಿದರೆಂದರೆ, ಅದನ್ನು ಕೊಡಿ, ಮಂತ್ರಿಗಳ ಗಮನಕ್ಕೆ ತರುತ್ತೇವೆಂದು ಹೇಳಿದಾಗ ಇದು ನಮ್ಮ ನೀತಿ ಎಂದು ಹೇಳಿದ ಹಾಗೆ ಆಗುತ್ತದೆಯೇ? ಒಪ್ಪಿಕೊಂಡ ಹಾಗೆ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:- ಆಗುವುದಿಲ್ಲ. ಆದ್ದರಿಂದ ನೋಡಿದ ಮೇಲೆ ರಿಯಾಕ್ಷನ್ ಏನು ಎನ್ನುವುದನ್ನು ಹೇಳುತ್ತೇವೆಂದು ಆಗುತ್ತದೆಯೇ ವಿನ: ಅದು ಆಗುವುದಿಲ್ಲ. ಆದ್ದರಿಂದ ಅದನ್ನು ಏನೋ ದೊಡ್ಡದು ಮಾಡಿ ಹಾಗೆ ಹೀಗೆ ಎಂದು ಹೇಳಿ, ನೀವು ಏನು ಹೇಳುತ್ತೀರಿ, ನಿಮ್ಮ ನೀತಿಯನ್ನು ಒಪ್ಪಿಕೊಳ್ಳುತ್ತೀರಾ ಎಂದು ಕೇಳಿದರೆ ಹೇಗೆ? ಅದಕ್ಕೆ ಅಷ್ಟು ಉದ್ಧ ಲಂಬಿಸಬೇಕಾದಂಥ

ಅವಶ್ಯಕತೆಯೇ ಇರಲಿಲ್ಲ. ಆಯಿತು, ತಾವು ನನ್ನ ಗಮನಕ್ಕೆ ತಂದಿದ್ದೀರಿ, ನನ್ನ ಗಮನಕ್ಕೆ ಬಂದಿದೆ, ಅದನ್ನು ಅವರ ಗಮನಕ್ಕೆ ತರುತ್ತೇವೆಂದು ಹೇಳಿದರು.

ಉಪಾಧ್ಯಕ್ಷರು:– ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇನ್ನು ಮುಂದೆ ಈ ತರಹ ಆಗದ ಹಾಗೆ ನೋಡಿಕೊಳ್ಳಿ ಎಂದು ಸೂಚನೆ ಕೊಟ್ಟಿದ್ದೇನೆ ಆದ್ದರಿಂದ ಈ ವಿಷಯವನ್ನು ಇಲ್ಲಿಗೇ ಮುಗಿಸಿಬಿಡೋಣ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಸಿಂಧ್ಯಾರವರು, ಹೇಳಿದ ಹಾಗೆ ಮಂತ್ರಿಗಳು ತಿಳಿದುಕೊಂಡಿದ್ದಾರೆ. ಅವರು ನೇರವಾಗಿ ಏನು ಬರೆದಿಲ್ಲ. ಕಳುಹಿಸಿದ್ದಾರೆ. ಯಾವ ಉದ್ದೇಶದಿಂದ ಬರೆದಿದ್ದಾರೆ ಎನ್ನುವುದನ್ನು ಅವರು ಪರಿಶೀಲನೆ ಮಾಡಿದ ಮೇಲೆ ಅವರ ರಿಯಾಕ್ಷನ್ ಅನ್ನು ಸಭೆಗೆ ಹೇಳುತ್ತಾರೆ. ತಪ್ಪಾದರೆ ಅವರು ಕ್ಷಮೆ ಕೇಳುತ್ತಾರೆ ಇಲ್ಲ ಎಂದರೆ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ನಿಮ್ಮ ನೀತಿಯೇ ಹೀಗೆ ಎಂದು ಈಗಲೇ ಹೇಳಿ ಎಂದು ಕೇಳಿದರೆ ಏನರ್ಥ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಉಪಾಧ್ಯಕ್ಷರೆ, ಕಡತದಲ್ಲಿ ತಪ್ಪು ಮಾಹಿತಿ ಹೋಗಬಾರದು. ಅದಕ್ಕೆ ನಾನು ಹೇಳುವುದೇನೆಂದರೆ, ಎಲ್ಲೋ ಒಂದು ಕಡೆ ಮಾನ್ಯ ಸಚಿವರು ಹೇಳಿದರೆಂದು ಕಾಣುತ್ತದೆ. ಅದು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ ಎಂದು ಅಲ್ಲ. ಅದರಲ್ಲಿ ಹಿಂದುಗಡೆ ಇನ್ನೊಂದು ಪತ್ರ ಇದೆ. ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಗಳು ಎಲ್ಲಾ ಅಧಿಕಾರಿಗಳಿಗೆ ಪತ್ರ ಬರೆದಂತೆ ಇದೆ. ಆದ್ದರಿಂದ ಇದು ಸರ್ಕಾರಿ ಕಾರ್ಯಕ್ರಮ. ಸರ್ಕಾರಿ ಕಾರ್ಯಕ್ರಮದಲ್ಲಿ ಹೀಗೆ ಮಾಡಿ ಸಚಿವರು ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಪತ್ರವನ್ನು ಬರೆದಂಥದ್ದು. ಅದನ್ನು ನಾಳೆ ಅವರ ಮುಖಾಂತರ ನೀವು ಸರಿಯೋ ತಪ್ಪೋ ಎನ್ನುವುದರ ಬಗ್ಗೆ ಹೇಳಿಕೆಯನ್ನು ಮಾಡಿಸಿ ಏಕೆಂದರೆ ಈ ಕ್ಷಣದಲ್ಲಿ ನೀವು ಡಿಫೆಂಡ್ ಮಾಡಿಕೊಂಡರೆ ನಾನು ಆರ್ಗ್ಯು ಮಾಡಬೇಕಾಗುತ್ತದೆ. ತಪ್ಪನ್ನು ತಪ್ಪು ಎಂದು ಒಪ್ಪಿಕೊಳ್ಳುವುದರಲ್ಲಿ ನಮ್ಮದೇನೂ ಮರ್ಯಾದೆ ಕಮ್ಮಿ ಆಗುವಂಥದ್ದೇನೂ ಇಲ್ಲ. ನಮಗೆ ಎಲ್ಲಿ ಅನುಮಾನ ಬರುತ್ತದೆ ಎಂದರೆ ನಾವು ಮಂತ್ರಿಗಳಿಗೆ ಪತ್ರಗಳನ್ನು ಕೊಟ್ಟಾಗ ಇದೇ ರೀತಿಯಲ್ಲಿ ಅಧಿಕಾರಿಗಳಿಗೆ ಬರೆಯುತ್ತಾರೋ ಹೇಗೆ ಎನ್ನುವ ಅನುಮಾನ ಉಂಟಾಗುತ್ತದೆ. ನೀವು ಇವರು ಕೊಟ್ಟಿದ್ದನ್ನು ಮಾಡಬೇಡಿ, ನಮ್ಮ ಪಕ್ಷದವರು ಕೊಟ್ಟದ್ದನ್ನು ಮಾತ್ರ ಮಾಡಿ ಎಂದು ಬರೆಯುವಂಥ ಪರಿಸ್ಥಿತಿ ನಿರ್ಮಾಣವಾಗಬಾರದು.

ಶ್ರೀ ಕೆ.ಅಭಯಚಂದ್ರ:– ಹಿಂದೆ ಆಗಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಆಗಿದೆಯಾ? ಆಗಿದ್ದರೆ ಅದರಿಂದ ನಾವೆಲ್ಲಾ ಸಫರ್ ಆಗುತ್ತೇವೆ. ನಮ್ಮ ನೆಲೆಯಲ್ಲಿ ಆಗಲಿಲ್ಲ. ಏಕೆಂದರೆ ಇವರೆಲ್ಲಾ ಬಂದು ಎಲ್ಲಾ ಕೆಲಸವನ್ನು ನನ್ನ ಚೇಂಬರ್‌ನಲ್ಲಿ ಕುಳಿತು ಮಾಡಿಸಿಕೊಂಡು ಹೋಗುತ್ತಿದ್ದರು. ಇಂಥದ್ದು ಒಂದು ಕೆಲಸವನ್ನೂ ನಾವು ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ತಮ್ಮ ಮಂತ್ರಿಗಳನ್ನು ಕರೆಸಿ ನಾಳೆ ಸದನದಲ್ಲಿ ಹೇಳಿಕೆಯನ್ನು ಮಾಡಿಸಿ. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ನಾನು ಉಡುಪಿಯ ಬಗ್ಗೆ ಮೊನ್ನೆ ತಮ್ಮ ಹತ್ತಿರ ಚರ್ಚೆಯನ್ನು ಮಾಡಿದ್ದೇನೆ.

ಉಪಾಧ್ಯಕ್ಷರು:– ಇದೇ ವಿಷಯ ಈಗಾಗಲೇ ಪ್ರಸ್ತಾಪ ಆಯಿತು. ಪುನ: ಪದೇ ಪದೇ ಹೇಳುವುದರಲ್ಲಿ ಅರ್ಥ ಇಲ್ಲ. ದಯವಿಟ್ಟು ಬೇಗ ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಬೇಗ ಮುಗಿಸುತ್ತೇನೆ. ಇಷ್ಟು ಹೊತ್ತಿನ ವರೆಗೆ ಅದರ ಬಗ್ಗೆ ಚರ್ಚೆ ಆಯಿತು. ನಾನು ನನ್ನ ಜಿಲ್ಲೆಯ ಬಗ್ಗೆಯಾದರೂ ಹೇಳಬೇಕಲ್ಲವೇ? ಇಲ್ಲದಿದ್ದರೆ

ನಾನು ವಾಕ್‌ಔಟ್ ಮಾಡಬಹುದಿತ್ತಲ್ಲವೇ? ಆದ್ದರಿಂದ ನನ್ನ ಜಿಲ್ಲೆಯ ಸಮಸ್ಯೆಯನ್ನು ಹೇಳದೆ ನಾನು ನನ್ನ ಮಾತನ್ನು ಮುಗಿಸಲಿಕ್ಕೆ ತಯಾರಿಲ್ಲ. ನಮ್ಮ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಡಿಕ್ಲೇರ್ ಮಾಡಿ ಎಂದು ಅನೇಕ ಸಂಘಸಂಸ್ಥೆಗಳು ಉಡುಪಿಯಲ್ಲಿ ಕೇಳಿದರು. ಮಾಡಲಿಲ್ಲ. ಆ ಸಮಸ್ಯೆಯನ್ನು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಎದುರು ಇಟ್ಟಿದ್ದೇನೆ. ಈ ಬಾರಿ ನಮಗೆ ಕುಡಿಯುವ ನೀರಿನ ಸಮಸ್ಯೆ ಆದದ್ದು ಗೊತ್ತಾಗಿದೆ. ಆದ್ದರಿಂದ ಕುಡಿಯುವ ನೀರಿನ ವ್ಯವಸ್ಥೆಗೆ, ಬೇರೆ ಕಾಮಗಾರಿಗಳನ್ನು ನಾವು ಈಗಾಗಲೇ ಕೈಗೊಂಡಿರುವುದಕ್ಕೆ ಹಣವನ್ನು ಕೊಡಲಿಕ್ಕೆ ಶಾಸಕರ ನಿಧಿಯನ್ನು ಆದಷ್ಟು ಶೀಘ್ರದಲ್ಲಿ ಬಿಡುಗಡೆ ಮಾಡಬೇಕು. 'ಎಲ್ಲೋ ಒಂದು ಕಡೆಯಲ್ಲಿ ನಾನು ಅದರ ಬಗ್ಗೆ ಉತ್ತರವನ್ನು ಹೇಳುತ್ತೇನೆಂದು ತಾವು ಹೇಳಿದ್ದೀರಿ' ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ದಯವಿಟ್ಟು ಈ ಬಾರಿ ಶಾಸಕರ ನಿಧಿಯ ಬಗ್ಗೆ ಅಥವಾ ಉಡುಪಿ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ಕೊಡುವ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತಾ, ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಮ್ಮಲ್ಲಿ ಒಂದು ಪ್ರಶ್ನೆ ಉಳಿದಿದೆ. ಇನ್‌ಇಕ್ವಲ್ಸ್‌ನ್ನು ಇಕ್ವಲ್ಸ್ ಮಾಡುವುದಕ್ಕೆ ಹೋಗುವುದು ಉಡುಪಿಯನ್ನು ಉತ್ತರ ಕರ್ನಾಟಕ ಮಾಡುವುದಕ್ಕಿಂತ ಉತ್ತರ ಕರ್ನಾಟಕವನ್ನು ಉಡುಪಿ ಮಾಡಿ ಆದರೆ ನಮ್ಮ ಉಡುಪಿಯನ್ನು ತೆಗೆದುಕೊಂಡು ಹೋಗಿ ಉತ್ತರ ಕರ್ನಾಟಕ ಎಂದು ಮಾಡದಿದ್ದರೆ ಸಾಕು. ಉಡುಪಿ ಮತ್ತು ಮಂಗಳೂರು ಜಿಲ್ಲೆಗೆ ಕೊಟ್ಟಂಥ ಅನುದಾನವನ್ನು ಇನ್ನೂ ಹೆಚ್ಚಿಗೆ ಮಾಡಿ. ನಾವು ಅಭಿವೃದ್ಧಿಯಾಗುತ್ತೇವೆ. ಉತ್ತರ ಕರ್ನಾಟಕಕ್ಕೆ ಪುನ: ಹೆಚ್ಚು ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ. ನಮ್ಮ ಜಿಲ್ಲೆಗೆ ಅನುದಾನವನ್ನು ಹೆಚ್ಚು ಕೊಡದೆ ಈಗ ಇಟ್ಟಿರುವಂಥ ಹಣವನ್ನು ಕೊಡದೆ ಅದನ್ನು ನಿಲ್ಲಿಸುವುದಕ್ಕೆ ಹೋಗಬೇಡಿ. ಹೆಚ್ಚು ಹಣ ಕೊಟ್ಟರೆ ನಾವು ಇನ್ನೂ ಹೆಚ್ಚು ಅಭಿವೃದ್ಧಿಯನ್ನು ಮಾಡುತ್ತೇವೆಂದು ಹೇಳುತ್ತಾ, ನನಗೆ ಮಾತನಾಡಲು ಇನ್ನೂ ವಿಷಯಗಳು ಇತ್ತು, ಇಷ್ಟು ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಗುರುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ನಾನು ಬೆಳಿಗ್ಗೆಯೇ ಪ್ರಸ್ತಾಪ ಮಾಡಿದ್ದೆ. ತಾವು ನನಗೆ ಭಾಷಣ ಮಾಡಲು ಅವಕಾಶ ಕೊಡುತ್ತೇವೆಂದು ಹೇಳಿದಿರಿ, ಆದರೆ ಕೊಡಲೇ ಇಲ್ಲ. ನಾವು ಇಲ್ಲಿ 8 ಜನ unattached ಸದಸ್ಯರು ಇದ್ದೇವೆ. ನಮಗೆ ಅವಕಾಶ ಕೊಡದಿದ್ದರೆ ನಮ್ಮ ಜನರಿಗೆ ನಾವು ಯಾವ ರೀತಿ ಸ್ಪಂದಿಸಬೇಕು?

ಉಪಾಧ್ಯಕ್ಷರು:- ತಾವು ಕುಳಿತುಕೊಳ್ಳಿ. ಶ್ರೀ ರಾಮಯ್ಯನವರದ್ದು ಆದ ಮೇಲೆ ತಮಗೆ ಅವಕಾಶ ಕೊಡುತ್ತೇನೆ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ):- ಮಾನ್ಯ ಉಪಾಧ್ಯಕ್ಷರೆ, 2003-04ರ ಅನುದಾನದ ಬೇಡಿಕೆ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ನಿಮಗೆ ನಾನು ವಂದಿಸುತ್ತೇನೆ. ಮೊದಲನೆಯದಾಗಿ, ಸಾರ್ವತ್ರಿಕವಾಗಿ ವಿರೋಧ ಪಕ್ಷದ ಸ್ನೇಹಿತರು ಒಳಗೆ ಮತ್ತು ಹೊರಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಅದೇನೆಂದರೆ - 1) ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ,

2) ಯೋಜನಾ ಗಾತ್ರವನ್ನು ಕಡಿತ ಮಾಡಿದ್ದಾರೆ,

3) ತೆರಿಗೆ ವಸೂಲಿಯಲ್ಲಿ ಈ ಸರ್ಕಾರ ವಿಫಲವಾಗಿದೆ,

ಮತ್ತು 4) ಸಂಪತ್ತು ಕ್ರೋಢೀಕರಣದಲ್ಲಿ ಈ ಸರ್ಕಾರ ವಿಫಲವಾಗಿದೆ

ಎನ್ನುವ ಮಾತನ್ನು ಹೇಳುತ್ತಾರೆ, ಈ ಸರ್ಕಾರದ ಆರ್ಥಿಕ ಪರಿಸ್ಥಿತಿಯು ಆರೋಗ್ಯ ಉತ್ತಮವಾಗಿಲ್ಲವೆಂದು ಬಿಳಿಗ್ಗೆ ನನ್ನ ಸ್ನೇಹಿತರೊಬ್ಬರು ಹೇಳಿದರು. ಸರ್ಕಾರ ಈ ಪರಿಸ್ಥಿತಿಯನ್ನು ಮುಚ್ಚಿಟ್ಟಿಲ್ಲ. ಅದಕ್ಕಾದರೂ ಅವರು ಸಂತೋಷಪಡಬೇಕು. ಸರ್ಕಾರ ಮಧ್ಯಮಾವಧಿ ಆರ್ಥಿಕ ಯೋಜನೆ :2003, 2005–06ರಲ್ಲಿ ಸ್ಪಷ್ಟವಾಗಿ ಪ್ಯಾರಾ–8 ರಲ್ಲಿ ಈ ರೀತಿ ಹೇಳುತ್ತಾರೆ.

ಕಳೆದ ದಶಕದಲ್ಲಿ ಅದರಲ್ಲೂ ವಿಶೇಷವಾಗಿ 1995–96ರ ನಂತರ ಕರ್ನಾಟದಲ್ಲಿ ಗಣನೀಯ ಪ್ರಮಾಣದಲ್ಲಿ ಆರ್ಥಿಕ ಪರಿಸ್ಥಿತಿ ಇಳಿಮುಖ ಆಗುತ್ತಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯು 1995–96ರಲ್ಲಿ 159 ಕೋಟಿ ರೂಪಾಯಿಗಳ ರಾಜಸ್ವ ಆದಾಯದಲ್ಲಿ ಇತ್ತು.

I repeat in 1995-96, We had Rs.159 crore surplus budget.

1999ರಿಂದ 2000ರ ವೇಳೆಗೆ ಇದು 2325 ಕೋಟಿ ರೂಪಾಯಿಗಳ ರಾಜಸ್ವ ಪರಿವರ್ತನೆಯಾಗಿದೆ. ಇದೇ ರೀತಿ 1990–91ರಿಂದ 1999–2000ರ ವರೆಗಿನ ಅವಧಿಯಲ್ಲಿ ರಾಜ್ಯಧ ವಿತ್ತೀಯ ಕೊರತೆಯು ರೂ.513 ಕೋಟಿ ರೂಗಳಿಂದ ರೂ.4276 ಕೋಟಿರೂಗಳಿಗೆ ಏರಿಕೆಯಾಗಿದೆ.

ಮುಂದೆ ಸರ್ಕಾರ ಏನು ಹೇಳುತ್ತದೆ ಎಂದರೆ –

'ಇದು ರಾಜ್ಯದಲ್ಲಿ ಬಡ್ಡಿ ಪಾವತಿ, ವಿತ್ತೀಯ ಕೊರತೆ, ಸಾಲದ ಹೊರೆಯ ವಿಷವರ್ತುಲದಲ್ಲಿ ಸಿಲುಕಿಸಿ ಆರ್ಥಿಕ ಅಸ್ಥಿರತೆಯನ್ನು ಸೃಷ್ಟಿಸಿದೆ. ಇಂದಿನ ಈ ಪ್ರವೃತ್ತಿ ಹೀಗೆಯೇ ಮುಂದುವರಿದರೆ ಮುಂದೆ ಕೆಲವೇ ವರ್ಷಗಳಲ್ಲಿ ಕರ್ನಾಟಕವು ಖಂಡಿತ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಲಿದೆ"

ಆರ್ಥಿಕ ಪರಿಸ್ಥಿತಿ ಬಿಕ್ಕಟ್ಟಿನಲ್ಲಿದೆ ಎನ್ನುವಂಥ ನಮ್ಮ ಸ್ನೇಹಿತರ ಮಾತನ್ನು ಸರ್ಕಾರ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಆದರೆ ಇಲ್ಲಿ ಒಂದು ವಿಷಯವನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. Those who are incharge of the management of the finances. ಅದು ರಾಜ್ಯದಲ್ಲಿರಬಹುದು ಅಥವಾ ರಾಷ್ಟ್ರದಲ್ಲಿರಬಹುದು, ಮೂರು ವಿಷಯಗಳನ್ನು ಸಮಾನಾಂತರವಾಗಿ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯತೆ ಆಗುವುದಿಲ್ಲ. ಕೊರತೆಯಲ್ಲಿನ ನಿಯಂತ್ರಣ, ವೆಚ್ಚದ ಹೆಚ್ಚಳ, ತೆರಿಗೆ ವಿಧಿಸುವುದರಲ್ಲಿ ಸಂಯಮ, ಕೊರತೆಯಲ್ಲಿ ನಿಯಂತ್ರಣ ಬೇಕು. ಡಿಫಿಸಿಯನ್ಸಿ ಅನ್ನು ಎಲಿಮಿನೇಟ್ ಮಾಡಿಬಿಡಬೇಕು. ವೆಚ್ಚದಲ್ಲಿ ಹೆಚ್ಚಳ ಮಾಡಬೇಕು. ತೆರಿಗೆ ವಿಧಿಸುವುದರಲ್ಲಿ ಸಂಯಮವನ್ನು ತೋರಬೇಕು. ಇವುಗಳನ್ನು ಮಾಡಿದರೆ ಮಾತ್ರ ಅಲ್ಲಿ ಉತ್ತಮವಾದಂಥ ಒಂದು ಮೇನೇಜ್‌ಮೆಂಟ್ ಆಗುತ್ತದೆ, ಉತ್ತಮವಾದಂಥ ಒಂದು ಆರ್ಥಿಕ ನಿರ್ವಹಣೆ ಆಗುತ್ತದೆ ಎನ್ನುವುದು ನಮ್ಮೆಲ್ಲರ ಸಾರ್ವತ್ರಿಕ ಅಭಿಪ್ರಾಯವಾಗಿದೆ. ಆದರೆ ಇದನ್ನು ಮಾಡಲಿಕ್ಕೆ ಸಾಧ್ಯತೆ ಆಗುವುದಿಲ್ಲ. ಅವು ಪ್ಯಾರಲೆಲ್ ಆಗಿ ಹೋಗುತ್ತಿವೆ. ಡಿಕ್ಕಿ ಹೊಡೆಯುವುದಕ್ಕೆ ಬಿಡುವುದಕ್ಕೆ ಆಗುವುದಿಲ್ಲ. ಈ ಕಾರಣಕ್ಕಾಗಿ 1995–96ರ ಈಚೆಗೆ ಗಣನೀಯವಾಗಿ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ ಕೆಡುತ್ತಾ ಕೆಡುತ್ತಾ ಬಂದು ಏಕೆ ಈ ಪರಿಸ್ಥಿತಿಯನ್ನು ಸೃಷ್ಟಿ ಮಾಡಿತು? ಇದಕ್ಕೆ ಯಾರು ಕಾರಣಕರ್ತರು? ಈ ರಾಜ್ಯದ ಐದು ಕೋಟಿ ಜನ ಈ ಪರಿಸ್ಥಿತಿಗೆ ಕಾರಣರಲ್ಲ. ಸ್ವಲ್ಪಮಟ್ಟಿಗೆ ಪ್ರಕೃತಿಯ ವಿಕೋಪ ಕಾರಣವಾಗಿದೆ. ಆದರೆ ಜನ ಅಲ್ಲವೇ ಅಲ್ಲ. ಮತ್ತೆ ಯಾರು ಕಾರಣರು? ನಾನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಕಳೆದ ವರ್ಷಗಳಲ್ಲಿ ಈ ಮೇನೇಜರ್ಸ್ ಇದ್ದರಲ್ಲಾ, ಆರ್ಥಿಕ ಪರಿಸ್ಥಿತಿಯನ್ನು

ಆರ್ಥಿಕ ವ್ಯವಸ್ಥೆಯನ್ನು ನಿರ್ವಹಣೆ ಮಾಡುವಂಥ ನಮ್ಮವರು it is the cumulative effect of the bad management of the finance. It is not for one year. It may be for decades.

5.20 ಪಿಎಂ

ಒಂದು ದಿವಸದಲ್ಲಿ ಅಥವಾ ಒಂದು ವರ್ಷವಲ್ಲಿ ಬದಲಾವಣೆ ಮಾಡಿರತಕ್ಕಂಥ ವ್ಯವಸ್ಥೆ ಇದಲ್ಲ. ಇದಕ್ಕೆ ಅನೇಕ ವರ್ಷಗಳು ಆಗಿವೆ. ಯಾವ ರಾಜ್ಯದಲ್ಲಿ 1995–1996ನೇ ಸಾಲಿನಲ್ಲಿ 159 ಕೋಟಿ ರೂಪಾಯಿಗಳಷ್ಟು ಸರ್ಪ್ಲಸ್ ಬಜೆಟ್ ಇದ್ದಂಥದ್ದು ಇವತ್ತು ಸಾವಿರಾರು ಕೋಟಿ ರೂಪಾಯಿಗಳಷ್ಟು ಡೆಫಿಷಿಯೇಟ್ ಆಗಬೇಕಾದರೆ ಏನು ಕಾರಣ? ಇದಕ್ಕೆ ಕಾರಣವನ್ನು ಹುಡುಕುತ್ತಾ ಹೋಗಿ ನನ್ನ ಮಟ್ಟಿಗೆ ಹೇಳುವುದಾದರೆ, ಹಿಂದೆ ಈ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಣೆ ಮಾಡಿರತಕ್ಕಂಥವರು ಇದರ ಪೂರ್ಣ ಜವಾಬ್ದಾರಿ ಆಗುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಅವರಿಂದಲೇ ಈ ಪರಿಸ್ಥಿತಿ ಬಂದಿದೆ. ಆ ಬ್ಯಾಡ್ ಮ್ಯಾನೇಜ್‌ಮೆಂಟ್ ಯಾವುದು? Which are the factors that contributed for this bad system? ಸರ್ಕಾರದ ಬೊಕ್ಕಸಕ್ಕೆ ಹರಿದು ಬರತಕ್ಕಂಥ ಹಣವನ್ನು ತಡೆದ ಗೋಡೆ ಯಾವುದು? ಇದಕ್ಕೆ ಸಂಬಂಧಪಟ್ಟಂತೆ ತೆಗೆದುಕೊಂಡಿರತಕ್ಕಂಥ ತೀರ್ಮಾನ ಯಾವುದು? ಮತ್ತೆ ಮಾಡಿದಂಥ ಅಪರಾಧ ಯಾವುದು? ಮತ್ತೆ ಆ ಸಂದರ್ಭದಲ್ಲಿ ನಡೆದಂಥ ನಡವಳಿಕೆ ಯಾವುದು? ಇವತ್ತಿನದಿವಸ ರೈತರಿಗೆ ಕೊಡಬೇಕಾಗಿರತಕ್ಕಂಥ 50 ಅಥವಾ 100 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದರೆ ಸರ್ಕಾರ ದೊಡ್ಡ ಅಪರಾಧ ಮಾಡಿದೆ ಎನ್ನತಕ್ಕಂಥ ಮಾತನ್ನು ನನ್ನ ಸ್ನೇಹಿತರು ಹೇಳುತ್ತಾರೆ. 1995–1996ನೇ ಸಾಲಿನ ಹಿಂದೆ ಕರ್ನಾಟಕ ರಾಜ್ಯದಲ್ಲಿ ಮಾರಾಟ ತೆರಿಗೆ ವಿನಾಯತಿ ಕೊಡುವುದರ ಮೂಲಕ 4,335 ಕೋಟಿ ರೂಪಾಯಿಗಳು ರಾಜ್ಯದ ಬೊಕ್ಕಸಕ್ಕೆ ಬರುವಂಥದ್ದು ನಿಂತು ಹೋಗಿದೆ. It is not hundred crores, it is not two hundred crore, it is not one crore 4335 ಕೋಟಿ ರೂಪಾಯಿಗಳಷ್ಟು ತೆರಿಗೆ ವಿನಾಯತಿಯನ್ನು ಕೊಟ್ಟಿದ್ದಾರೆ. ಇವರು ಯಾರಿಗೆ ತೆರಿಗೆ ವಿನಾಯತಿಯನ್ನು ಕೊಟ್ಟಿದ್ದಾರೆ? ತೆರಿಗೆ ವಿನಾಯತಿಯನ್ನು ಈ ರಾಜ್ಯದ ರೈತರಿಗೆ ಕೊಟ್ಟಿಲ್ಲ, ಪೆಟ್ಟಿ ಅಂಗಡಿಯವರಿಗಾಗಲಿ ಅಥವಾ ಸಣ್ಣ ಕೈಗಾರಿಕೆಗಳಿಗೆ ಕೊಟ್ಟಿಲ್ಲ. ಯಾರು 100 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳ ಹೂಡಿ ಮೆಗಾ ಪ್ರಾಜೆಕ್ಟ್‌ನ್ನು ಸ್ಥಾಪನೆ ಮಾಡಿರತಕ್ಕಂಥ ಮಾಲೀಕರುಗಳಿಗೆ 4,335 ಕೋಟಿ ರೂಪಾಯಿಗಳಷ್ಟು ತೆರಿಗೆ ವಿನಾಯತಿಯನ್ನು ಕೊಟ್ಟಿದ್ದಾರೆ. 4,335 ಕೋಟಿ ರೂಪಾಯಿಗಳಷ್ಟು ತೆರಿಗೆಯ ವಿನಾಯತಿಯನ್ನು ಕೊಡುವುದರ ಜೊತೆಗೆ 6,806 ಕೋಟಿ ರೂಪಾಯಿಗಳಷ್ಟು......

ಶ್ರೀ ಎಸ್.ಎಸ್. ಪಾಟೀಲ್:- ತಾವು ಈ ವಿಷಯವನ್ನು ಹೇಳುವಂಥ ಸಂದರ್ಭದಲ್ಲಿ ಮಾನ್ಯ ದೇಶಪಾಂಡೆಯವರು ಕರೆಸಿ ಇಲ್ಲಿ ಕೂರಿಸಿದರೆ ಒಳ್ಳೆಯದು. ಏಕೆಂದರೆ, ಅವರು ಆ ಸಂದರ್ಭದಲ್ಲಿಯೂ ಕೂಡ ಕೈಗಾರಿಕಾ ಸಚಿವರಾಗಿದ್ದರು. ಮತ್ತೆ ಇವತ್ತೂ ಕೂಡ ಅವರೇ ಆ ಇಲಾಖೆಯ ಸಚಿವರಾಗಿದ್ದಾರೆ. ಆದ್ದರಿಂದ, ಮಾನ್ಯ ದೇಶಪಾಂಡೆಯವರು ಸದನಕ್ಕೆ ಬರಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ (ಮುಖ್ಯ ಸಚೇತಕರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ದೇಶಪಾಂಡೆ ಯವರು ಒಬ್ಬ ವ್ಯಕ್ತಿ ಅಷ್ಟೆ.

ಶ್ರೀ ಎಸ್.ಎಸ್. ಪಾಟೀಲ್:– ಸಭೆಗೆ ಅವರನ್ನು ಕರೆಸಿ.

ಶ್ರೀ ಶಿವಾನಂದ ಎಸ್.ಪಾಟೀಲ್:– 1996ನೇ ಸಾಲಿನ ಕೈಗಾರಿಕಾ ಪಾಲಿಸಿ 2001ನೇ ಸಾಲಿನಲ್ಲಿಯೂ ಮತ್ತೆ ಮುಂದುವರಿದುಕೊಂಡು ಹೋಗುತ್ತಿದೆ. ಆದ್ದರಿಂದ, ಅವರನ್ನು ಇಲ್ಲಿಗೆ ಕರೆಸಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರಷ್ಟೆ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ:– ಮಾನ್ಯ ದೇಶಪಾಂಡೆಯವರು ಆ ಸಂದರ್ಭದಲ್ಲಿ ಆಗಿನ ಸರ್ಕಾರದ ಸದಸ್ಯರಿರಬಹುದು.

ಶ್ರೀ ಶಿವಾನಂದ ಎಸ್.ಪಾಟೀಲ್:– ಇದು ದೇಶಪಾಂಡೆಯವರ ಇಂಡಸ್ಟ್ರಿಯಲ್ ಪಾಲಿಸಿ; ಇದು ಯಾವ ಸರ್ಕಾರದ ಪಾಲಿಸಿ ಅಲ್ಲ ಎಂಬುದನ್ನು ನಾವು ಅದಕ್ಕೋಸ್ಕರವೇ ಹೇಳುತ್ತಿರುವುದು.

ಶ್ರೀ ಕರಿಯಣ್ಣ:– ತಾವು ಈಗಾಗಲೇ ಧರಣಿ ಕುಳಿತುಕೊಂಡು ಸಭೆಯಿಂದ ವಾಕ್‌ಔಟ್ ಮಾಡಿಲ್ಲ ಏಕೆ? ತಾವು ಮಾತ್ರ ಇಲ್ಲಿಯೇ ಕುಳಿತುಕೊಂಡಿದ್ದೀರಿ ಏಕೆ? ನೀವು ಬಿ.ಜೆ.ಪಿ. ಪಕ್ಷದವರಲ್ಲವೇ?

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿ ಯಾರ ಮೇಲೆಯೂ ಆರೋಪ ಮಾಡುವುದಕ್ಕಾಗಲಿ ಅಥವಾ ಇಕ್ಕಟ್ಟಿಗೆ ಸಿಲುಕಿಸಬೇಕೆಂದಾಗಲಿ ಅಥವಾ ಯಾರನ್ನೂ ದೂರುವುದಕ್ಕಾಗಲಿ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿಲ್ಲ. ಈಗ ಆಗಿರತಕ್ಕಂಥ ವಸ್ತುಸ್ಥಿತಿಗೆ ಕಾರಣ ಏನು? ಮತ್ತೆ ಇವತ್ತಿನ ಪರಿಸ್ಥಿತಿಗೆ ಏನು ಕಾರಣ? ಇದಕ್ಕೆ ಸಂಬಂಧಪಟ್ಟಂತೆ ನಾವು ಯಾರನ್ನು ದೂಷಿಸಬೇಕು?

3) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಮಾನ್ಯ ಸಚಿವರಾದ ಶ್ರೀ ಕೆ.ಬಿ. ಕೋಳಿವಾಡ್‌ರವರು ಬರೆದ ಪತ್ರದ ಬಗ್ಗೆ ಸ್ಪಷ್ಟೀಕರಣ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಮಾನ್ಯ ಸದಸ್ಯರು ಬರೆದಿರತಕ್ಕಂಥ ಪತ್ರ ಯಾವ ತಾರೀಖಿನದು ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಮಾನ್ಯ ಮಂತ್ರಿಗಳಾಗಿರತಕ್ಕಂಥ ಶ್ರೀ ಕೆ.ಬಿ. ಕೋಳಿವಾಡ್‌ರವರು ದಿನಾಂಕ 1–04–2003ರಂದು ಪತ್ರ ಬರೆದು ತಿಳಿಸಿದ್ದಾರೆ. ತಾವು ಅಪ್ಪಣೆ ಕೊಟ್ಟರೆ ಅದನ್ನು ಇಲ್ಲಿ ನಾನು ಓದುತ್ತೇನೆ.

ಉಪಾಧ್ಯಕ್ಷರು:– ಸಭೆಯ ಮುಂದೆ ಓದಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಯಪ್ರಕಾಶ್ ಹೆಗಡೆಯವರು ರೆಫರ್ ಮಾಡಿರತಕ್ಕಂಥ ಪತ್ರಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಹೇಳುತ್ತಿದ್ದಾರೆಯೇ? ಏಕೆಂದರೆ, ರೆಫರ್ ಮಾಡಿರತಕ್ಕಂಥ ಸದಸ್ಯರು ಈ ಸಂದರ್ಭದಲ್ಲಿ ಇಲ್ಲ. ಆದ್ದರಿಂದ, ಅವರು ಬಂದ ನಂತರ ಹೇಳುವುದು ಒಳ್ಳೆಯದು.

ಶ್ರೀ ಕೆ.ಹೆಚ್. ರಂಗನಾಥ್:– ದಯಮಾಡಿ ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಉಪಾಧ್ಯಕ್ಷರು:– ತಾವು ಇದಕ್ಕೆ ಸಮಯ ಕೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ನಾವು ಸಮಯ ಕೇಳಿದ್ದೆವು. ಸದರಿ ವಿಷಯವನ್ನು ಮಾನ್ಯ ಜಯಪ್ರಕಾಶ್ ಹೆಗಡೆಯವರು ರೆಫರ್ ಮಾಡಿದ್ದರು. ಆದ್ದರಿಂದ, ರೆಫರ್ ಮಾಡಿರತಕ್ಕಂಥ ಸದಸ್ಯರು ಈ ಸಂದರ್ಭದಲ್ಲಿ ಇಲ್ಲ. ಅವರೂ ಕೂಡ ಬಂದರೆ ಒಳ್ಳೆಯದು